ಸಂಪುಟ–I, ಸಂಖ್ಯೆ–2

ಅಕ್ಟೋಬರ್–ನವೆಂಬರ್–ಡಿಸೆಂಬರ್ 2019

ಕರ್ನಾಟಕ ವಿಧಾನಮಂಡಲ

ಕರ್ನಾಟಕ ಶಾಸಕಾಂಗ ಪತ್ರಿಕೆ

(ತ್ರೈಮಾಸಿಕ ಪತ್ರಿಕೆ)



ಪ್ರಕಟಣೆ:

ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,
ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನ ಸೌಧ
ಬೆಂಗಳೂರು - 560 233

ಕರ್ನಾಟಕ ವಿಧಾನಮಂಡಲ

ಕರ್ನಾಟಕ ಶಾಸಕಾಂಗ ಪತ್ರಿಕೆ

(ತ್ರೈಮಾಸಿಕ ಪತ್ರಿಕೆ)

ಅಕ್ಟೋಬರ್, ನವೆಂಬರ್, ಡಿಸೆಂಬರ್, 2019

ಸಂಪುಟ – I ಸಂಖ್ಯೆ – 2

ಪ್ರಕಟಣೆ:

ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,
ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನ ಸೌಧ,
ಬೆಂಗಳೂರು – 560 233.

ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕರಣಕ್ಕೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ/ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರವಾಗುವುದಿಲ್ಲ.

ಮುನ್ನುಡಿ

15ನೇ ವಿಧಾನ ಸಭೆಯ ಕರ್ನಾಟಕ ವಿಧಾನಮಂಡಲದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಉಭಯ ಸದನಗಳ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಪ್ರಥಮ ಸಂಪುಟದ 2ನೇ ಪುಸ್ತಕವನ್ನು ಪ್ರಕಟಪಡಿಸುತ್ತಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಉಭಯ ಸದನಗಳ ಶಾಸಕಾಂಗದ ಸುದ್ದಿಗಳು, ಲೋಕ ಸಭೆ ಮತ್ತು ರಾಜ್ಯ ಸಭೆಗಳ ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2019ನೇ ಸಾಲಿನ ಅಕ್ಟೋಬರ್–ನವೆಂಬರ್–ಡಿಸೆಂಬರ್ ತಿಂಗಳ ಅವಧಿಯಲ್ಲಿನ ಪ್ರಮುಖ ಸುದ್ದಿ, ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ಸಿದ್ಧಪಡಿಸಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ.

ಎಂ.ಕೆ. ವಿಶಾಲಾಕ್ಷಿ
ಕಾರ್ಯದರ್ಶಿ(ಪ್ರ),
ಕರ್ನಾಟಕ ವಿಧಾನ ಸಭೆ.

ಬೆಂಗಳೂರು
ದಿನಾಂಕ: 27 AUG 2020

ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ

ಶ್ರೀಮತಿ/ಶ್ರೀಯುತರುಗಳಾದ:–

1. ಎಂ. ಕೆ. ವಿಶಾಲಾಕ್ಷಿ	:	ಕಾರ್ಯದರ್ಶಿ (ಪ್ರ)
2. ಎಂ. ಮಂಜುಳ	:	ಜಂಟಿ ನಿರ್ದೇಶಕರು
3. ಶಿವರಾಮ ಆಚಾರಿ	:	ಉಪ ನಿರ್ದೇಶಕರು
4. ಎಸ್. ಶೋಭಾವತಿ	:	ಉಪ ನಿರ್ದೇಶಕರು
5. ವಿ. ಭಾಗ್ಯ	:	ಸಹಾಯಕ ನಿರ್ದೇಶಕರು
6. ಅರ್ಜುನ್ ಡಿ.ಜಿ.	:	ಸಹಾಯಕ ನಿರ್ದೇಶಕರು
7. ಡಿ.ಕೆ. ಸರಳ	:	ಸಹಾಯಕ ನಿರ್ದೇಶಕರು
8. ಜಿ. ಮಮತ	:	ಸಹಾಯಕ ನಿರ್ದೇಶಕರು

ಕರ್ನಾಟಕ ಶಾಸಕಾಂಗ ಪತ್ರಿಕೆ

(ತ್ರೈಮಾಸಿಕ ಪತ್ರಿಕೆ)

ಅಕ್ಟೋಬರ್, ನವೆಂಬರ್, ಡಿಸೆಂಬರ್, 2019

ಸಂಪುಟ – I

ಸಂಖ್ಯೆ – 2

ಪರಿವಿಡಿ

ಭಾಗ–1

ರಾಜ್ಯ ವಿಧಾನಮಂಡಲದ ಸುದ್ದಿಗಳು

ಸೂಚನೆ: – ಇಲ್ಲಿ ಆಯ್ಕೆ ಮಾಡಿರುವ ಲೇಖನಗಳು ಪ್ರಮುಖ ದಿನಪತ್ರಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ. ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.

ಭಾಗ – 1

ಕರ್ನಾಟಕ ವಿಧಾನಮಂಡಲದ ಸುದ್ದಿಗಳು

ಕರ್ನಾಟಕ ವಿಧಾನಮಂಡಲ

1. ವಿಧಾನಮಂಡಲ ಕಲಾಪಕ್ಕೆ ಟಿ.ವಿ.ಕ್ಯಾಮರಾ ನಿಷೇಧ

ಹಣಕಾಸು ಮಸೂದೆ ಅಂಗೀಕಾರಕ್ಕಾಗಿ ಮೂರು ದಿನಗಳ ಕಾಲ ಕರೆದಿರುವ ವಿಧಾನಮಂಡಲ ಅಧಿವೇಶನದ ಕಲಾಪದ ಚಿತ್ರೀಕರಣಕ್ಕೆ ನಿರ್ಬಂಧ ಹೇರಲು ವಿಧಾನ ಸಭೆ ಸಚಿವಾಲಯ ಚಿಂತನೆ ಹೊಂದಿರುವುದು ವಿವಾದಕ್ಕೆ ಕಾರಣವಾಗಿದೆ. ಅಕ್ಟೋಬರ್ 10 ರಿಂದ ಮೂರು ದಿನಗಳ ವಿಧಾನಮಂಡಲದ ಅಧಿವೇಶನ ಆರಂಭವಾಗಲಿದ್ದು, ಈ ವೇಳೆ ಟಿವಿ ಕ್ಯಾಮರಾಗಳನ್ನು ಉಭಯ ಸದನದಿಂದ ಹೊರಗಿಡಲು ಸಭಾಧ್ಯಕ್ಷರು ಚಿಂತನೆ ಹೊಂದಿದ್ದಾರೆ ಎನ್ನಲಾಗಿದೆ. ಮೂಲಗಳ ಪ್ರಕಾರ ಲೋಕ ಸಭೆ ಮಾದರಿಯಲ್ಲಿ ಖಾಸಗಿ ವಾಹಿನಿಗಳಿಗೆ ಅವಕಾಶ ನೀಡದೇ, ಸರ್ಕಾರಿ ಚಾನಲ್ ಮೂಲಕ ಕಲಾಪ ಪ್ರಸಾರ ಮಾಡುವ ಚಿಂತನೆಯನ್ನು ಸ್ಪೀಕರ್ ಹೊಂದಿರುತ್ತಾರೆ.

ಆಧಾರ – ಕನ್ನಡಪ್ರಭ: 06.10.2019

2. ಪತ್ರಕರ್ತರೊಂದಿಗೆ ಶೀಘ್ರ ಸಭೆ

ವಿಧಾನಸಭೆಗೆ ವಿದ್ಯುನ್ಮಾನ ಮಾಧ್ಯಮ ಮತ್ತು ಕ್ಯಾಮರಾ ನಿರ್ಬಂಧ ವಿಷಯ ಕುರಿತು ಚರ್ಚೆ ನಡೆಸಲು ಶೀಘ್ರವೇ ಪತ್ರಕರ್ತರ ಸಂಘಟನೆಗಳು, ಸಂಪಾದಕರು, ಹಿರಿಯ ಪತ್ರಕರ್ತರ ಸಭೆ ನಡೆಸಿ ಅಭಿಪ್ರಾಯ ಪಡೆಯುವುದಾಗಿ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ತಿಳಿಸಿದ್ದಾರೆ. ಪ್ರಾಯೋಗಿಕವಾಗಿ ಮಾಡಲಾಗಿದ್ದ ನಿರ್ಬಂಧ ಮುಂದುವರೆಸಬೇಕೊ, ಬೇಡವೊ ಎಂಬ ನಿಟ್ಟಿನಲ್ಲಿ ಎಲ್ಲರ ಅಭಿಪ್ರಾಯ ಪಡೆದು ಒಂದು ತೀರ್ಮಾನಕ್ಕೆ ಬರುವುದಾಗಿ ಸ್ಪೀಕರ್ ಸುದ್ದಿಗಾರರಿಗೆ ತಿಳಿಸಿದರು.

ಆಧಾರ – ವಿಜಯವಾಣಿ 13.10.2019

3. ವಿಧಾನಸಭೆ ಕಲಾಪ ವರದಿಗೆ ಮಾಧ್ಯಮಗಳ ನಿರ್ಬಂಧ ಆದೇಶ (ಮರು ಪರಿಶೀಲನೆಗೆ ಸ್ಪೀಕರ್ ಕಾಗೇರಿ ಇಂಗಿತ)

ಪ್ರಜಾತಂತ್ರ, ಸಂಸದೀಯ ವ್ಯವಸ್ಥೆಯಲ್ಲಿ ಮಾಧ್ಯಮಗಳ ಮಹತ್ವದ ಅರಿವು ತಮಗಿದೆ. ಮೂರು ದಿನಗಳಿಗೆ ಸೀಮಿತವಾಗಿ ನಡೆದ ಇತ್ತೀಚಿನ ವಿಶೇಷ ಅಧಿವೇಶನದಲ್ಲಿ ಪ್ರಾಯೋಗಿಕವಾಗಿ ಮಾಧ್ಯಮಗಳನ್ನು ನಿರ್ಬಂಧಿಸಲಾಗಿರುತ್ತದೆ.

ವಿಧಾನಸೌಧದ ತಮ್ಮ ಕಛೇರಿಯಲ್ಲಿ ದಿನಾಂಕ 24.10.2019ರಂದು ಪತ್ರಕರ್ತರೊಂದಿಗೆ ಅನೌಪಚಾರಿಕ ಸಭೆ ನಡೆಸಿದ ಸ್ಪೀಕರ್ ಅವರು **"ಸಂಸತ್ ಹಾಗೂ ಬೇರೆ ರಾಜ್ಯಗಳ ಶಾಸನಸಭೆಗಳ ಮಾದರಿಯಲ್ಲಿ ರಾಜ್ಯ ವಿಧಾನಸಭೆ ಹಿಂದೆ ಬೀಳಬಾರದು ಎಂಬ ಕಾರಣಕ್ಕಾಗಿ ಈ ತೀರ್ಮಾನ ಮಾಡಿದ್ದೆ. ವಿಧಾನ ಸಭೆಯ ಮುಖ್ಯಸ್ಥನಾಗಿ ಸದನದ ಘನತೆ ಗೌರವ ಹೆಚ್ಚಿಸುವುದು ನನ್ನ ಕರ್ತವ್ಯ, ಆದರೆ ತಮ್ಮ ಈ ತೀರ್ಮಾನ ಪ್ರಾಯೋಗಿಕವಾಗಿತ್ತು. ಸಂಸತ್ತು ಮತ್ತು ಬೇರೆ ರಾಜ್ಯಗಳ ಶಾಸನಸಭೆ ಮುಖ್ಯಸ್ಥರೊಂದಿಗೆ ಸಮಾಲೋಚನೆ ನಡೆಸುತ್ತೇನೆ. ಮಾಧ್ಯಮ ರಂಗದ ಪ್ರತಿನಿಧಿಗಳೊಂದಿಗೆ ಚರ್ಚೆ ಮಾಡುತ್ತೇನೆ. ಆ ಬಳಿಕ ಸ್ಪಷ್ಟ ತೀರ್ಮಾನಕ್ಕೆ ಬರುತ್ತೇನೆ"** ಎಂದು ಸ್ಪಷ್ಟಪಡಿಸಿದರು. ಅಂತಿಮ ತೀರ್ಮಾನವಾಗುವವರೆಗೂ ಮಾಧ್ಯಮ ನಿರ್ಬಂಧವನ್ನು ರದ್ದುಪಡಿಸಬೇಕು ಎಂಬ ಪತ್ರಕರ್ತರ ಮನವಿಗೆ ಪ್ರತಿಕ್ರಿಯಿಸಿ **"ಸಧ್ಯಕ್ಕೆ ವಿಧಾನ ಸಭೆ ಅಧಿವೇಶನ ಇಲ್ಲ. ಜನವರಿ ತಿಂಗಳ ಜಂಟಿ ಅಧಿವೇಶನದವರೆಗೆ ಕಾಲಾವಕಾಶವಿದೆ. ಹೀಗಾಗಿ ಅದರ ಅಗತ್ಯ ಇಲ್ಲ"** ಎಂದರು.

ಆಧಾರ – ವಿಜಯವಾಣಿ 25.10.2019

4. ಮೂಲವಿಜ್ಞಾನಕ್ಕೆ ಆದ್ಯತೆ

ಎನ್.ಆರ್.ಕಾಲೋನಿಯ ಶ್ರೀರಾಮ ಮಂದಿರದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಸಪ್ತಋಷಿ ಫೌಂಡೇಷನ್ ವತಿಯಿಂದ ಆಯೋಜಿಸಿದ ಪ್ರತಿಭಾ ಪುರಸ್ಕಾರದ ಕಾರ್ಯಕ್ರಮದಲ್ಲಿ ಮಾತನಾಡಿ, ಎಲ್ಲಾ ಸಮುದಾಯಗಳು ಶೈಕ್ಷಣಿಕವಾಗಿ ಪ್ರಗತಿ ಹೊಂದಿದಾಗ ಮಾತ್ರ ದೇಶದ ಪ್ರಗತಿ ಸಾಧ್ಯ. ಶಿಕ್ಷಣ ನೀಡುವ ಜೊತೆಗೆ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಬೇಕು. ಅಲ್ಲದೆ ವ್ಯಕ್ತಿ ನಿರ್ಮಾಣಕ್ಕೆ ಆದ್ಯತೆ ನೀಡಬೇಕೆಂದು ಸ್ಪೀಕರ್ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಸಲಹೆ ನೀಡಿದರು.

ವಿಜ್ಞಾನಕ್ಕೆ ನಮ್ಮ ಪೂರ್ವಜರು ಹೆಚ್ಚಿನ ಆದ್ಯತೆ ನೀಡಿದರು. ನಮ್ಮ ಋಷಿಮುನಿಗಳು, ತಪಸ್ವಿಗಳು ಸಾಧನೆಯನ್ನು ಮಾಡಿದ್ದಾರೆ ಎಂದು ನಾವು ಅಭಿಮಾನಿಸುತ್ತೇವೆ. ಅಂತಹ ಸಾಧನೆ ಹಿಂದೆ ವಿಜ್ಞಾನವೇ ಇದೆ. ಖಗೋಳ ಶಾಸ್ತ್ರ, ಆಯುರ್ವೇದ, ಯೋಗ, ಇವೆಲ್ಲಾ ಮೂಲವಿಜ್ಞಾನವೇ ಆಗಿದೆ. ಭಾರತದ ಉಕ್ಕು, ಕಬ್ಬಿಣ, ಬಟ್ಟೆ ಇವೆಲ್ಲವೂ ಸರ್ವ ಶ್ರೇಷ್ಠವೇ ಆಗಿತ್ತು. ಬ್ರಿಟಿಷರ ಗುಲಾಮಿತನದ ಆಳ್ವಿಕೆ ವೇಳೆ ಈ ಶಿಕ್ಷಣ ಪದ್ಧತಿ ಜಾರಿಗೆ ಬಂದಿದ್ದು, ನಾವು ಮೂಲವಿಜ್ಞಾನವನ್ನು ಮರೆತು ಮುಂದುವರೆದಿರುವ ಪರಿಣಾಮ ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಕಳೆದ 40 ವರ್ಷಗಳಿಂದಲೂ ಬಡವರಿಗೆ, ಮಧ್ಯಮ ವರ್ಗದವರಿಗೆ ಪ್ರತಿಭಾವಂತ ಶಿಕ್ಷಣಕ್ಕೆ ಸಹಾಯ ಮಾಡುತ್ತಿದೆ. ಮಹಿಳಾ ವಿದ್ಯಾರ್ಥಿಗಳಿಗಾಗಿ ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಶಿಕ್ಷಣದ ನಂತರವೂ ಸಹ ಉದ್ಯೋಗಕ್ಕೆ ಸಂಬಂಧಿಸಿದಂತೆ ಸಲಹೆ ಸೂಚನೆಗಳನ್ನು ನೀಡುತ್ತಿದೆ. ಏಕಾಗ್ರತೆ ಮತ್ತು ಛಲ ರೂಢಿಸಿಕೊಂಡಿದ್ದರಿಂದ ಈ ಸಾಧನೆ ಮಾಡಲು ಸಾಧ್ಯವಾಗಿದೆ. ಇಂದಿನ ದಿನಗಳಲ್ಲಿ ಮೊಬೈಲ್ ಬಿಟ್ಟಿರಲು ಸಾಧ್ಯವೆ ಇಲ್ಲ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ಮೊಬೈಲ್, ಟಿ.ವಿ.ಗಳನ್ನು ಬಿಟ್ಟು ಛಲದಿಂದ ಈ ಸಾಧನೆ ಮಾಡುತ್ತಿರುವುದು ಪ್ರಶಂಸನಾರ್ಹ ಎಂದರು.

ಆಧಾರ–ವಿಶ್ವವಾಣಿ 15.11.2019

5. ಜನರಂತೆ ಜನನಾಯಕರು

ಮಲ್ಲೇಶ್ವರದಲ್ಲಿರುವ ಶ್ರೀ ಅಖಿಲ ಹವ್ಯಕ ಮಹಾಸಭೆಯಲ್ಲಿ ನಡೆದ 'ಸಾಧನಾ ಸಂಕಲ್ಪ' ಮತ್ತು 'ಅಭಿನಂದನಾ' ಸಮಾರಂಭದಲ್ಲಿ ಮಾತನಾಡಿದ ವಿಧಾನ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರಸ್ತುತ ಜನನಾಯಕರ ಕುರಿತು ಹೆಚ್ಚೆಚ್ಚು ಚರ್ಚೆಗಳು ನಡೆಯುತ್ತಿವೆ. ಆದರೆ, ಅದಕ್ಕೂ ಮೊದಲು ಅವರನ್ನು ಆಯ್ಕೆ ಮಾಡುತ್ತಿರುವ ಜನರು ಹೇಗಿರುತ್ತಾರೋ ಅದೇ ರೀತಿಯ ಜನಪ್ರತಿನಿಧಿಗಳು ಆಯ್ಕೆಯಾಗುತ್ತಿದ್ದಾರೆಂದು ಅಭಿಪ್ರಾಯಪಟ್ಟರು.

ಡಾ: ಗಿರಿಧರ್ ಕಜೆ ಅವರ ನೇತೃತ್ವದಲ್ಲಿ ಹವ್ಯಕ ಮಹಾಸಭೆ ಬಹಳ ಉತ್ತಮ ಕಾರ್ಯಗಳನ್ನು ಮಾಡುತ್ತಿದೆ. ಆಡಳಿತ ಮಂಡಳಿಯ ಕಾರ್ಯಗಳಿಂದ ಸಮಾಜಕ್ಕೆ ಒಳಿತಾಗುತ್ತಿದೆ. ತಮ್ಮ ಕಾರ್ಯವ್ಯಾಪ್ತಿಯಲ್ಲಿ ಉತ್ತಮ ಕಾರ್ಯಗಳನ್ನು ಮಾಡಲು ಸಲಹೆಗಳನ್ನು ಕೋರಿದರು.

ಲೆಫ್ಟಿನೆಂಟ್ ಜನರಲ್ ಡಾ.ಬಿ.ಎನ್.ಬಿ.ಎಂ. ಪ್ರಸಾದ್ ಅವರು ಸಾಧನೆ ಮಾಡಲು ಸಂಕಲ್ಪ ಬೇಕು, ಜೊತೆಜೊತೆಯಾಗಿ ಉತ್ತಮ ಉದ್ದೇಶ ಹಾಗೂ ದೈವದ ಆಶೀರ್ವಾದ ಬೇಕು. ನಮ್ಮಲ್ಲಿ ಸಾಧನೆ ಮಾಡಲು ಬೇಕಾದ ಶಕ್ತಿ ನಮ್ಮ ಪೂರ್ವಜರ ಬಳುವಳಿಯಾಗಿ ಬಂದಿದೆ. ಹವ್ಯಕರಲ್ಲಿ ನಾಡಿಗೆ ಒಳಿತು ಮಾಡುವ ಸಾಮರ್ಥ್ಯ ಇದೆ. ಅದನ್ನು ನಾವು ಸದುಪಯೋಗಪಡಿಸಿಕೊಳ್ಳೋಣ ಎಂದು ಮಾತನಾಡಿದರು.

ಡಾ: ಗಿರಿಧರ ಕಜೆ ಮಾತನಾಡಿ, ಹವ್ಯಕರು ರಾಜಕೀಯದಲ್ಲಿ ಅನೇಕರಿದ್ದಾರೆ. ಆದರೆ ಮುಖ್ಯಮಂತ್ರಿಯಾದವರು ಶ್ರೀ ರಾಮಕೃಷ್ಣ ಹೆಗಡೆಯವರು ಮಾತ್ರ. ಅದೇ ರೀತಿ ಸಾಂವಿಧಾನಿಕ ಹುದ್ದೆಯಾದ ವಿಧಾನ ಸಭೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಏಕೈಕ ವ್ಯಕ್ತಿ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು. ಸರಳ ಸಜ್ಜನಿಕೆ ಕಾಗೇರಿಯವರಿಂದ ನಾಡಿಗೆ ಮಾದರಿಯಾಗುವ ಕಾರ್ಯಗಳಾಗಲಿ ಎಂದು ಆಶಿಸಿದರು.

ಆಧಾರ–ಸಂಯುಕ್ತಕರ್ನಾಟಕ 19.11.2019

6. ಜನರ ಭಾವನೆಗೆ ಸಂವಿಧಾನದಲ್ಲಿ ಅಕ್ಷರ ರೂಪ

ದಿನಾಂಕ 26.11.2019ರ ಸಂವಿಧಾನ ದಿನಾಚರಣೆ ಪ್ರಯುಕ್ತ ವಿಧಾನ ಸಭಾಧ್ಯಕ್ಷ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, ವಿಧಾನ ಪರಿಷತ್ ಸಭಾಪತಿ ಶ್ರೀ ಪ್ರತಾಪಚಂದ್ರ ಶೆಟ್ಟಿ ಡಾ: ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಪುಷ್ಪಾರ್ಪಣೆ ಮಾಡಿದರು.

ಸಂವಿಧಾನ ದಿನದಂದು ಡಾ: ಬಿ.ಆರ್. ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಮಾನ್ಯ ಸಭಾಧ್ಯಕ್ಷರು ಹಾಗೂ ಮಾನ್ಯ ಸಭಾಪತಿಯವರು ಪುಷ್ಪಾರ್ಪಣೆ ಮಾಡಿರುವ ಚಿತ್ರಗಳು





ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ವಿಧಾನ ಸಭಾಧ್ಯಕ್ಷ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನ ಪರಿಷತ್ ಸಭಾಪತಿ ಶ್ರೀ ಪ್ರತಾಪಚಂದ್ರ ಶೆಟ್ಟಿ, ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, ಉಭಯ ಸಚಿವಾಲಯದ ಕಾರ್ಯದರ್ಶಿಗಳಾದ ಶ್ರೀಮತಿ ಎಂ.ಕೆ.ವಿಶಾಲಾಕ್ಷಿ, ಶ್ರೀಮತಿ ಕೆ.ಆರ್.ಮಹಾಲಕ್ಷ್ಮಿ ಹಾಗೂ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದವರೆಲ್ಲರೂ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.



ಸಂವಿಧಾನ ಎಷ್ಟೇ ಒಳ್ಳೆಯದಿದ್ದರೂ, ಅದನ್ನು ಆಚರಣೆಗೆ ತರುವವರು ಕೆಟ್ಟವರಾಗಿದ್ದರೆ ಯಾವುದೇ ಆಶಯ ಈಡೇರಲ್ಲ. ಹೀಗಾಗಿ ಸಂವಿಧಾನದ ಆಶಯವನ್ನು ಮುಂದೆ ಹೇಗೆ ನಡೆಸಿಕೊಂಡು ಹೋಗುತ್ತೇವೆ ಎನ್ನುವುದು ಮುಖ್ಯವೆಂದು ವಿಧಾನಪರಿಷತ್ ಸಭಾಪತಿ ಶ್ರೀ ಪ್ರತಾಪಚಂದ್ರ ಶೆಟ್ಟಿ ಅವರು ಹೇಳಿದರು.



ವಿಶ್ವದಲ್ಲಿಯೇ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಹೆಮ್ಮೆಪಡುವಂತದಾಗಿದೆ. ಭಾರತದ ಜನರ ಭಾವನೆಗೆ ಸಂವಿಧಾನದಲ್ಲಿ ಅಕ್ಷರ ರೂಪ ಕೊಡಲಾಗಿದೆ ಎಂದು ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿಪ್ರಾಯಪಟ್ಟರು.



ವಿಧಾನ ಸೌಧದಲ್ಲಿ ಏರ್ಪಡಿಸಿದ ಸಂವಿಧಾನ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿ ಅವರು, ಸಂವಿಧಾನದ ಮೂಲ ಆಶಯ ಅನುಷ್ಠಾನಗೊಳ್ಳಬೇಕು. ಜನರ ಭಾವನೆಗಳಿಗೆ ಬೆಲೆ ದೊರೆಯುವಂತಾಗಬೇಕು. ಸಂವಿಧಾನದ ರಚನಾ ಸಮಿತಿಯಲ್ಲಿ ಕರ್ನಾಟಕದ ಬೆಣಕಲ್ ನರಸಿಂಹರಾವ್ ಇದ್ದರು. ನಾವು ಬ್ರಿಟಿಷರ ಗುಲಾಮಗಿರಿಯಿಂದ ದೂರ ಆಗಿದ್ದೇವೆಯಾದರೂ ಇನ್ನೂ ಸಮಸ್ಯೆ ಪರಿಹಾರವಾಗಿಲ್ಲ ಎಂದರು. 12ನೇ ಶತಮಾನದಲ್ಲಿದ್ದ ಸಮಾಜ ಸುಧಾರಕ ಬಸವಣ್ಣನವರ ಅನುಭವ ಮಂಟಪ ಪ್ರಜಾಪ್ರಭುತ್ವದ ಮೂಲ ತಳಹದಿ. "ನ್ಯಾಯದ ವಿಳಂಬ ನ್ಯಾಯದ ನಿರಾಕರಣೆ" ಎಂಬುದು ಶಾಸಕಾಂಗ, ಕಾರ್ಯಾಂಗಕ್ಕೂ ಅನ್ವಯವಾಗುತ್ತದೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ನವೆಂಬರ್ 26 ರಂದು ಸಂವಿಧಾನ ದಿವಸ ಆಚರಣೆ ಮಾಡಬೇಕೆಂದು ಸೂಚಿಸಿದಾಗ, ರಾಜ್ಯ ಸರ್ಕಾರದ ಮೂಲಕವೇ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಆಚರಿಸಲು ನಿರ್ಧರಿಸಲಾಯಿತು. ಯುವಕರಿಗೆ ಸಂವಿಧಾನದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಬೇಕಿದೆ ಎಂದು ಹೇಳಿದರು.

ನಿವೃತ್ತ ನ್ಯಾಯ ಮೂರ್ತಿ ಎನ್.ಕುಮಾರ್, ದೇಶದ ಸಂವಿಧಾನ ಎಲ್ಲಾ ಕಾನೂನುಗಳ ತಾಯಿ, ವಿವಿಧ ರಾಷ್ಟ್ರಗಳ ಕಾನೂನು ಅಧ್ಯಯನ ಮಾಡಿ ಸಂವಿಧಾನದ ರಚನೆ ಮಾಡಿದ್ದೇವೆ. ನೂರಕ್ಕೂ ಹೆಚ್ಚು ತಿದ್ದುಪಡಿಯಾಗಿದ್ದರೂ, ಮೂಲ ಆಶಯಕ್ಕೆ ಧಕ್ಕೆಯಾಗಿಲ್ಲ ಎಂದು ಹೇಳಿದರು.

ಆಧಾರ–ವಿಶ್ವವಾಣಿ/ಉದಯವಾಣಿ 27.11.2019

7. ಸ್ಪೀಕರ್ ಕಛೇರಿಯಲ್ಲಿ ಸಂವಿಧಾನ ಫಲಕ

ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಛೇರಿಯಲ್ಲಿ ಇದೇ ಮೊದಲ ಬಾರಿಗೆ ಸಂವಿಧಾನದ ಪೂರ್ವ ಪೀಠಿಕೆ ಫಲಕ ಅಳವಡಿಸಲಾಗಿದೆ. ರಾಜ್ಯದ ಎಲ್ಲಾ ಕಛೇರಿಗಳಲ್ಲಿ ಸಂವಿಧಾನ ದಿನಾಚರಣೆ ನಡೆಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಪತ್ರ ಬರೆದಿದ್ದ ಕಾಗೇರಿ ತಮ್ಮ ಕಛೇರಿಯಲ್ಲೂ ಸಂವಿಧಾನದ ಪೂರ್ವಪೀಠಿಕೆ ಫಲಕ ಅಳವಡಿಸಿಕೊಂಡಿದ್ದಾರೆ.

ಆಧಾರ–ವಿಜಯಕರ್ನಾಟಕ 27.11.2019

8. ಸಭಾಧ್ಯಕ್ಷರು ಹಾಗೂ ಸಭಾಪತಿಯವರು ಸಮ್ಮೇಳನದಲ್ಲಿ

ದಿನಾಂಕ 17.12.2019 ರಿಂದ 19.12.2019ರವರೆಗೆ ನಡೆದ ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ 79ನೇ ಅಖಿಲ ಭಾರತ ಶಾಸಕಾಂಗ ಸಂಸ್ಥೆಗಳ ಪೀಠಾಸೀನಾಧಿಕಾರಿಗಳ, ಕಾರ್ಯದರ್ಶಿಗಳ ಸಮ್ಮೇಳನದಲ್ಲಿ ವಿಧಾನಸಭೆ ಸ್ಪೀಕರ್ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಪ್ರತಾಪಚಂದ್ರ ಶೆಟ್ಟಿ ಅವರುಗಳು ಪಾಲ್ಗೊಂಡಿದ್ದರು.



ಚರ್ಚೆಯಾಗದೆ ವಿಧೇಯಕ ಅಂಗೀಕಾರಕ್ಕೆ ಅವಕಾಶ ಬೇಡ

ಸದನದಲ್ಲಿ ಮಂಡನೆಯಾಗುವ ಯಾವುದೇ ವಿಧೇಯಕದ ಬಗ್ಗೆ ಸದನದ ಕನಿಷ್ಠ 10 ರಿಂದ 20 ಸದಸ್ಯರು ಚರ್ಚಿಸದೇ ಅಂಗೀಕಾರಗೊಳಿಸಲು ಅವಕಾಶ ಇರದಂತೆ ಕಾನೂನು ತಿದ್ದುಪಡಿ ಮಾಡಬೇಕೆಂದು ರಾಜ್ಯ ವಿಧಾನ ಸಭೆಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಯಾವುದೇ ಚರ್ಚೆಯಾಗದೇ ಅನೇಕ ವಿಧೇಯಕಗಳು ಅಂಗೀಕಾರವಾಗುತ್ತಿವೆ. ಇದರಿಂದ ವಿಧೇಯಕದ ಬಗ್ಗೆಯಾಗಲಿ ಅಥವಾ ನಂತರ ಜಾರಿಯಾಗುವ ಕಾನೂನಿನ ಬಗ್ಗೆ ಸಾರ್ವಜನಿಕರಿಗೆ

ಮಾಹಿತಿ ಇಲ್ಲದಂತಾಗುತ್ತದೆ. ಚರ್ಚಿಸದೇ ಯಾವುದೇ ವಿಧೇಯಕ ಅಂಗೀಕರಿಸಲು ಅವಕಾಶವಿರದಂತೆ ನಿಯಮ ರೂಪಿಸಬೇಕೆಂದರು.

ಆಡಳಿತ ಪಕ್ಷ ಯಾವುದೇ ವಿಧೇಯಕವನ್ನು ಸದನದಲ್ಲಿ ಮಂಡಿಸುವ ಮೊದಲು ತನ್ನ ಪಕ್ಷದ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚಿಸುವುದನ್ನು ಕಡ್ಡಾಯಗೊಳಿಸಬೇಕು. ಸ್ಪೀಕರ್ ನಡೆಯನ್ನು ಪ್ರಶ್ನಿಸಿ ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತರುವಂತೆ ನಡೆದುಕೊಳ್ಳುತ್ತಿದ್ದರೆ, ಅಂತಹ ಸದಸ್ಯರನ್ನು ತಕ್ಷಣವೇ ಕಲಾಪದಿಂದ ಅಮಾನತ್ತು ಮಾಡುವ ನಿಯಮ ರೂಪಿಸಬೇಕೆಂದು ಕಾಗೇರಿ ಸಲಹೆ ನೀಡಿದರು.

ಆಧಾರ–ಕನ್ನಡಪ್ರಭ/ಉದಯವಾಣಿ 19.12.2019

9. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸಮ್ಮೇಳನದಲ್ಲಿ ಮಾಡಿದ ಭಾಷಣ

ದಿನಾಂಕ 17–12–2019 ರಿಂದ 19–12–2019ರ ವರೆಗೆ ಉತ್ತರಾಖಂಡದ ಡೆಹರಾ ಡೂನ್‌ನಲ್ಲಿ 79ನೇ ಅಖಿಲ ಭಾರತ ಶಾಸಕಾಂಗ ಸಂಸ್ಥೆಗಳ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ವಿಧಾನಸಭೆ ಸಭಾಧ್ಯಕ್ಷರು ಪಾಲ್ಗೊಂಡಿದ್ದು, ಈ ಸಂದರ್ಭದಲ್ಲಿ 2 ವಿಷಯಗಳ ಬಗ್ಗೆ ಮಾಡಿರುವ ಭಾಷಣ.



1) Tenth Schedule of the Constitution and the Role of the Speaker.

Hon'ble Chairman of the Conference, respected Presiding Officers, Delegates, and one and all gathered here.

It is one of the greatest opportunities for me to be here in the midst of all of you and to participate in the discussion. Here I would like to place few facts and my views on the subject Tenth Schedule of the Constitution and the Role of the Speaker.

The evil of Political defections was of great concern of all political parties and it was also a national concern. Hence to combat such an evil, constitution (Fifty Second Amendment) Act 1985 has been brought into force with effect from 01/03/1985. This was brought with an intention of cleaning public life by imposing disqualification in case of defection of elected members from one party to the other. The object of this act was partially achieved and the law has seen deficiencies and loopholes in it. And those were questioned on political and constitutional grounds and felt that in the above act the problems like split in party, merger of party and parties, outside activities of the legislators should be solved. Accordingly after detailed discussion and opinion and also recommendations of the Committee on Electoral Reforms (Dinesh Goswami Committee), the Constitution (Ninety First Amendment) Act-2003, has strengthened the Tenth Schedule of the Constitution by omitting the paragraph 3 of the Tenth Schedule which claims exemption from disqualification in case of splits.

Therefore, the Anti-defection law, as of now, which allows merger, the Anti-defection cases are being dealt by the presiding officers accordingly, by applying the procedures laid down in the rules framed thereon by the respective Legislatures / Parliament. The powers and functions of the Speaker of the House concerned are derived from the constitution and from the Rules of procedure framed under Article 208 and also under Tenth Schedule of the Constitution. Speaker decides the question of disqualification as a tribunal. The Speaker has

been adjudged as -adjudicatory authority under para 6 of the Tenth Schedule. Regarding the impartiality and sense of justice which the speaker is to maintain, Sri Mavalankar, Speaker of First Lok Sabha has observed:-

> "In parliamentary democracy, the office of the Speaker is held in very high esteem and respect. There are many reasons for this. Some of them are purely historical and some are inherent in the concept of parliamentary democracy and the powers and duties of the Speaker. Once a person is elected Speaker, he is expected to be above parties, above politics. In other words, he belongs to all the members or belong to none. He holds the scales of justice evenly irrespective of party or person, though no one expects that he will do absolute justice in all matters; because, as a human being he has his human drawbacks and shortcomings. However, everybody knows that he will intentionally do no injustice or show partiality. Such a person is naturally held in respect by all".

However, over the years, the exercise of the power under Tenth Schedule of the Constitution by the various presiding officers has caused controversy and many cases allegations, that the political considerations being applied by the presiding officers in deciding the matters of defection have been made, which being affected the dignity of the high office of the presiding officers but it is also being just defended in one or other way.

Here I quote the Supreme Court's Observation in the case of Kihota Hollohon Vs. Zachilhu & Others (AIR 1993 SC 412).

"These provisions in the Tenth Schedule give recognition to the role of political parties in the particular process. A political party goes before the electorate with a particular programme, and it sets up candidates at the election on the basis of such programme. A person who gets elected as a candidate set up by a political party is so elected on the basis of the programme of that political party.....that political propriety and morality demand that if such a person, after the election, changes his affiliation and leaves the political party which had set him up as a candidate at the election, then he should give-up his membership of the Legislature and go back before the electorate."

I also quote the case of our Karnataka Legislative Assembly where 15 members of Karnataka Legislative Assembly have resigned to their membership in the Assembly, later they have been disqualified under the Tenth Schedule of the Constitution, by rejecting their resignation since, the resignations, were not voluntary or genuine.

In this regard the Hon'ble Supreme Court while disposing the writ petition (Civil) 992 etc of 2019 against the orders of then, Hon'ble Speaker of the Karnataka Legislative Assembly held that **"The Speaker can reject a resignation only if the inquiry demonstrates that it is not "voluntary" or "genuine". The inquiry should be limited to ascertaining if the member intends to relinquish his membership out of his free will. Once it is demonstrated that a member is willing to resign out of his free will, the Speaker has no option but to accept the resignation. It is constitutionally impermissible**

for the Speaker to take into account any other extraneous factors while considering the resignation. The satisfaction of the Speaker is subject to judicial review"

In the above case it was also held that **"Disqualification relates back to the date when the act of defection takes place. Factum and taint of disqualification does not vaporize by tendering a resignation letter to the Speaker. A pending or impending disqualification action does not become in fructuous by submission of the resignation letter, when act(s) of disqualification have arisen prior to the member's resignation letter."**

Here I place the following facts before this august body of presiding officers that once the Speaker receive the letter of resignation personally or either by post or through someone else, then the Speaker has no option but to accept the resignation, after following due procedure and I also place the fact that once the Hon'ble Member submits the resignation, whatever the petitions under Tenth Schedule pending before him becomes infructuous, since the presiding officer can take a decision to disqualify the member from the membership of the Assembly and it has been ruled in the above said judgment that the Speaker has no power under the constitution to disqualify the members till the end of the term or specify the period of disqualification under the Tenth Schedule or bar a member from contesting elections after disqualification until the end of the term of the Legislative Assembly.

If such is the case, in my view, there is no point in keeping the petitions under Anti-defection Law alive and take a decision thereon, since it becomes infructuous after member submits the resignation to the membership of the House. Therefore I request this body of presiding officers **to come to a decision** in the matter whether an Anti-defection petition becomes infructuous or not, even after the resignation of the member.

Thank you one and all.

JAI HIND, JAI KARNATAKA.

****

2) Strengthening Parliamentary Democracy and Capacity Building Through in House Devices Including Zero Hour.

******

Hon'ble Chairman of the Conference respected Presiding Officers, Delegates and one and all gathered here.

Today, I would like to place my views on the subject "Strengthening Parliamentary Democracy and Capacity Building through in House Devices Including Zero Hour". The Parliamentary Democracy in India is deep rooted and has become a way of life. As it is said "Indian Democracy is universally recognized and admired-and rightly so-as not only the largest but the greatest functioning democracy in the world". The framing and adopting the constitution chose the Parliamentary form of Government with the representative Institutions, Parliament and State Legislatures. The Founding fathers of the Constitution, accepted the form of Parliamentary democracy in view of its peculiar merit of executive accountability to Parliament / Legislatures. There is diversion of powers among the three organs of Government viz., the Executive, Legislature and Judiciary. Despite this, Parliament / Legislatures have been assigned a prominent and pivotal position since they represent and reflect the popular voice of the people. We are aware that the real Executive powers vests in the Council of Ministers headed by Prime Minister / Chief Minister and they are accountable to the Parliament /Legislatures, and it is also a fact that an independent judiciary armed with judicial review is another prominent feature of our Constitution.

The successful Conduct of Elections to Lok Sabha, to State Legislatures and other Democratic Bodies including to that of grass root level of Gram Panchayaths and People's active participation in the electoral process demonstrates their strong faith and trust in the system. This process of election after election keeping the democracy vibrant and alive. Even the many diversities in our society, the System has been able to bring about and maintain the unity and integrity of the country.

In the Legislative field, the Parliament /Legislatures have come to play a major role in the socio-economic transformation. They are not just law making bodies now, they have emerged as multi functional Institutions which reflects not only the hopes and aspirations of people but their fears and anxieties as well. These Institutions have become dynamic entities and they never lagged behind whenever a need arose for socio-economic reforms. They have been able to transform the existing social Institutions to meet the changing needs of time. Parliament /Legislatures role in effecting social, political and economic change are remarkable and they do not end with passing Legislation. They also ensure implementation by means of controlling the executive action through various parliamentary devices. These Institutions also expose administrative lapses with the help of Parliamentary / Legislature committees which oversee and scrutinize the Government's deeds and misdeeds.

Good Governance is largely depend on effective functioning of Legislatures, which is again dependent on healthy Parliamentary customs and conventions. Our elected representatives once elected to Parliament / Legislature have to engage themselves not only in the law making process but also use the opportunities available in our parliamentary procedures to raise the voice of the people. From my personal experience of more than two

decades as a member of opposition as well as the member of the treasury bench, I can say that under the existing frame work of parliamentary procedures available to us by maintaining the good conventions and practice, a member can effectively raise issues of public importance, ventilate popular grievances and seek their redressal and have meaningful influence on framing the policy by the Government. Agreeing and disagreeing is an integral part of any functional democracy and there are tools available to express the same, but disrupting the proceedings of the House, creating chaos are not justifiable. Of course, the strengthening the Parliamentary Democracy is being justified through the deliberations in the Houses of Parliament and Legislatures. Parliament/Legislatures denotes parliamentary democracy as its essential nature in debate, discussion and decision. The Houses are expected to be a dignified forum where issues are thrashed out with arguments and eloquence and then voted objectively and not by creating furores and pandemonium, which are becoming the order of the day. This tendency of creating furores and pandemonium thereby obstructing the business of the House will lead to the decline of parliamentary democracy. Parliamentarians or Legislators have to generate an atmosphere where the people can repose faith in them in their activities. Legislators constantly keep in touch with the people, the more they are associated, with the general public, the more they will be able to understand their problems and difficulties. The Legislators should constantly bear in mind that they are allegiance to the Constitution and the Rules of Procedure of the House. While discharging the duties as Legislators within the walls of the House, they should keep themselves confined within the framework of Parliamentary Procedure by observing the Rules and Practices of the House. It is the supreme duty of the Legislators to obey the directions and Orders of the Chair while participating in the debates.

The Parliamentary Procedures provide members with the adequate devices to cater to their growing needs and desires to articulate people's feelings. The most important are viz.,

1. Zero Hour, 2. Question Hour 3. Motions for adjournment on matters of public importance 4. Discussions on matters of urgent public importance for short duration 5. Calling attention to matters of urgent public importance 6. Petitions 7. Motions etc.

Zero Hour is an excellent device which provides an opportunity to the Members to raise the matters of urgent public importance. Of course, the concept of Zero Hour is developed as a matter of convention which can be raised immediately after question hour i.e., at 12 Noon. In Karnataka, the device of Zero Hour has been brought under the Rules of Procedure and conduct of business and the Members are being provided an opportunity to raise any urgent matters of public importance which are occurred between the adjournment of previous day's sitting and before the commencement of the current day's sitting.

Here, I would like to place a problem being faced by the Karnataka Legislative Assembly in conducting the day to day business of the House so as to arrive at a solution in this forum. Rule 60 of the Rules of Procedure and Conduct of Business of Karnataka Legislative Assembly reads as follows:

> "Rule 60: Subject to the provisions of these rules, a motion for an adjournment of the business of the House for the purpose of discussion a definite matter of urgent public

importance only when there is failure on the part of the Government to perform the duties enjoined by the Constitution and the law shall be made with the consent of the Speaker after Question Hour and Zero Hour".

The above provision is only to raise the subject matter which has direct or indirect relation to the conduct or default on the part of the Government. As per the practice and procedure of Parliament and also certain rulings and observations of chair, the matters relating to law and order are not subject for giving an adjournment motion. Even during the discussion of motion of thanks on Governor's address and during the budget discussion, adjournment motions are not allowed.

But, in actual practice, there will be an adjournment motion each and every day of the Session on one or other issues. It may be a law and order or relating to running issues, which can be raised on other provisions of Rules of Procedure Once the notice is given, the member concerned raises the issue and presses it for taking up as an adjournment motion, even though same cannot be raised as an adjournment motion. Even after decision of the Chair is conveyed to the member duly rejecting the adjournment motion, the member concerned compels it for raising the same under Rule 69, which is meant for discussion of matters of urgent public importance for short duration. Under this provision, the matter can be discussed only for one hour and only in two sittings in a week. After the Chair agrees for discussion under Rule 69, there are instances in the Karnataka Legislative Assembly where the discussion took place for more than four to five hours, in some cases days together. By this practice, it has become difficult to allot time and giving opportunity to Hon'ble Members for their participation in the discussion on the Motion of Thanks on Governor's address or during the Budget Discussion. Because of this, in recent days, the Motion of Thanks on Governor's address and Budget are adopted and passed without discussion. Even it has become very difficult for the Chair to allow the Hon'ble Members to make their contributions in the Legislative Business. Hence, in this regard, I seek a solution to regulate this device of Adjournment Motion, through this august forum.

In the Karnataka Legislative Assembly, the above mentioned various devices are being utilized by the Hon'ble Members to raise the issues of public importance and thereby strengthening the Parliamentary System of Democracy.

Further, in this regard, I would like to place my views that nothing should be passed without discussion and I am thinking not to allow to pass any bills, motions and demands for grants without debate, at least 10 to 20 Hon'ble Members including senior Members have to participate in the discussion and give their valuable contributions.

I also make the following suggestions for strengthening the Parliamentary System.

1. Even though a decision has been taken in the Presiding Officers' Conference that minimum hundred days sittings in a year should be held, it has not yet been complied by several Legislatures of the Country. In this regard, I would like to bring to your kind notice that the Government of Karnataka has brought an Act viz., The Karnataka Conduct of Government Business in the State Legislature Act, 2005, according to which the sittings of the Karnataka Legislature in each

year shall, as far as may be, be divided into four Sessions and in total for 60 days. But, this aspect has not been fulfilled so far, since the coming into force of this Act. This conference may consider to make some mandatory provisions in this regard.

2. There is provision under the Rules of Procedure and Conduct of Business of Lok Sabha that "in the event of grave disorder occasioned by a member coming into the well of the House or abusing the Rules of the House persistently and willfully obstructing its business by shouting slogans or otherwise, such member shall, on being named by the Speaker, stand automatically suspended from the service of the House for five consecutive sittings or the remainder of the session, whichever is less." Here, for curbing such a practice of members coming into the well of the House the provision of naming by the Speaker may kindly be omitted and thereby making way for automatic suspension of members may serve the purpose and the same may be implemented by all Legislatures.

3. Political parties should evolve a system for ensuring attendance of at least 50% of their members to be in the sessions of the House everyday to address the issue of lack of quorum etc.

4. The Legislature Party which is in power should make a policy that all the Bills which are to be placed before the Legislature should be thoroughly discussed within the legislature party and then placed before the Houses of Legislature for consideration and passing, so that members will be fully aware of the Legislation which is going to become law.

5. Conducting frequent Orientation Programmes / Seminars / Training Programmes etc. to the Hon'ble Members of Parliament / State Legislature and ensure their compulsory participation will make a way for capacity building of members.

With these words, I conclude my words with a hope that the parliamentary democracy in India will be further strengthened and will be the best democracy of the globe forever.

Thank you one and all. Jai Hind, Jai Karnataka

10. ಕರ್ನಾಟಕ ಪಕ್ಷಾಂತರ ವಿವಾದದ ಬೆನ್ನಲ್ಲೇ ಸ್ಪೀಕರ್‌ಗಳ ಸಭೆ

ಕರ್ನಾಟಕದಲ್ಲಿ 17 ಶಾಸಕರನ್ನು ಪಕ್ಷಾಂತರ ನಿಷೇಧ ಕಾಯ್ದೆಯಡಿ ಅನರ್ಹಗೊಳಿಸಿದ ಪ್ರಕರಣ ಸುಪ್ರೀಂಕೋರ್ಟ್ ಮೆಟ್ಟಿಲು ಏರಿ ಇತ್ಯರ್ಥವಾದ ಬೆನ್ನಲ್ಲೇ ಲೋಕಸಭೆಯ ಸ್ಪೀಕರ್ ಶ್ರೀ ಓಂ ಬಿರ್ಲಾ ಅವರು ಡೆಹ್ರಾಡೂನ್‌ನಲ್ಲಿ ಎರಡು ದಿನಗಳ ಸ್ಪೀಕರ್‌ಗಳ ಸಮ್ಮೇಳನವನ್ನು ನಡೆಸಿದ್ದಾರೆ. ಈ ವೇಳೆ ಪಕ್ಷಾಂತರ ನಿಷೇಧ ಕಾಯ್ದೆಗೆ ಸಂಬಂಧಿಸಿದ 10ನೇ ಷೆಡ್ಯೂಲ್ ಬಗ್ಗೆ ಸುದೀರ್ಘ ಚರ್ಚೆಯನ್ನು ನಡೆಸಿ ಪಕ್ಷಾಂತರ ನಿಷೇಧ ಕಾಯ್ದೆಯಲ್ಲಿನ ಅಂಶಗಳ ಕುರಿತು ಪರಿಶೀಲನೆ ನಡೆಸಲು ಸ್ಪೀಕರ್‌ಗಳ ಸಮಿತಿಯೊಂದನ್ನು ರಚಿಸಲಾಗಿದೆ. ಸಮಿತಿ ಶೀಘ್ರದಲ್ಲೇ ವರದಿ ಸಲ್ಲಿಸಲಿದೆ ಎಂದು ತಿಳಿಸಿ ಸಮ್ಮೇಳನದ ಎರಡನೇ ದಿನದಂದು ಪಿ.ಟಿ.ಐ. ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿ ಪಕ್ಷಾಂತರ ನಿಷೇಧ ಕುರಿತ ನಿರ್ಧಾರಗಳನ್ನು ಕಾಲಮಿತಿಯಲ್ಲಿ ಸ್ಪೀಕರ್‌ಗಳು ತೆಗೆದುಕೊಳ್ಳಬೇಕು. ಆ ತೀರ್ಮಾನವನ್ನು ನ್ಯಾಯಾಂಗ ಸೇರಿದಂತೆ ಯಾರು ಪ್ರಶ್ನಿಸುವಂತಿರಬಾರದೆಂದು ಸಲಹೆ ಮಾಡಿದರು.

ಆಧಾರ–ಕನ್ನಡಪ್ರಭ 20.12.2019

11. ವಿಧಾನ ಸಭೆಗೆ, ಮಾಧ್ಯಮ ಕ್ಯಾಮೆರಾಗಳಿಗೆ ನಿಷೇಧ

ದಿನಾಂಕ 10.10.2019ರಂದು ಆರಂಭವಾಗಲಿರುವ ವಿಧಾನಸಭೆಯ ಕಲಾಪದ ಚಿತ್ರೀಕರಣ ಮಾಡಲು ಹಾಗೂ ಫೋಟೋ ತೆಗೆಯಲು ಖಾಸಗಿ ಸುದ್ದಿವಾಹಿನಿ ಮತ್ತು ಮುದ್ರಣ ಮಾಧ್ಯಮದ ಕ್ಯಾಮೆರಾ ಮತ್ತು ಪತ್ರಿಕಾ ಛಾಯಾಗ್ರಾಹಕರಿಗೆ ನಿರ್ಬಂಧ ವಿಧಿಸಲಾಗಿದೆ. ದೂರದರ್ಶನ ಮೂಲಕ ಕಲಾಪಗಳ ಪ್ರಸಾರಕ್ಕೆ ಮಾತ್ರ ಖಾಸಗಿ ವಾಹಿನಿಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಸಂಸತ್ ಅಧಿವೇಶನದಲ್ಲಿ ಖಾಸಗಿ ವಿದ್ಯುನ್ಮಾನ ಮಾಧ್ಯಮಗಳಿಗೆ ಕಲಾಪದ ಚಿತ್ರೀಕರಣಕ್ಕೆ ಅವಕಾಶವಿಲ್ಲ. ದೂರದರ್ಶನದ ಮೂಲಕ ಪಡೆದ ವಿಡಿಯೋವನ್ನು ನೇರವಾಗಿ ಪ್ರಸಾರ ಮಾಡಬಹುದಾಗಿದೆ. ಅದೇ ಮಾದರಿಯನ್ನು ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಇತ್ತೀಚಿನ ಕಲಾಪಗಳಲ್ಲಿ ಗದ್ದಲ, ಗಲಾಟೆ, ಧರಣಿಯಂತಹ ಘಟನೆಗಳೇ ಹೆಚ್ಚು ನಡೆಯುತ್ತಿದ್ದು, ಮಾಧ್ಯಮಗಳು ಇಂತಹ ವಿಷಯಗಳನ್ನೇ ಹೆಚ್ಚು ಪ್ರಸಾರ ಮಾಡುತ್ತವೆ.

ಸದನದಲ್ಲಿ ನಡೆಯುವ ಚರ್ಚೆ, ಗಂಭೀರ ವಿಷಯಗಳ ಬಗ್ಗೆ ಸದಸ್ಯರು ಮಾಡಿದ ಪ್ರಸ್ತಾಪ ಸೇರಿದಂತೆ ಹಲವಾರು ವಿಷಯಗಳಿಗೆ ಹೆಚ್ಚಿನ ಪ್ರಸಾರ ಸಿಗುತ್ತಿಲ್ಲ ಎಂಬ ಪ್ರಮುಖ ಕಾರಣದಿಂದ ಸ್ಪೀಕರ್ ಇಂತಹ ಕ್ರಮಕ್ಕೆ ಮುಂದಾಗಿದ್ದಾರೆಂದು ಹೇಳಲಾಗಿದೆ. ವಿಧಾನ ಸಭೆಯ ಅಧಿವೇಶನದ ಕಾರ್ಯಕಲಾಪಗಳನ್ನು ಲೋಕಸಭೆಯ ಮಾದರಿಯಲ್ಲಿ ಚಿತ್ರೀಕರಿಸಿ ನೇರ ಪ್ರಸಾರ ಮಾಡಲು ಹಾಗೂ ಚಿತ್ರೀಕರಿಸಿದ ದೃಶ್ಯಗಳನ್ನು ಇತರೆ ಖಾಸಗಿ ಚಾನಲ್‌ಗಳಿಗೆ ಸ್ಯಾಟಿಲೈಟ್ ಸಂಪರ್ಕದ ಮೂಲಕ ಒದಗಿಸುವ ಕಾರ್ಯವನ್ನು ಪ್ರಥಮ ಹಂತದಲ್ಲಿ ಜಾರಿಗೆ ತರಲು ಪ್ರಾಯೋಗಿಕವಾಗಿ ಬೆಂಗಳೂರು ದೂರದರ್ಶನ ಕೇಂದ್ರಕ್ಕೆ ವಹಿಸಲು ತೀರ್ಮಾನಿಸಲಾಗಿದೆ. ಅದೇ ರೀತಿ ಸದನದ ಕಾರ್ಯಕಲಾಪಗಳ ಛಾಯಾಚಿತ್ರಗಳನ್ನು ತೆಗೆದು ಮುದ್ರಣ ಮಾಧ್ಯಮದವರಿಗೆ ಒದಗಿಸುವ ಕಾರ್ಯವನ್ನು ವಾರ್ತಾ ಇಲಾಖೆಯವರಿಗೆ ವಹಿಸಲು ನಿರ್ಧರಿಸಲಾಗಿದೆ. ಸದನದ ಕಾರ್ಯಕಲಾಪಗಳನ್ನು ವರದಿ ಮಾಡುವ ವರದಿಗಾರರಿಗೆ ಮಾತ್ರ ಎಂದಿನಂತೆ ಪತ್ರಕರ್ತರ ಗ್ಯಾಲರಿಗೆ ಪ್ರವೇಶಿಸಲು ಅವಕಾಶ ಕಲ್ಪಿಸಲಾಗಿದೆ.

ವಿಧಾನ ಪರಿಷತ್ತಿನಲ್ಲಿ ಮಾತ್ರ ಸದ್ಯಕ್ಕೆ ಖಾಸಗಿ ವಾಹಿನಿಗಳ ಕಲಾಪದ ಚಿತ್ರೀಕರಣ ಮಾಡಬಹುದಾಗಿದೆ. ವಿಧಾನ ಸಭೆಯಲ್ಲಿ ಖಾಸಗಿ ವಾಹಿನಿಗಳಿಗೆ ನಿರ್ಬಂಧ ವಿಧಿಸಿರುವ ಹಿನ್ನೆಲೆಯಲ್ಲಿ ಪರಿಷತ್‌ನಲ್ಲಿ ಇದೇ ಮಾದರಿ ಅನುಸರಿಸುವ ಬಗ್ಗೆ ಕಲಾಪ ಸಲಹಾ ಸಮಿತಿಯಲ್ಲಿ ನಿರ್ಧರಿಸಬೇಕಾಗುತ್ತದೆ ಎಂದು ಪರಿಷತ್ ಸಭಾಪತಿಯವರಾದ ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿಯವರು ಸುದ್ದಿಗಾರರಿಗೆ ತಿಳಿಸಿದರು.

ಆಧಾರ–ಕನ್ನಡ ಪ್ರಭ 10.10.2019

12. ಅಧಿವೇಶನ ಮೂರು ದಿನಗಳಿಗೆ ಸೀಮಿತ

ವಿಧಾನಮಂಡಲದ ಅಧಿವೇಶನದಲ್ಲಿ ವಿರೋಧ ಪಕ್ಷಗಳನ್ನು ಎದುರಿಸಲು ಸಜ್ಜಾಗಿರುವ ಆಡಳಿತರೂಢ ಬಿ.ಜೆ.ಪಿ.ಯು ಈ ಹಿಂದೆ ನಿಗದಿ ಮಾಡಿರುವಂತೆ ಕಲಾಪವನ್ನು ಮೂರು ದಿನಗಳಿಗಷ್ಟೆ ಸೀಮಿತಗೊಳಿಸಲು ಶಾಸಕಾಂಗ ಪಕ್ಷದ ಸಭೆಯಲ್ಲಿ ತೀರ್ಮಾನಿಸಿದೆ. ಕಲಾಪದ ಆರಂಭದಲ್ಲಿ ಮೃತರಿಗೆ ಸಂತಾಪ ಸೂಚಿಸಿದ ಬಳಿಕ ಮುಖ್ಯಮಂತ್ರಿಯವರಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಧನವಿನಿಯೋಗ ಮಸೂದೆಯನ್ನು ಮಂಡಿಸಲಿದ್ದಾರೆ ಎಂದು ಶಾಸಕಾಂಗ ಪಕ್ಷದ ಬಳಿಕ ಬಿ.ಜೆ.ಪಿ. ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ ಸರ್ಕಾರ ಮಂಡಿಸಿದ ಬಜೆಟ್‌ನಲ್ಲಿ ಯಾವುದೇ ವ್ಯತ್ಯಾಸ ಮಾಡಿಲ್ಲ. ನೆರೆಗೆ ಸಂಬಂಧಿಸಿದಂತೆ ಪೂರಕ ಅಂದಾಜು ಸೇರಿಸಲಾಗಿದೆ. ಅದಕ್ಕೆ ಒಪ್ಪಿಗೆ ಪಡೆದುಕೊಳ್ಳಲಾಗುವುದು. ಬಜೆಟ್‌ನಲ್ಲಿರುವ ಅಂಶಗಳು, ನೆರೆ ಸಂಕಷ್ಟ ಮತ್ತು ಪರಿಹಾರಕ್ಕೆ ಸಂಬಂಧಿಸಿದ ಚರ್ಚೆಗೆ ಸಿದ್ದರಿದ್ದೇವೆ. ವಿರೋಧ ಪಕ್ಷಗಳ ಎಲ್ಲಾ ಪ್ರಶ್ನೆಗಳಿಗೂ ಉತ್ತರ ನೀಡುತ್ತೇವೆಂದು ತಿಳಿಸಿದರು. ಮೂರು ದಿನಗಳು ಹಗಲು ರಾತ್ರಿ ಕುಳಿತು ಚರ್ಚೆ ನಡೆಸಲು ಸಿದ್ದರಿದ್ದೇವೆ. ಆದರೆ ಹತ್ತು ದಿನಗಳ ಕಾಲ ಅಧಿವೇಶನ ನಡೆಸಲು ಈ ಸಂದರ್ಭದಲ್ಲಿ ಸಾಧ್ಯವಿಲ್ಲ. ಶಾಸಕರು ಮತ್ತು ಅಧಿಕಾರಿಗಳು ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಅನಿವಾರ್ಯತೆ ಇದೆ, ಈ ಅಂಶವನ್ನು ವಿರೋಧ ಪಕ್ಷಗಳಿಗೂ ಮನವರಿಕೆ ಮಾಡಲಾಗುವುದು ಹಾಗೂ ಸಲಹೆಯನ್ನು ಕೇಳಲಾಗುವುದೆಂದು ಶ್ರೀ ರವಿಕುಮಾರ್ ಅವರು ಹೇಳಿದರು.

ಆಧಾರ–ಕನ್ನಡಪ್ರಭ 10.10.2019

13. ಉಪ ಸಭಾಪತಿ ವಿರುದ್ಧ ಅವಿಶ್ವಾಸ

ಜೆ.ಡಿ.ಎಸ್. ಜೊತೆ ಮೈತ್ರಿ ಕಡಿತಗೊಂಡ ಹಿನ್ನೆಲೆಯಲ್ಲಿ ವಿಧಾನ ಪರಿಷತ್ತಿನ ಉಪ ಸಭಾಪತಿ ಎನ್.ಧರ್ಮೇಗೌಡ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಕಾಂಗ್ರೆಸ್ ನಿರ್ಧರಿಸಿತು.

ದಿನಾಂಕ 09.10.2019ರಂದು ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿದ್ದು, ಪರಿಷತ್ ಉಪ ಸಭಾಪತಿಯನ್ನು ಕೆಳಗಿಳಿಸಲು ಒಮ್ಮತಕ್ಕೆ ಬರಲಾಯಿತು ಎಂದು ಪಕ್ಷದ ಮೂಲಗಳು ತಿಳಿಸಿವೆ. ಕಳೆದ ವಿಧಾನ ಸಭೆ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ಬಾರದ ಹಿನ್ನೆಲೆಯಲ್ಲಿ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ರಚನೆಯಾಗಿತ್ತು. ಮೇಲ್ಮನೆಯಲ್ಲಿ ಕಾಂಗ್ರೆಸ್‌ಗೆ ಬಹುಮತವಿದ್ದರೂ, ಮೈತ್ರಿಯಿಂದಾಗಿ ಪರಿಷತ್ ಉಪ ಸಭಾಪತಿ ಸ್ಥಾನವನ್ನು ಜೆ.ಡಿ.ಎಸ್‌ಗೆ ಬಿಟ್ಟುಕೊಟ್ಟಿತು. ಮೈತ್ರಿ ಸರ್ಕಾರ ಪತನದ ನಂತರ ಎರಡೂ ಪಕ್ಷಗಳು ಅಂತರ ಕಾಯ್ದುಕೊಂಡಿವೆ. ಹಾಗಾಗಿ ಅವಿಶ್ವಾಸ ನಿರ್ಣಯ ಮಂಡಿಸಿ, ಆ ಸ್ಥಾನವನ್ನು ಕಾಂಗ್ರೆಸ್ ಪಡೆದುಕೊಳ್ಳಲು ಮುಂದಾಗಿದೆ.

ಆಧಾರ–ಪ್ರಜಾವಾಣಿ 10.10.2019

14. ಪ್ರವಾಹವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಿ

ದಿನಾಂಕ 10.10.2019ರ ವಿಧಾನಪರಿಷತ್ತಿನ ಅಧಿವೇಶನದಲ್ಲಿ ಪ್ರವಾಹದ ಪರಿಹಾರದ ಬಗ್ಗೆ ಚರ್ಚೆ ಕೈಗೊಂಡ ಸಂದರ್ಭದಲ್ಲಿ ರಾಜ್ಯದ 22 ಜಿಲ್ಲೆಗಳಲ್ಲಿ ಬಂದಿರುವ ಜಲಪ್ರವಾಹವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಿ, ಐದು ಲಕ್ಷದ ಬದಲಾಗಿ ಕನಿಷ್ಠ 10ಲಕ್ಷ ರೂ. ಪರಿಹಾರ ನೀಡಬೇಕೆಂದು ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಎಸ್.ಆರ್.ಪಾಟೀಲ್ ಆಗ್ರಹಿಸಿದರು.

ನಿಲುವಳಿ ಸೂಚನೆ ಮಂಡಿಸಿ ಮಾತನಾಡಿದ ಅವರು, ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ನಿಯಮಾವಳಿಗಳನ್ನು ಸಡಿಲಗೊಳಿಸಬೇಕು. ಈ ನಿಯಮದಂತೆ ಪರಿಹಾರ ನೀಡಿದರೆ ರೈತರು ಜೀವನ ಮಾಡಲು ಸಾಧ್ಯವಿಲ್ಲ. ಹೀಗಾಗಿ ಬೆಳೆ ನಷ್ಟ ಅಥವಾ ಜಮೀನು ಕಳೆದುಕೊಂಡಿರುವವರಿಗೆ ನಿಯಮಗಳನ್ನು ಸರಿಪಡಿಸಿ ಸೂಕ್ತ ಪರಿಹಾರ ಒದಗಿಸಬೇಕೆಂದು ಮನವಿ ಮಾಡಿದರು.

ಅದಕ್ಕೆ ಕಂದಾಯ ಸಚಿವರು ಈಗಾಗಲೇ 5,180 ಕುಟುಂಬಗಳಿಗೆ ಮನೆ ಬಾಡಿಗೆ ನೀಡಲಾಗಿದೆ. ಮಾಸಿಕ ರೂ.5,000/–ರಂತೆ 25,000/– ಗಳನ್ನು ತಕ್ಷಣದಲ್ಲಿ ನೀಡಲು ಸೂಚನೆ ನೀಡಲಾಗಿದೆ. 1,761 ಕುಟುಂಬಕ್ಕೆ ಶೆಡ್ ನಿರ್ಮಾಣ ಮಾಡಲಾಗಿದೆ. ಈ ಕಾರ್ಯಕ್ಕೆ 14.08 ಕೋಟಿ ರೂ.ಗಳನ್ನು ನೀಡಬೇಕೆಂದು ಹೇಳಿದರು.

ಆಧಾರ–ಉದಯವಾಣಿ 11.10.2019

15. ಮೇಲ್ಮನೆ ಸಭಾನಾಯಕ

ವಿಧಾನ ಪರಿಷತ್ತಿನ ಸಭಾನಾಯಕರಾಗಿ ಶ್ರೀ ಕೋಟಾ ಶ್ರೀನಿವಾಸ ಪೂಜಾರಿ ಹಾಗೂ ಪ್ರತಿ ಪಕ್ಷದ ನಾಯಕರಾಗಿ ಶ್ರೀ ಎಸ್.ಆರ್.ಪಾಟೀಲ್ ನೇಮಕಗೊಂಡಿದ್ದಾರೆ. ಅದೇ ರೀತಿ ಮಹಾಂತೇಶ್ ಕವಟಗಿಮಠ ಸರ್ಕಾರಿ ಮುಖ್ಯ ಸಚೇತಕರಾಗಿ, ಶ್ರೀ ಬಸವರಾಜ್ ಹೊರಟ್ಟಿ ಜೆ.ಡಿ.ಎಸ್. ನಾಯಕರಾಗಿ, ಶ್ರೀ ಮರಿತಿಬ್ಬೇಗೌಡ ಉಪ ನಾಯಕರಾಗಿ ಶ್ರೀ ಚೌಡರೆಡ್ಡಿ ತೂಪಲ್ಲಿ ಜೆ.ಡಿ.ಎಸ್. ಸಚೇತಕರಾಗಿ ನೇಮಕಗೊಂಡಿದ್ದಾರೆ ಎಂದು ಸದನದಲ್ಲಿ ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ ಪ್ರಕಟಿಸಿದರು.

ಆಧಾರ–ಉದಯವಾಣಿ 11.10.2019

16. ಸಂತ್ರಸ್ತರಿಗೆ ಪುನರ್ ಬದುಕು ರೂಪಿಸಲು ಸಲಹೆ

ದಿನಾಂಕ 11.10.2019ರಂದು ನಡೆದ ವಿಧಾನಪರಿಷತ್ತಿನ ಅಧಿವೇಶನದ ಚರ್ಚೆ ವೇಳೆಯಲ್ಲಿ, ರಾಜ್ಯದ ಪ್ರವಾಹ ಪೀಡಿತ ಪ್ರದೇಶವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಬೇಕು. ನೆರೆಯಿಂದಾಗಿ ಸಂಕಷ್ಟಕ್ಕೆ ಒಳಗಾದ ಜನರ ಪುನರ್ ಬದುಕಿಗೆ ಕಾರ್ಯಕ್ರಮಗಳನ್ನು ರೂಪಿಸಬೇಕು, ಪ್ರವಾಹ ಸಂತ್ರಸ್ತರಿಗೆ ಪುನರ್ ವಸತಿ ಕಲ್ಪಿಸಲು ತಜ್ಞರ ಸಮಿತಿ ರಚನೆ ಮಾಡಬೇಕು ಎಂದು ಪ್ರತಿಪಕ್ಷಗಳ ಸದಸ್ಯರು ಸರ್ಕಾರಕ್ಕೆ ಸಲಹೆ ನೀಡಿದರು.

ನೆರೆ ಸಂತ್ರಸ್ತರು ಸಂಕಷ್ಟಕ್ಕೆ ಒಳಗಾಗಿರುವುದಕ್ಕೆ ಸಂಬಂಧಿಸಿದಂತೆ ನಿಯಮ 68ರಡಿ ಚರ್ಚೆ ಆರಂಭಿಸಿ ಕಾಂಗ್ರೆಸ್ ಸದಸ್ಯರು, ಆಡಳಿತ ಪಕ್ಷದ ಸದಸ್ಯರು ಮಾತನಾಡಿ, ಸಂತ್ರಸ್ತರ ಬದುಕನ್ನು ಪುನರ್ ರೂಪಿಸಬೇಕು ಹಾಗೂ ಪುನರ್‌ವಸತಿ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಪ್ರವಾಹ ಪೀಡಿತ ಪ್ರದೇಶಗಳಲ್ಲಿನ ಜನರ ಬದುಕನ್ನು ಸುಧಾರಿಸಲು ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಳ್ಳಬೇಕು. 2.5 ಲಕ್ಷ ಮನೆಗಳು ನಾಶವಾಗಿವೆ. ಸಾವಿರಾರು ಶಾಲಾ ಕಟ್ಟಡಗಳು ನೆಲಸಮವಾಗಿವೆ. 30 ಸಾವಿರ ಕಿ.ಮೀ. ರಸ್ತೆ ಹಾಳಾಗಿ ಹಲವಾರು ಗ್ರಾಮಗಳ ನಡುವಿನ ಸಂಪರ್ಕ ಕಡಿದುಕೊಂಡಿದೆ. ಲಕ್ಷಾಂತರ ಎಕರೆ ಜಮೀನಿನಲ್ಲಿದ್ದ ಬೆಳೆ ನಾಶವಾಗಿದೆ. ಈ ಜಮೀನಿನಲ್ಲಿ 5–6 ವರ್ಷಗಳ ಕಾಲ ವ್ಯವಸಾಯ ಮಾಡಲು ಸಾಧ್ಯವಾಗದಂತೆ ಸವಳು ಮಣ್ಣು ತುಂಬಿದೆ. ಕೆಲವು ಕಡೆ ಭೂ ಕುಸಿತವಾಗಿದೆ. ಸಂತ್ರಸ್ತರು ಬೀದಿಯಲ್ಲಿ ಬದುಕುತ್ತಿದ್ದಾರೆ. 50 ಸಾವಿರಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಮುರಿದಿವೆ. ರಸ್ತೆಗಳು ಹಾಳಾಗಿರುವುದರಿಂದ ಮಕ್ಕಳು ಶಾಲೆಗೆ ಹೋಗಲಾಗುತ್ತಿಲ್ಲ. ಬಸ್ಸುಗಳು ಸಂಚರಿಸುತ್ತಿಲ್ಲ. ಈ ಎಲ್ಲವನ್ನು ಸುಧಾರಿಸುವಂತಹ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಆಗ್ರಹಿಸಿದರು.

ಇಂತಹ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಪ್ರವಾಹ ಪೀಡಿತ ಪ್ರದೇಶವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಣೆ ಮಾಡಿ ಅದಕ್ಕೆ ಸೂಕ್ತ ಪರಿಹಾರ ಒದಗಿಸಿ ಸಂತ್ರಸ್ತರ ಬದುಕನ್ನು ಹಸನು ಮಾಡಬೇಕೆಂದು ಆಗ್ರಹಿಸಿದರು.

ಆಧಾರ–ಸಂಯುಕ್ತಕರ್ನಾಟಕ 12.10.2019

17. ಮಾಧ್ಯಮಗಳ ನಿಷೇಧದ ಜಟಾಪಟಿ (ವಿ.ಪ)

ದೃಶ್ಯ ಮಾಧ್ಯಮಗಳನ್ನು ಕೆಳಮನೆಯಲ್ಲಿ ನಿಷೇಧ ಮಾಡಿರುವ ವಿಷಯ ಮೇಲ್ಮನೆಯಲ್ಲಿ ಪ್ರಸ್ತಾಪವಾಗಿ ಆಡಳಿತ ಹಾಗೂ ಪ್ರತಿಪಕ್ಷಗಳ ನಡುವೆ ಕೆಲಕಾಲ ಮಾತಿನ ಚಕಮಕಿಗೆ ಕಾರಣವಾಯಿತು.

ನೆರೆ ಸಂತ್ರಸ್ತರ ಕುರಿತು ಕಾಂಗ್ರೆಸ್ ಸದಸ್ಯ ಚರ್ಚೆ ಮಾಡುತ್ತಿದ್ದ ಸಂದರ್ಭದಲ್ಲಿ ಸದನದ ಕಲಾಪವನ್ನು ಚಿತ್ರೀಕರಣ ಮಾಡಿಕೊಳ್ಳಲು ಕೆಳಮನೆಯಲ್ಲಿ ನಿರ್ಬಂಧ ಹೇರಲಾಗಿದೆ. ದೃಶ್ಯ ಮಾಧ್ಯಮದವರು ಕಲಾಪ

ಚಿತ್ರೀಕರಿಸಿಕೊಳ್ಳಲು ಅವಕಾಶ ಮಾಡಿಕೊಡಲು ಸ್ಪೀಕರ್‌ರವರಿಗೆ ಜ್ಞಾನೋದಯವಾಗಲಿ ಎಂದು ಹೇಳಿದರು. ಈ ಮಾತಿಗೆ ಕೆರಳಿದ ಆಡಳಿತ ಪಕ್ಷದ ಸದಸ್ಯರು ಕೆಳಮನೆ ಸ್ಪೀಕರ್ ನಿರ್ಧಾರವನ್ನು ಈ ಮನೆಯಲ್ಲಿ ಪ್ರಸ್ತಾಪ ಮಾಡುವಂತಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಈ ವೇಳೆ ಆಡಳಿತ ಹಾಗೂ ಪ್ರತಿಪಕ್ಷ ಸದಸ್ಯರ ನಡುವೆ ಕೆಲ ನಿಮಿಷ ಮಾತಿನ ಚಕಮಕಿ ನಡೆಯಿತು. ಆಗ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ಮಧ್ಯ ಪ್ರವೇಶಿಸಿ, ಕೆಳಮನೆಯ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದು ಬೇಡ ಎಂದು ಹೇಳಿ ವಾದ ವಿವಾದಕ್ಕೆ ತೆರೆ ಎಳೆದರು.

ಆಧಾರ–ಸಂಯುಕ್ತಕರ್ನಾಟಕ 12.10.2019

18. ಕರ್ನಾಟಕ –ಮಹಾರಾಷ್ಟ್ರ ನಡುವೆ ಸಮನ್ವಯ ಸಮಿತಿ

ದಿನಾಂಕ: 11.10.2019ರ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ನೆರೆ ಹಾವಳಿ ಚರ್ಚೆಯ ಅವಧಿಯಲ್ಲಿ ಅಂತರರಾಜ್ಯಗಳ ಜಲಾಶಯಗಳ ನಿರ್ವಹಣೆಗೆ ಸಂಬಂಧಿಸಿದಂತೆ ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವೆ ಸಮನ್ವಯ ಸಮಿತಿ ಅಸ್ತಿತ್ವಕ್ಕೆ ಬರಲಿದೆ ಎಂದು ಗಣಿ ಮತ್ತು ಭೂವಿಜ್ಞಾನ ಸಚಿವರು ತಿಳಿಸಿದರು. ನೆರೆಹಾವಳಿ ಕುರಿತು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿ, ಸಮನ್ವಯ ಸಮಿತಿ ರಚನೆಗಾಗಿ ಮುಖ್ಯಮಂತ್ರಿ ಯಡಿಯೂರಪ್ಪರವರು, ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಜೊತೆ ಮಾತುಕತೆ ನಡೆಸಿದ್ದಾರೆ ಶೀಘ್ರ ಸಮಿತಿ ಅಸ್ತಿತ್ವಕ್ಕೆ ಬರಲಿದೆ ಎಂದು ಮಾಹಿತಿ ನೀಡಿದರು.

ಆಧಾರ–ಉದಯವಾಣಿ 12.10.2019

19. ರೂ.2.40 ಲಕ್ಷ ಕೋಟಿ ಆಯವ್ಯಯಕ್ಕೆ ಅಸ್ತು

ಪ್ರಸಕ್ತ ಹಣಕಾಸು ವರ್ಷದಲ್ಲಿ ರೂ. 2.40 ಲಕ್ಷ ಕೋಟಿ ಮೊತ್ತದ ಆಯವ್ಯಯಕ್ಕೆ ದಿನಾಂಕ 12.10.2019ರಂದು ಉಭಯ ಸದನಗಳಲ್ಲಿ ಅನುಮೋದನೆ ದೊರೆಯಿತು.

ಎರಡನೇ ಕಂತಿನಲ್ಲಿ ರೂ. 7,927 ಕೋಟಿ ಪೂರಕ ಅಂದಾಜು ಒಳಗೊಂಡಂತೆ 2019–2020ನೇ ಸಾಲಿನಲ್ಲಿ ರೂ. 2,40,74,585/– ವೆಚ್ಚದ 2 ಧನ ವಿಧೇಯಕಗಳನ್ನು ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಉಭಯ ಸದನಗಳಲ್ಲಿ ಮಂಡಿಸಿ ಅನುಮೋದನೆ ಪಡೆದರು.

ಪ್ರಸಕ್ತ ಆರ್ಥಿಕ ವರ್ಷ ಮೊದಲ 4 ತಿಂಗಳಿಗೆ ರೂ. 80,168/– ಕೋಟಿ ಲೇಖಾನುದಾನ ಪಡೆಯಲಾಗಿತ್ತು. ನಂತರ 3 ತಿಂಗಳಿಗೆ 2ನೇ ಬಾರಿ ರೂ. 62,751/– ಕೋಟಿ ಲೇಖಾನುದಾನ ಪಡೆಯಲಾಗಿತ್ತು. ಬಜೆಟ್‌ಗೆ ಅನುಮೋದನೆ ಪಡೆಯಲಾಗಿದೆ. ರಾಜಸ್ವ ವೆಚ್ಚಕ್ಕೆ ರೂ. 1,84,649/– ಕೋಟಿ ಹಾಗೂ ಬಂಡವಾಳ ವೆಚ್ಚಗಳಿಗೆ ರೂ. 56,096/– ಕೋಟಿ. ವಿನಿಯೋಗಿಸಲಾಗುವುದು. ಇದರಲ್ಲಿ ರೂ. 9,964/– ಕೋಟಿ ಸಾರ್ವಜನಿಕ ಸಾಲವಿರುವುದಾಗಿ ಬಿ.ಎಸ್.ಯಡಿಯೂರಪ್ಪ ಪ್ರಕಟಿಸಿದರು.

ಆಧಾರ–ಉದಯವಾಣಿ 13.10.2019

20. ಪರಿಷತ್‌ನಲ್ಲಿ 16 ಗಂಟೆ ಚರ್ಚೆ – ಪ್ರತಾಪಚಂದ್ರ ಶೆಟ್ಟಿ

ವಿಧಾನ ಪರಿಷತ್ತಿನಲ್ಲಿ ಮೂರು ದಿನಗಳ ಕಲಾಪದಲ್ಲಿ 16 ಗಂಟೆ 45 ನಿಮಿಷಗಳ ಕಾಲ ವಿವಿಧ ವಿಷಯಗಳ ಮೇಲೆ ಚರ್ಚೆ ನಡೆದಿದೆಯೆಂದು ಸಭಾಪತಿ ಪ್ರತಾಪಚಂದ್ರ ಶೆಟ್ಟಿ ತಿಳಿಸಿದರು. ವಿವಿಧ ವರದಿಯ ಮಂಡನೆ, 4 ಕಾಗದ ಪತ್ರ ಮಂಡನೆ, ನಿಯಮ 72, ನಿಯಮ 330 ಹಾಗೂ ನಿಯಮ 330ಎ ಹಾಗೂ ನಿಯಮ 59ರ ಅಡಿಯಲ್ಲಿ ವಿವಿಧ ವಿಷಯಗಳ ಮೇಲೆ ವಿಸ್ತೃತ ಚರ್ಚೆ ನಡೆದಿದೆ. ಮೂರು ವಿಧೇಯಕಗಳು ಅಂಗೀಕಾರಗೊಂಡಿವೆ ಎಂದು ಹೇಳಿದರು.

ಆಧಾರ–ಉದಯವಾಣಿ 13.10.2019

21. ಮಾಧ್ಯಮ ನಿರ್ಬಂಧ ಸರಿಯಲ್ಲ

ಬಿ.ಜೆ.ಪಿ ಸರ್ಕಾರ ಬಂದ ಬಳಿಕ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಉಭಯ ಕಲಾಪದಿಂದ ಖಾಸಗಿ ಮಾಧ್ಯಮಗಳ ಕ್ಯಾಮರಾಗಳನ್ನು ಹೊರ ಹಾಕಿದ್ದಾರೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ.

ಆದ್ದರಿಂದ ಕೂಡಲೇ ಈ ಆದೇಶವನ್ನು ಹಿಂಪಡೆಯಬೇಕೆಂದು ಪ್ರತಿಪಕ್ಷದ ನಾಯಕರು ಆಗ್ರಹಿಸಿದರು. ಸಂವಿಧಾನದ 4ನೇ ಅಂಗವಾಗಿರುವ ಮಾಧ್ಯಮವನ್ನು ಕಟ್ಟಿಹಾಕುವ ಪ್ರಯತ್ನವನ್ನು ಯಾವ ಸರ್ಕಾರಗಳು ಮಾಡಬಾರದು. ಈ ಹಿಂದೆ ನಮ್ಮ ಅವಧಿಯಲ್ಲಿ ಉಭಯ ಕಲಾಪಗಳು ಪ್ರತ್ಯೇಕ ಸುದ್ದಿವಾಹಿನಿ ಆರಂಭಿಸಲು ಚಿಂತಿಸಿದ್ದರೂ, ಬಳಿಕ ಅದನ್ನು ಕೈಬಿಡಲಾಯಿತು. ಕಲಾಪದೊಳಗೆ ಖಾಸಗಿ ಕ್ಯಾಮರಾಗಳು ಇದ್ದರೆ ಶಾಸಕರಿಗೆ ಎಚ್ಚರ ಹಾಗೂ ಹುಮ್ಮಸ್ಸು ಎರಡೂ ಇರುತ್ತದೆ. ಸಭಾಧ್ಯಕ್ಷರ ಸಮ್ಮೇಳನದಲ್ಲಿ ಕ್ಯಾಮರಾಗಳನ್ನು ನಿರ್ಬಂಧಿಸಬೇಕು ಎನ್ನುವ ನಿರ್ಣಯ ಕೈಗೊಂಡಿಲ್ಲ. ಆದ್ದರಿಂದ ಈ ಆದೇಶ ಹಿಂಪಡೆಯಬೇಕೆಂದರು.

ಆಧಾರ–ವಿಶ್ವವಾಣಿ 13.10.2019

22. ವ್ಯರ್ಥವಾಗದ ವಿಧಾನ ಸಭೆ ಕಲಾಪ

ಪ್ರವಾಹ ಪರಿಸ್ಥಿತಿ ಚರ್ಚೆ ಹಾಗೂ ಧನ ವಿನಿಯೋಗ ವಿಧೇಯಕ ಅಂಗೀಕಾರಕ್ಕೆ ಸೀಮಿತವಾಗಿ ಬಿ.ಜೆ.ಪಿ. ಸರ್ಕಾರದ ಮೊದಲ ಅಧಿವೇಶನ ಅಂತ್ಯಗೊಂಡಿತು. ಮಹಾಮಳೆಯಿಂದ ರಾಜ್ಯದ ಪ್ರವಾಹ ಸಂತ್ರಸ್ತರಿಗೆ ಹೊಸ ಬದುಕು ಕಟ್ಟಿಕೊಡುವ ಸವಾಲು ಸರ್ಕಾರದ ಮುಂದಿದೆ. ಈ ದೃಷ್ಟಿಯಿಂದ ಅಧಿವೇಶನಕ್ಕೆ ಹೆಚ್ಚು ಮಹತ್ವವಿತ್ತು. ಈ ನಡುವೆಯು 2019–20ರ ವಿತ್ತ ವರ್ಷದ ಬಜೆಟ್ ಪಾಸ್ ಮಾಡಿಕೊಳ್ಳುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರ ನಡುವೆ ನೆರೆ ಪರಿಹಾರ ವಿಳಂಬ, ಕ್ಷೇತ್ರದ ಅಭಿವೃದ್ಧಿ ಅನುದಾನ ಕಡಿತ ಸಂಬಂಧವಾಗಿ ವಾಕ್ಸಮರ ನಡೆದಿದೆ. ಇದರಿಂದಾಗಿ ಕಲಾಪ ವ್ಯರ್ಥವಾಗಲಿಲ್ಲ. ಸದನದಲ್ಲಿ ಕೋಲಾಹಲವಿತ್ತಾದರೂ ಕಲಾಪ ಮುಂದೂಡುವ ಸಂದರ್ಭ ಸೃಷ್ಟಿಯಾಗಲಿಲ್ಲ. ಅಷ್ಟರಮಟ್ಟಿಗೆ ಈ ಅಧಿವೇಶನ ಸಕಾರಾತ್ಮಕ ಧೋರಣೆ ಹೊಂದಿತ್ತು ಎನ್ನಬಹುದು. ಪ್ರತಿಪಕ್ಷದವರು ಪ್ರವಾಹ ವಿಷಯದಲ್ಲಿ ಕಳಕಳಿಯಿಂದ ಸಲಹೆ ನೀಡಿದರು. ಮುಖ್ಯಮಂತ್ರಿಯವರು ಬೆಳೆ ನಷ್ಟಕ್ಕೆ ಎನ್.ಡಿ.ಆರ್.ಎಫ್ ಮಾರ್ಗಸೂಚಿ ಹೊರತುಪಡಿಸಿದ ಪರಿಹಾರದ ನಿರ್ಧಾರ ಪ್ರಕಟಿಸಿದರು. ಶಾಸಕರ ಕ್ಷೇತ್ರದ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡುವುದಿಲ್ಲ ಎಂಬ ಭರವಸೆಯನ್ನು ಕೊಟ್ಟರು. ಕಲಾಪವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡುವ ಮೊದಲು ಸ್ಪೀಕರ್‌ರವರು ಸದನ ನಡೆದ ರೀತಿಯನ್ನು ವಿವರಿಸಿದರು.

ಕಲಾಪ ಸಮಯ

17 ತಾಸು 58 ನಿಮಿಷ ಕಾಲ ಕಲಾಪ

3 ವಿಧೇಯಕ ಮಂಡಿಸಿ ಅಂಗೀಕಾರ (ಧನ ವಿನಿಯೋಗ ಸೇರಿ)

11 ತಾಸು ಪ್ರವಾಹ ಪರಿಸ್ಥಿತಿ ಬಗ್ಗೆ ಚರ್ಚೆ

22 ಸದಸ್ಯರು ಚರ್ಚೆಯಲ್ಲಿ ಭಾಗಿ

ದಿನಾಂಕ	ಶಾಸಕರ ಹಾಜರಿ	ಗೈರು ಹಾಜರಿ
ಅ.10	180	06
ಅ.11	181	05
ಅ.12	173	13

ಆಧಾರ–ವಿಜಯಕರ್ನಾಟಕ 13.10.2019

23. ಹೆಚ್.ಡಿ.ಕೆ. ಬಜೆಟ್ ತಿದ್ದುಪಡಿ ಮಾಡದೆ ಒಪ್ಪಿಗೆ

ಕಾಂಗ್ರೆಸ್–ಜೆ.ಡಿ.ಎಸ್. ಸಮ್ಮಿಶ್ರ ಸರ್ಕಾರ ಮಂಡಿಸಿದ್ದ 2019–2020ನೇ ಸಾಲಿನ ಬಜೆಟ್‌ಗೆ ಯಾವುದೇ ತಿದ್ದುಪಡಿ ಮಾಡದೇ 2ನೇ ಕಂತಿನಲ್ಲಿ ಮಂಡಿಸಿರುವ ರೂ.7,927 ಕೋಟಿ ಪೂರಕ ಅಂದಾಜುಗಳನ್ನು ಸೇರಿಸಿ ಧನ ವಿನಿಯೋಗ ವಿಧೇಯಕಕ್ಕೆ ದಿನಾಂಕ 12.10.2019ರ ಉಭಯ ಸದನಗಳಲ್ಲಿ ಯಾವುದೇ ಚರ್ಚೆಯಿಲ್ಲದೆ ಅನುಮೋದನೆ ನೀಡಲಾಯಿತು.

2019–2020ನೇ ಸಾಲಿನಲ್ಲಿ 3,327 ಕೋಟಿ ರೂ.ಗಳ ಪೂರಕ ಅಂದಾಜುಗಳ ಮೊದಲ ಕಂತಿಗೆ ಈ ಮೊದಲು ನೂತನ ಸರ್ಕಾರ ಅನುಮೋದನೆ ಪಡೆದಿತ್ತು. ಎರಡನೇ ಕಂತಿನಲ್ಲಿ ರೂ. 7,927/– ಕೋಟಿ ಪೂರಕ ಅಂದಾಜುಗಳನ್ನು ಮಂಡಿಸಿ ದಿನಾಂಕ 12.10.2019ರಂದು ಅನುಮೋದನೆ ಪಡೆಯಲಾಗಿದೆ. ಈ ಮೂಲಕ ಎರಡು ಕಂತಿನ ಪೂರಕ ಅಂದಾಜುಗಳಲ್ಲಿ ಹೆಚ್ಚುವರಿಯಾಗಿ ರೂ. 11,255/– ಕೋಟಿಗಳನ್ನು ಆಯವ್ಯಯ ಗಾತ್ರಕ್ಕೆ ಸೇರಿಸಲಾಗಿದ್ದು, ರೂ. 2,40,745/– ಕೋಟಿ ಗಾತ್ರದ ಧನ ವಿನಿಯೋಗ ಪ್ರಸ್ತಾವನೆಗೆ ಅಂಗೀಕಾರ ದೊರೆಯಿತು.

ಮೈತ್ರಿ ಸರ್ಕಾರ ಜುಲೈ ತಿಂಗಳವರೆಗೆ ರೂ. 80,168.37/– ಕೋಟಿ ಲೇಖಾನುದಾನಕ್ಕೆ ಅನುಮತಿ ಪಡೆದುಕೊಳ್ಳಲಾಗಿತ್ತು. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ತರುವಾಯ 3 ತಿಂಗಳವರೆಗೆ ರೂ. 62,751/– ಕೋಟಿ ಲೇಖಾನುದಾನಕ್ಕೆ ಅನುಮತಿ ಪಡೆದುಕೊಳ್ಳಲಾಗಿದ್ದು, ಪೂರ್ಣ ವೆಚ್ಚಕ್ಕೆ ಖರ್ಚು ಮಾಡಲು ರೂ. 2,40,745/– ಕೋಟಿ ಪೂರ್ಣ ಬಜೆಟ್‌ಗೆ ಉಭಯ ಸದನದಲ್ಲಿ ಅಂಗೀಕರಿಸಲಾಯಿತು.

ಆಧಾರ–ಕನ್ನಡಪ್ರಭ 13.10.2019

24. ಪರಿಷತ್ತಿನಲ್ಲಿ ಪ್ರತಿಪಕ್ಷಗಳ ಧರಣಿ ಮಧ್ಯೆ ಧನ ವಿಧೇಯಕ ಪಾಸ್

ರಾಜ್ಯದಲ್ಲಿ ಉಂಟಾದ ನೆರೆ ಪರಿಸ್ಥಿತಿಯನ್ನು "ರಾಷ್ಟ್ರೀಯ ವಿಪತ್ತು" ಎಂದು ಘೋಷಿಸಲು ನಿರ್ಣಯ ಅಂಗೀಕರಿಸಬೇಕೆಂಬ ಪ್ರಸ್ತಾವ ತಿರಸ್ಕಾರ ಹಾಗೂ ಸಂತ್ರಸ್ತರಿಗೆ ಮನೆ ನಿರ್ಮಾಣಕ್ಕೆ ತಲಾ ರೂ. 10 ಲಕ್ಷ ಪರಿಹಾರ ಘೋಷಿಸಲು ಒಪ್ಪದ ಸರ್ಕಾರದ ಕ್ರಮ ವಿರೋಧಿಸಿ ಕಾಂಗ್ರೆಸ್ ಸದಸ್ಯರು ವಿಧಾನ ಪರಿಷತ್ತಿನಲ್ಲಿ 12.10.2019ರಂದು ಧರಣಿ ನಡೆಸಿದರು.

"ರಾಷ್ಟ್ರೀಯ ವಿಪತ್ತು" ಎಂದು ಘೋಷಿಸಲು ಕೇಂದ್ರದ ಸಾಕಷ್ಟು ಆದೇಶಗಳನ್ನು ಪಾಲಿಸಬೇಕಾಗುತ್ತದೆ. ಯಾವುದೇ ಸಿದ್ಧತೆ ಮಾಡಿಕೊಳ್ಳದೇ ಏಕಾಏಕಿ ನಿರ್ಣಯ ಅಂಗೀಕರಿಸಲು ಸಾಧ್ಯವಾಗುವುದಿಲ್ಲ ಎಂದ ಕಾನೂನು ಸಚಿವರ ಉತ್ತರಕ್ಕೆ ಕುಪಿತಗೊಂಡ ಕಾಂಗ್ರೆಸ್ ಸದಸ್ಯರು ಧರಣಿ ನಡೆಸಿದರು.

"ಕೊಡಗು ಮಾದರಿಯಲ್ಲಿ ಉತ್ತರ ಕರ್ನಾಟಕದಲ್ಲಿ ಮನೆ ಕಳೆದುಕೊಂಡವರಿಗೆ ತಲಾ ರೂ. 10ಲಕ್ಷ ಪರಿಹಾರ ನೀಡಬೇಕು. ಜಲಾವೃತಗೊಂಡ ಗ್ರಾಮಗಳನ್ನು ಸಂಪೂರ್ಣ ಸ್ಥಳಾಂತರಿಸಿ ಕೃಷ್ಣಾ ಮೇಲ್ದಂಡೆ ಯೋಜನೆ ಮಾದರಿಯಲ್ಲಿ ಸಂತ್ರಸ್ತರಿಗೆ ಪುನರ್‌ವಸತಿ ಕಲ್ಪಿಸಬೇಕು. ಕಬ್ಬು ಬೆಳೆಗಾರರಿಗೆ ಕನಿಷ್ಠ ರೂ. 50 ಸಾವಿರ ಪರಿಹಾರ ಘೋಷಿಸಬೇಕು" ಎಂದು ಪ್ರತಿಪಕ್ಷ ನಾಯಕರು ಸರ್ಕಾರವನ್ನು ಒತ್ತಾಯಿಸಿದರು. ಇದಕ್ಕೆ ಜೆಡಿಎಸ್‌ನ ಹಾಗೂ ಕಾಂಗ್ರೆಸ್‌ನ ಶಾಸಕರುಗಳು ದನಿಗೂಡಿಸಿದರು.

ಕಂದಾಯ ಸಚಿವರು "ನೆರೆ ಪ್ರದೇಶದಲ್ಲಿನ ಕುಟುಂಬಗಳನ್ನು ಎತ್ತರದ ಪ್ರದೇಶಗಳಿಗೆ ಸ್ಥಳಾಂತರಿಸಿ ಉಚಿತವಾಗಿ ನಿವೇಶನ ನೀಡಲಾಗುತ್ತಿದೆ. ಮನೆ ನಿರ್ಮಾಣಕ್ಕಾಗಿ ರೂ. 5 ಲಕ್ಷ ಶೇ.25 ರಿಂದ 75 ರಷ್ಟು ಹಾನಿಗೀಡಾದ ಮನೆಗಳಿಗೆ ರೂ. 5 ಲಕ್ಷ ಹಾಗೂ ಗೂಡಂಗಡಿ, ಗುಡಿಸಲುಗಳಿಗೆ ರೂ. 10 ಸಾವಿರ ಪರಿಹಾರ ನೀಡಲಾಗುವುದು" ಎಂಬ ಭರವಸೆಗೆ ತೃಪ್ತರಾಗದ ಪ್ರತಿಪಕ್ಷದ ನಾಯಕರು "ನಮ್ಮ ಪ್ರಮುಖ ಬೇಡಿಕೆಗಳನ್ನು ಸರ್ಕಾರ ಈಡೇರಿಸಿಲ್ಲ. ಸಂತ್ರಸ್ತರ ಬಗ್ಗೆ ಸರ್ಕಾರಕ್ಕೆ ತಾಯಿ ಹೃದಯ ಇರಬೇಕು. ಸರ್ಕಾರಕ್ಕೆ ಕಿಂಚಿತ್ತೂ ಕರುಣೆ ಇಲ್ಲ" ಎಂದು ಧರಣಿ ಆರಂಭಿಸಿದರು. ಈ ಮಧ್ಯೆ 'ಕರ್ನಾಟಕ ಧನ ವಿನಿಯೋಗ ವಿಧೇಯಕಕ್ಕೆ ಒಪ್ಪಿಗೆ ಪಡೆಯಬೇಕಾಗಿರುವುದರಿಂದ ಪ್ರತಿ ಪಕ್ಷಗಳ ಸದಸ್ಯರು ಧರಣಿ ಕೈಬಿಟ್ಟು ಸರ್ಕಾರದೊಂದಿಗೆ ಸಹಕರಿಸಬೇಕೆಂದು' ಮುಖ್ಯಮಂತ್ರಿಯವರು ಮನವಿ ಮಾಡಿದರು. ಪ್ರತಿಪಕ್ಷದವರು ಜಗ್ಗಲಿಲ್ಲ. ಧರಣಿ ನಡುವೆಯೇ ಕರ್ನಾಟಕ ಧನ ವಿನಿಯೋಗಕ್ಕೆ ವಿಧಾನ ಪರಿಷತ್ತು ಅಂಗೀಕಾರ ನೀಡಿತು.

ಆಧಾರ–ವಿಜಯಕರ್ನಾಟಕ 13.10.2019

25. ಜೂನ್‌ಗೆ ಮೇಲ್ಮನೆಯ 16 ಸದಸ್ಯರು ನಿವೃತ್ತಿ

2020ರ ಜೂನ್‌ನಲ್ಲಿ 16 ವಿಧಾನಪರಿಷತ್ ಸದಸ್ಯರು ನಿವೃತ್ತಿಯಾಗಲಿದ್ದು, 75 ಸದಸ್ಯರಿರುವ ಮೇಲ್ಮನೆಯ ಸಂಖ್ಯಾಬಲ 59ಕ್ಕೆ ಕುಸಿಯಲಿದೆ. ನಿವೃತ್ತಿ ಆಗುತ್ತಿರುವವರಲ್ಲಿ 11 ಕಾಂಗ್ರೆಸ್, 3 ಜೆಡಿಎಸ್, ಬಿ.ಜೆ.ಪಿ ಹಾಗೂ ಪಕ್ಷೇತರ ತಲಾ ಒಬ್ಬರು ಸದಸ್ಯರಿದ್ದಾರೆ. ವಿಧಾನ ಸಭೆ ಕ್ಷೇತ್ರದಿಂದ ಆಯ್ಕೆಯಾಗಿರುವ 25 ಸದಸ್ಯರ ಪೈಕಿ 7 ಮಂದಿ ನಿವೃತ್ತಿ ನಂತರ 18ಕ್ಕೆ ಪದವೀಧರ ಕ್ಷೇತ್ರದ 7 ಸದಸ್ಯರಲ್ಲಿ ಇಬ್ಬರು ನಿವೃತ್ತಿಯಾಗುತ್ತಿದ್ದು, 5ಕ್ಕೆ ಶಿಕ್ಷಕರ ಕ್ಷೇತ್ರ 7 ರಲ್ಲಿ ಇಬ್ಬರು ನಿವೃತ್ತರಾದರೆ 5 ಕ್ಕೆ ಸಂಖ್ಯಾಬಲ ಇಳಿಯಲಿದೆ. ಇನ್ನೂ 11 ನಾಮನಿರ್ದೇಶಿತರಲ್ಲಿ ಐವರು ನಿವೃತ್ತಿಯಾಗಿ ಆರಕ್ಕೆ ಇಳಿಯಲಿದೆ. ಸ್ಥಳೀಯ ಸಂಸ್ಥೆಯಿಂದ ಆಯ್ಕೆಯಾಗಿರುವ 25 ಸದಸ್ಯರಲ್ಲಿ ಸದ್ಯಕ್ಕೆ ಯಾರೂ ನಿವೃತ್ತಿಯಾಗುತ್ತಿಲ್ಲ.

ಆಧಾರ–ವಿಜಯವಾಣಿ 11.11.2019

26. 13 ಶಾಸಕರ ಪ್ರಮಾಣ ವಚನ

ವಿಧಾನಸಭೆಯ ಉಪ ಚುನಾವಣೆಯಲ್ಲಿ ಗೆಲವು ಸಾಧಿಸಿದ 15 ಅಭ್ಯರ್ಥಿಗಳಲ್ಲಿ 13 ಮಂದಿ ದಿನಾಂಕ 22.12.2019ರಂದು ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ವಿಧಾನ ಸಭಾಧ್ಯಕ್ಷ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಪ್ರಮಾಣವನ್ನು ಬೋಧಿಸಿ, ಎಲ್ಲರಿಗೂ ಸಂವಿಧಾನದ ಪ್ರತಿಗಳನ್ನು ನೀಡಿದರು. ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಶರತ್ ಬಚ್ಚೇಗೌಡ ಆಕರ್ಷಣೆ ಬಿಂದುವಾಗಿದ್ದರು. ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ, ಸಚಿವರಾದ ಶ್ರೀ ಬಸವರಾಜ್ ಬೊಮ್ಮಾಯಿ, ಶ್ರೀ ಆರ್.ಅಶೋಕ್, ಶ್ರೀ ಸುರೇಶ್ ಕುಮಾರ್ ಹಾಗೂ ಶ್ರೀ ಹೆಚ್.ನಾಗೇಶ್ ಅವರುಗಳು ಸಮಾರಂಭದಲ್ಲಿ ಭಾಗಿಯಾಗಿದ್ದರು.

ಆಧಾರ–ಪ್ರಜಾವಾಣಿ 23.12.2019

27. ಶಾಸಕರ ಅನರ್ಹತೆಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ತೀರ್ಪು

ರಿಟ್ ಅರ್ಜಿ ಸಂಖ್ಯೆ 992, 997, 998, 1000, 1001, 1003, 1005, 1006, 1007/2019 ಗಳ ತೀರ್ಪು.

a. The Speaker, while adjudicating a disqualification petition acts as a quasi-judicial authority and the validity of the orders thus passed can be questioned before this Court under Article 32 of the Constitution. However, ordinarily, the party challenging the disqualification is required to first approach the High Court as the same would be appropriate, effective and expeditious.

b. The Speaker's scope of inquiry with respect to acceptance or rejection of a resignation tendered by a member of the legislature is limited to examine whether such a resignation was tendered voluntarily or genuinely. Once it is demonstrated that a member is willing to resign out of his free will, the Speaker has no option but to accept the resignation. It is constitutionally impermissible for the Speaker to take into account any extraneous factors while considering the resignation. The satisfaction of the Speaker is subject to judicial review.

c. Resignation and disqualification on account of defection under the Tenth Schedule, both result in vacancy of the seat held by the member in the legislature, but further consequences envisaged are different.

d. Object and purpose of the Tenth Schedule is to curb the evil of political defection motivated by lure of office or rather similar considerations which endanger the foundation of our democracy. By the 91st Constitutional Amendment, Articles 71 (1B), 164(1B) and 361B were enacted to ensure that a member disqualified by the Speaker on account of defection is not appointed as a Minister or holds any remunerative political post from the date of disqualification or till the date on which his term of office would expire or he/she is re-elected to the legislature, whichever is earlier.

e. Disqualification relates back to the date when the act of defection takes place. Factum and taint of disqualification does not vaporise by tendering a resignation letter to the Speaker. A pending or impending disqualification action does not become anfractuous by submission of the resignation letter, when acts(s) of disqualification have arisen prior to the member's resignation letter.

f. In the earlier Constitution Bench judgement of ***Kihoto Hollohan*** (supra), the order of the Speaker under Tenth Schedule can be subject to judicial review on four grounds: mala fide, perversity, violation of the constitutional mandate and order passed in violation of natural justice.

g. Our findings on allegations of not granting specific time in all the above cases are based on the unique facts and circumstances of the case. It should not be understood to mean that the Speaker could cut short the hearing period. The Speaker should give sufficient opportunity to a member before deciding a disqualification proceeding and ordinarily follow the time limit prescribed in the Rules of the Legislature.

h. In light of the existing Constitutional mandate, the Speaker is not empowered to disqualify any member till the end of the term. However, a member disqualified under the Tenth Schedule shall be subjected to sanctions provided under Articles 75(1B) and 164(1B) and 361B of Constitution, which provides for a bar from being appointed as a Minister or from holding any remunerative political post from the date of disqualification till the date on which the term of his office would expire or if he is re-elected to the legislature, whichever is earlier.

i. There is a growing trend of the Speaker acting against the constitutional duty of being neutral. Further horse trading and corrupt practices associated with defection and change of loyalty for lure of office or wrong reasons have not abated. Thereby the citizens are denied stable governments. In these circumstances, there is need to consider strengthening certain aspects, so that such undemocratic practices are discouraged and checked.

j. The existence of a substantial question of law does not weigh on the stakes involved in the case, rather, it depends on the impact the "question of law" will have on the final determination. If the questions having a determining effect on the final outcome have already been decided by a conclusive authority, then such questions cannot be called as "substantial questions of law". In any case, no substantial question of law exists in the present matter, which needs reference to a larger bench.

In view of the discussion above, we pass the following order:

1. Orders dated 25.07.2019 and 28.07.2019 passed by the Speaker in Disqualification Petition Nos.1, 3, 4, 5, 7 and 8 of 2019, are upheld to the extent of the disqualification of the Petitioners therein.
2. However, the part of Speaker's orders detailing the duration of disqualification, viz., from the date of the respective order till the expiry of the term of the 15^{th} Legislative Assembly of Karnataka, is accordingly set aside.

The Writ Petitions are disposed of in the afore-stated terms. All pending applications are also accordingly disposed of.

(N.V.Ramanna)

(Sanjiv Khanna)

(Krishna Murari)

NEW DELHI;
November 13, 2019.

ಭಾಗ – 2

ಸಂಸತ್ತಿನ ಸುದ್ದಿಗಳು

1. ರಾಜ್ಯಸಭೆಗೆ ರಾಮಮೂರ್ತಿ ರಾಜೀನಾಮೆ

ರಾಜ್ಯಸಭೆಯ ಕಾಂಗ್ರೆಸ್ ಸದಸ್ಯ, ನಿವೃತ್ತ ಐಪಿಎಸ್ ಅಧಿಕಾರಿ ಕೆ.ಸಿ. ರಾಮಮೂರ್ತಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

"ಉಪ ರಾಷ್ಟ್ರಪತಿ ಎಂ. ವೆಂಕಯ್ಯನಾಯ್ಡು ಅವರಿಗೆ ರಾಜೀನಾಮೆ ನೀಡಿದ್ದು, ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯತ್ವವನ್ನೂ ತ್ಯಜಿಸಿದ್ದೇನೆ. ಅಮಿಷ, ಬೆದರಿಕೆಗೆ ಒಳಗಾಗಿ ಈ ತೀರ್ಮಾನ ಕೈಗೊಂಡಿಲ್ಲ ಎಂದು ತಿಳಿಸಿದರು.

ಆಧಾರ–ಪ್ರಜಾವಾಣಿ 17.10.2019

2. ಸರ್ದಾರ್ ಪಟೇಲ್‌ಗೆ ಭಾರತ ನಮನ

ಏಕತಾ ದಿನದಂದು ಪ್ರಧಾನಿ ನರೇಂದ್ರ ಮೋದಿಯವರಿಂದ

ಉಕ್ಕಿನ ಮನುಷ್ಯ ಎಂದೇ ಖ್ಯಾತರಾದ ದೇಶದ ಮೊದಲ ಉಪ ಪ್ರಧಾನಿ, ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 144ನೇ ಜಯಂತಿಯನ್ನು ಏಕತಾ ದಿನದ ರೂಪದಲ್ಲಿ ಆಚರಿಸಲಾಯಿತು. ದೇಶದ ವಿವಿಧ ಜಿಲ್ಲೆಗಳಲ್ಲಿ ಆಯೋಜಿಸಲಾಗಿದ್ದ ಏಕತಾ ಓಟದಲ್ಲಿ ಲಕ್ಷಾಂತರ ಜನರು ಪಾಲ್ಗೊಂಡರು. ಗುಜರಾತ್‌ನ ಏಕತಾ ಪ್ರತಿಮೆ ಬಳಿ ನಡೆದ ಮುಖ್ಯ ಸಮಾರಂಭದಲ್ಲಿ ಪಾಲ್ಗೊಂಡ ಪ್ರಧಾನಿ ನರೇಂದ್ರ ಮೋದಿ ನೆರೆದಿದ್ದವರಿಗೆ ಏಕತಾ ಪ್ರತಿಜ್ಞೆ ಬೋಧಿಸಿದರು. ಪಟೇಲರ ಸ್ಫೂರ್ತಿಯ ಆಧಾರದಲ್ಲಿ ದೇಶದ ಭಾವನಾತ್ಮಕ, ಆರ್ಥಿಕ ಮತ್ತು ಸಾಂವಿಧಾನಿಕ ಸಮಗ್ರತೆಗಾಗಿ ಕೇಂದ್ರ ಸರ್ಕಾರ ಕೆಲಸ ಮಾಡುತ್ತಿದೆ.

ವಿಶೇಷ ಸ್ಥಾನಮಾನ ಒದಗಿಸಿದ್ದ ಸಂವಿಧಾನದ 370ನೇ ವಿಧಿ, ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆ ಹುಟ್ಟಲು ಕಾರಣ, ಅದನ್ನು ರದ್ದು ಮಾಡಿದ್ದರ ಹಿಂದೆ ಸರ್ದಾರ್ ವಲ್ಲಭಭಾಯಿ ಪಟೇಲರ ಸ್ಫೂರ್ತಿಯಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

500ಕ್ಕೂ ಹೆಚ್ಚು ಸಂಸ್ಥಾನಗಳನ್ನು ಭಾರತದಲ್ಲಿ ವಿಲೀನಗೊಳಿಸುವ ಕಾರ್ಯಕ್ಕೆ ಪಟೇಲ್ ಮುಂದಾದಾಗ ಏಕತೆಯ ಭಾವದಿಂದ ಸ್ಫೂರ್ತಿಗೊಂಡ ಅನೇಕ ಆಡಳಿತಗಾರರು ಭಾರತ ಒಕ್ಕೂಟದಲ್ಲಿ ಸೇರಲು ಮುಂದೆ ಬಂದರು. ಶತಮಾನಗಳ ಹಿಂದೆ ಪ್ರಾಚೀನ ತತ್ವಜ್ಞಾನಿ ಚಾಣಕ್ಯ ಭಾರತವನ್ನು ಒಗ್ಗೂಡಿಸಿದ್ದರು. ಅವರ ನಂತರ ಪಟೇಲ್ ಆ ಕೆಲಸ ಮಾಡಿದರು ಎಂದು ಮೋದಿ ವರ್ಣಿಸಿದರು.

ಆಧಾರ–ವಿಜಯವಾಣಿ 01.11.2019

3. ಸಂವಿಧಾನಕ್ಕೆ 70 ವರ್ಷ: 26ರಂದು ಸಂಸತ್‌ನ ವಿಶೇಷ ಜಂಟಿ ಅಧಿವೇಶನ

ಭಾರತ ಒಕ್ಕೂಟ ವ್ಯವಸ್ಥೆಯು ಸಂವಿಧಾನವನ್ನು ಅಳವಡಿಸಿಕೊಂಡು ಇದೇ ನವೆಂಬರ್ 26ಕ್ಕೆ 70 ವರ್ಷವಾಗಲಿದ್ದು, ಇದರ ನೆನಪಿನಲ್ಲಿ ಅಂದು ಸಂಸತ್‌ನ ವಿಶೇಷ ಜಂಟಿ ಅಧಿವೇಶನ ನಡೆಯಲಿದೆ. ರಾಷ್ಟ್ರಪತಿ ರಾಮನಾಥ್ ಕೋವಿಂದ್ ಹಾಗೂ ಪ್ರಧಾನಿ ಮೋದಿ ಅವರು ಉಭಯ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ನವೆಂಬರ್ 26 ರಂದು ಸಂವಿಧಾನ ದಿವಸ್ ಎಂದು ಆಚರಿಸುವುದಾಗಿ ತಿಳಿಸಿದ್ದಾರೆ.

ಆಧಾರ–ವಿಜಯಕರ್ನಾಟಕ, 07.11.2019

4. ಚಿಟ್ ಫಂಡ್ ಮಸೂದೆ ಅಸ್ತು

ಮಹತ್ವದ ವಿಧೇಯಕಕ್ಕೆ ರಾಜ್ಯಸಭೆಯಲ್ಲಿ ಅನುಮೋದನೆ

ಚಿಟ್ ಫಂಡ್ (ತಿದ್ದುಪಡಿ) ಮಸೂದೆ 2019ಕ್ಕೆ ಲೋಕಸಭೆ ಅನುಮೋದನೆ ನೀಡಿದೆ. ಚಿಟ್ ಫಂಡ್ ಚಂದಾದಾರರಿಗೆ ರಕ್ಷಣೆ ವ್ಯವಹಾರದಲ್ಲಿ ಪಾರದರ್ಶಕತೆ ಮತ್ತು ನಿಯಂತ್ರಣ ಕ್ರಮಗಳ ಜಾರಿ ಈ ಮಸೂದೆಯ ಉದ್ದೇಶವಾಗಿದೆ. ಚಿಟ್ ಫಂಡ್ ಕ್ಷೇತ್ರದ ವ್ಯವಸ್ಥಿತ ಪ್ರಗತಿಗಾಗಿ ನಿಯಮಗಳಲ್ಲಿ ಬದಲಾವಣೆ ತರಲು ಸರ್ಕಾರ ಉದ್ದೇಶಿಸಿದೆ. ಇತ್ತೀಚಿನ ವರ್ಷಗಳಲ್ಲಿ ಚಿಟ್ ಫಂಡ್ ಕ್ಷೇತ್ರವು ಪಡೆದುಕೊಂಡಿರುವ ಕುಖ್ಯಾತಿಯನ್ನು

ಹೋಗಲಾಡಿಸುವ ಉದ್ದೇಶವೂ ಇದೆ ಎಂದು ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ರಾಜ್ಯ ಸಚಿವ ಅನುರಾಗ್ ಠಾಕೂರ್ ಮಸೂದೆ ಮಂಡಿಸಿ ಹೇಳಿದರು.

ಸಾಮಾನ್ಯವಾಗಿ ಬ್ಯಾಂಕಿಂಗ್ ಸೇವೆ ಲಭ್ಯ ಇಲ್ಲದ ಬಡ ಜನರೇ ಚಿಟ್ ಫಂಡ್‌ಗೆ ಚಂದಾದಾರರಾಗುತ್ತಾರೆ. ಆದರೆ, ಚಿಟ್ ಫಂಡ್ ಏಜೆಂಟರಿಂದ ಇವರು ಮೋಸ ಹೋಗುವುದೇ ಹೆಚ್ಚು. ಬ್ಯಾಂಕ್‌ಗಳಲ್ಲಿ ದೊರೆಯುವ ಬಡ್ಡಿಗಿಂತ ಹೆಚ್ಚು ಪ್ರತಿಫಲ ಸಿಗುತ್ತದೆ ಎಂಬ ಆಮಿಷ ಒಡ್ಡಿ ಜನರನ್ನು ಆರ್ಕಷಿಸಲಾಗುತ್ತದೆ. ಆದರೆ, ಹಣ ಸಂಗ್ರಹವಾದ ಬಳಿಕ ಈ ಏಜೆಂಟ್‌ರು ಪರಾರಿಯಾದ ನಿದರ್ಶನಗಳು ಇವೆ.

ಆಧಾರ–ಪ್ರಜಾವಾಣಿ 21.11.2019

5. ದೇಶದಾದ್ಯಂತ ಎನ್‌ಆರ್‌ಸಿ

ಅಕ್ರಮ ವಲಸಿಗರನ್ನು ಪತ್ತೆ ಹಚ್ಚಿ ಗಡೀಪಾರು ಮಾಡಲು ಈಶಾನ್ಯ ರಾಜ್ಯ ಅಸ್ಸಾಂನಲ್ಲಿ ನಡೆಸಲಾದ ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ನ್ಯಾಷನಲ್ ರಿಜಿಸ್ಟರ್ ಆಫ್ ಸಿಟಿಜನ್– ಎನ್‌ಆರ್‌ಸಿ)ಯನ್ನು ದೇಶದಾದ್ಯಂತ ವಿಸ್ತರಿಸುವುದಾಗಿ ಗೃಹ ಸಚಿವ ಅಮಿತ್ ಶಾ ಅವರು ಹೇಳಿದ್ದಾರೆ.

ಚಿಂತೆ ಬೇಡ ನಿಮ್ಮ ದಾಖಲೆ ರೆಡಿ ಇಟ್ಟುಕೊಳ್ಳಿ:

ದೇಶದಾದ್ಯಂತ ಎನ್‌ಆರ್‌ಸಿ ವಿಸ್ತರಿಸುವುದಾಗಿ ಅಮಿತ್ ಶಾ ಹೇಳಿದ್ದರು. ಆದರೆ ಇದೇ ಮೊದಲ ಬಾರಿಗೆ ಅದನ್ನು ಸಂಸತ್ತಿನಲ್ಲಿ ಘೋಷಿಸಿದ್ದಾರೆ. ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್‌ಆರ್‌ಸಿ) ಜಾರಿ ಬಗ್ಗೆ ಭಾರತದ ಜನಸಾಮಾನ್ಯರು ಆತಂಕಪಡಬೇಕಿಲ್ಲ. ಆಧಾರ್, ಪಾಸ್‌ಪೋರ್ಟ್, ಜನನ ಪ್ರಮಾಣಪತ್ರ ಇತ್ಯಾದಿ ಯಾವುದಾದರೂ ಸರ್ಕಾರಿ ದಾಖಲೆ ಇದ್ದರೆ ಸಾಕು. ಭಾರತದಲ್ಲೇ ಜನಿಸಿ ಬೆಳೆದವರು ಎನ್‌ಆರ್‌ಸಿ ಜಾರಿ ವೇಳೆ ಅಧಿಕಾರಿಗಳಿಗೆ ಸೂಕ್ತ ದಾಖಲೆ ಒದಗಿಸಿ ದೃಢೀಕರಿಸಿಕೊಳ್ಳಿ.

ರಾಜ್ಯಸಭೆಯ ಪ್ರಶ್ನೋತ್ತರ ಕಲಾಪದಲ್ಲಿ ಮಾತನಾಡಿದ ಅವರು ಎನ್‌ಆರ್‌ಸಿ ಪ್ರಕ್ರಿಯೆ ನಡೆಸುವಾಗ ಧರ್ಮದ ಆಧಾರದಲ್ಲಿ ತಾರತಮ್ಯ ಮಾಡುವುದಿಲ್ಲ. ಯಾವುದೇ ಧರ್ಮಕ್ಕೆ ಸೇರಿದವರೂ ಚಿಂತೆಪಡಬೇಕಿಲ್ಲ ಎಂದು ಹೇಳಿದರು.

ಬೇರೊಂದು ಸಮುದಾಯಕ್ಕೆ ಸೇರಿದ ಜನರನ್ನು ಸೇರ್ಪಡೆ ಮಾಡಬಾರದು ಎಂಬ ಅಂಶವೇ ಎನ್‌ಆರ್‌ಸಿಯಲ್ಲಿ ಇಲ್ಲ. ಭಾರತೀಯ ಪ್ರಜೆಗಳಾಗಿರುವ ಎಲ್ಲ ಧರ್ಮೀಯ ಜನರ ಹೆಸರನ್ನೂ ಸೇರಿಸಲಾಗುತ್ತದೆ. ಧರ್ಮದ ಆಧಾರದಲ್ಲಿ ತಾರತಮ್ಯ ಮಾಡುವ ಪ್ರಶ್ನೆಯೇ ಇಲ್ಲ. ಎನ್‌ಆರ್‌ಸಿಯೇ ಬೇರೆ, ಪೌರತ್ವ ತಿದ್ದುಪಡಿ ಮಸೂದೆಯೇ ಬೇರೆ ಎಂದು ಸ್ಪಷ್ಟಪಡಿಸಿದರು.

ರಾಜ್ಯಸಭೆಯಲ್ಲಿ ಮಾತನಾಡಿದ ಶಾ ಅವರು ದೇಶದ ನಾನಾ ರಾಜ್ಯಗಳಲ್ಲಿ ನೆಲೆಸಿರುವ ಅಕ್ರಮ ವಲಸಿಗರನ್ನು ಅದರಲ್ಲೂ 1971ರ ನಂತರ ಬಾಂಗ್ಲಾದೇಶದಿಂದ ಇಲ್ಲಿಗೆ ಬಂದು ತೂರಿಕೊಂಡಿರುವ ಬಾಂಗ್ಲಾ ನಿವಾಸಿಗಳನ್ನು ಪತ್ತೆ ಮಾಡಲು ಎನ್‌ಆರ್‌ಸಿಯನ್ನು ಜಾರಿ ಮಾಡಲಾಗುತ್ತಿದೆ. ಹಾಗಂತ ಯಾವುದೇ ಧರ್ಮದವರೂ ಎನ್‌ಆರ್‌ಸಿಯಿಂದ ತಮಗೇನೋ ಆಗಿಬಿಡುತ್ತದೆ ಎಂದು ಅಂಜಿಕೊಳ್ಳಬೇಕಾಗಿಲ್ಲ ಎಂದು ಅಭಯ ನೀಡಿದ್ದಾರೆ.

ಆಧಾರ–ಕನ್ನಡ ಪ್ರಭ 21.11.2019

6. ಕರ್ತವ್ಯ ನಿಷ್ಠೆ ಪ್ರಶ್ನಿಸಿದ ಕಾಂಗ್ರೆಸ್ ಸಂಸದನಿಗೆ ಸ್ಪೀಕರ್ ಬಿರ್ಲಾ ಎಚ್ಚರಿಕೆ

ಲೋಕಸಭಾ ಕಲಾಪದ ಶೂನ್ಯ ವೇಳೆ ಪಂಜಾಬ್ ಮೂಲದ ಕಾಂಗ್ರೆಸ್ ಸಂಸದ ರವನೀತ್ ಸಿಂಗ್ ಬಿಟ್ಟು ಅವರು ಗಾಂಧಿ ಕುಟುಂಬದ ಎಸ್‌ಪಿಜಿ ಭದ್ರತೆ ಹಿಂಪಡೆದ ಸರ್ಕಾರದ ಕ್ರಮದ ವಿರುದ್ಧ ಪ್ರಸ್ತಾಪಿಸಿದರು. ಈ ವೇಳೆ ಮಧ್ಯ ಪ್ರವೇಶಿಸಿದ ಸ್ಪೀಕರ್ ಬಿರ್ಲಾ, ಮತ್ತೋರ್ವ ಸಂಸದನಿಗೆ ಮಾತನಾಡಲು ಅವಕಾಶ ಕೊಟ್ಟರು. ಆಗ ಕಾಂಗ್ರೆಸ್ ಸಂಸದ ಬಿಟ್ಟು ನೀವು ಸಹ ಬಿಜೆಪಿ ಜೊತೆ ಕೈಜೋಡಿಸಿದ್ದೀರಿ ಎಂದರು. ಆಗ, ಸ್ಪೀಕರ್ ಸ್ಥಾನದ ಕುರಿತಾಗಿ ಈ ರೀತಿ ಹಗುರವಾಗಿ ಮಾತನಾಡಬೇಡಿ ಎಂದು ಕೈ ಸಂಸದನಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

ಆಧಾರ – ಕನ್ನಡಪ್ರಭ 22.11.2019

7. ಸಂವಿಧಾನಕ್ಕೆ 70

ಸಂವಿಧಾನ ಸಭೆಯು 1949ರ ನವೆಂಬರ್ 26ರಂದು ಭಾರತದ ಸಂವಿಧಾನವನ್ನು ಅಂಗೀಕರಿಸಿತು. 1950ರ ಜನವರಿ 26ರಿಂದ ದೇಶದಲ್ಲಿ ಸಂವಿಧಾನ ಜಾರಿಯಾಯಿತು. ಈವರೆಗಿನ ತಿದ್ದುಪಡಿಗಳು ಹೀಗಿವೆ:

1951ರಲ್ಲಿ ಮೊದಲ ತಿದ್ದುಪಡಿ

ಸಂವಿಧಾನ ಜಾರಿಯಾದ ಮರುವರ್ಷದಲ್ಲೇ ಅಂದರೆ 1951ರಲ್ಲಿ ಮೊದಲ ತಿದ್ದುಪಡಿಯನ್ನು ಮಾಡಲಾಯಿತು. ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಎಸ್‌ಸಿ, ಎಸ್‌ಟಿ. ಸಮುದಾಯದವರ ಅಭಿವೃದ್ಧಿಗೆ ಸೌಲಭ್ಯ ಒದಗಿಸುವುದು. ಜಮೀನ್ದಾರಿ ಪದ್ಧತಿ ನಿರ್ಮೂಲನೆ ಮಾಡುವುದು. ಯಾವುದೇ ವೃತ್ತಿ ಕೈಗೊಳ್ಳಲು ಅಥವಾ ಯಾವುದೇ ವ್ಯಾಪಾರ ವಹಿವಾಟು ನಡೆಸಲು ನಾಗರಿಕರಿಗೆ ಅವಕಾಶ ನೀಡುವುದು, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿರ್ಬಂಧ ಹೇರುವ ಅವಕಾಶ ಈ ತಿದ್ದುಪಡಿಯ ಮುಖ್ಯ ಅಂಶಗಳಾಗಿದ್ದವು.

ಭೂ ಸುಧಾರಣಾ ಕಾಯ್ದೆಯನ್ನು ಬಲಪಡಿಸಲು ಸಂವಿಧಾನಕ್ಕೆ ವಿಧಿ 31ಎ ಹಾಗೂ 31ಬಿ ಗಳನ್ನು ಸೇರಿಸಲಾಯಿತಲ್ಲದೆ 9ನೇ ಪರಿಚ್ಛೇದವನ್ನು ಈ ತಿದ್ದುಪಡಿಯ ಮೂಲಕ ಸೇರಿಸಲಾಯಿತು.

32 ರಾಜ್ಯಗಳ ಮರುವಿಂಗಡಣೆ, ಪ್ರಾಂತಗಳ ವರ್ಗಾವಣೆ, ಪೂರ್ಣಪ್ರಮಾಣದ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ ಸ್ಥಾನ ನೀಡುವುದು. ರಾಜ್ಯಗಳಿಗೆ ವಿಶೇಷ ಸ್ಥಾನಮಾನ ನೀಡುವುದು. 8ನೇ ಪರಿಚ್ಛೇದಕ್ಕೆ ಭಾಷೆಯನ್ನು ಸೇರಿಸುವುದು ಮುಂತಾದ ವಿಚಾರಗಳಿಗೆ ನಡೆದ ತಿದ್ದುಪಡಿಗಳು ಆರ್ಥಿಕವಾಗಿ ಹಿಂದುಳಿದವರಿಗೆ ಶೈಕ್ಷಣಿಕ ಸಂಸ್ಥೆಗಳು ಹಾಗೂ ಉದ್ಯೋಗದಲ್ಲಿ ಮೀಸಲಾತಿ ನೀಡುವ ಸಂವಿಧಾನದ 103ನೇ ತಿದ್ದುಪಡಿಯನ್ನು 2019ರಲ್ಲಿ ಮಾಡಲಾಗಿದೆ.

ರಾಜ್ಯಸಭೆಯು ಅಂಗೀಕರಿಸಿದ ಸಂವಿಧಾನ ತಿದ್ದುಪಡಿ ಮಸೂದೆಗಳು–103, ರಾಜ್ಯಸಭೆಯಲ್ಲಿ ಅಂಗೀಕೃತವಾಗಿ, ಲೋಕಸಭೆಯು ತಿರಸ್ಕರಿಸಿದ ತಿದ್ದುಪಡಿ–1, ರಾಜ್ಯಸಭೆಯಲ್ಲಿ ಅಂಗೀಕಾರವಾಗಿದ್ದರೂ, ಸರ್ಕಾರದ ಅವಧಿ ಪೂರ್ಣಗೊಂಡಿದ್ದರಿಂದ ಲೋಕಸಭೆಯಲ್ಲಿ ಅಂಗೀಕಾರವಾಗದೆ ಅಸಿಂಧುವಾದ ಮಸೂದೆಗಳು–4, ಲೋಕಸಭೆ ಅಂಗೀಕರಿಸಿದ ಸಂವಿಧಾನ ತಿದ್ದುಪಡಿ ಮಸೂದೆಗಳು–106, ಲೋಕಸಭೆಯಲ್ಲಿ ಅಂಗೀಕೃತವಾಗಿ ರಾಜ್ಯಸಭೆಯಲ್ಲಿ ತಿರಸ್ಕೃತಗೊಂಡ ಮಸೂದೆಗಳು–3, ಈವರೆಗೆ ಸಂವಿಧಾನಕ್ಕೆ ಆಗಿರುವ ತಿದ್ದುಪಡಿ–103, “ಅಸಾಂವಿಧಾನಿಕ” ಎಂದು ಸುಪ್ರೀಂಕೋರ್ಟ್ ರದ್ದುಪಡಿಸಿದ ತಿದ್ದುಪಡಿ– 1.

ರಾಷ್ಟ್ರೀಯ ನ್ಯಾಯಾಂಗ ಆಯೋಗ ರಚಿಸುವ ಸಂವಿಧಾನದ 99ನೇ ತಿದ್ದುಪಡಿಗೆ 2014ರಲ್ಲಿ ಲೋಕಸಭೆ ಮತ್ತು ರಾಜ್ಯಸಭೆ ಅಂಗೀಕಾರ ನೀಡಿದ್ದವು. ಆದರೆ ಇದು “ಅಸಾಂವಿಧಾನಿಕ” ಎಂದು ಸುಪ್ರೀಂಕೋರ್ಟ್ ಆ ತಿದ್ದುಪಡಿಯನ್ನು ರದ್ದುಪಡಿಸಿತು.

ಎಸ್‌ಸಿ, ಎಸ್‌ಟಿ ಸಮುದಾಯ ಹಾಗೂ ಆಂಗ್ಲೊ ಇಂಡಿಯನ್ನರಿಗೆ ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಮೀಸಲಾತಿ ನೀಡುವುದಕ್ಕೆ ಸಂಬಂಧಿಸಿದಂತೆ ನಡೆದ ತಿದ್ದುಪಡಿಗಳು – 12.

ಶೈಕ್ಷಣಿಕ ಸಂಸ್ಥೆಗಳು ಮತ್ತು ಉದ್ಯೋಗದಲ್ಲಿ ಮೀಸಲಾತಿ, ನಾಗರಿಕರ ಮೂಲಭೂತ ಹಕ್ಕುಗಳನ್ನು ನಿರ್ಬಂಧಿಸುವುದು, ಜಮೀನ್ದಾರಿ ಪದ್ಧತಿ ನಿರ್ಮೂಲನೆ ವಿಚಾರಗಳಿಗೆ ಸಂಬಂಧಿಸಿದಂತೆ ನಡೆದ ತಿದ್ದುಪಡಿಗಳು – 8.

ಆಧಾರ–ಪ್ರಜಾವಾಣಿ, 26.11.2019.

8. ಸಂಸತ್ತಿನಲ್ಲಿ ಮಹಾ ರಾದ್ಧಾಂತ

ಮಹಾರಾಷ್ಟ್ರದಲ್ಲಿ ನಡೆದ ನಾಟಕೀಯ ರಾಜಕೀಯ ಬೆಳವಣಿಗೆಗಳು ಲೋಕಸಭೆಯಲ್ಲಿ ರಾದ್ಧಾಂತಕ್ಕೆ ಕಾರಣವಾಯಿತು. ತರಾತುರಿಯಲ್ಲಿ ಬಿಜೆಪಿ ಸರ್ಕಾರ ರಚನೆಗೆ ಅವಕಾಶ ನೀಡಿದ ಕ್ರಮ ಖಂಡಿಸಿ ಬ್ಯಾನರ್ ಹಿಡಿದು, ಸದನದ ಬಾವಿಗೆ ಇಳಿದು ಕಾಂಗ್ರೆಸ್ ಸಂಸದರು ಪ್ರತಿಭಟನೆ ನಡೆಸಿದರು. ಈ ವೇಳೆ ಬ್ಯಾನರ್ ಕಸಿಯಲು ಬಂದ ಮಾರ್ಷಲ್‌ಗಳು ಹಾಗೂ ಸಂಸದರ ನಡುವೆ ಜಟಾಪಟಿ ನಡೆದಾಗ ಇಬ್ಬರು ಮಹಿಳಾ ಸಂಸದರ ಮೇಲೆ ಮಾರ್ಷಲ್‌ಗಳಿಂದ ಹಲ್ಲೆ ನಡೆದಿದೆ ಎಂಬ ಆರೋಪವನ್ನು ಕಾಂಗ್ರೆಸ್ ಮಾಡಿತು. ಆದರೆ

ಇದನ್ನು ಆಡಳಿತಾರೂಢ ಬಿಜೆಪಿ ಸರ್ಕಾರ ನಿರಾಕರಿಸಿತು. ತಮ್ಮ ಸೂಚನೆ ಧಿಕ್ಕರಿಸಿ ಪ್ರತಿಭಟಿಸಿದ್ದೂ ಅಲ್ಲದೆ ಕ್ಷಮೆ ಕೇಳಲು ನಿರಾಕರಿಸಿದ ಇಬ್ಬರು ಸಂಸದರನ್ನು ಸ್ಪೀಕರ್ ಅಮಾನತ್ತುಗೊಳಿಸಿದ್ದರು.

ಮಹಾರಾಷ್ಟ್ರದಲ್ಲಿ ತರಾತುರಿಯಲ್ಲಿ ರಾಷ್ಟ್ರಪತಿ ಆಳ್ವಿಕೆ ಹಿಂಪಡೆದು, ಬಿಜೆಪಿ ಸರ್ಕಾರ ರಚನೆಗೆ ಅನುವು ಮಾಡಿಕೊಡಲಾಗಿದೆ ಎಂದು ದೂರಿದ ಕಾಂಗ್ರೆಸ್ ಸಂಸದರು "ಪ್ರಜಾಪ್ರಭುತ್ವದ ಕಗ್ಗೊಲೆ" ಎಂಬ ಬ್ಯಾನರ್ ಹಿಡಿದು ಘೋಷಣೆ ಕೂಗುತ್ತಾ ಲೋಕಸಭೆಯ ಬಾವಿಗೆ ಇಳಿದು ಪ್ರತಿಭಟನೆ ಆರಂಭಿಸಿದರು. ಈ ಹಂತದಲ್ಲಿ ಸ್ಪೀಕರ್ ಓಂ ಬಿರ್ಲಾ ಅವರು ಬ್ಯಾನರ್ ಹಿಡಿದಿದ್ದ ಕೇರಳ ಸಂಸದರಾದ ಟಿ.ಎನ್. ಪ್ರತಾಪನ್ ಹಾಗೂ ಹಿಬಿ ಈಡನ್ ಅವರಿಂದ ಬ್ಯಾನರ್ ಕಸಿಯಲು ಮಾರ್ಷಲ್‌ಗಳಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಸಂಸದರು ಅದಕ್ಕೆ ಅವಕಾಶ ನೀಡಲು ನಿರಾಕರಿಸಿದರು. ಆಗ ಮಾರ್ಷಲ್‌ಗಳ ಜೊತೆ ಘರ್ಷಣೆಯಾಯಿತು. ಈ ಹಂತದಲ್ಲಿ ತಮಿಳುನಾಡಿನ ಕಾಂಗ್ರೆಸ್ ಸಂಸದೆ ಜ್ಯೋತಿಮಣಿ ಹಾಗೂ ಕೇರಳದ ರಮ್ಯಾ ಹರಿದಾಸ್ ಅವರ ಮೇಲೆ ಮಾರ್ಷಲ್‌ಗಳು ಹಲ್ಲೆ ನಡೆಸಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿತು. ಗದ್ದಲ ಜೋರಾದ ಹಿನ್ನೆಲೆಯಲ್ಲಿ ಲೋಕಸಭೆಯ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು. 17ನೇ ಲೋಕಸಭೆಯಲ್ಲಿ ಗದ್ದಲದ ಕಾರಣಕ್ಕೆ ಕಲಾಪವನ್ನು ಮುಂದೂಡಿದ ಮೊದಲ ಪ್ರಕರಣವಾಗಿದೆ.

ಆಧಾರ–ಕನ್ನಡಪ್ರಭ 26.11.2019.

9. ಇ–ಸಿಗರೇಟ್ ನಿಷೇಧ ಮಸೂದೆಗೆ ಸಂಸತ್ ಮುದ್ರೆ

ದೇಶದಲ್ಲಿ ಇ–ಸಿಗರೇಟ್ ಉತ್ಪಾದನೆ, ಮಾರಾಟ, ಸಾಗಾಟ, ಶೇಖರಣೆ ಮತ್ತು ಪ್ರಚಾರ ಇನ್ನು ಶಾಶ್ವತವಾಗಿ ನಿಷೇಧಿಸಲ್ಪಡಲಿದೆ. ಈ ಕುರಿತಾದ ಮಹತ್ವದ ಮಸೂದೆಗೆ ರಾಜ್ಯಸಭೆ ಸೋಮವಾರ ತನ್ನ ಧ್ವನಿಮತದ ಅಂಗೀಕಾರ ನೀಡಿದೆ. ಲೋಕಸಭೆಯಲ್ಲಿ ಈ ಮಸೂದೆ ಕಳೆದ ಅಧಿವೇಶನದಲ್ಲೇ ಅಂಗೀಕಾರವಾಗಿತ್ತು.

ಎಲೆಕ್ಟ್ರಾನಿಕ್ ಸಿಗರೇಟ್‌ಗಳ ಮೇಲಿನ ನಿಷೇಧ ಕಾಯ್ದೆ–2019ನ್ನು ರಾಜ್ಯಸಭೆಯಲ್ಲಿ ಮಂಡಿಸಲಾಗಿತ್ತು. ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಅವರು ಈ ಮಸೂದೆಯ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಈ ಮಸೂದೆಯನ್ನು ನಾವು ಯಾವುದೇ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಒಳಗಾಗದೇ ರೂಪಿಸಿದ್ದೇವೆ ಎಂದು ಆರಂಭದಲ್ಲಿ ರಾಜ್ಯಸಭೆಗೆ ಮಾಹಿತಿ ನೀಡಿದರು.

ತಂಬಾಕು ಲಾಬಿಗೆ ಮಣಿದಿರುವ ಸರ್ಕಾರ ಈ ಮಸೂದೆಯನ್ನು ಮಂಡಿಸುತ್ತಿದೆ ಎಂದು ರಾಜ್ಯಸಭೆಯಲ್ಲಿ ಕೆಲವು ಸದಸ್ಯರು ಗಂಭೀರ ಆರೋಪವನ್ನು ಮಾಡಿದರು. ಮಾತ್ರವಲ್ಲದೇ ಸರ್ಕಾರ ಎಲ್ಲಾ ರೀತಿಯ ತಂಬಾಕು ಉತ್ಪನ್ನಗಳನ್ನು ನಿಷೇಧಿಸುವ ಧೈರ್ಯ ತೋರಲಿ ಎಂದೂ ಸವಾಲೆಸೆದರು.

ಇದಕ್ಕೆ ಉತ್ತರವಾಗಿ ಮಾತನಾಡಿದ ಸಚಿವ ಹರ್ಷವರ್ಧನ್ ಅವರು ತಂಬಾಕು ಉತ್ಪನ್ನಗಳು ನಿಷೇಧಕ್ಕೊಳಗಾದಲ್ಲಿ ಇದರಿಂದ ಸಂತೋಷಪಡುವವರಲ್ಲಿ ನಾನೇ ಮೊದಲಿಗ ಎಂದು ಅವರು ಹೇಳಿದರು.

ನಿಕೋಟಿನ್ ಮತ್ತು ಇತರೇ ರಾಸಾಯನಿಕಗಳನ್ನು ಒಳಗೊಂಡಿರುವ ಉತ್ಪನ್ನವನ್ನು ಬಿಸಿ ಮಾಡುವ ಎಲೆಕ್ಟ್ರಾನಿಕ್ ಉಪಕರಣ ಎಂದು ಈ ಮಸೂದೆಯು ಇ–ಸಿಗರೇಟ್ ಕುರಿತಾಗಿ ವಿವರಣೆ ನೀಡುತ್ತದೆ.

ಈ ಕಾನೂನನ್ನು ಪ್ರಥಮ ಬಾರಿಗೆ ಉಲ್ಲಂಘಿಸುವ ವ್ಯಕ್ತಿಗಳಿಗೆ 1 ವರ್ಷದ ಜೈಲುವಾಸ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ದಂಡ ಅಥವಾ ಇವೆರಡನ್ನೂ ವಿಧಿಸುವ ಅವಕಾಶವನ್ನು ಈ ಕಾಯ್ದೆಯಲ್ಲಿ ನೀಡಲಾಗಿದೆ. ಆ ಬಳಿಕದ ಉಲ್ಲಂಘನೆಗಳಿಗೆ 3 ವರ್ಷದ ಜೈಲು ಶಿಕ್ಷೆ ಮತ್ತು 5 ಲಕ್ಷ ರೂಪಾಯಿಗಳ ದಂಡ ವಿಧಿಸಲಾಗುತ್ತದೆ.

ಆಧಾರ–ಸಂಯುಕ್ತಕರ್ನಾಟಕ 03.12.2019.

10. ನಿರಾಶ್ರಿತರಿಗೆ ನಾಗರಿಕತ್ವ

ಮುಸ್ಲಿಮೇತರರಿಗಷ್ಟೇ ಆಶ್ರಯ, ತಿದ್ದುಪಡಿ ಮಸೂದೆಗೆ ಅಸ್ತು

ನೆರೆಹೊರೆಯ ಮೂರು ದೇಶಗಳಿಂದ ಅಕ್ರಮವಾಗಿ ವಲಸೆ ಬಂದ ಮುಸ್ಲಿಮೇತರ ನಿರಾಶ್ರಿತರಿಗೆ ಭಾರತೀಯ ನಾಗರಿಕರೆಂದು ಮಾನ್ಯತೆ ನೀಡಲು 1955ರ ಪೌರತ್ವ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಈ ಮಸೂದೆ ಪ್ರಸಕ್ತ ಚಳಿಗಾಲದ ಅಧಿವೇಶನದಲ್ಲೇ ಮಂಡನೆಯಾಗಲಿದೆ.

ಪೌರತ್ವ ತಿದ್ದುಪಡಿ ಮಸೂದೆಯಲ್ಲಿ ಉಲ್ಲೇಖಿಸಿರುವ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಆಫ್ಘಾನಿಸ್ತಾನ ಮುಸ್ಲಿಂ ದೇಶಗಳು. ಈ ರಾಷ್ಟ್ರಗಳಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಶೋಷಣೆಗೆ ಒಳಗಾದವರು ಇಂಥವರಲ್ಲಿ ಲಕ್ಷಾಂತರ ಮಂದಿ ಭಾರತಕ್ಕೆ ಅಕ್ರಮವಾಗಿ ವಲಸೆ ಬಂದಿದ್ದಾರೆ. ಈ ನಿರಾಶ್ರಿತರಿಗೆ ಭಾರತದ ಪೌರತ್ವ ಪಡೆಯುವ ಕಟ್ಟುಪಾಡನ್ನು ಸಡಿಲಿಸಲಾಗಿದೆ. ಇದರ ಹಿಂದೆ ಸರ್ವಧರ್ಮ ಸಮಭಾವದ ಆಶಯವಿದೆ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಸ್ಪಷ್ಟಪಡಿಸಿದ್ದಾರೆ.

ಪರಿಶಿಷ್ಟ ಜಾತಿ, ಪಂಗಡದವರಿಗೆ ಶಿಕ್ಷಣ, ಉದ್ಯೋಗ ಮೀಸಲಾತಿ ಇನ್ನು 10 ವರ್ಷ ಮುಂದುವರಿಕೆಗೆ ಸಮ್ಮತಿ.

ಹಿರಿಯ ನಾಗರಿಕರ ಕುರಿತ ಪಾಲಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಹಾಗೂ ಕಲ್ಯಾಣ ತಿದ್ದುಪಡಿ ಮಸೂದೆಗೆ ಒಪ್ಪಿಗೆ.

ಪೌರತ್ವ ತಿದ್ದುಪಡಿ ಮಸೂದೆ ಸರ್ಕಾರದ ಅತ್ಯಂತ ಆದ್ಯತಾ ವಿಷಯ. ಇದು 370ನೇ ವಿಧಿ ರದ್ದತಿಯಷ್ಟೇ ಪ್ರಮುಖವಾದುದು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಆಧಾರ–ವಿಜಯವಾಣಿ 05.12.2019

11. ಭಾರತ್ ಬಾಂಡ್ ಘೋಷಣೆ

ವ್ಯಾಪಾರ ವಿನಿಮಯ ನಿಧಿ(ಇಟಿಎಫ್) ಅಡಿಯಲ್ಲಿ ಭಾರತ್ ಬಾಂಡ್‌ಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಶ್ರೀಸಾಮಾನ್ಯರು ಬಾಂಡ್ ಮಾರ್ಕೆಟ್‌ಗೆ ಪ್ರವೇಶ ಪಡೆಯಲು ಈ ಯೋಜನೆ ಸಹಕಾರಿಯಾಗಲಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಆಧಾರ–ವಿಜಯವಾಣಿ 05.12.2019

12. ವೈಯಕ್ತಿಕ ಡೇಟಾ ಸಂರಕ್ಷಣೆಗೆ ಮಸೂದೆ

ವ್ಯಕ್ತಿಗತ ಮಾಹಿತಿಯನ್ನು ಸಂರಕ್ಷಿಸುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಸಮ್ಮತಿ ಸೂಚಿಸಿದೆ. ಈ ಮಸೂದೆ ಚಳಿಗಾಲದ ಅಧಿವೇಶನದಲ್ಲೇ ಮಂಡನೆಯಾಗಲಿದೆ ಎಂದು ವಾರ್ತಾ ಮತ್ತು ಪ್ರಸಾರ ಸಚಿವ ಪ್ರಕಾಶ ಜಾವಡೇಕರ್ ಹೇಳಿದರು.

ಆಧಾರ – ವಿಜಯವಾಣಿ 05.12.2019.

13. ಕನ್ನಡದಲ್ಲಿ ರಾಮಮೂರ್ತಿ ಪ್ರಮಾಣ ಸ್ವೀಕಾರ

ಕರ್ನಾಟಕದಿಂದ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾದ ಕೆ.ಸಿ.ರಾಮಮೂರ್ತಿ ಸಂಸತ್‌ನ ಮೇಲ್ಮನೆಯಲ್ಲಿ ಕನ್ನಡದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಕಾಂಗ್ರೆಸ್ ರಾಜ್ಯಸಭಾ ಸದಸ್ಯರಾಗಿದ್ದ ಅವರು ಇತ್ತೀಚೆಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿಗೆ ಸೇರ್ಪಡೆಯಾಗಿದ್ದರು. ಅವರ ಅವಧಿ 2022ರ ಜೂನ್‌ಗೆ ಅಂತ್ಯವಾಗುತ್ತಿತ್ತು. ಅವಧಿಗೂ ಮುನ್ನವೇ ಕಳೆದ ಅಕ್ಟೋಬರ್ 16ರಂದು ರಾಜ್ಯಸಭಾ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ತೆರವಾಗಿದ್ದ ರಾಜ್ಯಸಭೆ ಸ್ಥಾನಕ್ಕೆ ಕಾಂಗ್ರೆಸ್

ಹಾಗೂ ಜೆಡಿಎಸ್‌ನಿಂದ ಅಭ್ಯರ್ಥಿಯನ್ನು ಕಣಕ್ಕಿಳಿಸಿರಲಿಲ್ಲವಾದ್ದರಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇವರು ಕರ್ನಾಟಕದಲ್ಲಿ ಐಜಿಪಿ ಆಗಿ ಕಾರ್ಯನಿರ್ವಹಿಸಿದ್ದರು.

ಆಧಾರ–ವಿಜಯವಾಣಿ 07.12.2019

14. ಎಸ್‌ಸಿ–ಎಸ್‌ಟಿ ಮೀಸಲಾತಿ ಮಸೂದೆ ಲೋಕಸಭೆಯಲ್ಲಿ ಪಾಸ್

ಶಸ್ತ್ರ ತಿದ್ದುಪಡಿ ಮಸೂದೆಗೆ ಮೇಲ್ಮನೆ ಅಸ್ತು

ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿಯನ್ನು ಇನ್ನೂ ಹತ್ತು ವರ್ಷ ವಿಸ್ತರಿಸುವ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಲೋಕಸಭೆ ಅಂಗೀಕರಿಸಿತು. ಈ ಎರಡೂ ಸಮುದಾಯಗಳ ಹೊಸ ರಾಜಕೀಯ ನಾಯಕತ್ವ ಸೃಷ್ಟಿಗೆ ಈ ಕ್ರಮ ಅಗತ್ಯ ಎಂದು ಮಸೂದೆ ಮಂಡಿಸಿದ ಕಾನೂನು ಸಚಿವ ರವಿಶಂಕರ್ ಪ್ರಸಾದ್ ಪ್ರತಿಪಾದಿಸಿದರು. ಕಳೆದ 70 ವರ್ಷಗಳಲ್ಲಿ ಎಸ್‌ಸಿ, ಎಸ್‌ಟಿ ಹಾಗೂ ಆಂಗ್ಲೊ ಇಂಡಿಯನ್‌ರಿಗೆ ಲೋಕಸಭೆ ಹಾಗೂ ರಾಜ್ಯ ಶಾಸನಸಭೆಗಳಲ್ಲಿ ನೀಡಿದ್ದ ಮೀಸಲಾತಿ 2020 ಜನವರಿ 25 ರಂದು ಅಂತ್ಯಗೊಳ್ಳಲಿತ್ತು. ಆಂಗ್ಲೋ–ಇಂಡಿಯನ್‌ರಿಗೆ ನಾಮಕರಣ ರೂಪದಲ್ಲಿ ಒದಗಿಸಲಾಗುವ ಮೀಸಲಾತಿ ಮುಂದಿನ ವರ್ಷ ಜನವರಿ 25 ರಂದು ಕೊನೆಗೊಳ್ಳಲಿದೆ. ಈ ಸಮುದಾಯಕ್ಕೆ ಸೌಲಭ್ಯ ವಿಸ್ತರಿಸುವ ಪ್ರಸ್ತಾವನೆ ಮಸೂದೆಯಲ್ಲಿಲ್ಲ. ಲೋಕಸಭೆಯಲ್ಲಿ ಅನುಮೋದನೆಯಾಗಿದ್ದ ಶಸ್ತ್ರ ತಿದ್ದುಪಡಿ ಮಸೂದೆಗೆ ರಾಜ್ಯಸಭೆ ಒಪ್ಪಿಗೆ ನೀಡಿದೆ.

ಆಧಾರ–ವಿಜಯವಾಣಿ 11.12.2019

15. ಲೋಕಸಭೆ ಉತ್ಪಾದಕತೆ ಶೇ.116

ಸಂಸತ್‌ನ ಚಳಿಗಾಲದ ಅಧಿವೇಶನ ಮುಕ್ತಾಯವಾಗಿದ್ದು, ಉತ್ಪಾದಕತೆಯಲ್ಲಿ ಉತ್ತಮ ಸಾಧನೆ ತೋರಿದೆ. ಲೋಕಸಭೆ ಉತ್ಪಾದಕತೆ ಶೇ. 116 ಆಗಿದ್ದು, ರಾಜ್ಯಸಭೆಯ ಸಾಧನೆ ಶೇ. 99 ಆಗಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಶಿ ತಿಳಿಸಿದ್ದಾರೆ. ಉಭಯ ಸದನಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕಲಾಪಗಳ ಗುಣಮಟ್ಟದ ಬಗ್ಗೆ ಮೆಚ್ಚುಗೆ ಸೂಚಿಸಿದರು.

ಪ್ರಸಕ್ತ ಅಧಿವೇಶನದ ಲೋಕಸಭೆಯಲ್ಲಿ 18 ಮಸೂದೆಗಳನ್ನು ಮಂಡಿಸಲಾಗಿತ್ತು. ಪೌರತ್ವ ತಿದ್ದುಪಡಿ ಮಸೂದೆ ಸಹಿತ 15 ಮಸೂದೆಗಳನ್ನು ಕೆಳಮನೆ ಅಂಗೀಕರಿಸಿದೆ. ಮೇಲ್ಮನೆಯಾದ ರಾಜ್ಯಸಭೆಯಲ್ಲಿ 15 ಮಸೂದೆಗಳ ಅಂಗೀಕಾರವಾಗಿವೆ. 15 ಮಸೂದೆಗಳಿಗೆ ಎರಡೂ ಸದನಗಳು ಒಪ್ಪಿಗೆ ನೀಡಿವೆ.

ಲೋಕಸಭೆ ಅಂಗೀಕರಿಸಿದ ಪ್ರಮುಖ ಮಸೂದೆ

ಚಿಟ್ ಫಂಡ್ ತಿದ್ದುಪಡಿ ಮಸೂದೆ, ಇ–ಸಿಗರೇಟ್ ನಿರ್ಬಂಧ ಮಸೂದೆ, ತೆರಿಗೆ ಕಾನೂನುಗಳ ತಿದ್ದುಪಡಿ ಮಸೂದೆ, ಶಸ್ತ್ರಾಸ್ತ್ರ ತಿದ್ದುಪಡಿ ಮಸೂದೆ, ಪೌರತ್ವ ತಿದ್ದುಪಡಿ ಮಸೂದೆ ಹಾಗೂ ಕೇಂದ್ರೀಯ ಸಂಸ್ಕೃತ ವಿ.ವಿ. ಮಸೂದೆ.

ಉಭಯ ಸದನಗಳು ಅಂಗೀಕರಿಸಿದ ಪ್ರಮುಖ ಮಸೂದೆಗಳು

ಜಲಿಯನ್‌ವಾಲಾ ಬಾಗ್ ರಾಷ್ಟ್ರೀಯ ಸ್ಮಾರಕ ತಿದ್ದುಪಡಿ ಮಸೂದೆ, ವಿಶೇಷ ರಕ್ಷಣಾದಳ ತಿದ್ದುಪಡಿ ಮಸೂದೆ, ಶಸ್ತ್ರಾಸ್ತ್ರ ತಿದ್ದುಪಡಿ ಮಸೂದೆ ಹಾಗೂ ಪೌರತ್ವ ತಿದ್ದುಪಡಿ ಮಸೂದೆ.

ಆಧಾರ–ವಿಜಯವಾಣಿ 14.12.2019

16. ಸಂಸತ್‌ಗೆ ಅನುಭವ ಮಂಟಪ ಮೆರುಗು

ಬಜೆಟ್ ಅಧಿವೇಶನ ವೇಳೆ ಅನಾವರಣ, ಮೋದಿಯಿಂದ ಛಾಯಾಚಿತ್ರ ಲೋಕಾರ್ಪಣೆ

ಹನ್ನೆರಡನೇ ಶತಮಾನದಲ್ಲಿ ವಿಶ್ವದಲ್ಲೇ ಮೊದಲ ಬಾರಿ ನಡೆದ ಬಸವಾದಿ ಶರಣರ ಅನುಭವ ಮಂಟಪದ ಕಲಾಕೃತಿ ಬಜೆಟ್ ಅಧಿವೇಶನ ಇಲ್ಲವೇ ಅದಕ್ಕೂ ಮುನ್ನ ಸಂಸತ್ ಭವನದಲ್ಲಿ ಅಳವಡಿಕೆಯಾಗಲಿದೆ. ಇದನ್ನು ಪ್ರಧಾನಿ ಮೋದಿ ಅವರು ಲೋಕಾರ್ಪಣೆ ಮಾಡಲಿದ್ದಾರೆ.

ಲೋಕಸಭಾಧ್ಯಕ್ಷ ಓಂ ಬಿರ್ಲಾ ಸಂಸತ್ ಆವರಣದೊಳಗೆ ಅನುಭವ ಮಂಟಪ ಕಲಾಕೃತಿ ಅಳವಡಿಕೆಗೆ ಅನುಮತಿ ನೀಡಿದ್ದು, ಸದ್ಯದಲ್ಲೇ ಅಳವಡಿಕೆಗೆ ದಿನಾಂಕ ಗೊತ್ತುಪಡಿಸುವುದಾಗಿ ತಿಳಿಸಿದ್ದಾರೆ.

ನವದೆಹಲಿ ಸಂಸತ್ ಎದುರಿಗೆ ಬಸವಣ್ಣನವರ ಮೂರ್ತಿ ಅನಾವರಣ ಸಂದರ್ಭದಲ್ಲೇ ಚಿಕ್ಕದಾಗಿ ರಚಿಸಲಾಗಿದ್ದ ಅನುಭವ ಮಂಟಪದ ಚಿತ್ರ ಕಲಾಕೃತಿಯನ್ನು ಆಗಿನ ರಾಷ್ಟ್ರಪತಿ ಡಾ: ಎಪಿಜೆ ಅಬ್ದುಲ್ ಕಲಾಂ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಈಗ ದೊಡ್ಡದಾಗಿ ರಚಿಸಲಾದ ಕಲಾಕೃತಿ ಅನಾವರಣಗೊಳ್ಳುತ್ತಿದೆ. ಅಪರೂಪ ಎನ್ನುವಂತೆ ರೂಪಿಸಲಾಗಿದೆಯೆಂದು ನಾಡೋಜ ಡಾ: ಜೆ.ಎಸ್. ಖಂಡೇರಾವ್ ತಿಳಿಸಿದರು.

ಆಧಾರ–ಉದಯವಾಣಿ 16.12.2019

17. ಆಂಗ್ಲೋ ಇಂಡಿಯನ್ ಮೀಸಲು ಇನ್ನಿಲ್ಲ

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಹಾಗೂ ಆಂಗ್ಲೋ ಇಂಡಿಯನ್ನರಿಗೆ ಕಳೆದ 70 ವರ್ಷಗಳಿಂದ ನೀಡಲಾಗುತ್ತಿರುವ ಮೀಸಲಾತಿಯು 2020 ಜನವರಿ 25ಕ್ಕೆ ಅಂತ್ಯಗೊಳ್ಳಲಿದೆ. ಕಳೆದ ವಾರ ಸಂವಿಧಾನದ 126ನೇ ತಿದ್ದುಪಡಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದ ಕೇಂದ್ರ ಸರ್ಕಾರ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಇನ್ನೂ 10 ವರ್ಷಗಳ ಕಾಲ ವಿಸ್ತರಿಸಿದೆ. ಆದರೆ, ಆಂಗ್ಲೋ ಇಂಡಿಯನ್ ಮೀಸಲಾತಿ ರದ್ದತಿ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿ ಅದು ಅಂಗೀಕಾರವೂ ಆಗಿದೆ.

ಮೋದಿ ಸರ್ಕಾರದ ಮೊದಲ ಅವಧಿಯಲ್ಲಿ ಇಬ್ಬರು ಸದಸ್ಯರನ್ನು ನಾಮ ನಿರ್ದೇಶನ ಮಾಡಲಾಗಿತ್ತು. ಆದರೆ, ಈ ಬಾರಿ ಪ್ರಧಾನಿ ಮೋದಿ ನೇತೃತ್ವದ ಸರ್ಕಾರದಲ್ಲಿ ಲೋಕಸಭೆಗೆ ಆಂಗ್ಲೋ ಇಂಡಿಯನ್ ಸದಸ್ಯರ ನಾಮ ನಿರ್ದೇಶನವಾಗಿಲ್ಲ. ಆಂಗ್ಲೋ ಇಂಡಿಯನ್ ಮೀಸಲಾತಿ ಕೋಟಾ ರದ್ದು ಮಾಡುವ ಬಗ್ಗೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ, ಸಮಾಜ ಕಲ್ಯಾಣ ಸಚಿವ ತಾವರ್ ಚಂದ್ ಗೆಹ್ಲೋಟ್ ಅವರನ್ನೊಳಗೊಂಡ ನಿಯೋಗ ಶಿಫಾರಸ್ಸು ಮಾಡಿತ್ತು. ಅದರನ್ವಯ ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ಮೀಸಲಾಗಿದ್ದ ಕೋಟಾ ರದ್ದು ಮಾಡುವ ಮಸೂದೆ ಲೋಕಸಭೆಯಲ್ಲಿ ಮಂಡನೆಯಾಗಿ ಸರ್ವಾನುಮತದಿಂದ ಅಂಗೀಕಾರವಾಗಿದೆ. ಇನ್ನು ರಾಜ್ಯ ಸಭೆಯಲ್ಲಿ ಮಸೂದೆ ಪಾಸಾಗುವುದೊಂದೇ ಬಾಕಿ ಇದೆ.

ಆಧಾರ–ಕನ್ನಡ ಪ್ರಭ 17.12.2019

18. ಸಂಸದರಿಗೆ ಕಾಲ್‌ಸೆಂಟರ್

ದೇಶದ ಎಲ್ಲಾ ಸಂಸದರಿಗೆ ಆಡಳಿತಾತ್ಮಕವಾಗಿ ನೆರವಾಗುವ ಉದ್ದೇಶದೊಂದಿಗೆ ಸಂಸತ್ ಭವನದಲ್ಲಿ ಮಾಹಿತಿ ಮತ್ತು ಸಂವಹನ ಕೇಂದ್ರ ಎಂಬ ಕಾಲ್‌ಸೆಂಟರ್ ಅನ್ನು ಆರಂಭಿಸಲಾಗಿದೆ.

ಲೋಕ ಸಭಾ ಸ್ಪೀಕರ್ ಓಂ ಬಿರ್ಲಾರವರ ಆಸ್ಥೆಯಿಂದ ಆರಂಭವಾಗಿರುವ ಈ ಕೇಂದ್ರದಿಂದ ಸಂಸದರು ಕಲಾಪಗಳಲ್ಲಿ ಯಾವುದೇ ವಿಷಯ ಮಂಡನೆ ಮಾಡಬೇಕಿದ್ದಲ್ಲಿ ಅದಕ್ಕೆ ಪೂರಕವಾದ ದಾಖಲೆಗಳನ್ನು ಈ ಕಾಲ್‌ಸೆಂಟರ್‌ನ ಸಹಾಯದಿಂದ ಪಡೆಯಬಹುದು ಜೊತೆಗೆ ಸರ್ಕಾರದಿಂದ ತಮಗೆ ಬರಬೇಕಿರುವ ಪ್ರಯಾಣ ಭತ್ಯೆಗಳ ಸ್ಥಿತಿಗಳನ್ನು ತಿಳಿಯಬಹುದು. ಹೀಗೆ ಆಡಳಿತಾತ್ಮಕ ವಿಚಾರ ಸೇರಿದಂತೆ ಹಲವಾರು ರೀತಿಯಲ್ಲಿ ಕೇಂದ್ರ ಸಂಸದರ ನೆರವಿಗೆ ಬರಲಿದೆ.

ಆಧಾರ–ಉದಯವಾಣಿ 29.12.2019

* * * * *

ಭಾಗ – 3

ಕೇಂದ್ರ ಸುದ್ದಿಗಳು

1. ಗಾಂಧಿ ಜಯಂತಿಯಂದು "ಶ್ರಮದಾನ" ಪ್ಲಾಸ್ಟಿಕ್ ಮುಕ್ತ "ವಾಗ್ದಾನ"

ಪ್ರಧಾನಿ ನರೇಂದ್ರ ಮೋದಿಯವರು 73ನೇ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ "ಸ್ವಚ್ಛತಾ ಹೀ ಸೇವಾ" ಕಲ್ಪನೆ ಮೂಲಕ ಪ್ಲಾಸ್ಟಿಕ್ ಮುಕ್ತ ದೇಶಕ್ಕಾಗಿ ಕರೆ ನೀಡಿದ್ದರು. ಅದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ರಾಜ್ಯದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವಿಶೇಷ ಅಭಿಯಾನ ಹಮ್ಮಿಕೊಂಡಿದೆ.

ಕೇಂದ್ರ ಸರ್ಕಾರದ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಆಶಯದಂತೆ "ಸ್ವಚ್ಛ ಭರತ್ ಮಿಷನ್" (ಗ್ರಾಮೀಣ) ಯೋಜನೆಯಡಿ ಪ್ಲಾಸ್ಟಿಕ್ ತ್ಯಾಜ್ಯ ಮುಕ್ತ "ಆಂದೋಲನ – ಸ್ವಚ್ಛತಾ ಹೀ ಸೇವಾ" ಕಾರ್ಯಕ್ರಮ ಆಯೋಜಿಸಲಾಗುತ್ತಿದ್ದು, ಗಾಂಧಿ ಜಯಂತಿ ದಿನವಾದ ಅಕ್ಟೋಬರ್ 2 ರಂದು ರಾಜ್ಯದ ಎಲ್ಲ 6,024 ಗ್ರಾಮ ಪಂಚಾಯಿತಿಗಳಲ್ಲಿ ಏಕಕಾಲಕ್ಕೆ ಶ್ರಮದಾನ ನಡೆಯುಲಿದ್ದು, ಪ್ಲಾಸ್ಟಿಕ್ ಮುಕ್ತ ಗ್ರಾಮಗಳನ್ನಾಗಿ ಮಾಡಲು ಪ್ರತಿಜ್ಞೆ ಸ್ವೀಕಾರ ನಡೆಯಲಿದೆ.

ಗ್ರಾಮೀಣ ಪ್ರದೇಶವನ್ನು ಪ್ಲಾಸ್ಟಿಕ್ ಮುಕ್ತ ಮಾಡಲು ಸ್ವಚ್ಛತಾ ಹೀ ಸೇವಾ ಅಂದೋಲನದಡಿ ಸೆಪ್ಟಂಬರ್ 11 ರಿಂದ ಆಕ್ಟೋಬರ್ 27ರವರೆಗೆ ಅಭಿಯಾನ ರೂಪದಲ್ಲಿ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅದರಂತೆ, ಸೆಪ್ಟಂಬರ್ 11 ರಿಂದ ಆಕ್ಟೋಬರ್ 1ರವರೆಗೆ ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಸ್ವಚ್ಛತಾ ಹೀ ಸೇವಾ ಆಂದೋಲನದಲ್ಲಿ:–

- ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸುವ ಕೇಂದ್ರಗಳನ್ನು ಗುರುತಿಸುವುದು. ಈಗಾಗಲೇ ಜಿಲ್ಲೆಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯ ಸಂಗ್ರಹಿಸುವ ತ್ಯಾಜ್ಯವನ್ನು ಶೇಖರಣೆ ಮಾಡಬೇಕು.
- ಗ್ರಾಮ ಪಂಚಾಯಿತಿಗಳಲ್ಲಿ ಸಂಗ್ರಹಿಸಲಾದ ಪ್ಲಾಸ್ಟಿಕ್ ತ್ಯಾಜ್ಯವನ್ನು ಸ್ಥಳೀಯ ಸಿಮೆಂಟ್ ಕಾರ್ಖಾನೆಗಳೊಂದಿಗೆ ಸಮನ್ವಯ ಮಾಡಿಕೊಂಡು ಆ ಪ್ಲಾಸ್ಟಿಕ್ ತ್ಯಾಜ್ಯ ಸಾಗಾಣಿಕೆಗೆ ಅಗತ್ಯ ವ್ಯವಸ್ಥೆಗೆ ಯೋಜನೆ ರೂಪಿಸುವುದು.
- ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹವಾಗಿದ್ದಲ್ಲಿ ರೈಲ್ವೆ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಗ್ರಾಮ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಹಂತದಲ್ಲಿ ಸಂಗ್ರಹಿಸಲಾದ ಪ್ಲಾಸ್ಟಿಕ್ ತ್ಯಾಜ್ಯವನ್ನು ರೈಲು ಬೋಗಿಗಳಲ್ಲಿ ಸಾಗಿಸಲು ಕ್ರಮ ಕೈಗೊಳ್ಳುವುದು.
- ಗಾಂಧಿ ಜಯಂತಿ ದಿನ ಎಲ್ಲ ಗ್ರಾಮ ಪಂಚಾಯಿತಿಗಳ ಶಾಲಾ–ಕಾಲೇಜು ಸರ್ಕಾರಿ ಕಛೇರಿಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಕುರಿತು ಪ್ರತಿಜ್ಞಾ ವಿಧಿ ಬೋಧನೆ ಮಾಡುವುದು.

ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಬೆಂಗಳೂರು ನಗರ ಜಿಲ್ಲಾ ಪಂಚಾಯ್ತಿ ಮುಂದಾಗಿದೆ. ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಬೆಂಗಳೂರು ಪಶ್ಚಿಮ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಆನೇಕಲ್ ತಾಲ್ಲೂಕಿನ ಸುಮಾರು 96 ಗ್ರಾಮ ಪಂಚಾಯಿತಿಗಳಲ್ಲಿ ಏಕ ಕಾಲದಲ್ಲಿ "ಸ್ವಚ್ಛತೆಯೇ ಸೇವೆ" ಕಾರ್ಯಕ್ರಮ ಜಾರಿಗೆ ಬರಲಿದೆ. ಪ್ರಧಾನಿ ಮೋದಿ ಅವರು ಯುವ ಸಮೂಹವನ್ನು ಕೇಂದ್ರೀಕರಿಸಿ ಕೌಶಲ್ಯ ಭಾರತ್, ಯೋಗ, ಸ್ವಚ್ಛ ಭಾರತ್, ಫೀಟ್ ಭಾರತ್ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಇದರಲ್ಲಿ ಈಗ ಸ್ವಚ್ಛತೆಯೇ ಸೇವೆ ಆಂದೋಲನ ಕೂಡ ಸೇರಿದೆ.

ಆಧಾರ–ಉದಯವಾಣಿ 01.10.2019

2. ದೀಪಾವಳಿಗೆ ತೆರಿಗೆ ಸಿಹಿ

ಆರ್ಥಿಕ ಹಿಂಜರಿತ, ಉದ್ಯೋಗ ಪ್ರಮಾಣ ಇಳಿಕೆ ಜೊತೆಗೆ ಜಿ.ಎಸ್.ಟಿ ಸಂಗ್ರಹದಲ್ಲೂ ಉಂಟಾಗಿರುವ ಕುಸಿತ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಕಾರ್ಯದಕ್ಷತೆ, ಸಾಮರ್ಥ್ಯವನ್ನು ಒರೆಗೆ ಹಚ್ಚಿರುವ ಸಂದರ್ಭದಲ್ಲೇ ಕೇಂದ್ರ ಸರ್ಕಾರ ಜನಸಾಮಾನ್ಯರ ತೆರಿಗೆ ಭಾರವನ್ನು ಕೊಂಚ ಹಗುರಗೊಳಿಸುವತ್ತ ಹೆಜ್ಜೆ ಇಟ್ಟಿದೆ. ಮಂದಗತಿಯಲ್ಲಿರುವ ಆರ್ಥಿಕತೆ ಚೇತರಿಕೆಗಾಗಿ ಈಗಾಗಲೇ ಕಾರ್ಪೋರೇಟ್ ತೆರಿಗೆ ಇಳಿಸಿದ್ದು ವೈಯ

ಆದಾಯ ತೆರಿಗೆಯಲ್ಲೂ ಭಾರಿ ಕಡಿತ ಮಾಡುವ ಸುಳಿವು ನೀಡಿದೆ. ಮತ್ತೊಂದೆಡೆ ಶ್ರೀಸಾಮಾನ್ಯರಿಗೆ ತುಸು ನಿರಾಳ ನೀಡಲಿದ್ದು, ಗೃಹಸಾಲದ ಮೇಲಿನ ಇಎಂಐ ಇಳಿಕೆ ಸೇರಿದಂತೆ ಹಲವು ಸೇವೆಗಳು ಕೈಗೆಟುಕಲಿವೆ.

ಕೇಂದ್ರ ಸರ್ಕಾರ ದೀಪಾವಳಿ ಸಂದರ್ಭದಲ್ಲಿ ತೆರಿಗೆದಾರರಿಗೆ ಬಂಪರ್ ಕೊಡುಗೆ ನೀಡುವ ನಿರೀಕ್ಷೆ ಇದೆ. 2.5 ಲಕ್ಷ ರೂ. ನಿಂದ 10 ಲಕ್ಷ ರೂಪಾಯಿವರೆಗಿನ ಆದಾಯವನ್ನು ಶೇ.10ರ ತೆರಿಗೆ ಸ್ಲ್ಯಾಬ್‌ಗೆ ತರಲು ಕೇಂದ್ರಿಯ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ಸದಸ್ಯ ಅಖಿಲೇಶ್ ರಂಜನ್ ನೇತೃತ್ವದ ಸಮಿತಿ ಶಿಫಾರಸ್ಸು ಮಾಡಿದೆ. 10 ರಿಂದ 20 ಲಕ್ಷ ರೂ.ವರೆಗಿನ ಆದಾಯಕ್ಕೆ ಪ್ರತಿಶತ 20ರ ಸ್ಲ್ಯಾಬ್ ಹಾಗೂ ಅದರ ಮೇಲಿನ ಆದಾಯಕ್ಕೆ ಶೇ.30 ಅಥವಾ ಹೆಚ್ಚಿನ ತೆರಿಗೆ ವಿಧಿಸಲು ಮಂಡಳಿ ಶಿಫಾರಸ್ಸು ಮಾಡಿದೆ.

ವರದಿ ಸಲ್ಲಿಸಿದ ಸಮಿತಿ: ಅಖಿಲೇಶ್ ರಂಜನ್ ನೇತೃತ್ವದಲ್ಲಿ ಸರ್ಕಾರ ರಚಿಸಿದ್ದ ಕಾರ್ಯಪಡೆ ಆಗಸ್ಟ್ 19 ರಂದು ಹಣಕಾಸು ಸಚಿವರಿಗೆ ವರದಿ ಸಲ್ಲಿಸಿತ್ತು. ಆದರೆ ಈ ವರದಿ ಅನುಷ್ಠಾನಕ್ಕೆ ಸರ್ಕಾರ ಗಡುವನ್ನೇನಾದರೂ ನಿಗದಿ ಮಾಡಿಕೊಂಡಿದೆಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ ಮತ್ತು ಈ ವರದಿಯನ್ನು ಇದುವರೆವಿಗೂ ಸಾರ್ವಜನಿಕವಾಗಿ ಪ್ರಕಟಿಸಿಲ್ಲ. ವಾರ್ಷಿಕ ಹತ್ತು ಲಕ್ಷ ರೂಪಾಯಿಗಿಂತ ಹೆಚ್ಚಿನ ಆದಾಯವಿರುವವರು ಶೇ. 30 ತೆರಿಗೆ ಸ್ಲ್ಯಾಬ್‌ಗೆ ಒಳಪಡುತ್ತಾರೆ. ಈ ಶಿಫಾರಸ್ಸು ಜಾರಿಯಾದರೆ ಅದು ಕಡಿಮೆಯಾಗಲಿದೆ. ವಾರ್ಷಿಕ 55 ಲಕ್ಷ ರೂಪಾಯಿ ಸಂಪಾದಿಸುವವರಿಗೆ ಕೂಡ ತೆರಿಗೆಯಲ್ಲಿ ಭಾರಿ ಕಡಿತವಾಗಲಿದೆ.

ಆಧಾರ–ವಿಜಯವಾಣಿ 03.10.2019

3. ಕೊಳಾಯಿ ನೀರಿಗೂ ಬಿಐಎಸ್ ಕಡ್ಡಾಯ

ದೇಶದ ರಾಜಧಾನಿ ದೆಹಲಿ, ಎಲ್ಲ ರಾಜ್ಯಗಳ ರಾಜಧಾನಿಗಳು ಹಾಗೂ ದೇಶದ 100 ಸ್ಮಾರ್ಟ್ ಸಿಟಿಗಳಲ್ಲಿ ನಲ್ಲಿ ನೀರಿಗೂ ಬಿಐಎಸ್ (ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್ಸ್) ಗುಣಮಟ್ಟ ಕಡ್ಡಾಯಗೊಳಿಸುವ ಬಗ್ಗೆ ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ. ಈ ಸಂಬಂಧ ಶೀಘ್ರವಾಗಿ ಸಂಬಂಧಪಟ್ಟವರೊಂದಿಗೆ ಸಮಾಲೋಚನೆ ಪ್ರಕ್ರಿಯೆ ನಡೆಸಲಾಗುತ್ತದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ರಾಮ್ ವಿಲಾಸ ಪಾಸ್ವಾನ್ ಹೇಳಿದ್ದಾರೆ.

ದೆಹಲಿಯ 11 ಪ್ರದೇಶಗಳಲ್ಲಿ ಹಾಲಿ ಸರಬರಾಜು ಆಗುತ್ತಿರುವ ಕೊಳಾಯಿ ನೀರು ಬಿಐಎಸ್ ಗುಣಮಟ್ಟವನ್ನು ಹೊಂದಿಲ್ಲ. ಅಲ್ಲದೆ, ಈ ನೀರು ಕುಡಿಯಲು ಯೋಗ್ಯವಲ್ಲ ಎಂಬುದು ಈ ಪ್ರದೇಶಗಳಲ್ಲಿ ಸಂಗ್ರಹಿಸಲಾದ ಕೊಳಾಯಿ ನೀರಿನ ಮಾದರಿಯ ಪ್ರಾಥಮಿಕ ತನಿಖೆಯಿಂದ ಸಾಬೀತಾಗಿದೆ.

ಈ ಹಿನ್ನೆಲೆಯಲ್ಲಿ ದೆಹಲಿ, ರಾಜ್ಯಗಳ ರಾಜಧಾನಿಗಳು ಹಾಗೂ ಸ್ಮಾರ್ಟ್ ಸಿಟಿಗಳಲ್ಲಿ ನೀರಿನ ಗುಣಮಟ್ಟದ ಮಾಪಕವಾದ ಬಿಐಎಸ್ ಅನುಸರಣೆಯನ್ನು ಕಡ್ಡಾಯಗೊಳಿಸಲು ಚಿಂತಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ರಾಜ್ಯಗಳ ರಾಜಧಾನಿಗಳಲ್ಲಿ ಪೂರೈಕೆಯಾಗುತ್ತಿರುವ ಕೊಳಾಯಿ ನೀರು ಬಿಐಎಸ್ ಮಾನದಂಡ ಹೊಂದಿದೆಯೇ ಎಂಬ ಪರೀಕ್ಷೆಗಾಗಿ ನೀರಿನ ನಮೂನೆ ಸಂಗ್ರಹಕ್ಕಾಗಿ ಬಿಐಎಸ್ ತಂಡಗಳನ್ನು ರಾಜ್ಯಗಳ ರಾಜಧಾನಿಗಳಿಗೆ ರವಾನಿಸಲಾಗಿದೆ ಎಂದು ಪಾಸ್ವಾನ್ ತಿಳಿಸಿದ್ದಾರೆ. ಈ ತಂಡಗಳು ತಮ್ಮ ಅಧ್ಯಯನವನ್ನು ನವೆಂಬರ್ ಮೊದಲ ವಾರದಲ್ಲಿ ಸರ್ಕಾರಕ್ಕೆ ನೀಡಲಿದ್ದು ಸುರಕ್ಷಿತ ಕುಡಿಯುವ ನೀರು ಹೊಂದಿದ ರಾಜ್ಯದ ರಾಜಧಾನಿಗಳಿಗೆ ರ್‍ಯಾಂಕಿಂಗ್ ನೀಡಲಾಗುತ್ತದೆ ಎಂದು ಹೇಳಿದ್ದಾರೆ.

ಆಧಾರ–ಕನ್ನಡ ಪ್ರಭ 04.10.2019

4. ರಾಜ್ಯಕ್ಕೆ ಮಧ್ಯಂತರ ನಿರಾಳ

ನೆರೆ ಪರಿಹಾರದ ವಿಚಾರದಲ್ಲಿ ಕರ್ನಾಟಕದ ಆಕ್ರೋಶಭರಿತ ದನಿಗೆ ಕೊನೆಗೂ ಕಿವಿಯಾದ ಕೇಂದ್ರ ಸರ್ಕಾರ 22 ಜಿಲ್ಲೆಗಳ ಸಂತ್ರಸ್ತರ ತುರ್ತು ಪರಿಹಾರಕ್ಕೆಂದು 1200 ಕೋಟಿ ರೂಪಾಯಿ ಮಧ್ಯಂತರ ಪರಿಹಾರ ಬಿಡುಗಡೆ ಮಾಡಿದೆ.

ರಾಜ್ಯ ಸಲ್ಲಿಸಿರುವ ನೆರೆ ಪರಿಹಾರ ಬೇಡಿಕೆ ವರದಿಯಲ್ಲಿನ ಕೆಲವು ಆಕ್ಷೇಪಣೆಗಳಿಗೆ ಸ್ಪಷ್ಟನೆ ದೊರೆತ ಕೂಡಲೇ ಉಳಿದ ಮೊತ್ತ ಬಿಡುಗಡೆ ಮಾಡುವುದಾಗಿ ಸ್ಪಷ್ಟಪಡಿಸಿರುವ ಕೇಂದ್ರ ನೆರೆ ಪರಿಹಾರ ನೀಡುವ ವಾಗ್ದಾನ ಮಾಡಿದೆ.

ಆಗಸ್ಟ್ ಮೊದಲ ವಾರದಲ್ಲಿ ಉಂಟಾದ ಅತಿವೃಷ್ಟಿಯಿಂದಾಗಿ ರಾಜ್ಯದ ಹಲವೆಡೆ ಅಪಾರ ಪ್ರಮಾಣದ ಆಸ್ತಿಪಾಸ್ತಿ ಬೆಳೆ ಹಾನಿಯಾಗಿತ್ತು. ಕೇಂದ್ರ ಗೃಹ ಸಚಿವ ಅಮಿತ್ ಷಾ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೆರೆ ಪೀಡಿತ ಪ್ರದೇಶಗಳನ್ನು ವೀಕ್ಷಿಸಿ, ಸಮೀಕ್ಷೆಗಾಗಿ ಕೇಂದ್ರದ 5 ತಂಡವನ್ನು ಕಳುಹಿಸಿದ್ದರು.

ಕೇಂದ್ರ ಸರ್ಕಾರ ರಾಜ್ಯಕ್ಕೆ ಮುಂಗಡವಾಗಿ ಎನ್‌ಡಿಆರ್‌ಎಫ್‌ನಿಂದ ರೂ. 1200 ಕೋಟಿ ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರಕ್ಕೆ ನೆರವಾಗಿರುವ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಷಾ ಅವರನ್ನು ರಾಜ್ಯದ ಜನತೆಯ ಪರವಾಗಿ ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿನಂದಿಸಿದ್ದರು.

ಆಧಾರ–ವಿಜಯವಾಣಿ 05.10.2019

5. ನೋಟು ಅಮಾನ್ಯೀಕರಣದಿಂದ ತೆರಿಗೆ ವಂಚನೆಗೆ ಕಡಿವಾಣ

ಶೀಘ್ರವಾಗಿ ಬೆಳೆಯುತ್ತಿರುವ ತೆರಿಗೆ ಪದ್ಧತಿಯನ್ನು ಡಿಜಿಟಲ್ ಮಾಡಲಾಗಿದ್ದು, ನೇರ ಹಾಗೂ ಪರೋಕ್ಷವಾಗಿ ಶೇ.85ರಷ್ಟು ತೆರಿಗೆ ವಂಚನೆ ತಡೆಯಲು ಪ್ರಯತ್ನಿಸಲಾಗುತ್ತಿದೆ. ಹೀಗಾಗಿ ಜೆ.ಡಿ.ಪಿಗೆ ಹೊಡೆತ ಬಿದ್ದಿದೆ. ನೋಟು ಅಮಾನ್ಯೀಕರಣದಿಂದ ಭಾರಿ ಪ್ರಮಾಣದಲ್ಲಿ ತೆರಿಗೆ ವಂಚನೆಗೆ ಕಡಿವಾಣ ಬಿದ್ದಿದೆ ಎಂದು ಕೇಂದ್ರ ಹಣಕಾಸು ಹಾಗೂ ಕಾರ್ಪೋರೇಟ್ ವ್ಯವಹಾರಗಳ ಸಚಿವೆ ನಗರದಲ್ಲಿ ಕರ್ನಾಟಕ ರಾಜ್ಯ ತೆರಿಗೆ ಸಲಹೆಗಾರರ ಸಂಘ ಏರ್ಪಡಿಸಿದ್ಧ ರಾಷ್ಟ್ರೀಯ ತೆರಿಗೆ ಸಲಹೆಗಾರರ ದಿನ ಹಾಗೂ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ನಿರ್ಮಲಾ ಸೀತಾರಾಮನ್ ಮಾತನಾಡಿದರು, ತೆರಿಗೆ ಸುಧಾರಣೆ ಇಂದಿನ ತುರ್ತು ಅಗತ್ಯ ಜಿ.ಎಸ್.ಟಿ ತಂತ್ರಜ್ಞಾನ ಅವಲಂಬಿಸಿದೆ. ಇದು ಎರಡು ತೆರಿಗೆಗಳು ಅಥವಾ ಪುನರಾವರ್ತಿತ ತೆರಿಗೆ ಬದಲಿಗೆ ಒಂದೇ ತೆರಿಗೆ ನೀತಿ ಒಳಗೊಂಡಿದೆ, ಗ್ರಾಹಕರ ಮೇಲಿನ ತೆರಿಗೆ ಹೊರೆ ಕಡಿಮೆ ಮಾಡಲು ಈ ಪದ್ಧತಿ ಜಾರಿ ಆಗಬೇಕಿದೆ. ಇದಕ್ಕೆ ಸಮಯಾವಕಾಶ ಬೇಕು. ಜನರಿಗೆ ತಿಳುವಳಿಕೆ ನೀಡಲಾಗುತ್ತಿದೆ. ದೇಶದ ಸಣ್ಣ ಹಾಗೂ ಮಧ್ಯಮ ಉದ್ಯಮಿಗಳಿಗೆ ಹೊರೆಯಾಗದಂತೆ ತೆರಿಗೆ ನೀತಿ ನಿರೂಪಿಸಲಾಗಿದೆ ಎಂದರು. ಸ್ವಾತಂತ್ರ್ಯ ಪೂರ್ವದಲ್ಲಿ ಅಂದಿನ ತೆರಿಗೆ ಸಲಹೆಗಾರರು ವೃತ್ತಿ ತೊರೆದು ಮಹಾತ್ಮ ಗಾಂಧೀಜಿ ನೇತೃತ್ವದ ಚಳವಳಿ ಬೆಂಬಲಿಸಿದ್ದರು. ಇಂದು ವೃತ್ತಿ ತೊರೆಯುವುದು ಬೇಡ ಸಮರ್ಪಕವಾಗಿ ತೆರಿಗೆಯ ಮೌಲ್ಯಮಾಪನ ಮಾಡಿ ದೇಶಕ್ಕೆ ಕೊಡುಗೆ ನೀಡಬೇಕು ಎಂದರು.

ಸಂಘದ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಮಾತನಾಡಿ ದೇಶದ ಆರ್ಥಿಕ ಪ್ರಗತಿಯಲ್ಲಿ ಮಹತ್ವದ ಪಾತ್ರವಹಿಸುವ ತೆರಿಗೆ ಸಲಹೆಗಾರರು ವೃತ್ತಿ ನೈತಿಕತೆ ಕುರಿತು ಪ್ರತಿಜ್ಞೆ ಸ್ವೀಕರಿಸಿದ್ದಾರೆ. ಅದನ್ನು ವೃತ್ತಿಯಲ್ಲಿ ಪಾಲಿಸುವುದು ಅಷ್ಟೇ ಮುಖ್ಯ. ದೇಶದಲ್ಲಿ ಜಿ.ಎಸ್.ಟಿ. ಮೂಲಕ ಬದಲಾವಣೆಗಳು ಬರುತ್ತಿವೆ. ತೆರಿಗೆ ಸಲಹೆಗಾರರು ಕಕ್ಷಿದಾರರಿಗೆ ಸೂಕ್ತ ಕಾನೂನು ಸಲಹೆ ನೀಡಬೇಕು ಎಂದರು. ಸಚಿವ ಜಗದೀಶ ಶೆಟ್ಟರ್ ಮಾತನಾಡಿ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ತೆರಿಗೆ ಸಲಹೆಗಾರರು ಮತ್ತು ಚಾರ್ಟರ್ಡ್ ಅಕೌಂಟೆಂಟ್‌ಗಳ ಪಾತ್ರ ಮಹತ್ವದ್ದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ತೆರಿಗೆ ಪಾವತಿದಾರರ ನಡುವೆ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಾರೆ.

ಆಧಾರ–ವಿಜಯವಾಣಿ 06.10.2019

6. ಆಯುಷ್ಮಾನ್ ಭಾರತ ಸೂಪರ್ ಹಿಟ್ 90 ಸಾವಿರ ಜನಕ್ಕೆ ಚಿಕಿತ್ಸೆ

ಪ್ರಧಾನ ಮಂತ್ರಿ ಜನಾರೋಗ್ಯ–ಆಯುಷ್ಮಾನ್ ಭಾರತ ಯೋಜನೆಯ ಮೊದಲ ವರ್ಷವೇ ದೇಶದಾದ್ಯಂತ 90 ಸಾವಿರ ಮಂದಿ ಕ್ಯಾನ್ಸರ್ ಚಿಕಿತ್ಸೆ ಪಡೆದಿರುವ ಸಂಗತಿ ಬೆಳಕಿಗೆ ಬಂದಿದೆ. ಈ ಪೈಕಿ ತಮಿಳುನಾಡಿನಲ್ಲೆ ಅಧಿಕ ಮಂದಿಗೆ ಚಿಕಿತ್ಸೆ ಲಭ್ಯವಾಗಿದೆ.

ಕ್ಯಾನ್ಸರ್ ಎಂಬುದು ದುಬಾರಿ ವೆಚ್ಚದ ಚಿಕಿತ್ಸೆ. ಕ್ಯಾನ್ಸರ್ ಬಂದರೆ ಖರ್ಚಿನ ಕಾರಣಕ್ಕೆ ರೋಗಿಗಳು ಬಂಧುಗಳು ಪರಿತಪಿಸುವಂತಾಗುತ್ತದೆ. ಅಂಥದ್ದರಲ್ಲಿ ಕೇಂದ್ರದ ಈ ಯೋಜನೆ ಬಡವರಿಗೆ ಹೆಚ್ಚಿನ ರೀತಿಯಲ್ಲಿ

ನೆರವಾಗಿರುವುದು ಗಮನಾರ್ಹವಾಗಿದೆ. ದೇಶದ 1.8 ಲಕ್ಷ ಆಸ್ಪತ್ರೆಗಳಲ್ಲಿ 90 ಸಾವಿರಕ್ಕೂ ಹೆಚ್ಚು ಜನ ಈ ಯೋಜನೆಯಡಿ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಆಧಾರ–ಕನ್ನಡ ಪ್ರಭ 07.10.2019

7. ಭಾರತಕ್ಕೆ ರಫೇಲ್

ಬೇಸಿಗೆಯಲ್ಲಿ ನಡೆದ ಮಹಾಚುನಾವಣೆ ಸಂದರ್ಭದಲ್ಲಿ ವಿವಾದದ ಹುಡಿ ಎಬ್ಬಿಸಿದ್ದ ರಫೇಲ್ ಯುದ್ಧ ವಿಮಾನ ಭಾರತಕ್ಕೆ ಹಸ್ತಾಂತರಗೊಂಡಿದೆ. ಫ್ರಾನ್ಸ್‌ನ ಡಸಾಲ್ಟ್ ಏವಿಯೇಷನ್ ಕಂಪನಿಯು ಒಟ್ಟು 36 ಯುದ್ಧ ವಿಮಾನಗಳನ್ನು ನಿರ್ಮಿಸಿ, ಭಾರತಕ್ಕೆ ಹಸ್ತಾಂತರಿಸಬೇಕಿದ್ದು, ಈ ಪೈಕಿ ಮೊದಲ ಯುದ್ಧ ವಿಮಾನವನ್ನು ವಿಜಯದಶಮಿ ದಿನದಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಫ್ರಾನ್ಸ್‌ನಲ್ಲಿ ಸ್ವೀಕರಿಸಿದರು.

ಪ್ಯಾರಿಸ್‌ನಿಂದ 590 ಕಿ.ಮೀ. ದೂರದಲ್ಲಿರುವ ಮೆರಿಗ್ನ್ಯಾಕ್ ಎಂಬಲ್ಲಿನ ಡಸಾಲ್ಟ್ ಹಸ್ತಾಂತರ ಸಮಾರಂಭದಲ್ಲಿ ಫ್ರ್ಯಾನ್ಸ್ ರಕ್ಷಣಾ ಸಚಿವ ಫ್ಲಾರೆನ್ಸ್ ಪಾರ್ಲೆ ಅವರಿಂದ ರಫೇಲ್ ಯುದ್ಧ ವಿಮಾನವನ್ನು ಸ್ವೀಕರಿಸಿದ ಬಳಿಕ ರಾಜನಾಥ್ ಅವರು ವಿಜಯದಶಮಿ ಪ್ರಯುಕ್ತ ರಫೇಲ್ ಮೇಲೆ "ಓಂಕಾರ" ಬರೆದು ಹೂಮಾಲೆ ಹಾಕಿ, ತೆಂಗಿನಕಾಯಿ ನಿವಾಳಿಸಿ ಒಡೆದು ಸಾಂಪ್ರದಾಯಿಕ ಶಸ್ತ್ರಪೂಜೆ ಮಾಡಿದರು. ವಿಮಾನದ ಚಕ್ರಕ್ಕೆ ನಿಂಬೆಹಣ್ಣು ಇಡಲಾಗಿದ್ದು ವಿಶೇಷ.

ಬಳಿಕ 2 ಸೀಟಿನ ಈ ವಿಮಾನದಲ್ಲಿ ರಾಜನಾಥ್ ಅವರು ಕೆಲ ಹೊತ್ತು ಸಾಂಕೇತಿಕವಾಗಿ ಹಾರಾಟ ನಡೆಸಿದರು. ಈ ಸಂದರ್ಭದಲ್ಲಿ ಹಿಂದಿಯಲ್ಲೇ ಭಾಷಣ ಮಾಡಿದ ರಾಜನಾಥ್, ನಮ್ಮ ವಾಯುಪಡೆ ವಿಶ್ವದಲ್ಲೇ ನಾಲ್ಕನೇ ಬೃಹತ್ ವಾಯುಪಡೆಯಾಗಿದೆ. ಈಗ ರೆಫೇಲ್ ಆಗಮನವು ನಮ್ಮನ್ನು ಇನ್ನಷ್ಟು ಶಕ್ತಿಶಾಲಿಯಾಗಿಸಲಿದೆ. ನಮ್ಮ ಭಾಗದಲ್ಲಿ ಶಾಂತಿ ಹಾಗೂ ಭದ್ರತೆ ಕಾಪಾಡಲು ಇದು ನೆರವಾಗಲಿದೆ ಎಂದರು.

ಆಧಾರ–ಕನ್ನಡ ಪ್ರಭ 09.10.2019

8. ಇಐಪಿಓ ಸ್ಥಗಿತಗೊಳಿಸಿದ ಅಂಚೆ ಇಲಾಖೆ

ಮಾಹಿತಿ ಹಕ್ಕು ಕಾಯ್ದೆ ಪ್ರಕಾರ ಸರ್ಕಾರದ ದಾಖಲೆ ಹಾಗೂ ಮಾಹಿತಿ ಪಡೆಯಲು ಶುಲ್ಕ ಭರಿಸುವ ಸಲುವಾಗಿ ರಾಜ್ಯದಲ್ಲಿ ಜಾರಿ ಮಾಡಿದ್ದ ಇ- ಭಾರತೀಯ ಪೋಸ್ಟಲ್ ಆರ್ಡರ್ (ಇಐಪಿಓ) ಸೇವೆಯನ್ನು ಭಾರತೀಯ ಅಂಚೆ ಇಲಾಖೆ ಸ್ಥಗಿತಗೊಳಿಸಿದೆ. ಕರ್ನಾಟಕ, ಬಿಹಾರ, ದೆಹಲಿಯಲ್ಲಿ 10, 20, 50 ಹಾಗೂ 100 ರೂ. ಮೊತ್ತದ ಇಐಪಿಓ ಪ್ರಾಯೋಗಿಕ ಸೇವೆಗಳನ್ನು ಆಕ್ಟೋಬರ್ 2019 ರಿಂದ ಸ್ಥಗಿತಗೊಳಿಸಲಾಗಿದೆ ಎಂದು ಅಂಚೆ ಇಲಾಖೆಯ ಪಿಓ ವಿಭಾಗದ ಸಹಾಯಕ ಪ್ರಧಾನ ನಿರ್ದೇಶಕ ಡಾ: ಪ್ರವೀಣ್ ಕುಮಾರ್ ಸಾರಸ್ವತ್ ತಿಳಿಸಿದ್ದಾರೆ. ಆರ್‌ಟಿಐ ಅರ್ಜಿ ಸಲ್ಲಿಕೆಗೆ ಅಂಚೆ ಇಲಾಖೆಯಲ್ಲಿ ಮಾರಾಟ ಮಾಡಲಾಗುವ ಪೋಸ್ಟಲ್ ಆರ್ಡರ್‌ಗೆ ಪೂರಕವಾಗಿ 2013ರಿಂದ ಕೇಂದ್ರ ಸರ್ಕಾರದ ಸಚಿವಾಲಯಗಳಿಗೆ ಇಐಪಿಓ ಸೇವೆ ಆರಂಭಿಸಲಾಗಿತ್ತು. ಇತ್ತೀಚೆಗೆ ಪ್ರಾಯೋಗಿಕವಾಗಿ ಕರ್ನಾಟಕ, ಬಿಹಾರ ಹಾಗೂ ದೆಹಲಿ ರಾಜ್ಯ ಸರ್ಕಾರದ ಇಲಾಖೆಗಳಿಗೂ ವಿಸ್ತರಿಸಲಾಗಿತ್ತು. ರಾಜ್ಯಗಳ ಸೇವೆ ಮಾತ್ರ ಸ್ಥಗಿತವಾಗಲಿದ್ದು, ಕೇಂದ್ರದ ಇಲಾಖೆಗಳಿಗೆ ಸೇವೆ ಮುಂದುವರಿಯಲಿದೆ.

ಆಧಾರ–ವಿಜಯವಾಣಿ 12.10.2019

9. ಆರ್‌ಟಿಐ ಬಳಕೆ ಇಳಿಕೆ ಸರ್ಕಾರದ ಉದ್ದೇಶ

ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿಯಲ್ಲಿ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗುವುದು. ಸರ್ಕಾರದ ಯಶಸ್ಸನ್ನು ಬಿಂಬಿಸುವುದಿಲ್ಲ ಆರ್‌ಟಿಐ ಅರ್ಜಿಗಳ ಸಂಖ್ಯೆ ಕಡಿಮೆ ಇದೆ ಎಂದರೆ ಸರ್ಕಾರದ ಕಾರ್ಯವೈಖರಿ ತೃಪ್ತಿಕರವಾಗಿದೆ ಎಂದರ್ಥ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಕೇಂದ್ರ ಮಾಹಿತಿ ಆಯೋಗ (ಸಿಐಸಿ) ರಚನೆಯಾಗಿ 14 ವರ್ಷ. ಈ ಸಲುವಾಗಿ ಆಯೋಜಿಸಿದ್ದ ಸಮಾವೇಶದಲ್ಲಿ ಮಾಡನಾಡಿದ ಅವರು ಆರ್‌ಟಿಐ ಕಾನೂನು ರೂಪುಗೊಂಡ ಉದ್ದೇಶ. ಸಂವಿಧಾನದ ಅನುಸಾರವೇ ಆಡಳಿತ ನಡೆಯುತ್ತದೆ ಎಂದು ಜನರಿಗೆ ತಿಳಿಸುವಂತೆ ಮಾಡುವುದಾಗಿತ್ತು. ಆಡಳಿತ ವ್ಯವಸ್ಥೆ ಕುರಿತು ಜನರಲ್ಲಿ ನಂಬಿಕೆ ಮೂಡಿಸುವಲ್ಲಿ ಈ ಕಾನೂನು ಸಾಫಲ್ಯ ಕಂಡಿದೆ ಎಂದು ಹೇಳಿದ್ದಾರೆ.

ಸರ್ಕಾರದ ಆಡಳಿತ ವ್ಯವಸ್ಥೆ ಹಾಗೂ ಎಲ್ಲಾ ಯೋಜನೆಗಳ ಕುರಿತ ಮಾಹಿತಿ ಸಾರ್ವಜನಿಕ ವಲಯದಲ್ಲಿ ಲಭ್ಯವಾಗುವಂತೆ ಕ್ರಮ ಕೈಗೊಳ್ಳಲಾಗಿದೆ ಹಾಗಾಗಿ ಆರ್‌ಟಿಐ ಅಡಿಯಲ್ಲಿ ಅರ್ಜಿ ಸಲ್ಲಿಸದೆ ಜನರು ಮಾಹಿತಿಗಳನ್ನು ಪಡೆಯಬಹುದಾಗಿದೆ ಎಂದು ಶಾ ತಿಳಿಸಿದ್ದಾರೆ.

ಆಧಾರ–ಪ್ರಜಾವಾಣಿ 13.10.2019

10. ಅಣ್ಣಾಮಲೈ ರಾಜೀನಾಮೆ ಅಂಗೀಕರಿಸಿದ ಕೇಂದ್ರ ಸರ್ಕಾರ

ಭಾರತೀಯ ಪೊಲೀಸ್ ಸೇವೆಗೆ ಕೆ. ಅಣ್ಣಾಮಲೈ ನೀಡಿದ್ದ ರಾಜೀನಾಮೆಯನ್ನು ಕೇಂದ್ರ ಸರ್ಕಾರ ಅಂಗೀಕರಿಸಿದೆ.

ತಮಿಳುನಾಡು ಮೂಲದ ಕೆ. ಅಣ್ಣಾಮಲೈ 2011 ಬ್ಯಾಚ್‌ನ ಕರ್ನಾಟಕ ಐಪಿಎಸ್ ಅಧಿಕಾರಿಯಾಗಿದ್ದರು. ಉಡುಪಿ ಎಸ್ಪಿ ಆಗಿ ಮೊದಲು ಕರ್ತವ್ಯ ಆರಂಭಿಸಿದ ಬಳಿಕ ಉಡುಪಿ, ಚಿಕ್ಕಮಗಳೂರು, ಪೊಲೀಸ್ ವರಿಷ್ಠಾಧಿಕಾರಿಯಾಗಿ ಸೇವೆ ಸಲ್ಲಿಸಿ, ಬೆಂಗಳೂರು ದಕ್ಷಿಣ ವಿಭಾಗದ ಡಿಸಿಪಿ ಆಗಿದ್ದಾಗಲೇ ತಮ್ಮ ಸೇವೆಗೆ ರಾಜೀನಾಮೆ ನೀಡಿದ್ದರು. ಅವರ ರಾಜೀನಾಮೆಯನ್ನು ಸೆಪ್ಟೆಂಬರ್ 15ರಿಂದ ಅನ್ವಯವಾಗುವಂತೆ ಕೇಂದ್ರ ಸರ್ಕಾರ ಅಂಗೀಕರಿಸಿ ಆದೇಶ ಹೊರಡಿಸಿದೆ.

ಆಧಾರ–ಉದಯವಾಣಿ 17.10.2019

11. ದರೋಜಿ ಕರಡಿಧಾಮ ಪರಿಸರ ಸೂಕ್ಷ್ಮ ವಲಯ

ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯಿಂದ ಅಧಿಸೂಚನೆ

ಹೊಸಪೇಟೆ ತಾಲ್ಲೂಕಿನ ದರೋಜಿ ಕರಡಿಧಾಮ 1 ಕಿ.ಮೀ.ನಿಂದ 4.7 ಕಿ.ಮೀ.ವ್ಯಾಪ್ತಿಯ ಪ್ರದೇಶವನ್ನು ವಿಶೇಷ ಪರಿಸರ ಸೂಕ್ಷ್ಮ ವಲಯವನ್ನಾಗಿ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆ ಘೋಷಣೆ ಮಾಡಿ ಅಧಿಸೂಚನೆ ಹೊರಡಿಸಿದೆ.

ಕರಡಿಧಾಮ ಘೋಷಣೆಯಾಗಿ ಅಕ್ಟೋಬರ್ 17ಕ್ಕೆ 25 ವರ್ಷ ಆಗುತ್ತಿರುವ ಸಂದರ್ಭದಲ್ಲಿ ಈ ಅಧಿಸೂಚನೆ ಹೊರಬಿದ್ದಿರುವುದು ವನ್ಯಜೀವಿ ಹಾಗೂ ಪರಿಸರ ಪ್ರೇಮಿಗಳಿಗೆ ಸಂತಸ ತಂದಿದೆ. ಕರಡಿಧಾಮದ ಸುತ್ತಮುತ್ತಲಿನ ಒಂದು ಕಿ.ಮೀ ವ್ಯಾಪ್ತಿಯ ಪ್ರದೇಶದೊಳಗೆ ಕಲ್ಲು ಗಣಿಗಾರಿಕೆ, ಹೋಟೆಲ್ ಹಾಗೂ ರೆಸಾರ್ಟ್ ಸೇರಿದಂತೆ ಇತರ ಪರಿಸರಕ್ಕೆ ಹಾನಿಯುಂಟು ಮಾಡುವ ಚಟುವಟಿಕೆಗೆ ನಿರ್ಬಂಧ ಹೇರಲಾಗಿದೆ. ಪರಿಸರ ಸ್ನೇಹಿ ಉದ್ಯಮ ಚಟುವಟಿಕೆಗೆ ಅವಕಾಶ ನೀಡಲು ಯೋಜನೆ ರೂಪಿಸಿದ್ದು, ಪರಿಸರ, ಅರಣ್ಯ ಮತ್ತು ವನ್ಯಜೀವಿ, ಕೃಷಿ, ಆದಾಯ, ನಗರಾಭಿವೃದ್ಧಿ, ಪ್ರವಾಸೋದ್ಯಮ, ಗ್ರಾಮೀಣಾಭಿವೃದ್ಧಿ, ನೀರಾವರಿ ಮತ್ತು ಪ್ರವಾಹ ನಿಯಂತ್ರಣ ಪುರಸಭೆ ಹಾಗೂ ಪಂಚಾಯತ್ ರಾಜ್ ಇಲಾಖೆಗಳೊಂದಿಗೆ ಸಮಾಲೋಚಿಸಿ ಎರಡು ವರ್ಷದ ಅವಧಿಯಲ್ಲಿ ಮಾಸ್ಟರ್ ಪ್ಲಾನ್ ಸಿದ್ಧಪಡಿಸಬೇಕು ಎಂದು ಸೂಚಿಸಿದೆ.

ಆಧಾರ–ಉದಯವಾಣಿ 17.10.2019

12. ನಾವೀನ್ಯತೆ ಸೂಚ್ಯಂಕ: ರಾಜ್ಯ ನಂ.1

ಬಂಡವಾಳ ಹೂಡಿಕೆಯಲ್ಲೂ ಕರ್ನಾಟಕ ನಂ.1 ; ನೀತಿ ಆಯೋಗ ವರದಿ ಬಿಡುಗಡೆ

ಜಾಗತಿಕ ನಾವೀನ್ಯತಾ ಸೂಚ್ಯಂಕದ ಮಾದರಿಯಲ್ಲೇ ಭಾರತದಲ್ಲೂ ರಾಜ್ಯಗಳಲ್ಲಿನ ನಾವೀನ್ಯತೆಯನ್ನು ಪಟ್ಟಿ ಮಾಡುವ ನಿಟ್ಟಿನಲ್ಲಿ ಇದೇ ಮೊದಲ ಬಾರಿಗೆ ನೀತಿ ಆಯೋಗವು ರಾಜ್ಯಗಳ ನಾವೀನ್ಯತಾ ಸೂಚ್ಯಂಕವೊಂದನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ಕರ್ನಾಟಕ ಮೊದಲ ಸ್ಥಾನ ಪಡೆದುಕೊಂಡಿದೆ.

ಭಾರತದ ವಿವಿಧ ರಾಜ್ಯಗಳಲ್ಲಿನ ನಾವೀನ್ಯತಾ ಪರಿಸರಗಳ ಅವಲೋಕನದ ಜೊತೆಗೆ ಇಡೀ ವಲಯದಲ್ಲಿ ಹೊಸತನಕ್ಕೆ ಪ್ರೋತ್ಸಾಹ ನೀಡುವ ಉದ್ದೇಶವನ್ನು ಹೊಂದಿರುವ ಸೂಚ್ಯಂಕವನ್ನು ನೀತಿ ಆಯೋಗದ ಉಪಾಧ್ಯಕ್ಷ ರಾಜೀವ್ ಕುಮಾರ್ ಮತ್ತು ಸಿಇಒ ಅಮಿತಾಭ್ ಕಾಂತ್ ದೆಹಲಿಯಲ್ಲಿ ಬಿಡುಗಡೆ ಮಾಡಿದರು.

ರಾಜ್ಯಗಳಲ್ಲಿ ಹೊಸತನವನ್ನು ತರುವ ಸಾಮರ್ಥ್ಯವನ್ನು ಐದು ಮಾನದಂಡಗಳನ್ನು ಆಧರಿಸಿ ಅಳೆಯಲಾಗಿದೆ. ರಾಜ್ಯದಲ್ಲಿನ ಮಾನವ ಬಂಡವಾಳ ಹೂಡಿಕೆ, ತಿಳುವಳಿಕೆ ಉಳ್ಳ ಕಾರ್ಮಿಕರ ಲಭ್ಯತೆ, ವ್ಯವಹಾರಿಕ ವಾತಾವರಣ, ಸುರಕ್ಷತೆ ಮತ್ತು ಕಾನೂನು ಪರಿಸರವನ್ನು ಆಧರಿಸಿ ನಾವೀನ್ಯತೆ ಸಾಮರ್ಥ್ಯ ಅಳೆಯಲಾಗಿದೆ. ಜ್ಞಾನ ಉತ್ಪಾದನೆ ಮತ್ತು ಜ್ಞಾನ ಪ್ರಸರಣವನ್ನು ಸಾಧನೆಯ ಮಾನದಂಡವನ್ನಾಗಿ ಗುರುತಿಸಲಾಗಿದೆ.

ಆಧಾರ–ಕನ್ನಡ ಪ್ರಭ 18.10.2019

13. ಸಿಯಾಚಿನ್ ಈಗ ಪ್ರವಾಸಿಗರಿಗೆ ಮುಕ್ತ

ವಿಶ್ವದ ಅತಿ ಎತ್ತರದ ಯುದ್ಧಭೂಮಿಯಾದ ಸಿಯಾಚಿನ್ ನೀರ್ಗಲ್ಲು ಪ್ರದೇಶ ಪ್ರವಾಸಿಗರಿಗೆ ಮುಕ್ತವಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಘೋಷಿಸಿದ್ದಾರೆ. ಸೇನಾ ಮುಖ್ಯಸ್ಥ ಬಿಪಿನ್ ರಾವತ್ ಅವರೊಂದಿಗೆ ಲಡಖ್‌ಗೆ ಭೇಟಿ ನೀಡಿದ್ದ ಸಿಂಗ್ ಇಲ್ಲಿನ ದುರ್ ಬುಕ್ ಮತ್ತು ದೌಲತ್ ಬೇಗ್ ಒಲ್ಡಿ (ಡಿಬಿಒ) ನಡುವೆ ಶ್ಯೋಕ್ ನದಿಗೆ ನಿರ್ಮಿಸಲಾಗಿರುವ ಸೇತುವೆ ಉದ್ಘಾಟಿಸಿದರು.

ಲಡಖ್ ಪ್ರವಾಸೋದ್ಯಮದಲ್ಲಿ ಅಪಾರ ಸಾಮರ್ಥ್ಯ ಹೊಂದಿದೆ. ಲಡಾಖ್‌ನಲ್ಲಿ ಉತ್ತಮ ಸಂಪರ್ಕ ಖಂಡಿತವಾಗಿಯೂ ಪ್ರವಾಸಿಗರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲಿದೆ. ಸಿಯಾಚಿನ್ ಪ್ರದೇಶವು ಈಗ ಪ್ರವಾಸಿಗರಿಗೆ ಮತ್ತು ಪ್ರವಾಸೋದ್ಯಮಕ್ಕೆ ಮುಕ್ತವಾಗಿದೆ. ಸಿಯಾಚಿನ್ ಬೇಸ್ ಕ್ಯಾಂಪಿನಿಂದ ಕುಮಾರ್ ಪೋಸ್ಟ್‌ವರೆಗೆ ಇಡೀ ಪ್ರದೇಶವನ್ನು ಪ್ರವಾಸೋದ್ಯಮ ಉದ್ದೇಶಗಳಿಗಾಗಿ ತೆರೆಯಲಾಗಿದೆ ಎಂದು ಸಿಂಗ್ ಟ್ವೀಟ್ ಮೂಲಕ ತಿಳಿಸಿದರು.

ಆಧಾರ–ವಿಜಯವಾಣಿ 22.10.2019

14. ತೈಲೇತರ ಸಂಸ್ಥೆಯಲ್ಲೂ ಪೆಟ್ರೋಲ್ ಮಾರಾಟ

ಇಂಧನ ಚಿಲ್ಲರೆ ಮಾರಾಟದ ನಿಯಮವನ್ನು ಸಡಿಲಗೊಳಿಸಿರುವ ಕೇಂದ್ರ ಸರ್ಕಾರ ತೈಲೇತರ ಕಂಪನಿಗಳಿಗೂ ಪೆಟ್ರೋಲ್- ಡೀಸೆಲ್ ಮಾರಾಟ ಮಾಡುವ ಅವಕಾಶ ಕಲ್ಪಿಸಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಕೇಂದ್ರ ಸಂಪುಟ ಸಭೆಯಲ್ಲಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ.

ಪ್ರಸ್ತುತ ಸರ್ಕಾರಿ ಸ್ವಾಮ್ಯದ ಮೂರು ತೈಲ ಕಂಪನಿಗಳು ಮತ್ತು ಖಾಸಗಿ ವಲಯದ ಕೆಲವು ತೈಲ ಉದ್ಯಮಗಳಷ್ಟೇ ಬಂಕ್‌ಗಳನ್ನು ತೆರೆದು ಪೆಟ್ರೋಲ್–ಡೀಸೆಲ್ ಮಾರಾಟ ಮಾಡುತ್ತಿವೆ. ಸರ್ಕಾರದ ಈ ನಿರ್ಧಾರದಿಂದ ಖಾಸಗಿ ವಲಯದ ತೈಲೇತರ ಕಂಪನಿಗಳು ಮತ್ತು ವಿದೇಶಿ ಸಂಸ್ಥೆಗಳು ತೈಲದ ಚಿಲ್ಲರೆ ವ್ಯಾಪಾರದಲ್ಲಿ ತೊಡಗಬಹುದಾಗಿದೆ.

ತೈಲದ ಚಿಲ್ಲರೆ ವ್ಯಾಪಾರದ ಪರವಾನಿಗಿ ಪಡೆಯಲು ಕಂಪನಿಗಳು ಹೈಡ್ರೋಕಾರ್ಬನ್ ಪರಿಶೋಧನೆ, ಉತ್ಪಾದನೆ, ಸಂಸ್ಕರಣೆ, ಕೊಳವೆ ಮೂಲಕ ಸಾಗಣೆ ಅಥವಾ ಸಾಂದ್ರೀಕೃತ ಇಲ್ಲವೆ ದ್ರವೀಕೃತ ನೈಸರ್ಗಿಕ ಅನಿಲದ ಉದ್ಯಮದಲ್ಲಿ ರೂ. 2 ಸಾವಿರ ಕೋಟಿ ಹೂಡಿಕೆ ಮಾಡಿರಬೇಕು ಎಂಬ ಕಟ್ಟಳೆ ಇದೆ. ಇದನ್ನು ಪರಿಷ್ಕರಿಸಿರುವ ಸರ್ಕಾರ ರೂ. 250 ಕೋಟಿ ವ್ಯವಹಾರ ನಡೆಸುವ ಯಾವುದೇ ಕಂಪನಿ ಪೆಟ್ರೋಲ್ – ಡೀಸೆಲ್ ಚಿಲ್ಲರೆ ಮಾರಾಟ ಮಾಡಬಹುದು ಎಂದು ತಿಳಿಸಿದೆ. ಪೆಟ್ರೋಲ್–ಡೀಸೆಲ್ ಚಿಲ್ಲರೆ ಮಾರಾಟಕ್ಕೆ ಕೆಲವು ನಿಬಂಧನೆಗಳನ್ನು ಸರ್ಕಾರ ವಿಧಿಸಿದೆ. ತೈಲ ಮಾರಾಟ ಮಾಡಬಯಸುವ ಕಂಪನಿ ಸಿಎನ್‌ಜಿ/ಎಲ್‌ಎನ್‌ಜಿ/ಜೈವಿಕ ಅನಿಲ/ಎಲೆಕ್ಟ್ರಿಕಲ್ ವಾಹನ ಚಾರ್ಜಿಂಗ್ ಸ್ಟೇಷನ್ ಅನ್ನು ಕನಿಷ್ಠ ಮೂರು ವರ್ಷಗಳಿಂದ ನಡೆಸುತ್ತಿರಬೇಕು ಎಂದು ವಾರ್ತಾ ಮತ್ತು ಪ್ರಚಾರ ಸಚಿವ ಜಾವಡೇಕರ್ ತಿಳಿಸಿದ್ದಾರೆ.

ಆಧಾರ–ವಿಜಯವಾಣಿ 24.10.2019

15. ಠಾಣೆಯಲ್ಲಿ ಸರ್ದಾರ್ ಪಟೇಲ್ ಫೋಟೋ

ದೇಶದ ಏಕತೆಗೆ ಮತ್ತು ಸಮಗ್ರತೆಗಾಗಿ ಶ್ರಮಿಸಿದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಭಾವಚಿತ್ರ ಇನ್ನು ಮುಂದೆ ರಾಜ್ಯದ ಎಲ್ಲ ಪೊಲೀಸ್ ಠಾಣೆಗಳಲ್ಲಿ ಹಾಕಬೇಕೆಂಬ ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದೆ.

ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ 134ನೇ ಜನ್ಮ ದಿನಾಚರಣೆ ಅಂಗವಾಗಿ ಅಗಸ್ಟ್ 31ರಂದು 'ರಾಷ್ಟ್ರೀಯ ಏಕತಾ ದಿನ' ವನ್ನು ಆಚರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಕೇಂದ್ರ ಸರ್ಕಾರ ಮೊದಲ ಬಾರಿಗೆ ಸರ್ದಾರ್ ವಲ್ಲಭಭಾಯ್ ಪಟೇಲ್ ರಾಷ್ಟ್ರೀಯ ಪ್ರಶಸ್ತಿ ನೀಡುವುದಾಗಿ ಘೋಷಿಸಿದೆ. ಸೆಪ್ಟೆಂಬರ್.27ರಂದು ಕೇಂದ್ರ ಗೃಹ ಇಲಾಖೆ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದು, ಏಕತೆಗಾಗಿ ಶ್ರಮಿಸಿರುವವರ ಹೆಸರನ್ನು ಶಿಫಾರಸು ಮಾಡುವಂತೆ ಕೇಳಿತ್ತು. ಆಯ್ಕೆಯಾದ ಗಣ್ಯರಿಗೆ ಗುಜರಾತ್‌ನ ಕೆವಾಡಿಯಾದಲ್ಲಿ ನಡೆಯಲಿರುವ ರಾಷ್ಟ್ರೀಯ ಏಕತಾ ದಿವಸದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

ಆಧಾರ – ವಿಜಯವಾಣಿ 24.10.2019

16. ಚೆನಾನಿ – ನಾಶ್ರಿ ಸುರಂಗ ಮಾರ್ಗಕ್ಕೆ ಶ್ಯಾಮ್‌ಪ್ರಸಾದ್ ಮುಖರ್ಜಿ ಹೆಸರು

ಜಮ್ಮು – ಶ್ರೀನಗರ ನಡುವಿನ ರಸ್ತೆ ಮಾರ್ಗದ ಅಂತರವನ್ನು 30ಕಿ.ಮೀ.ಗೆ ಇಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಚೆನಾನಿ– ನಾಶ್ರಿ ಸುರಂಗ ಮಾರ್ಗಕ್ಕೆ ಕೇಂದ್ರ ಸರ್ಕಾರ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ ಸುರಂಗ ಮಾರ್ಗ ಎಂದು ನಾಮಕರಣ ಮಾಡಿದೆ. 9.2 ಕಿ.ಮೀ ಉದ್ದದ ಈ ಸುರಂಗ ಮಾರ್ಗವು ದೇಶದಲ್ಲಿಯೇ ಅತಿದೊಡ್ಡ ಸುರಂಗ ಮಾರ್ಗ ಎಂಬ ಹಿರಿಮೆಗೆ ಪಾತ್ರವಾಗಿದೆ.

ಜಮ್ಮು–ಕಾಶ್ಮೀರವನ್ನು ಭಾರತದ ಅವಿಭಾಜ್ಯ ಅಂಗವಾಗಿಸಲು ಜನಸಂಘದ ಸ್ಥಾಪಕ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ ಸಾಕಷ್ಟು ಶ್ರಮಿಸಿದ್ದರು. 'ಒಂದು ರಾಷ್ಟ್ರ ಒಂದು ರಾಷ್ಟ್ರಧ್ವಜ' ವಿಚಾರದಲ್ಲಿ ಮುಖರ್ಜಿ ಅವರ ಹೋರಾಟವು ರಾಷ್ಟ್ರೀಯ ಭಾವೈಕ್ಯತೆಯನ್ನು ಉದ್ದೀಪಿಸುವಲ್ಲಿ ಮಹತ್ವದ ಪಾತ್ರ ವಹಿಸಿತ್ತು. ಅವರ ಸ್ಮರಣಾರ್ಥ ಈ ಚೆನಾನಿ– ನಾಶ್ರಿ ಸುರಂಗಕ್ಕೆ ಅವರ ಹೆಸರಿಡಲಾಗಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದರು.

ಆಧಾರ – ವಿಜಯಕರ್ನಾಟಕ 25.10.2019

17. ಮಾಹಿತಿ ಆಯುಕ್ತರ ಸೇವಾವಧಿ 5ರ ಬದಲು 3 ವರ್ಷಕ್ಕೆ ಕಡಿತ

ಕೇಂದ್ರ ಸರ್ಕಾರವು ಮಾಹಿತಿ ಹಕ್ಕು ನಿಯಮಗಳಿಗೆ ಮಹತ್ವದ ಬದಲಾವಣೆಗಳನ್ನು ತಂದು ಅಧಿಸೂಚನೆ ಹೊರಡಿಸಿದೆ. ಈ ಪ್ರಕಾರ, ಕೇಂದ್ರೀಯ ಮಾಹಿತಿ ಆಯೋಗ(ಸಿಐಸಿ), ಆಯುಕ್ತರ ಅವಧಿ ದೇಶದಾದ್ಯಂತ ಅನ್ವಯವಾಗುವಂತೆ 3 ವರ್ಷಕ್ಕೆ ಇಳಿಯಲಿದೆ. ಇನ್ನು ಅವರ ವೇತನವನ್ನು ಸಂಸತ್ತಿನ ಬದಲು ಸರ್ಕಾರವೇ ನಿರ್ಧರಿಸಲಿದೆ.

ಮಾಹಿತಿ ಹಕ್ಕು ಕಾಯ್ದೆ–2005ಕ್ಕೆ ತಿದ್ದುಪಡಿ ತಂದಿದ್ದ ಕೇಂದ್ರ ಸರ್ಕಾರ, 'ಮಾಹಿತಿ ಹಕ್ಕು ನಿಯಮಗಳು –2019' ನ್ನು ಜಾರಿಗೆ ತರಲು ನಿರ್ಧರಿಸಿತ್ತು. ಕೇಂದ್ರ ಚುನಾವಣಾ ಆಯುಕ್ತರು ಹಾಗೂ ರಾಜ್ಯ ಚುನಾವಣಾ ಆಯುಕ್ತರ ರೀತಿಯಲ್ಲೇ ಮುಖ್ಯ ಮಾಹಿತಿ ಆಯುಕ್ತರು ಹಾಗೂ ಇತರ ರಾಜ್ಯ ಮಾಹಿತಿ ಆಯುಕ್ತರು ಅನುಭವಿಸುತ್ತಿದ್ದ ಸಮಾನ ಅಧಿಕಾರಕ್ಕೆ ತಿದ್ದುಪಡಿಯಲ್ಲಿ ತೆರೆ ಹಾಕಿತ್ತು. ಈಗ ಅಧಿಸೂಚನೆ ಮೂಲಕ ತನ್ನ ನಿರ್ಧಾರವನ್ನು ಸರ್ಕಾರ ಜಾರಿಗೊಳಿಸಿದೆ.

ಹೊಸ ನಿಯಮಗಳು

- **ಮಾಹಿತಿ ಆಯುಕ್ತರ ವೇತನ, ಭತ್ಯೆ ಹಾಗೂ ಸೇವಾ ಷರತ್ತುಗಳನ್ನು ಬದಲಿಸುವ ಅಧಿಕಾರಗಳನ್ನು ಸರ್ಕಾರವೇ ಇಟ್ಟುಕೊಳ್ಳಲಿದೆ.**

- **ಕೇಂದ್ರೀಯ ಮಾಹಿತಿ ಅಯುಕ್ತರ ವೇತನ ಮಾಸಿಕ 2.50ಲಕ್ಷ ರೂ. ಇರಲಿದೆ. ಇತರ ಮಾಹಿತಿ ಆಯುಕ್ತರ ವೇತನ 2.25ಲಕ್ಷ ರೂ. ಇರಲಿದೆ. ವೇತನವನ್ನು ಸರ್ಕಾರವೇ ನಿರ್ಧರಿಸಲಿದೆ. ಈ ಮುನ್ನ ಸುಪ್ರೀಂಕೋರ್ಟ್ ಜಡ್ಜ್‌ಗಳು, ಚುನಾವಣಾ ಆಯುಕ್ತರ ವೇತನದ ರೀತಿಯಲ್ಲಿ ಮಾಹಿತಿ ಹಕ್ಕು ಆಯುಕ್ತರ ವೇತನವನ್ನು ಸಂಸತ್ತು ನಿರ್ಧರಿಸಬೇಕಿತ್ತು.**
- **2005ರ ನಿಯಮದ ಪ್ರಕಾರ ಮಾಹಿತಿ ಆಯುಕ್ತರ ಸೇವಾ ಅವಧಿ 5 ವರ್ಷ ಆಗಿತ್ತು. 5 ವರ್ಷ ತುಂಬುವ ಮೊದಲೇ ಅವರ ವಯಸ್ಸು 65 ಮುಗಿಯುತ್ತಿದ್ದರೆ, ನಿವೃತ್ತಿ ಹೊಂದಬೇಕಿತ್ತು. ಆದರೆ ಈಗ ಅವಧಿಯನ್ನು 3 ವರ್ಷಕ್ಕೆ ಇಳಿಸಲಾಗಿದೆ.**

ಆಧಾರ – ಕನ್ನಡಪ್ರಭ 26.10.2019

18. ಏರ್‌ಪೋರ್ಟ್‌ಗೆ ಮೆಟ್ರೋ: ಕೇಂದ್ರದ ಜೊತೆಗೆ ತೇಜಸ್ವಿ ಸೂರ್ಯ ಸಮಾಲೋಚನೆ

ಬೆಂಗಳೂರು ಮೆಟ್ರೋದ ಫೇಸ್ 2ಎ, 2ಬಿ ಮತ್ತು ಫೇಸ್ 2ರ ರೀಚ್6ರ ಅನುಮೋದನೆಗಾಗಿ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ಕೇಂದ್ರ ನಗರಾಭಿವೃದ್ಧಿ ಸಚಿವ ಹರ್ದೀಪ್ ಸಿಂಗ್‌ಪುರಿ ಅವರನ್ನು ಭೇಟಿಯಾಗಿ ಸಮಾಲೋಚಿಸಿದರು. ಸಚಿವರೊಂದಿಗಿನ ತಮ್ಮ 30 ನಿಮಿಷಗಳ ಭೇಟಿ ವೇಳೆ ಏರ್‌ಪೋರ್ಟ್ ಮಾರ್ಗದಿಂದ ಬೆಂಗಳೂರು ಮತ್ತು ಟೆಕಿಗಳಿಗೆ ಹೇಗೆ ಅನುಕೂಲ ಆಗುತ್ತದೆ ಎಂಬ ಕುರಿತು ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದರು.

ಬೆಂಗಳೂರು ಮೆಟ್ರೋದ ಫೇಸ್ 2ಎ, 2ಬಿ ಮತ್ತು ಫೇಸ್2ರ ರೀಚ್6 ಬೆಂಗಳೂರಿನ ಪ್ರಮುಖ ತಂತ್ರಜ್ಞಾನ ಕೇಂದ್ರಗಳನ್ನು ವಿಮಾನ ನಿಲ್ದಾಣಕ್ಕೆ ಸಂಪರ್ಕಿಸುತ್ತದೆ. ಬೆಂಗಳೂರಿನ ಹೆಚ್ಚಿನ ಸಾಫ್ಟ್‌ವೇರ್ ಉದ್ದಿಮೆಗಳು ಎಲೆಕ್ಟ್ರಾನಿಕ್ ಸಿಟಿ, ಸರ್ಜಾಪುರ, ಬೆಳ್ಳಂದೂರು, ವೈಟ್‌ಫೀಲ್ಡ್ ಮತ್ತು ಹೆಬ್ಬಾಳದಲ್ಲಿದ್ದು, ಈ ಪ್ರದೇಶಗಳಿಗೆ ಮೆಟ್ರೋ ಸಂಪರ್ಕವೇ ಇಲ್ಲ. ಔಟರ್ ರಿಂಗ್‌ರೋಡ್‌ನಲ್ಲಿರುವ ಈ ಪ್ರದೇಶಗಳು ಬೆಂಗಳೂರಿನ ಐಟಿಯ ಶೇ.32ರಷ್ಟು ಆದಾಯದ ಮೂಲವಾಗಿದೆ. ಈ 17 ಕಿ.ಮೀ. ಕಾರಿಡಾರ್‌ನಲ್ಲಿ 5.5 ಲಕ್ಷ ಉದ್ಯೋಗಿಗಳಿದ್ದಾರೆ. ಇಲ್ಲಿ ಸಂಚಾರ ದಟ್ಟಣೆಯ ಸಮಯದಲ್ಲಿ ವಾಹನಗಳ ಚಲನೆಯ ವೇಗ ಗಂಟೆಗೆ ಕೇವಲ 4 ಕಿ.ಮೀ. ಮಾತ್ರ ಇರುತ್ತದೆ ಎಂದು ತೇಜಸ್ವಿ ಸೂರ್ಯ ಸಚಿವರಿಗೆ ಮಾಹಿತಿ ನೀಡಿದರು.

ತೇಜಸ್ವಿ ಸೂರ್ಯ ಅವರ ಬೇಡಿಕೆಗೆ ಸ್ಪಂದಿಸಿರುವ ಹರ್ದೀಪ್ ಸಿಂಗ್ ಪುರಿ, ಯೋಜನೆ ಬಗ್ಗೆ ತಮ್ಮ ಸಚಿವಾಲಯಕ್ಕೆ ಕೆಲ ಮಾಹಿತಿಯನ್ನು ರಾಜ್ಯ ಸರ್ಕಾರ ನೀಡಿದ ತಕ್ಷಣವೇ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಆಧಾರ – ಕನ್ನಡಪ್ರಭ 26.10.2019

19. ಜಮ್ಮು– ಕಾಶ್ಮೀರ, ಲಡಾಖ್ ಕೇಂದ್ರಾಡಳಿತ ಪ್ರದೇಶಗಳಾಗಿ ಅಸ್ತಿತ್ವಕ್ಕೆ

ವಿಶೇಷ ಸ್ಥಾನಮಾನ ರದ್ದಾದ ಸಂದರ್ಭದಲ್ಲಿ ಘೋಷಣೆಯಾಗಿದ್ದ ಜಮ್ಮು – ಕಾಶ್ಮೀರ ಹಾಗೂ ಲಡಾಖ್ ಕೇಂದ್ರಾಡಳಿತ ಪ್ರದೇಶಗಳು ಅಧಿಕೃತವಾಗಿ ಕಾರ್ಯಾರಂಭ ಮಾಡಲಿದೆ. ಇದರಿಂದ ಭಾರತದ ರಾಜ್ಯಗಳ ಸಂಖ್ಯೆ 29ರಿಂದ 28ಕ್ಕೆ ಇಳಿದಿದ್ದು, ಕೇಂದ್ರಾಡಳಿತ ಪ್ರದೇಶಗಳ ಸಂಖ್ಯೆ 7 ರಿಂದ 9ಕ್ಕೇರಲಿದೆ.

ಜಮ್ಮು–ಕಾಶ್ಮೀರ ರಾಜ್ಯವನ್ನು ವಿಭಜಿಸಿ ಜಮ್ಮು–ಕಾಶ್ಮೀರ ಹಾಗೂ ಲಡಾಖ್ ಎಂಬ ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶಗಳನ್ನು ಆಗಸ್ಟ್ 5 ರಂದು ಕೇಂದ್ರ ಸರ್ಕಾರ ಘೋಷಣೆ ಮಾಡಿತ್ತು. ಇದರ ಜಾರಿಯೊಂದಿಗೆ ನಿವೃತ್ತ ಐಎಎಸ್ ಅಧಿಕಾರಿ ಜಿ.ಸಿ. ಮುರ್ಮು ಅವರು ಜಮ್ಮು–ಕಾಶ್ಮೀರದ ಮೊದಲ ಉಪ ರಾಜ್ಯಪಾಲರಾಗಿ ಶ್ರೀನಗರದಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಇನ್ನೊಬ್ಬ ನಿವೃತ್ತ ಅಧಿಕಾರಿ ರಾಧಾಕೃಷ್ಣ ಮಾಥುರ್ ಅವರು ಬೌದ್ಧ ಧರ್ಮೀಯ ಬಾಹುಳ್ಯದ ಲಡಾಖ್‌ನ ಉಪ ರಾಜ್ಯಪಾಲರಾಗಿ ಪದಗ್ರಹಣ ಮಾಡಲಿದ್ದಾರೆ.

ಆಧಾರ–ಕನ್ನಡಪ್ರಭ 31.10.2019

20. ಉಪನಗರ ರೈಲು: ಕೇಂದ್ರ ಅನುಮತಿ

ಬೆಂಗಳೂರಿನ ಸಂಚಾರ ದಟ್ಟಣೆ ತಗ್ಗಿಸಲೆಂದೇ ರೂಪಿಸಿರುವ ಉಪನಗರ ರೈಲು ಯೋಜನೆಗೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ. ರೈಲ್ವೆ ಮಂಡಳಿ ಸಭೆಯಲ್ಲಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದ್ದು, ಬೆಂಗಳೂರು ಹಾಗೂ ಸುತ್ತಮುತ್ತ ಇರುವ ತುಮಕೂರು, ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ ಮತ್ತಿತರ ನಗರಗಳ ಜನತೆಗೆ ಈ ಯೋಜನೆಯಿಂದ ಸಾಕಷ್ಟು ಅನುಕೂಲವಾಗಲಿದೆ.

ರಾಜ್ಯ ಸರ್ಕಾರದ ಸಹಭಾಗಿತ್ವಕ್ಕೆ ಸಂಬಂಧಿಸಿದ ಅಂತಿಮ ಹಂತದ ಮಾತುಕತೆಗಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೊಂದಿಗೆ ಮಂಡಳಿ ಅಧ್ಯಕ್ಷ ವಿನೋದ್ ಕುಮಾರ್ ಯಾದವ್ ಅವರು ಮತ್ತೊಂದು ಸುತ್ತಿನ ಸಭೆ ನಡೆಸಲಿದ್ದಾರೆ. 1983ರಲ್ಲೇ ಯೋಜನಾ ವರದಿ ಸಿದ್ಧಪಡಿಸಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದ ರಾಜ್ಯ ಸರ್ಕಾರ (ಶೇ.20), ಕೇಂದ್ರ ಸರ್ಕಾರ (ಶೇ.20) ಮತ್ತು ಖಾಸಗಿ ಸಹಭಾಗಿತ್ವದ (ಪಿಪಿಪಿ) ಕೆಲವು ಮಾನದಂಡಗಳನ್ನೂ ಕೈಬಿಡುವಂತೆ ಮನವಿ ಮಾಡಿತ್ತು.

ಸಂಸದರಾಗಿದ್ದ ಅನಂತಕುಮಾರ್ ಹಾಗೂ ಕೇಂದ್ರ ಲೋಕಸಭಾ ಕ್ಷೇತ್ರದ ಸಂಸದ ಪಿ.ಸಿ. ಮೋಹನ್ ಈ ಯೋಜನೆ ಆರಂಭಿಸುವಂತೆ ಕೇಂದ್ರದ ಮೇಲೆ ಒತ್ತಡ ಹೇರಿದ್ದರಲ್ಲದೆ, ಯೋಜನೆಯಿಂದ ಸಾರ್ವಜನಿಕರಿಗೆ ದೊರೆಯುವ ಅನುಕೂಲಗಳ ಕುರಿತು ಗಮನ ಸೆಳೆದಿದ್ದರು.

ಆಧಾರ – ಪ್ರಜಾವಾಣಿ 05.11.2019

21. 100 ವಿದ್ಯಾರ್ಥಿ ನಿಲಯ ಆರಂಭಕ್ಕೆ ಕೇಂದ್ರ ಒಪ್ಪಿಗೆ

ರಾಜ್ಯದಲ್ಲಿ ಒಟ್ಟು 100 ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಲು ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ. ಸಮಾಜ ಕಲ್ಯಾಣ, ಲೋಕೋಪಯೋಗಿ ಖಾತೆಗಳನ್ನು ಹೊಂದಿರುವ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರು ನೀಡಿರುವ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿದ್ದು, ತಲಾ ಹತ್ತು ಕೋಟಿ ರೂ. ವೆಚ್ಚದಲ್ಲಿ ಒಟ್ಟು 100 ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಲು ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ವಿದ್ಯಾರ್ಥಿನಿಲಯಗಳ ಕೊರತೆಯಾಗಿದ್ದು, ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳು ಹಾಸ್ಟೆಲ್‌ಗಳಲ್ಲಿ ಪ್ರವೇಶಾವಕಾಶ ಸಿಗದೆ ಪರದಾಡುವಂತಾಗಿದೆ. ಹೀಗಾಗಿ ತಕ್ಷಣವೇ ನೂರು ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ನೆರವು ನೀಡುವಂತೆ ಗೋವಿಂದ ಕಾರಜೋಳ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ನೂರು ಹಾಸ್ಟೆಲ್‌ಗಳು ನಿರ್ಮಾಣವಾದರೆ ಪರಿಶಿಷ್ಠ ಜಾತಿ, ಪಂಗಡದ ವಿದ್ಯಾರ್ಥಿಗಳು ಅನುಭವಿಸುತ್ತಿರುವ ಸಧ್ಯದ ಸಮಸ್ಯೆ ತಹಬದಿಗೆ ಬರಲಿದೆ ಎಂದರು.

ಆಧಾರ–ಸಂಯುಕ್ತಕರ್ನಾಟಕ 08.11.2019

22. ಗಾಂಧಿ ಕುಟುಂಬಕ್ಕೆ ನೀಡಿದ್ದ ಎಸ್‌ಪಿಜಿ ಭದ್ರತೆ ವಾಪಸ್

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಸಂಸದರಾಗಿರುವ ಪುತ್ರ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿಯಾಗಿರುವ ಪುತ್ರಿ ಪ್ರಿಯಾಂಕ ವಾದ್ರಾ ಅವರಿಗೆ ನೀಡಲಾಗಿದ್ದ ವಿಶೇಷ ಭದ್ರತಾ ಪಡೆ (ಎಸ್‌ಪಿಜಿ) ಭದ್ರತೆಯನ್ನು ಹಿಂಪಡೆಯಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಉನ್ನತ ಮಟ್ಟದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊರತುಪಡಿಸಿ ದೇಶದ ಯಾವುದೇ ಗಣ್ಯರು ಎಸ್‌ಪಿಜಿ ಭದ್ರತೆ ಹೊಂದಿಲ್ಲ. ಆಗಸ್ಟ್‌ನಲ್ಲಿ ಸರ್ಕಾರ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರಿಗೆ ನೀಡಿದ್ದ ಎಸ್‌ಪಿಜಿ ಭದ್ರತೆಯನ್ನು ಹಿಂಪಡೆದಿತ್ತು.

ಆಧಾರ–ವಿಜಯಕರ್ನಾಟಕ 09.11.2019

23. ರಾಮಮಂದಿರ ಟ್ರಸ್ಟ್ ರಚನೆ ಪ್ರಕ್ರಿಯೆ ಶುರು

ಅಯೋಧ್ಯೆಯು ರಾಮನದ್ದೇ ಎಂಬ ತೀರ್ಪು ಹೊರಬಿದ್ದ ಬೆನ್ನಲ್ಲೇ ಸುಪ್ರೀಂಕೋರ್ಟ್ ತೀರ್ಪಿನಂತೆ ರಾಮ ಮಂದಿರ ನಿರ್ಮಾಣಕ್ಕೆ ಟ್ರಸ್ಟ್ ರಚನೆ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ ಆರಂಭಿಸಿದೆ. ಯಾವ ರೀತಿಯಲ್ಲಿ

ಟ್ರಸ್ಟ್ ಇರಬೇಕು ಎಂಬ ಬಗ್ಗೆ ತೀರ್ಪಿನ ಪ್ರತಿಯನ್ನು ಹಿರಿಯ ಅಧಿಕಾರಿಗಳ ತಂಡ ಪರಿಶೀಲನೆ ನಡೆಸಲು ಶುರು ಮಾಡಿದೆ. ಅಟಾರ್ನಿ ಜನರಲ್ ಮತ್ತು ಕಾನೂನು ಸಚಿವಾಲಯದ ಅಭಿಪ್ರಾಯ ಪಡೆದುಕೊಳ್ಳಲಾಗುತ್ತಿದೆ.

ಆಧಾರ–ಉದಯವಾಣಿ 12.11.2019

24. ಡಾ: ಸಿಂಗ್ ವಿತ್ತ ಸ್ಥಾಯಿ ಸಮಿತಿ ಸದಸ್ಯ

ರಾಜ್ಯ ಸಭೆಯ ಅಧ್ಯಕ್ಷ ವೆಂಕಯ್ಯ ನಾಯ್ಡು ಅವರು ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರು ಸಂಸದೀಯ ಸ್ಥಾಯಿ ಸಮಿತಿ (ಆರ್ಥಿಕ)ಯ ಸದಸ್ಯರನ್ನಾಗಿ ನೇಮಕ ಮಾಡಿದ್ದಾರೆ.

ಮೂಲಗಳ ಪ್ರಕಾರ ದಿಗ್ವಿಜಯ್ ಸಿಂಗ್ ಆರ್ಥಿಕ ಸ್ಥಾಯಿ ಸಮಿತಿ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡುವ ಮೂಲಕ ಮನಮೋಹನ್ ಸಿಂಗ್‌ಗೆ ಅವಕಾಶ ಮಾಡಿಕೊಟ್ಟಿದ್ದರು. ಮನಮೋಹನ್ ಸಿಂಗ್ ಅವರು ವಿಶ್ವದ ಹೆಸರಾಂತ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರು. ಇವರು 1991 ರಿಂದ 1996ರವರೆಗೆ ವಿತ್ತ ಸಚಿವರಾಗಿದ್ದರು ಹಾಗೂ 2004ರಿಂದ 2014ರವರೆಗೆ ಎರಡು ಅವಧಿಗೆ ಪ್ರಧಾನ ಮಂತ್ರಿಯಾಗಿದ್ದರು.

ಆಧಾರ–ವಿಶ್ವವಾಣಿ 12.11.2019

25. ಕೇಂದ್ರ ಸಂಪುಟಕ್ಕೆ ಶಿವಸೇನೆಯ ಸಚಿವ ಸಾವಂತ್ ರಾಜೀನಾಮೆ

ಮಹಾರಾಷ್ಟ್ರದಲ್ಲಿ ಸರ್ಕಾರ ರಚನೆ ವಿಚಾರದಲ್ಲಿ ಬಿಜೆಪಿ ಜೊತೆಗಿನ ಸಖ್ಯ ಕಡಿದುಕೊಂಡ ಬೆನ್ನಲ್ಲೇ, ಶಿವಸೇನೆಯ ಅರವಿಂದ್ ಸಾವಂತ್ ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಸಾವಂತ್ ಅಧಿಕಾರ ಹಂಚಿಕೆ ಸಂಬಂಧ ಚುನಾವಣಾ ಪೂರ್ವದಲ್ಲಿ ಮಾತುಕೊಟ್ಟಂತೆ ಬಿಜೆಪಿ ನಡೆದುಕೊಂಡಿಲ್ಲ. ಬಿಜೆಪಿ– ಶಿವಸೇನೆ ಮೈತ್ರಿಗೇ ಧಕ್ಕೆ ಬಂದ ಬಳಿಕ ಸಚಿವನಾಗಿ ಮುಂದುವರಿಯುವುದು ಸೂಕ್ತವಲ್ಲ ಎನ್ನುವ ಕಾರಣಕ್ಕಾಗಿ ರಾಜೀನಾಮೆ ಸಲ್ಲಿಸಿದ್ದೇನೆ ಎಂದು ಹೇಳಿದ್ದಾರೆ. ಪ್ರಧಾನಿ ಮೋದಿ ಅವರಿಗೂ ರಾಜೀನಾಮೆ ಪತ್ರ ರವಾನಿಸಿದ್ದೇನೆ ಎಂದರು. ಅರವಿಂದ್ ಸಾವಂತ್ ಅವರು ಕೇಂದ್ರ ಸರ್ಕಾರದಲ್ಲಿ ಭಾರೀ ಕೈಗಾರಿಕಾ ಸಚಿವರಾಗಿದ್ದರು.

ಆಧಾರ–ಕನ್ನಡಪ್ರಭ 12.11.2019

26. ರಾಜ್ಯ ಹೆದ್ದಾರಿ ಅಭಿವೃದ್ಧಿಗೊಳಿಸಿ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೂಲಕ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ–212ಕ್ಕೆ ಪರ್ಯಾಯವಾಗಿ, ರಾಜ್ಯ ಹೆದ್ದಾರಿ– 89 ಮತ್ತು 90ರ. ಮೂಲಕ ಕೇರಳ ಸಂಪರ್ಕಿಸುವ ಮಾರ್ಗವನ್ನು ಅಭಿವೃದ್ಧಿಪಡಿಸಬಹುದು ಎಂದು ಕೇಂದ್ರ ಸರ್ಕಾರ ಸಲಹೆ ನೀಡಿದೆ.

ಈ ಪ್ರದೇಶದಲ್ಲಿರುವ ವನ್ಯಜೀವಿಗಳಿಗೆ ವಾಹನ ಸಂಚಾರದಿಂದ ಎದುರಾಗುವ ಸಮಸ್ಯೆ ನೀಗಿಸಲು ರಾಜ್ಯ ಸರ್ಕಾರ ಹೇರಿದ್ದ ರಾತ್ರಿ ವಾಹನ ಸಂಚಾರ ನಿಷೇಧದ ತೆರವು ಕೋರಿದ್ದ ಕೇರಳದ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್‌ಗೆ ಕೇಂದ್ರದ ರಸ್ತೆ ಸಾರಿಗೆ ಹಾಗೂ ರಾಷ್ಟ್ರೀಯ ಹೆದ್ದಾರಿ ಸಚಿವಾಲಯವು ಪ್ರಸ್ತಾವನೆ ಸಲ್ಲಿಸಿದೆ.

ಕೇಂದ್ರದ ಪರಿಸರ ಮತ್ತು ಅರಣ್ಯ ಸಚಿವಾಲಯ ಹಾಗೂ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರಗಳ ಅಧಿಕಾರಿಗಳನ್ನು ಒಳಗೊಂಡಿದ್ದ ಸಮಿತಿಯು ಈ ಪರ್ಯಾಯ ಮಾರ್ಗವನ್ನು ಸೂಚಿಸಿದೆ ಎಂದು ಕೇಂದ್ರ ತಿಳಿಸಿದೆ.

ರಸ್ತೆಗಳು ರಾಜ್ಯ ಹೆದ್ದಾರಿಯಾಗಿ ಅಭಿವೃದ್ಧಿ ಹೊಂದಿದ ನಂತರವೇ ರಾಷ್ಟ್ರೀಯ ಹೆದ್ದಾರಿಯ ಸ್ಥಾನಮಾನ ನೀಡುವ ಪ್ರಕ್ರಿಯೆಗೆ ಚಾಲನೆ ದೊರೆಯಲಿದೆ ಎಂದೂ ಕೇಂದ್ರ ಹೇಳಿದೆ. ಪ್ರಸ್ತಾವನೆಗೆ ಸಂಬಂಧಿಸಿದಂತೆ ಆರು ವಾರಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ನ್ಯಾಯಮೂರ್ತಿ ಆರ್.ಎಫ್. ನಾರಿಮನ್ ಹಾಗೂ ಎಸ್. ರವೀಂದ್ರ ಭಟ್ ನೇತೃತ್ವದ ದ್ವಿಸದಸ್ಯ ಪೀಠ ಕರ್ನಾಟಕ ಮತ್ತು ಕೇರಳ ಸರ್ಕಾರಗಳಿಗೆ ಸೂಚಿಸಿದೆ.

ಆಧಾರ–ಪ್ರಜಾವಾಣಿ 16.11.2019

27. ಕೇಂದ್ರದ ನಿರ್ಧಾರ ಒರೆಗೆ ಹಚ್ಚಲು ಮೇಲ್ಮನೆ

ರಾಜ್ಯಸಭೆಯ 250ನೇ ಅಧಿವೇಶನವು ಆಡಳಿತ ಪಕ್ಷ ಹಾಗೂ ವಿರೋಧಪಕ್ಷಗಳ ಮಾತಿನ ಚಕಮಕಿಗೆ ಸಾಕ್ಷಿಯಾಯಿತು. ತುರ್ತು ಪರಿಸ್ಥಿತಿ, ಹಣಕಾಸು ಮಸೂದೆ, ರಾಜ್ಯಸಭಾ ಸದಸ್ಯರ ಪಕ್ಷಾಂತರ ಮುಂತಾದ ವಿಚಾರಗಳ ಬಗ್ಗೆ ಬಿಸಿಬಿಸಿ ಚರ್ಚೆ ನಡೆಯಿತು.

250ನೇ ಅಧಿವೇಶನದ ಅಂಗವಾಗಿ ಹಮ್ಮಿಕೊಂಡಿದ್ದ 'ಭಾರತದ ರಾಜಕಾರಣದಲ್ಲಿ ರಾಜ್ಯಸಭೆಯ ಪಾತ್ರ ಮತ್ತು ಸುಧಾರಣೆಯ ಅಗತ್ಯ' ಕುರಿತ ವಿಶೇಷ ಚರ್ಚೆಯಲ್ಲಿ ಮಾತನಾಡಿದ ಮಾಜಿ ಪ್ರಧಾನಿ ಮನಮೋಹನ ಸಿಂಗ್, ' ಕಾನೂನು ರೂಪಿಸುವ ವಿಚಾರದಲ್ಲಿ ರಾಜ್ಯಸಭೆಯ ಅಭಿಪ್ರಾಯಕ್ಕೆ ಹೆಚ್ಚಿನ ಮಹತ್ವ ನೀಡಬೇಕು' ಎಂದು ಪ್ರತಿಪಾದಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು, 'ಮೇಲ್ಮನೆಯು ದೇಶದ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಬೇಕೇ ವಿನಾ ಅದಕ್ಕೆ ಅಡ್ಡಿಪಡಿಸುವ ಸದನವಾಗಬಾರದು' ಎಂದರು. ರಾಜ್ಯಸಭೆಯು ಎರಡನೇ ಮನೆಯಾಗಿರಬಹುದು. ಆದರೆ ಅದು ಕಡಿಮೆ ಮಹತ್ವದ್ದು ಎಂದು ಯಾರೂ ಭಾವಿಸಬಾರದು ಎಂದು ವಾಜಪೇಯಿ ಅವರು ಹೇಳಿದ್ದರು. ನಾನು ಅವರ ಭಾವನೆಗಳನ್ನು ಪ್ರತಿಧ್ವನಿಸಿದ್ದೇನೆ. ಚುನಾವಣಾ ರಾಜಕೀಯದಿಂದ ದೂರ ಇರುವವರಿಗೂ ದೇಶದ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುವ ಅವಕಾಶವನ್ನು ಈ ಸದನ ನೀಡುತ್ತಾ ಬಂದಿದೆ' ಎಂದರು.

'ಭಾರತದ–ಒಕ್ಕೂಟ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಈ ಸದನ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾಗಿದೆ ಎಂದು ಮೋದಿ ನುಡಿದರು.

ಆಧಾರ–ಪ್ರಜಾವಾಣಿ 19.11.2019

28. ದಮನ್–ದಿಯು ಮತ್ತು ದಾದ್ರಾ – ನಗರ ಹವೇಲಿ ಕೇಂದ್ರಾಡಳಿತ ಪ್ರದೇಶಗಳ ವಿಲೀನ:

ಜಮ್ಮು ಕಾಶ್ಮೀರ ಹಾಗೂ ಲಡಾಖ್ ಅನ್ನು ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಿದ್ದ ಕೇಂದ್ರ ಸರ್ಕಾರ, ಚಿಕ್ಕಪುಟ್ಟ ಕೇಂದ್ರಾಡಳಿತ ಪ್ರದೇಶಗಳ ವಿಲೀನಕ್ಕೆ ಮುಂದಾಗಿದೆ. ಎರಡು ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶಗಳಾಗಿರುವ ದಮನ್ –ದಿಯು ಮತ್ತು ದಾದ್ರಾ–ನಗರ್ ಹವೇಲಿಯನ್ನು ಒಂದು ಕೇಂದ್ರಾಡಳಿತ ಪ್ರದೇಶವನ್ನಾಗಿ ವಿಲೀನಗೊಳಿಸುವ ಮಸೂದೆಯೊಂದನ್ನು ಸಂಸತ್ತಿನಲ್ಲಿ ಮಂಡಿಸಲಾಗುತ್ತದೆ ಎಂದು ಕೇಂದ್ರ ಸಚಿವ ಅರ್ಜುನ್ ಮೇಘ್ವಾಲ್ ಲೋಕಸಭೆಗೆ ತಿಳಿಸಿದ್ದಾರೆ.

ಗುಜರಾತಿನ ಪಶ್ಚಿಮ ಕರಾವಳಿಗೆ ಹೊಂದಿಕೊಂಡಿರುವ ಈ ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ ಉತ್ತಮ ಆಡಳಿತ ಮತ್ತು ವಿವಿಧ ಕಾಮಗಾರಿ ಪುನರಾವರ್ತನೆ ಆಗುವುದನ್ನು ತಡೆಯಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಧಾರ–ಕನ್ನಡಪ್ರಭ 23.11.2019

29. ನೇಮಕಕ್ಕೆ ಒಂದೇ ಸಿಇಟಿ

ಕೇಂದ್ರ ಗ್ರೂಪ್ ಸಿ,ಡಿ ನೇಮಕಕ್ಕೆ ಪರೀಕ್ಷೆ

ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಗ್ರೂಪ್ ಬಿ ಮತ್ತು ಗ್ರೂಪ್ ಸಿ ಹುದ್ದೆಗಳ ನೇಮಕಾತಿಗೆ ಹಲವಾರು ಅರ್ಹತಾ ಪರೀಕ್ಷೆಗಳನ್ನು ನಡೆಸುವುದನ್ನು ಕೈಬಿಟ್ಟು ಆ ಎಲ್ಲ ಹುದ್ದೆಗಳಿಗೂ ಒಂದೇ ಸಿಇಟಿ (ಸಾಮಾನ್ಯ ಅರ್ಹತಾ ಪರೀಕ್ಷೆ) ನಡೆಸುವ ಮಹತ್ವದ ಪ್ರಸ್ತಾವನೆಯೊಂದನ್ನು ಕೇಂದ್ರ ಸಿಬ್ಬಂದಿ ಸಚಿವಾಲಯ ರೂಪಿಸಿದೆ.

ಕೇಂದ್ರದ ಅಧೀನದಲ್ಲಿರುವ ಸಿಬ್ಬಂದಿ ಆಯ್ಕೆ ಆಯೋಗವು (ಎಸ್ ಎಸ್ ಸಿ) ವಿವಿಧ ಇಲಾಖೆಗಳ ಗ್ರೂಪ್ ಬಿ ಹುದ್ದೆಗಳ ನೇಮಕಾತಿಗಾಗಿ ಹಲವಾರು ಪರೀಕ್ಷೆಗಳನ್ನು ನಡೆಸಿ ಆಯಾ ಇಲಾಖೆಗೆ ಬೇಕಾದ ಅಭ್ಯರ್ಥಿಗಳನ್ನು ಪ್ರತ್ಯೇಕವಾಗಿ ಆಯ್ಕೆ ಮಾಡುತ್ತಿದೆ. ಆ ಎಲ್ಲಾ ಪರೀಕ್ಷೆಗಳನ್ನು ಕೈಬಿಟ್ಟು ಗ್ರೂಪ್ ಬಿ (ಪತ್ರಾಂಕಿತೇತರ) ಹಾಗೂ ಗ್ರೂಪ್ ಸಿ ಹುದ್ದೆಗಳಿಗೆ ಒಂದೇ ಸಿಇಟಿ ಮೂಲಕ ಅಭ್ಯರ್ಥಿಗಳ ಆಯ್ಕೆ ಮಾಡಬೇಕು

ಹಾಗೂ ಆ ಸಿಇಟಿ ಹೊಣೆಯನ್ನು ಹೊಸದಾಗಿ ಸ್ಥಾಪಿಸಲಾಗುವ ವಿಶೇಷ ಪ್ರಾಧಿಕಾರಕ್ಕೆ ನೀಡಬೇಕು ಎಂಬುದು ಪ್ರಸ್ತಾವನೆಯ ಮೂಲ ತಿರುಳು.

ಆಧಾರ–ಉದಯವಾಣಿ 04.12.2019

30. ಶಾಸನ ಸಭೆಗಳಲ್ಲಿ ಎಸ್ಸಿ ಎಸ್ಟಿ ಮೀಸಲಾತಿ ವಿಸ್ತರಣೆಗಾಗಿ ಇಂದು ಮಸೂದೆ ಮಂಡನೆ

ಲೋಕಸಭೆ ಹಾಗೂ ವಿಧಾನ ಸಭೆಗಳಲ್ಲಿ ಎಸ್ಸಿ, ಎಸ್ಟಿ ಮೀಸಲಾತಿಯನ್ನು ಇನ್ನೂ 10 ವರ್ಷ ವಿಸ್ತರಿಸುವ, ಆಂಗ್ಲೋ ಇಂಡಿಯನ್ ಸಮುದಾಯಕ್ಕಿರುವ ಮೀಸಲಾತಿಯನ್ನು ರದ್ದುಗೊಳಿಸುವ ಮಸೂದೆಯನ್ನು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಂಡನೆ ಮಾಡಲಿದೆ. ಸಂವಿಧಾನ ಜಾರಿಗೆ ಬಂದಾಗ 70 ವರ್ಷಗಳ ಕಾಲ ಶಾಸನ ಸಭೆಗಳಲ್ಲಿ ಎಸ್ಸಿ, ಎಸ್ಟಿ ಹಾಗೂ ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ಮೀಸಲು ನೀಡುವ ನಿರ್ಧಾರ ಕೈಗೊಳ್ಳಲಾಗಿತ್ತು. 2020 ಜನವರಿ 25ಕ್ಕೆ 70 ವರ್ಷ ಮುಕ್ತಾಯವಾಗಲಿದೆ. ಈ ಹಿನ್ನೆಲೆಯಲ್ಲಿ ಎಸ್ಸಿ, ಎಸ್ಟಿ ಮೀಸಲಾತಿಯನ್ನು 10 ವರ್ಷ ವಿಸ್ತರಿಸಲು ಸರ್ಕಾರ ಉದ್ದೇಶಿದೆ. ಆದರೆ ಆಂಗ್ಲೋ ಇಂಡಿಯನ್ ಸಮುದಾಯಕ್ಕಿರುವ ಮೀಸಲಾತಿಯನ್ನು ರದ್ದುಗೊಳಿಸಲಾಗುತ್ತದೆ. ಇದಕ್ಕಾಗಿ ಸಂವಿಧಾನ (126ನೇ) ತಿದ್ದುಪಡಿ ಮಸೂದೆ ಮಂಡನೆ ಮಾಡಲಾಗಿದೆ.

ಆಧಾರ–ಕನ್ನಡಪ್ರಭ 09.12.2019

31. ಅನಿಲ ಸರಬರಾಜು ಯೋಜನೆ ಮಾದರಿ ಯೋಜನೆಯಾಗಲಿ

ದೆಹಲಿಯಲ್ಲಿ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಸಂಸದೆ ಸುಮಲತಾ ಅಂಬರೀಶ್ ಭೇಟಿಯಾಗಿ ನಗರ ಅನಿಲ ಸರಬರಾಜು ಯೋಜನೆಯನ್ನು ರಾಜ್ಯದಲ್ಲೇ ಮಾದರಿ ಯೋಜನೆಯಾಗಿ ಅನುಷ್ಠಾನಗೊಳಿಸುವಂತೆ ಮನವಿ ಮಾಡಿದರು.

ಅವರು ರಾಷ್ಟ್ರಿಯ ಹೆದ್ದಾರಿಯಲ್ಲಿರುವ (275) ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣ ವ್ಯಾಪ್ತಿಗೆ ಒಳಪಟ್ಟ ಸಾರ್ವಜನಿಕರಿಗೆ ನೈಸರ್ಗಿಕ ಅನಿಲ ಬಳಕೆದಾರರು, ಕಾರ್ಖಾನೆಗಳು ಈ ಯೋಜನೆಯನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಮಂಡ್ಯ ಜಿಲ್ಲೆಯ ನಗರ ಪ್ರದೇಶಗಳಿಗೆ ಕೊಳವೆ ಮೂಲಕ ಮನೆಮನೆಗೆ ತಲುಪುವುದು. ರಾಮನಗರ ಜಿಲ್ಲೆಯ ಬಿಡದಿ ಬಳಿ ಸಂಗ್ರಹಣ ಘಟಕ ಸ್ಥಾಪನೆಗೊಂಡಿದೆ ಎಂದರು.

ಆಧಾರ--ವಿಶ್ವವಾಣಿ 11.12.2019

32. ರಾಜ್ಯಕ್ಕೆ ಬಂಪರ್ ರೂ.50000 ಕೋಟಿ ಕಾಮಗಾರಿಗೆ ಸಮ್ಮತಿ

ರಾಜ್ಯದ 15 ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಬರೋಬ್ಬರಿ 12 ಸ್ಥಾನ ಗೆದ್ದಿರುವ ಯಡಿಯೂರಪ್ಪ ಸರ್ಕಾರಕ್ಕೆ ಕೇಂದ್ರ ಸರ್ಕಾರವು ಬಂಪರ್ ಬಳುವಳಿ ನೀಡಿದೆ. ವಿವಿಧ ಯೋಜನೆಗಳಿಗಾಗಿ ರಾಜ್ಯ ಸರ್ಕಾರ ಮುಂದಿಟ್ಟಿದ್ದ 1 ಲಕ್ಷ ಕೋಟಿ ರೂ. ನೆರವಿನ ಬೇಡಿಕೆಗೆ ಸ್ಪಂದಿಸಿರುವ ಕೇಂದ್ರ ತಕ್ಷಣಕ್ಕೆ ಅನ್ವಯವಾಗುವಂತೆ 50 ಸಾವಿರ ಕೋಟಿ ಮೊತ್ತದ ಯೋಜನೆಗಳಿಗೆ ಅನುಮೋದನೆ ನೀಡಿದೆ ಎಂದು ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಘೋಷಣೆ ಹೊರಡಿಸಿದರು.

ಆಧಾರ--ವಿಜಯವಾಣಿ 11.12.2019

33. ಎಕ್ಸ್‌ಪ್ರೆಸ್ ವೇ ಆಗಲಿದೆ ಬೆಂಗಳೂರು -- ಪುಣೆ ಹೆದ್ದಾರಿ

ರಾಜ್ಯದಲ್ಲಿ ಹೆದ್ದಾರಿ ಯೋಜನೆಗಳ ಜಾರಿಗೆ 50 ಸಾವಿರ ಕೋಟಿ ರೂ. ಅನುದಾನ ಒದಗಿಸುವುದರ ಜೊತೆಗೆ ಬೆಂಗಳೂರು – ಪುಣೆ ಹಾಗೂ ಹುಬ್ಬಳ್ಳಿ ಮಾರ್ಗವಾಗಿ ಕರ್ನೂಲ್–ಸೊಲ್ಲಾಪುರ ಹೆದ್ದಾರಿಯನ್ನು ಎಕ್ಸ್‌ಪ್ರೆಸ್ ವೇ ಆಗಿ ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರ ತಾತ್ವಿಕ ಒಪ್ಪಿಗೆ ಸೂಚಿಸಿದೆ.

ಸಿ.ಎಂ. ಯಡಿಯೂರಪ್ಪ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ರಾಜ್ಯ ಹೆದ್ದಾರಿ ಯೋಜನೆಗಳ ಪ್ರಗತಿ ಪರಾಮರ್ಶಿಸಿದ ವೇಳೆ ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಈ ಭರವಸೆ ನೀಡಿದ್ದಾರೆ. ಮುಂದಿನ ಮೂರೂವರೆ ವರ್ಷಗಳಲ್ಲಿ ಒಟ್ಟು 1 ಲಕ್ಷ ಕೋಟಿ ರೂ. ಮೊತ್ತದ ಹೆದ್ದಾರಿ ಯೋಜನೆಗಳಿಗೆ ಅನುಮೋದನೆ ನೀಡುವ ಅಭಯವನ್ನು ಅವರು ನೀಡಿದ್ದಾರೆ.

ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ನಿತಿನ್ ಗಡ್ಕರಿ ಬೆಂಗಳೂರು – ಪುಣೆ ಎಕ್ಸ್‌ಪ್ರೆಸ್ ವೇ ನಿರ್ಮಾಣದ ಬಳಿಕ ಈ ಮಾರ್ಗವನ್ನು ಬೆಂಗಳೂರು–ಮುಂಬೈ ಎಕ್ಸ್‌ಪ್ರೆಸ್ ವೇ ಆಗಿ ಪರಿಗಣಿಸಲಾಗುವುದು ಇದರಿಂದ ಕರ್ನಾಟಕ ಭಾಗದಲ್ಲಿರುವ ಹೆದ್ದಾರಿಗುಂಟ ಐಟಿ ಹಬ್, ಕೈಗಾರಿಕೆ ಹಬ್, ಲಾಜಿಸ್ಟಿಕ್ಸ್ ಕೇಂದ್ರ ಹಾಗೂ ಸ್ಮಾರ್ಟ್ ಸಿಟಿ ಯೋಜನೆಗಳನ್ನು ಕೈಗೊತ್ತಿಕೊಳ್ಳಬಹುದು. ಈ ಪ್ರಸ್ತಾವನೆಗೆ ಕೇಂದ್ರ ತನ್ನ ಪೂರ್ಣ ಸಹಕಾರ ನೀಡಲಿದೆ ಎಂದು ಸ್ಪಷ್ಟಪಡಿಸಿದರು.

ಸೊಲ್ಲಾಪುರ–ಕರ್ನೂಲು ಎಕ್‌ಪ್ರೆಸ್ ವೇ ಯೋಜನೆಗೆ ಈಗಾಗಲೇ ಡಿಪಿಆರ್ ಸಿದ್ಧಗೊಂಡಿದೆ. ಮುಂದಿನ ವರ್ಷದ ಜೂನ್‌ನಿಂದ ಭೂ ಸ್ವಾಧೀನ ಪ್ರಕ್ರಿಯೆ ಆರಂಭವಾಗಲಿದೆ. ಹೆದ್ದಾರಿ ಯೋಜನೆಗಳಿಗೆ ಭೂ ಸ್ವಾಧೀನ ಹಾಗೂ ಪರಿಸರ ನಿರಾಕ್ಷೇಪಣೆ ಪಡೆಯುವುದು ದೊಡ್ಡ ಸಮಸ್ಯೆ ಆಗಿದ್ದು, ಸೂಕ್ತ ಗಮನಹರಿಸುವಂತೆ ರಾಜ್ಯಕ್ಕೆ ಮನವಿ ಮಾಡಲಾಗಿದೆ ಎಂದರು.

ಆಧಾರ–ವಿಜಯಕರ್ನಾಟಕ 11.12.2019

34. ಅಟಲ್ ಭೂ ಜಲ ಯೋಜನೆಗೆ ಅಸ್ತು

ಕರ್ನಾಟಕ ಸೇರಿದಂತೆ 7 ರಾಜ್ಯಗಳಲ್ಲಿ ಅಂತರ್ಜಲವನ್ನು ಸುಧಾರಿಸುವ ನಿಟ್ಟಿನಲ್ಲಿ ಮುಂದಿನ 5 ವರ್ಷಗಳಲ್ಲಿ ಅಟಲ್ ಭೂ ಜಲ ಯೋಜನೆ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. 6 ಸಾವಿರ ಕೋಟಿ ರೂ.ಗಳ ಈ ಯೋಜನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಈ ಯೋಜನೆಯು ಕರ್ನಾಟಕ, ಗುಜರಾತ್, ಹರಿಯಾಣ, ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಉತ್ತರ ಪ್ರದೇಶದ 78 ಜಿಲ್ಲೆಗಳ ಸುಮಾರು 8,350 ಗ್ರಾಮ ಪಂಚಾಯತ್‌ಗಳಿಗೆ ಅನುಕೂಲ ಕಲ್ಪಿಸಿದೆ. ಇಲ್ಲಿ ಪಂಚಾಯತ್‌ಗಳ ನೇತೃತ್ವದಲ್ಲೇ ಅಂತರ್ಜಲ ನಿರ್ವಹಣೆಯ ಕೆಲಸ ನಡೆಯಲಿದೆ. 6 ಸಾವಿರ ಕೋಟಿ ರೂ.ಗಳ ಪೈಕಿ ಶೇ.50 ವಿಶ್ವಬ್ಯಾಂಕ್‌ನ ಸಾಲದ ರೂಪದಲ್ಲಿ ಇರಲಿದ್ದು, ಅದನ್ನು ಕೇಂದ್ರ ಸರ್ಕಾರ ಮರುಪಾವತಿಸಲಿದೆ. ಉಳಿದ ಶೇ.50 ಮೊತ್ತವನ್ನು ಕೇಂದ್ರ ಸರ್ಕಾರವು ಬಜೆಟ್ ಅನುದಾನದ ಮೂಲಕ ಬಿಡುಗಡೆ ಮಾಡಲಿದೆ. ಅಂತರ್ಜಲ ಮಟ್ಟ ವೃದ್ಧಿ, ನೀರು ಬಳಕೆಯ ದಕ್ಷತೆಯನ್ನು ಹೆಚ್ಚಿಸುವುದು ಕೂಡ ಈ ಯೋಜನೆಯಲ್ಲಿ ಅಡಕವಾಗಿದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಹೇಳಿದ್ದಾರೆ.

ಆಧಾರ–ಉದಯವಾಣಿ 25.12.2019

35. ಉತ್ತಮ ಆಡಳಿತ: ಕರ್ನಾಟಕ ನಂ.3

ಉತ್ತಮ ಆಡಳಿತ ನಡೆಸುವ ರಾಜ್ಯಗಳನ್ನು ಗುರುತಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಇದೇ ಮೊದಲ ಬಾರಿಗೆ ಉತ್ತಮ ಆಡಳಿತ ಸೂಚ್ಯಂಕ ಬಿಡುಗಡೆ ಮಾಡಿದೆ. ಮೊದಲ ವರ್ಷದ ಪಟ್ಟಿ ಬಿಡುಗಡೆಯಾಗಿದ್ದು, ಸಮಗ್ರ ಆಡಳಿತ ಪಟ್ಟಿಯಲ್ಲಿ ಕರ್ನಾಟಕವು ಮೂರನೇ ಸ್ಥಾನ ಪಡೆದಿದೆ. ವಲಯವಾರು ಸಾಧನೆಗಳನ್ನು ಗಮನಿಸಿದಾಗ ಆರ್ಥಿಕ ಆಡಳಿತದಲ್ಲಿ ಕರ್ನಾಟಕ ಮೊದಲ ಸ್ಥಾನ ಗಳಿಸಿದೆ. ಸಮಗ್ರ ಸಾಧನಾ ಪಟ್ಟಿಯಲ್ಲಿ ತಮಿಳುನಾಡು ಮೊದಲ ಸ್ಥಾನದಲ್ಲಿದ್ದರೆ, 2ನೇ ಸ್ಥಾನದಲ್ಲಿ ಮಹಾರಾಷ್ಟ್ರ, 3ರಲ್ಲಿ ಕರ್ನಾಟಕ ಇದೆ.

ರಾಜ್ಯಗಳ ಸಾಧನೆ ಆಧರಿಸಿ ಉತ್ತಮ ಆಡಳಿತ ಸೂಚ್ಯಂಕ ಸಿದ್ಧಪಡಿಸಬೇಕು ಎಂದು ಮೋದಿ ಸರ್ಕಾರದ ಮೊದಲ ಅವಧಿಯಲ್ಲೇ ನಿರ್ಧಾರವಾಗಿತ್ತು. ಅದು ಕಾರ್ಯರೂಪಕ್ಕೆ ಬಂದಿದೆ. ಪಟ್ಟಿ ತಯಾರಿಸುವ ವೇಳೆ ರಾಜ್ಯಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ದೊಡ್ಡ ರಾಜ್ಯಗಳು, ಈಶಾನ್ಯ, ಗುಡ್ಡಗಾಡು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಈ ಪೈಕಿ ಕರ್ನಾಟಕ ದೊಡ್ಡ ರಾಜ್ಯಗಳ ವಿಭಾಗದಲ್ಲಿ ಸ್ಥಾನ ಪಡೆದಿತ್ತು.

ವರದಿ ತಯಾರಿಸುವ ವೇಳೆ ಒಟ್ಟು 10 ವಲಯಗಳು ಹಾಗೂ 50 ಸೂಚಿಗಳನ್ನು ಮಾನದಂಡವಾಗಿ ಇರಿಸಿಕೊಂಡು ರಾಜ್ಯಗಳಲ್ಲಿನ ಉತ್ತಮ ಆಡಳಿತ ಅಳೆಯಲಾಗಿದೆ. ಶಿಕ್ಷಣ, ಆರೋಗ್ಯ, ಆರ್ಥಿಕ ಪ್ರಗತಿ, ಪರಿಸರ ಸಂರಕ್ಷಣೆ, ಕಾನೂನು ಸೇವೆಗಳು ಇತ್ಯಾದಿಗಳು ಜನರಿಗೆ ಹೇಗೆ ತಲುಪುತ್ತಿವೆ ಎಂಬುದನ್ನು ಪರಿಗಣಿಸಲಾಗಿದೆ.

ಆಧಾರ–ಕನ್ನಡ ಪ್ರಭ 26.12.2019

36. ಕೇಂದ್ರದಿಂದ ಒಂದು ಕೋಟಿ ಮನೆ ಮಂಜೂರು

ಕೇಂದ್ರವು ಈವರೆಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) (ಪಿಎಂಎವೈ) ಅಡಿಯಲ್ಲಿ ಒಂದು ಕೋಟಿ ಮನೆಗಳನ್ನು ಮಂಜೂರು ಮಾಡಿದೆ ಎಂದು ಪ್ರಧಾನ ಮಂತ್ರಿ ಆವಾಸ್ ಯೋಜನೆ (ಪಿಎಂಎವೈ) (ನಗರ) ಅಡಿಯಲ್ಲಿ 6.5 ಲಕ್ಷ ಮನೆಗಳ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ. ಈ ಯೋಜನೆಯಡಿ ಒಟ್ಟು ಒಂದು ಕೋಟಿ ಮನೆಗಳನ್ನು ಈವರೆಗೆ ಮಂಜೂರು ಮಾಡಲಾಗಿದ್ದು, ಮುಂದಿನ ಮೂರು ತಿಂಗಳಲ್ಲಿ ಸರ್ಕಾರ ನಿಗದಿಪಡಿಸಿದ 1.12 ಕೋಟಿ ಮನೆಗಳನ್ನು ಮಂಜೂರು ಮಾಡಲಾಗುವುದೆಂದು ಸಚಿವ ಹರ್ದೀಪ್ ಎಸ್ ಪುರಿ ತಿಳಿಸಿದ್ದಾರೆ.

ಆಧಾರ–ಪ್ರಜಾವಾಣಿ 28.12.2019

37. ಸಶಸ್ತ್ರ ಪಡೆಗಳ ಮೊದಲ ಮುಖ್ಯಸ್ಥರಾಗಿ ಜ: ರಾವತ್

ಭೂಸೇನೆ, ವಾಯುಪಡೆ ಹಾಗೂ ನೌಕಾಪಡೆ ಮುಖ್ಯಸ್ಥರ ಹುದ್ದೆಗಳ ಮೇಲೆ ಸೃಷ್ಟಿಯಾಗಿರುವ ಸಶಸ್ತ್ರಪಡೆ ಮುಖ್ಯಸ್ಥ ಎಂಬ ಹೊಸ ಹುದ್ದೆಯ ಮೊತ್ತಮೊದಲ ಮುಖ್ಯಸ್ಥರಾಗಿ ಸೇವಾ ನಿವೃತ್ತಿ ಹೊಂದುತ್ತಿರುವ ಭೂಸೇನಾ ಮುಖ್ಯಸ್ಥ ಬಿಪಿನ್ ರಾವತ್ ಅವರು ನೇಮಕಗೊಂಡಿದ್ದಾರೆ.

ಭೂಸೇನಾ, ವಾಯುಪಡೆ ಹಾಗೂ ನೌಕಾಪಡೆ ಮುಖ್ಯಸ್ಥರ ಹುದ್ದೆಗಳ ಮೇಲೆ ಸಶಸ್ತ್ರ ಪಡೆ ಮುಖ್ಯಸ್ಥ ಎಂಬ ಹೊಸ ಹುದ್ದೆ ಸೃಷ್ಟಿಸುವ ನಿರ್ಧಾರವನ್ನು ಕೇಂದ್ರ ಸಚಿವ ಸಂಪುಟ ಸಭೆ ಕೈಗೊಂಡಿತ್ತು. 3 ಸೇನಾ ಪಡೆಗಳಿಗೆ ಸಂಬಂಧಿಸಿದ ವಿಚಾರಗಳಲ್ಲಿ ಸಶಸ್ತ್ರಪಡೆ ಮುಖ್ಯಸ್ಥರು ರಕ್ಷಣಾ ಸಚಿವರಿಗೆ ಪ್ರಧಾನ ಸಲಹೆಗಾರರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಆಧಾರ–ಕನ್ನಡಪ್ರಭ 31.12.2019

* * * * *

ಭಾಗ–4

ರಾಜ್ಯ ಸರ್ಕಾರದ ಸುದ್ದಿಗಳು

1. ಆಶಾ ಕಾರ್ಯಕರ್ತೆಯರ ಗೌರವ ಧನ ರೂ.500 ಹೆಚ್ಚಳ

ಪ್ರಸ್ತುತ ರೂ.6000 ಗೌರವ ಧನ ನೀಡಲಾಗುತ್ತಿದ್ದು, ಆಶಾ ಕಾರ್ಯಕರ್ತೆಯರ ಗೌರವ ಧನವನ್ನು ತಿಂಗಳಿಗೆ ರೂ.500 ಹೆಚ್ಚಳ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ರಾಜ್ಯದಲ್ಲಿ 41,425 ಕಾರ್ಯಕರ್ತೆಯರು ಇದ್ದು, ಗೌರವ ಧನ ಹೆಚ್ಚಳ ನಿರ್ಧಾರದಿಂದ ಸರ್ಕಾರದ ಮೇಲೆ ವಾರ್ಷಿಕ ರೂ.25 ಕೋಟಿ ಹೆಚ್ಚುವರಿ ಹೊರೆ ಬೀಳಲಿದೆ ಎಂದು ಸಂಪುಟ ಸಭೆಯ ನಂತರ ಕಾನೂನು ಹಾಗೂ ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

ಆಧಾರ–ಪ್ರಜಾವಾಣಿ 04.10.2019

2. ಶಿಕ್ಷಕ ಸ್ನೇಹಿ ವರ್ಗಾವಣೆ

ಕಡ್ಡಾಯ ವರ್ಗಾವಣೆಯಲ್ಲಿ ಕೆಲವು ಬದಲಾವಣೆ ಮತ್ತು ಹೆಸರು ಬದಲಾವಣೆ ಮೂಲಕ 'ಶಿಕ್ಷಕರ ಸ್ನೇಹಿ ವರ್ಗಾವಣೆ' ಜಾರಿಗೊಳಿಸಲು ಶಿಕ್ಷಣ ಇಲಾಖೆ ಮಹತ್ವದ ನಿರ್ಧಾರ ಕೈಗೊಂಡಿದೆ.

ತಿದ್ದುಪಡಿ ಮೂಲಕ ಮತ್ತಷ್ಟು ಸರಳೀಕರಣ ಮಾಡಿ ಶಿಕ್ಷಕ ಸ್ನೇಹಿ ವರ್ಗಾವಣೆಯ ಜೊತೆಗೆ 50 ವರ್ಷ ಮೀರಿದ ಶಿಕ್ಷಕಿಯರು ಹಾಗೂ 55 ವರ್ಷ ಮೀರಿದ ಶಿಕ್ಷಕರಿಗೆ ಕಡ್ಡಾಯ ವರ್ಗಾವಣೆಯಿಂದ ವಿನಾಯಿತಿ ನೀಡಲಾಗುವುದು. 'ಕಡ್ಡಾಯ' ಬದಲು 'ವಲಯ ವರ್ಗಾವಣೆ' ಎಂದು ನಾಮಕರಣ ಮಾಡಲು ಸರ್ಕಾರ ನಿರ್ಧರಿಸಿದೆ.

"2018–19ರಲ್ಲಿ ಕಡ್ಡಾಯ ವರ್ಗಾವಣೆಗೊಳಗಾದ ಶಿಕ್ಷಕರಿಗೆ ಮುಂದಿನ ವರ್ಗಾವಣೆ ಪ್ರಕ್ರಿಯೆಗೆ ಮೊದಲೇ ಲಭ್ಯವಿರುವ ಖಾಲಿ ಹುದ್ದೆಗಳಿಗೆ ಅನುಸಾರವಾಗಿ ಒಂದು ಬಾರಿ ಕೋರಿಕೆ ವರ್ಗಾವಣೆಗೆ ಅವಕಾಶ ಕಲ್ಪಿಸಲಾಗುವುದು" ಎಂದು ಸಚಿವರು ತಿಳಿಸಿದರು. ರಾಜ್ಯ ಸರ್ಕಾರ ಕಡ್ಡಾಯ ವರ್ಗಾವಣೆ ನಿಯಮಗಳಿಗೆ ತರಲು ಉದ್ದೇಶಿಸಿರುವ ತಿದ್ದುಪಡಿಗೆ ಸಂಬಂಧಿಸಿದ ಪ್ರಮುಖ ಅಂಶಗಳ ಬಗ್ಗೆ ಸಾರ್ವಜನಿಕವಾಗಿ ಆಕ್ಷೇಪಣೆಗಳಿಗೆ ಆಹ್ವಾನಿಸಿ, ಆನಂತರ ಬರುವ ಸಲಹೆಗಳನ್ನೂ ಪರಿಗಣಿಸಲಾಗುವುದು ಎಂದು ಶಿಕ್ಷಣ ಸಚಿವ ಸುರೇಶ್‌ಕುಮಾರ್ ತಿಳಿಸಿದರು.

ಯಾವುದೇ ವಲಯದ ಶಿಕ್ಷಕರಿಗೂ ಇನ್ನು ಮುಂದೆ ಕೋರಿಕೆ ವರ್ಗಾವಣೆಗೆ ಅವಕಾಶ ನೀಡಲಾಗುವುದು. ಹಾಗೆಯೇ ಯಾವುದೇ ತಾಲೂಕಿನಲ್ಲಿ ಶೇ.20ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿಯಿದ್ದಲ್ಲಿ ಅಂತಹ ತಾಲ್ಲೂಕುಗಳ ಶಿಕ್ಷಕರಿಗೆ ಇದುವರೆಗೆ ಕೋರಿಕೆ ವರ್ಗಾವಣೆಗೆ ಅವಕಾಶ ಇರಲಿಲ್ಲ. ಇದರಿಂದ ಶಿಕ್ಷಕರಿಗಾಗುತ್ತಿರುವ ಅನಾನುಕೂಲ ಮನಗಂಡು ಶೇ.20ರ ಮಿತಿಯನ್ನು ಶೇ.25ಕ್ಕೆ ಹೆಚ್ಚಿಸಲು ಶಿಕ್ಷಣ ಇಲಾಖೆ ಚಿಂತನೆ ನಡೆಸಿದೆ.

ಶಿಕ್ಷಕರ ಕಡ್ಡಾಯ ವರ್ಗಾವಣೆ ಕಾಯ್ದೆಗೆ ತಿದ್ದುಪಡಿ ಅಥವಾ ಸುಗ್ರೀವಾಜ್ಞೆ ಹೊರಡಿಸಿದ ನಂತರ ಮುಂದಿನ ಶೈಕ್ಷಣಿಕ ವರ್ಷದಿಂದ ವರ್ಗಾವಣೆ ನಿಯಮಗಳು ಅನ್ವಯವಾಗಲಿದೆ ಎಂದು ಸಚಿವ ಸುರೇಶ್‌ಕುಮಾರ್ ಸ್ಪಷ್ಟಪಡಿಸಿದ್ದಾರೆ.

ಆಧಾರ–ವಿಜಯಕರ್ನಾಟಕ 05.10.2019

3. ಮೂಗರ್ಜಿಗೆ ಇನ್ನು ಮುಂದೆ ಅವಕಾಶವಿಲ್ಲ

ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರ ವಿರುದ್ಧ ಇನ್ನು ಮುಂದೆ 'ಅನಾಮಧೇಯ ದೂರುಗಳು' 'ಮೂಗರ್ಜಿ'ಗಳಿಗೆ ಅವಕಾಶವಿಲ್ಲ. ಹೆಸರು, ವಿಳಾಸ ಇಲ್ಲದೆ ದೂರು ಮತ್ತು ಅರ್ಜಿಗಳಿಗೆ ಕಡಿವಾಣ ಹಾಕಲು ಮುಂದಾಗಿರುವ ರಾಜ್ಯ ಸರ್ಕಾರ, ಯಾವುದೇ ಸರ್ಕಾರಿ ಅಧಿಕಾರಿ ಅಥವಾ ನೌಕರರ ವಿರುದ್ಧ ಸ್ವೀಕೃತವಾಗುವ ಅನಾಮಧೇಯ ಅರ್ಜಿಗಳ ಆಧಾರದಲ್ಲಿ ತನಿಖೆ ಅಥವಾ ವಿಚಾರಣೆಗೊಳಪಡಿಸುವಂತಿಲ್ಲ ಎಂದು 'ಫರ್ಮಾನು' ಹೊರಡಿಸಿದೆ.

'ಸರ್ಕಾರಿ ಅಧಿಕಾರಿಗಳು ಅಥವಾ ನೌಕರರ ವಿರುದ್ಧ ಬರುವ ಅನಾಮಧೇಯ ದೂರುಗಳು ಕೆಲವು ಸಂದರ್ಭಗಳಲ್ಲಿ ವೈಯಕ್ತಿಕ ದ್ವೇಷ, ಅಸೂಯೆ ಅಥವಾ ಪೂರ್ವಾಗ್ರಹಪೀಡಿತವಾಗಿರುತ್ತದೆ. ಅಲ್ಲದೇ ದೂರುಗಳಿಗೆ ಪೂರಕವಾದ ಮಾಹಿತಿ ಅಥವಾ ದಾಖಲೆಗಳನ್ನು ಸಲ್ಲಿಸಲಾಗಿರುವುದಿಲ್ಲ. ಇಂತಹ ದೂರುಗಳಿಂದಾಗಿ ಸರ್ಕಾ

ಅಧಿಕಾರಿ/ನೌಕರರ ದೈನಂದಿನ ಕೆಲಸದಲ್ಲಿ ಹಸ್ತಕ್ಷೇಪ ಉಂಟಾಗುವುದಲ್ಲದೇ ದಕ್ಷ ಹಾಗೂ ಪ್ರಾಮಾಣಿಕ ನೌಕರರ ವಿಶ್ವಾಸಾರ್ಹತೆಗೆ ಧಕ್ಕೆ ಉಂಟಾಗುತ್ತದೆ. ಅಲ್ಲದೇ ಅವರು ಮುಕ್ತ ಹಾಗೂ ನಿರ್ಭೀತರಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ' ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ.

ಆಧಾರ– ಉದಯವಾಣಿ 16/11/2019

4. ಮಹಿಳಾ ಉದ್ದಿಮೆದಾರರಿಗೆ ವಿಶೇಷ ರಿಯಾಯಿತಿ

ರಾಜ್ಯದ 2019–2024ರ ನೂತನ ಕೈಗಾರಿಕಾ ನೀತಿಯಲ್ಲಿ ಮಹಿಳಾ ಉದ್ದಿಮೆದಾರರಿಗೆ ವಿಶೇಷ ರಿಯಾಯಿತಿಗಳನ್ನು ಪ್ರಕಟಿಸಿ ಅವರಿಗೆ ಉತ್ತೇಜನ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದ್ದಾರೆ.

ರಾಜ್ಯದಲ್ಲಿ ಮಹಿಳೆಯರಿಗೆ ಉದ್ಯಮಶೀಲತೆಯನ್ನು ಬೆಳೆಸಲು ಹಾಗೂ ಸ್ವಾವಲಂಬಿ ಜೀವನ ಸಾಧಿಸಲು ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. 1.6 ಲಕ್ಷ ಸ್ತ್ರೀ ಸಹಾಯ ಸಂಘಗಳಲ್ಲಿರುವ 22.30 ಲಕ್ಷ ಮಹಿಳೆಯುವರಿಗೆ ಹೆಚ್ಚು ಶಕ್ತಿಯನ್ನು ತುಂಬಲಾಗಿದೆ. ರಾಷ್ಟ್ರೀಕೃತ ಬ್ಯಾಂಕ್ ಮತ್ತು ಸಹಕಾರಿ ಸಂಘಗಳಿಂದ ಕಡಿಮೆ ಬಡ್ಡಿ ದರದಲ್ಲಿ ಮಹಿಳೆಯರಿಗೆ ಉದ್ಯಮ ನಡೆಸಲು ಸಹಾಯ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಎಫ್‌ಕೆಸಿಸಿಐ ಅಧ್ಯಕ್ಷ ಪಿ.ಆರ್.ಜನಾರ್ಧನ್ ಮಾತನಾಡಿ, ಮಹಿಳಾ ಉದ್ದಿಮೆದಾರರ ಯೋಜನೆ ಪ್ರಸ್ತಾಪವನ್ನು ತ್ವರಿತವಾಗಿ ನಿರ್ವಹಿಸಲು ಕರ್ನಾಟಕ ಉದ್ಯೋಗ ಮಿತ್ರರಲ್ಲಿ ಪ್ರತ್ಯೇಕ ಕೋಶ ಸ್ಥಾಪಿಸಬೇಕು. ಮಹಿಳಾ ಉದ್ದಿಮೆದಾರರಿಗೆ ಸರ್ಕಾರದಿಂದ ಮಂಜೂರಾಗಿರುವ ಸಹಾಯ ಧನವನ್ನು ಆದ್ಯತೆಯ ಆಧಾರದ ಮೇಲೆ ಬಿಡುಗಡೆ ಮಾಡಬೇಕು. ಮಹಿಳಾ ಉದ್ದಿಮೆದಾರರಿಗೆ ಎಲ್ಲ ಜಿಲ್ಲೆಗಳಲ್ಲಿ ಪ್ರತ್ಯೇಕ ಟೆಕ್ ಪಾರ್ಕ್‌ಗಳನ್ನು ಸ್ಥಾಪಿಸಬೇಕೆಂದು ಮನವಿ ಮಾಡಿದರು.

ಮಹಿಳಾ ಉದ್ದಿಮೆದಾರರಿಗೆ ಸಾಲವನ್ನು ಶೀಘ್ರವಾಗಿ ಬಿಡುಗಡೆಗೊಳಿಸಲು ಹಣಕಾಸು ಸಂಸ್ಥೆಗಳಿಗೆ ಸೂಚನೆ ನೀಡಬೇಕು. ಉದ್ಯಮಶೀಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸಲು ಜಿಲ್ಲಾ ಕೈಗಾರಿಕಾ ಕೇಂದ್ರಗಳಿಗೆ ಸೂಕ್ತ ಮಾರ್ಗದರ್ಶನ ನೀಡಬೇಕೆಂದು ಅವರು ತಿಳಿಸಿದರು.

ಆಧಾರ–ಸಂಯುಕ್ತಕರ್ನಾಟಕ 20.11.2019

5. ಎ, ಬಿ ಗ್ರೂಪ್ ಹುದ್ದೆಗಿನ್ನು 1:3 ಸಂದರ್ಶನ

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಎ ಮತ್ತು ಬಿ ಗ್ರೂಪ್ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಸಂದರ್ಶನದ ಅನುಪಾತದಲ್ಲಿ ಬದಲಾವಣೆ ಮಾಡುವ ಮಹತ್ವದ ನಿರ್ಧಾರವನ್ನು ರಾಜ್ಯ ಸಚಿವ ಸಂಪುಟ ಕೈಗೊಂಡಿದೆ. ಲಿಖಿತ ಪರೀಕ್ಷೆಯ ಬಳಿಕ ಅರ್ಹ ಅಭ್ಯರ್ಥಿಗಳ ಪೈಕಿ ಸಂದರ್ಶನಕ್ಕಾಗಿ ಒಂದು ಹುದ್ದೆಗೆ ಐವರು ಅರ್ಹ ಅಭ್ಯರ್ಥಿಗಳನ್ನು (1:5) ಕರೆಯುತ್ತಿರುವುದಕ್ಕೆ ಕಡಿವಾಣ ಹಾಕಲಾಗಿದೆ. ಒಂದು ಹುದ್ದೆಗೆ ಐವರು ಅರ್ಹ ಅಭ್ಯರ್ಥಿಗಳನ್ನು ಕರೆಯುವ ಬದಲು ಮೂರು (1:3) ಅರ್ಹ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲು ತೀರ್ಮಾನಿಸಲಾಗಿದೆ. ಈ ಮೂಲಕ ಹೋಟಾ ಸಮಿತಿಯ ಶಿಫಾರಸ್ಸಿನಂತೆ ನಡೆದುಕೊಳ್ಳಲು ಮುಂದಾಗಿದೆ. ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಆಧಾರ–ಕನ್ನಡಪ್ರಭ 21.11.2019

6. ಸರ್ವರಿಗೂ ಚಿಕಿತ್ಸೆ ದೊರೆಯಲಿ

ಸರ್ಕಾರಿ ವೈದ್ಯಕೀಯ ಸಂಸ್ಥೆ ಹಾಗೂ ಆಸ್ಪತ್ರೆಗಳಿಗೆ ಬರುವ ಶೇ.50ರಷ್ಟು ರೋಗಿಗಳು ವೈದ್ಯರಿಂದ ಕಿರುಕುಳ, ಚಿಕಿತ್ಸೆಗಳಿಗೆ ಅಲೆದಾಟ ನಡೆಸಬೇಕು ಎಂದು ಆರೋಪಿಸುತ್ತಿದ್ದಾರೆ. ಈ ಪರಿಸ್ಥಿತಿ ಬದಲಾಗಲು ವೈದ್ಯರ ಸಹಕಾರ ಅಗತ್ಯವಾಗಿದ್ದು, ಚಿಕಿತ್ಸೆ ಸಿಗದೆ ಯಾವುದೇ ರೋಗಿ ಆಸ್ಪತ್ರೆಯಿಂದ ಹೊರ ಹೋಗಬಾರದು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ವಿಕ್ಟೋರಿಯಾ ಆಸ್ಪತ್ರೆಯು ರಾಜ್ಯದ ಅತ್ಯಂತ ಹಳೆಯ ಆಸ್ಪತ್ರೆ ಎಂಬ ಖ್ಯಾತಿ ಪಡೆದಿದ್ದು, ಇಲ್ಲಿ ಅತ್ಯಾಧುನಿಕ ಕ್ಯಾನ್ಸರ್ ಚಿಕಿತ್ಸಾ ಘಟಕ, ಚರ್ಮ ಕಸಿ ಬ್ಯಾಂಕ್ ಸ್ಥಾಪಿಸಲಾಗಿದೆ. 2 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಸಾವಿರ ಹಾಸಿಗೆಗಳ ಸಾಮರ್ಥ್ಯದ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ. ಇದಕ್ಕೆ ರೂ.68.53 ಕೋಟಿ ವೆಚ್ಚ ಮಾಡಲಾಗುತ್ತಿದ್ದು, ನೆಲ ಮಹಡಿ ಹಾಗೂ 11 ಮಹಡಿಗಳನ್ನು ಒಳಗೊಂಡಿರುತ್ತದೆ. 2021ರ ಜೂನ್‌ಗೆ ಕಾಮಗಾರಿ ಪೂರ್ಣಗೊಳಿಸಿ, ಸೇವೆ ಆರಂಭಿಸಬೇಕು ಎಂದು ಬಿ.ಎಸ್.ಯಡಿಯೂರಪ್ಪ ಸೂಚಿಸಿದರು.

ಆಧಾರ–ವಿಜಯವಾಣಿ 12.12.2019

7. ಅಕ್ರಮ ಕಟ್ಟಡ ಸಕ್ರಮಕ್ಕೆ ಒಪ್ಪಿಗೆ

ಬಿಡಿಎ ಬಡಾವಣೆಗಳಲ್ಲಿ ಸೂಕ್ತ ಪ್ರಾಧಿಕಾರಗಳು ಮತ್ತು ಇಲಾಖೆಗಳಿಂದ ಅನುಮತಿ ಪಡೆಯದೇ ನಿರ್ಮಿಸಿರುವ ಮನೆ ಮತ್ತು ಕಟ್ಟಡಗಳನ್ನು ಸಕ್ರಮಗೊಳಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಸುಮಾರು 5,000 ಎಕರೆ ಪ್ರದೇಶದಲ್ಲಿ ಈ ರೀತಿಯ 75,000 ಕಟ್ಟಡಗಳು ಇರುವುದನ್ನು ಪತ್ತೆ ಮಾಡಲಾಗಿದೆ. ದಂಡ ಕಟ್ಟಿ ಸಕ್ರಮಗೊಳಿಸಲು ಅವಕಾಶ ನೀಡಲಾಗುವುದು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗಾರರಿಗೆ ತಿಳಿಸಿದರು.

ಕಟ್ಟಡ ಯೋಜನೆಗೆ ಒಪ್ಪಿಗೆ ಪಡೆಯದೇ ಇರುವುದು, ಅಭಿವೃದ್ಧಿ ಶುಲ್ಕ ಪಾವತಿಸದಿರುವುದು, ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸಿರುವವರು ಕಟ್ಟಡ ಸಕ್ರಮಗೊಳಿಸಿಕೊಳ್ಳಬೇಕು ಇದಕ್ಕಾಗಿ ಮುಂದಿನ ಅಧಿವೇಶನದಲ್ಲಿ ಬಿಡಿಎ ಕಾಯ್ದೆಯ 38ಸಿ ಗೆ ತಿದ್ದುಪಡಿ ಮಾಡಲಾಗುವುದು ಎಂದು ಅವರು ವಿವರಿಸಿದರು.

ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿ ರಚಿಸಲಾಗುವುದು. ಇದರಲ್ಲಿ ಕಂದಾಯ ಸಚಿವ ಆರ್.ಅಶೋಕ, ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್, ವಸತಿ ಸಚಿವ ವಿ.ಸೋಮಣ್ಣ ಸದಸ್ಯರಾಗಿರುತ್ತಾರೆ. ಮಾರ್ಗಸೂಚಿ ಮೌಲ್ಯದ ಪ್ರಕಾರ ದಂಡದ ಪ್ರಮಾಣವನ್ನು ನಿಗದಿ ಮಾಡಲಾಗುವುದು. ಆರಂಭಿಕ ಪ್ರಸ್ತಾವನೆಯ ಪ್ರಕಾರ, 30X40 ಅಳತೆಯ ನಿವೇಶನಗಳಿಗೆ ಹಾಲಿ ಮಾರ್ಗಸೂಚಿ ಮೌಲ್ಯದ ಶೇ.70ರಷ್ಟು ದಂಡ ವಿಧಿಸಲು ಉದ್ದೇಶಿಸಲಾಗಿದೆ. ಇದಕ್ಕಿಂತ ದೊಡ್ಡ ಸ್ವತ್ತಿಗೆ ಶೇ.100ರಷ್ಟು ದಂಡ ವಿಧಿಸಲಾಗುವುದೆಂದರು.

ಆಧಾರ–ಪ್ರಜಾವಾಣಿ 13.12.2019

8. ಪಿಂಕ್ ಪಿಕಪ್

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ(ಬಿಎಂಟಿಸಿ)ಯ ಪಿಂಕ್ ಸಾರಥಿ ಸಿಬ್ಬಂದಿಯು ರಾತ್ರಿ ವೇಳೆ ಬಸ್ ಸಿಗದೆ ಪರದಾಡುವ ಮಹಿಳಾ ಪ್ರಯಾಣಿಕರಿಗೆ ಅಭಯ ಹಸ್ತ ಚಾಚುತ್ತಿದ್ದಾರೆ. ಮಹಿಳಾ ಪ್ರಯಾಣಿಕರನ್ನು ಸುರಕ್ಷಿತವಾಗಿ ಮನೆಗಳಿಗೆ ತಲುಪಿಸುವ ಕೆಲಸವನ್ನು ಪಿಂಕ್ ಸಾರಥಿ ವಾಹನಗಳು ಸದ್ದಿಲ್ಲದೆ ಮಾಡುತ್ತಿವೆ.

ಪಿಂಕ್ ಸಾರಥಿ ವಾಹನಗಳು ಹಲವು ಮಾರ್ಗಗಳಲ್ಲಿ ಗಸ್ತು ತಿರುಗುತ್ತಿರುತ್ತದೆ. "ರಾತ್ರಿ 10 ಗಂಟೆಯ ಬಳಿಕ ಒಂಟಿ ಮಹಿಳಾ ಪ್ರಯಾಣಿಕರು ಬಸ್ ಸಿಗದೆ ಪರದಾಡುತ್ತಿದ್ದರೆ, ಅವರನ್ನು ಸುರಕ್ಷಿತವಾಗಿ ಮನೆ ತಲುಪಿಸುವ ಕೆಲಸ ಮಾಡಲಾಗುತ್ತಿದೆ. ಇಂತಿಷ್ಟೇ ಕಿ.ಮೀ.ವರೆಗೆ ಮಾತ್ರ ಡ್ರಾಪ್ ನೀಡಬೇಕೆಂಬ ನಿಯಮವಿಲ್ಲ. ಮಹಿಳೆಯರು ಯಾವುದೇ ಪ್ರದೇಶದಲ್ಲಿ ನೆಲೆಸಿದ್ದರೂ ಡ್ರಾಪ್ ನೀಡಲಾಗುತ್ತದೆ. ಈವರೆಗೆ ಸುಮಾರು 50 ಮಂದಿಯನ್ನು ಮನೆಗೆ ತಲುಪಿಸಲಾಗಿದೆ. ಮನೆಗೆ ಬಿಟ್ಟ ನಂತರ ಸಿಬ್ಬಂದಿಯು ನಿಗದಿತ ನಮೂನೆಯಲ್ಲಿ ವಿಳಾಸದೊಂದಿಗೆ ಅವರಿಂದ ಸಹಿ ಪಡೆದು ಸಂಸ್ಥೆಗೆ ಸಲ್ಲಿಸುತ್ತಾರೆ" ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಆಧಾರ–ವಿಜಯಕರ್ನಾಟಕ 18.12.2019

9. ಎಲೆಕ್ಟ್ರಿಕ್ ಆಟೋಗಳಿಗೆ ಬಂಪರ್ ಸಬ್ಸಿಡಿ

ರಾಜಧಾನಿಯಲ್ಲಿ ವಾಯುಮಾಲಿನ್ಯ ಮತ್ತು ಶಬ್ದ ಮಾಲಿನ್ಯ ನಿಯಂತ್ರಣಕ್ಕೆ ದಿಟ್ಟ ಹೆಜ್ಜೆಗಳನ್ನಿಟ್ಟಿರುವ ಸಾರಿಗೆ ಇಲಾಖೆಯು 2 ಸ್ಟ್ರೋಕ್ ಆಟೋಗಳನ್ನು ಗುಜರಿಗೆ ಹಾಕಿ, ಎಲೆಕ್ಟ್ರಿಕ್ ಚಾಲಿತ ಆಟೋರಿಕ್ಷಾ ಖರೀದಿಸುವವರಿಗೆ ರೂ. 1.50 ಲಕ್ಷ ಸಬ್ಸಿಡಿ ನೀಡಲು ಉದ್ದೇಶಿಸಿದೆ. ಇದಕ್ಕೆ ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ಅಲ್ಲದೆ, ನಗರದಲ್ಲಿ ಸಂಚರಿಸುತ್ತಿರುವ 4 ಸ್ಟ್ರೋಕ್ ಎಲ್‌ಪಿಜಿ ಆಟೋಗಳನ್ನು ಬ್ಯಾಟರಿಚಾಲಿತ ವಾಹನಗಳನ್ನಾಗಿ ಪರಿವರ್ತಿಸಿಕೊಳ್ಳುವವರಿಗೆ 1 ಲಕ್ಷ ರೂ. ಮತ್ತು ಹೊಸದಾಗಿ ಎಲೆಕ್ಟ್ರಿಕ್ ಆಟೋ ಖರೀದಿಸುವವರಿಗೂ 1.25 ಲಕ್ಷ ರೂ. ಸಹಾಯಧನ ನೀಡಲಾಗುತ್ತದೆ. ಜೊತೆಗೆ ಕೇಂದ್ರದ 'ಫೇಮ್ ಇಂಡಿಯಾ' ಯೋಜನೆಯಡಿ ರೂ. 60 ಸಾವಿರ ನೆರವು ಸಿಗಲಿದೆ.

ಬೆಂಗಳೂರಿನಲ್ಲಿ ಒಟ್ಟು 26,954 ಹಳೆಯ 2 ಸ್ಟ್ರೋಕ್ ಆಟೋಗಳಿವೆ. ಈ ಆಟೋಗಳಿಂದಾಗುತ್ತಿರುವ ಪರಿಸರ ಮಾಲಿನ್ಯ ನಿಯಂತ್ರಿಸುವ ನಿಟ್ಟಿನಲ್ಲಿ ಸರ್ಕಾರವು 2019-20ನೇ ಸಾಲಿನ ಆಯವ್ಯಯದಲ್ಲಿ ಆಟೋ ಮತ್ತು ವಾಹನ ಚಾಲಕರ ಕಲ್ಯಾಣಕ್ಕಾಗಿ 30.50 ಕೋಟಿ ರೂ. ಒದಗಿಸಲಾಗಿದೆ. ಈ ಅನುದಾನವನ್ನು ಬಳಸಿಕೊಂಡು ಹಂತ-ಹಂತವಾಗಿ 2 ಸ್ಟ್ರೋಕ್ ಆಟೋಗಳನ್ನು ಎಲೆಕ್ಟ್ರಿಕ್ ವಾಹನಗಳನ್ನಾಗಿ ಪರಿವರ್ತಿಸಲು ಸಾರಿಗೆ ಇಲಾಖೆ ತೀರ್ಮಾನಿಸಿದೆ.

ಆಧಾರ- ವಿಜಯವಾಣಿ 22.12.2019

10. ಕೃಷಿ ಸಂಘಗಳಲ್ಲಿ ಬೀಜ, ಗೊಬ್ಬರ ವಿತರಣೆ

ರೈತರು ಇನ್ನು ಸಾಲಿನಲ್ಲಿ ನಿಂತು ಬಿತ್ತನೆ ಬೀಜ, ರಸಗೊಬ್ಬರಕ್ಕಾಗಿ ಕಾಯಬೇಕಿಲ್ಲ. ಹೋಬಳಿ ಕೇಂದ್ರಗಳಿಗೆ ತೆರಳಲು ಪರದಾಡಬೇಕಿಲ್ಲ. ರೈತರು ವಾಸಿಸುವ ಸ್ಥಳದಲ್ಲಿನ ಕೃಷಿ ಸಹಕಾರ ಸಂಘಗಳ ಮೂಲಕ ವಿತರಣೆಗೆ ಸರ್ಕಾರ ಚಿಂತನೆ ನಡೆಸಿದೆ.

ಸದ್ಯ ಬಿತ್ತನೆ ಬೀಜವನ್ನು ರೈತ ಸಂಪರ್ಕ ಕೇಂದ್ರ (ಆರ್‌ಎಸ್‌ಕೆ) ಹಾಗೂ ರಸಗೊಬ್ಬರವನ್ನು ಖಾಸಗಿ ಏಜೆನ್ಸಿಗಳ ಮೂಲಕ ಮಾರಾಟ ಮಾಡುವ ವ್ಯವಸ್ಥೆ ಇದೆ. ಇದಕ್ಕೆ ಕೆಲವೊಂದು ಮಾರ್ಗಸೂಚಿಗಳನ್ನು ಅಳವಡಿಸಿ ಕೃಷಿ ಸಹಕಾರ ಸಂಘಗಳ ಮೂಲಕ ವಿತರಿಸುವ ಯೋಜನೆ ಸಿದ್ಧಗೊಳಿಸಿದೆ.

ಹೆಚ್ಚುವರಿಯಾಗಿ ಬಿತ್ತನೆ ಬೀಜ ಮಾರಾಟಕ್ಕೂ ಅವಕಾಶ ಕಲ್ಪಿಸಿದರೆ ರೈತರ ಅಲೆದಾಟ ತಪ್ಪಿಸಬಹುದು. ಜೊತೆಗೆ ಸಹಕಾರ ಸಂಘಗಳ ವಹಿವಾಟು ಹಿಗ್ಗಿ ಕೃಷಿಕರಿಗೆ ಹೆಚ್ಚಿನ ಸೌಲಭ್ಯ ಒದಗಿಸಲು ಸಾಧ್ಯವಾಗುತ್ತದೆ. ಈ ಪ್ರಸ್ತಾಪವನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು 'ವಿಕ'ಗೆ ತಿಳಿಸಿದ್ದಾರೆ.

ರೈತರಿಗೆ ಸುಲಭವಾಗಿ ಬಿತ್ತನೆ ಬೀಜ, ಗೊಬ್ಬರವನ್ನು ಪೂರೈಸುವಂತೆ ಹಿಂದಿನಿಂದಲೂ ರೈತ ಸಂಘ ಸರ್ಕಾರವನ್ನು ಒತ್ತಾಯಿಸುತ್ತಲೇ ಬಂದಿದೆ. ಸರ್ಕಾರ ಹೆಚ್ಚಿನ ವಿತರಣಾ ಕೇಂದ್ರಗಳನ್ನು ತೆರೆಯಲು ಮುಂದಾಗಿರುವುದು ಸ್ವಾಗತಾರ್ಹ ಎಂದು ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದ್ದಾರೆ.

ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲೇ ಬಿತ್ತನೆಬೀಜ ಸಿಗುವಂತಾದಲ್ಲಿ ರೈತರಿಗೆ ಹೆಚ್ಚಿನ ಉಪಯೋಗವಾಗಲಿದೆ. ದೂರದ ಹೋಬಳಿ ಕೇಂದ್ರಕ್ಕೆ ಹೋಗಿ ಬರುವ ಹಣ, ಸಮಯ ಉಳಿತಾಯವಾಗಲಿದೆ. ಹೊಸ ವ್ಯವಸ್ಥೆ ಶೀಘ್ರ ಜಾರಿಗೆ ಬರಲಿ ಎಂದು ದೇವನಹಳ್ಳಿ ರೈತ ಎನ್ ಚಂದ್ರೇಗೌಡ ತಿಳಿಸಿದರು.

ಆಧಾರ-ವಿಜಯಕರ್ನಾಟಕ ದಿನಾಂಕ: 24.12.2019

11. 30 ಪ್ರಮುಖ ರಸ್ತೆಗಳ ದತ್ತು ನೀಡಲು ನಿರ್ಧಾರ

ನಗರದಲ್ಲಿನ ರಸ್ತೆಗಳನ್ನು ದತ್ತು ನೀಡುವ ಕುರಿತಂತೆ ಬಿಬಿಎಂಪಿ ಸಭೆ ನಡೆಸಿದ್ದು, 30 ರಸ್ತೆಗಳನ್ನು ಸಂಘ ಸಂಸ್ಥೆಗಳಿಗೆ ದತ್ತು ನೀಡಲು ಮುಂದಾಗಿದೆ.

ನಗರದ ರಸ್ತೆಗಳನ್ನು ಸ್ವಚ್ಛವಾಗಿಡುವ ನಿಟ್ಟಿನಲ್ಲಿ 'ಅಡಾಪ್ಟ್-ಎ ಸ್ಟ್ರೀಟ್' ಹೆಸರಿನಲ್ಲಿ ರಸ್ತೆ ದತ್ತು ಪಡೆಯುವ ಯೋಜನೆಗೆ ಪಾಲಿಕೆ ಚಾಲನೆ ನೀಡಿದ್ದು, ವಿಶೇಷ ಆಯುಕ್ತ ರಂದೀಪ್ ನೇತೃತ್ವದಲ್ಲಿ ವಿವಿಧ 25 ಸಂಘ-ಸಂಸ್ಥೆಗಳ ಪ್ರತಿನಿಧಿಗಳ ಜೊತೆ 30ಕ್ಕೂ ಹೆಚ್ಚು ರಸ್ತೆಗಳನ್ನು ದತ್ತು ಪಡೆಯುವ ಕುರಿತು ಸಭೆ ನಡೆಯಿತು.

ಈಗಾಗಲೇ ಇಂಡಿಯಾ ರೈಸಿಂಗ್ ಟ್ರಸ್ಟ್ 10 ರಸ್ತೆಗಳನ್ನು ದತ್ತು ಪಡೆದು ಆ ರಸ್ತೆಗಳನ್ನು ಸ್ವಚ್ಛವಾಗಿಡುವ ಕಾರ್ಯ ನಡೆಸುತ್ತಿದೆ. ದತ್ತು ಪಡೆದ ಸಂಸ್ಥೆ ಆ ರಸ್ತೆಯಲ್ಲಿ ಬ್ಲಾಕ್ ಸ್ಪಾಟ್ (ಕಸ ಸುರಿಯುವ ಸ್ಥಳ) ತೆರವುಗೊಳಿಸುವುದು, ಪೌರ ಕಾರ್ಮಿಕರ ಸಹಯೋಗದಲ್ಲಿ ಬ್ಲಾಕ್ ಸ್ಪಾಟ್ ಸ್ಥಳದಲ್ಲಿ ರಂಗೋಲಿ ಬಿಡಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಗೋಡೆ/ಮರಕ್ಕೆ ಅಂಟಿಸಿರುವ ಭಿತ್ತಿಪತ್ರಗಳನ್ನು ತೆರವುಗೊಳಿಸುವುದು, ಗೋಡೆಗಳ ಮೇಲೆ ಬಣ್ಣ ಬಳಿಯುವುದು, ಪಾದಚಾರಿ ಮಾರ್ಗ ಸರಿಪಡಿಸುವುದು, ಒಣ ಮರ ಅಥವಾ ಮರಕ್ಕೆ ಅಳವಡಿಸಿರುವ ಗ್ರಿಲ್ ತೆರವುಗೊಳಿಸುವುದು, ಬೀದಿದೀಪ ನಿರ್ವಹಣೆಯ ಮೇಲೆ ಉಸ್ತುವಾರಿ ವಹಿಸುವುದು, ರಸ್ತೆ ಮಧ್ಯೆಯ ಮೀಡಿಯನ್ಸ್‌ನಲ್ಲಿ ವಿವಿಧ ರೀತಿಯ ಸಸಿಗಳನ್ನು ನೆಡುವುದು, ಉದ್ಯಾನ ಸ್ವಚ್ಛಗೊಳಿಸುವುದು, ರಸ್ತೆಯಲ್ಲಿ ಬ್ಯಾನರ್, ಫ್ಲೆಕ್ಸ್, ಓಎಫ್‌ಸಿ ಕೇಬಲ್, ಬೀದಿ ದೀಪ, ರಸ್ತೆ ಗುಂಡಿ ಕಂಡು ಬಂದರೆ 'ಸಹಾಯ' ಅಪ್ಲಿಕೇಷನ್ ಅಥವಾ 'ಫಿಕ್ಸ್ ಮೈ ಸ್ಟ್ರೀಟ್' ಅಪ್ಲಿಕೇಷನ್‌ನಲ್ಲಿ ದೂರು ದಾಖಲಿಸುವುದು ಸೇರಿದಂತೆ ಒಟ್ಟಾರೆ ರಸ್ತೆಯನ್ನು ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕಾಗುತ್ತದೆ.

ಆಧಾರ–ಸಂಯುಕ್ತಕರ್ನಾಟಕ 24.12.2019

12. ಭದ್ರತಾ ನಿಯಮಕ್ಕೆ ತಿದ್ದುಪಡಿ

ಅಂಗಡಿಗಳು ಮತ್ತು ವಾಣಿಜ್ಯ ಮಳಿಗೆಗಳಲ್ಲಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಮಹಿಳೆಯರಿಗೆ ಅವಕಾಶ ನೀಡುವುದರ ಜೊತೆಗೆ ಅದಕ್ಕೆ ಪೂರಕ ವ್ಯವಸ್ಥೆ ಮತ್ತು ರಕ್ಷಣೆ ನೀಡುವ ಸಂಬಂಧ ಕಾಯ್ದೆಗೆ ಅಗತ್ಯ ತಿದ್ದುಪಡಿ ಮಾಡಿ ಮುಂಬರುವ ವಿಧಾನ ಮಂಡಲದ ಅಧಿವೇಶನದಲ್ಲಿ ಒಪ್ಪಿಗೆ ಪಡೆಯಲಾಗುವುದೆಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ಪ್ರಮುಖ ಷರತ್ತುಗಳೆಂದರೆ:

1. ರಾತ್ರಿ ಪಾಳಿಯಲ್ಲಿ ಕಾರ್ಯನಿರ್ವಹಿಸುವ ಬಗ್ಗೆ ಮಹಿಳೆಯರಿಂದ ಲಿಖಿತ ಮನವಿ ಪಡೆಯಬೇಕು.
2. ಕೆಲಸದ ಸ್ಥಳ ಹಾಗೂ ಮನೆ ನಡುವೆ ಉಚಿತವಾಗಿ ವಾಹನ ವ್ಯವಸ್ಥೆ ಮಾಡಬೇಕು.
3. ಈ ವಾಹನಕ್ಕೆ ರಕ್ಷಣಾ ವ್ಯವಸ್ಥೆಯ ಜೊತೆಗೆ, ಜಿಪಿಎಸ್ ಅಳವಡಿಸಿ ಸಂಚಾರದ ಮೇಲೆ ನಿಗಾ ಇಡಬೇಕು. ರಾತ್ರಿ ಪಾಳಿಯ ಸಂದರ್ಭದಲ್ಲಿ ಹೆಚ್ಚು ರಕ್ಷಣಾ ಸಿಬ್ಬಂದಿ ನೇಮಿಸಬೇಕು.
4. ಕಾರ್ಯ ನಿರ್ವಹಿಸುವ ಸ್ಥಳದಲ್ಲಿ ರೆಸ್ಟ್‌ರೂಂ, ಶೌಚಾಲಯ, ಡಿಸ್ಪೆನ್ಸರಿ, ಲಾಕರ್ ಇತ್ಯಾದಿ ವ್ಯವಸ್ಥೆಗಳನ್ನು ಮಾಡಿರಬೇಕು.
5. ಚಾಲಕರ ವೈಯಕ್ತಿಕ ವಿವರಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದರ ಜೊತೆಗೆ, ಅವರ ಹಿಂದಿನ ಟ್ರ್ಯಾಕ್ ರೆಕಾರ್ಡ್ ಬಗ್ಗೆ ಮಾಹಿತಿಯನ್ನೂ ಪಡೆದುಕೊಳ್ಳಬೇಕು. ಮಹಿಳಾ ಉದ್ಯೋಗಿಗಳನ್ನು ಕರೆದುಕೊಂಡು ಬರುವ ಮತ್ತು ಬಿಟ್ಟು ಬರುವ ಮಾರ್ಗವನ್ನು ಮೇಲ್ವಿಚಾರಕರೇ ನಿರ್ಧರಿಸಬೇಕು.
6. ಮಹಿಳಾ ಉದ್ಯೋಗಿಗಳ ದೂರವಾಣಿ ಸಂಖ್ಯೆ, ಇ-ಮೇಲ್ ಐಡಿ, ವಿಳಾಸವನ್ನು ಅನಧಿಕೃತ ವ್ಯಕ್ತಿಗಳ ಜೊತೆ ಹಂಚಿಕೊಳ್ಳಬಾರದು.

ಆಧಾರ–ಪ್ರಜಾವಾಣಿ 31.12.2019

13. ಕೈಗಾರಿಕಾ ವ್ಯಾಜ್ಯ ಕಾಯ್ದೆಗೆ ತಿದ್ದುಪಡಿ

ಕೈಗಾರಿಕೆಗಳು ಪ್ರತಿ ಆರು ತಿಂಗಳಿಗೊಮ್ಮೆ ನವೀಕರಿಸಬೇಕಿದ್ದ ಪಬ್ಲಿಕ್ ಯುಟಿಲಿಟಿ ಅನುಮತಿಯನ್ನು ಇನ್ನು ಮುಂದೆ ಮೂರು ವರ್ಷಗಳಿಗೊಮ್ಮೆ ನವೀಕರಿಸುವ ಅವಧಿ ವಿಸ್ತರಣೆಗಾಗಿ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ ಎಂದು ಮಾಧುಸ್ವಾಮಿ ತಿಳಿಸಿದರು.

ಇದಕ್ಕೆ ಕೇಂದ್ರ ಸರ್ಕಾರದ ಅನುಮತಿಯ ಅಗತ್ಯವಿದೆ. ವಿಧಾನಮಂಡಲದಲ್ಲಿ ಒಪ್ಪಿಗೆ ಪಡೆದ ಬಳಿಕ ಅದನ್ನು ಕೇಂದ್ರಕ್ಕೆ ಕಳುಹಿಸಲಾಗುವುದು ಎಂದರು.

ಆಧಾರ–ಪ್ರಜಾವಾಣಿ 31.12.2019

14. ಟರ್ಫ್ ಕ್ಲಬ್ ಬಾಡಿಗೆ ವಸೂಲಿಗೆ ಕ್ರಮ

ಬೆಂಗಳೂರು ಟರ್ಫ್ ಕ್ಲಬ್‌ನಿಂದ ಸರ್ಕಾರಕ್ಕೆ ರೂ.37.46 ಕೋಟಿ ಬಾಡಿಗೆ ಬಾಕಿ ಉಳಿದಿದ್ದು, ಅದರ ವಸೂಲಿಗೆ ತೀರ್ಮಾನ ತೆಗೆದುಕೊಳ್ಳಲಾಗಿದೆ. ರೇಸ್‌ಕೋರ್ಸ್ ಸ್ಥಳಾಂತರ ನಿರ್ಧಾರ ತೆಗೆದುಕೊಂಡ ಬಳಿಕ ಟರ್ಫ್ ಕ್ಲಬ್ ನ್ಯಾಯಾಲಯದಿಂದ ಯಥಾಸ್ಥಿತಿ ಆದೇಶವನ್ನು ಪಡೆದುಕೊಂಡು ಬಂದಿದೆ. ಆ ಬಳಿಕ ಬಾಡಿಗೆ ಪಾವತಿಸಿಲ್ಲ ಎಂದು ಮಾಧುಸ್ವಾಮಿ ತಿಳಿಸಿದರು.

ಮೈಸೂರು ಟರ್ಫ್ ಕ್ಲಬ್‌ನ ಬಾಡಿಗೆಯನ್ನು ಶೇ. 2ರಿಂದ ಶೇ.7ಕ್ಕೆ ಹೆಚ್ಚಿಸಲಾಗಿದೆ. ಒಟ್ಟು ಆದಾಯದಲ್ಲಿ ಶೇ.7 ಬಾಡಿಗೆ ನೀಡಬೇಕಾಗುತ್ತದೆ. ಗುತ್ತಿಗೆ ಅವಧಿಯನ್ನು 30 ವರ್ಷಗಳಿಗೆ ವಿಸ್ತರಿಸಲಾಗಿದೆ ಎಂದು ಹೇಳಿದರು.

ಆಧಾರ– ಪ್ರಜಾವಾಣಿ 31.12.2019

15. ವಸತಿ ಯೋಜನೆಯಲ್ಲಿ ಮಹತ್ವದ ಮಾರ್ಪಾಡು

ನಗರದ 'ಮುಖ್ಯಮಂತ್ರಿ ಒಂದು ಲಕ್ಷ ಮನೆ ನಿರ್ಮಾಣ ಯೋಜನೆ'ಯಲ್ಲಿ ಮಹತ್ವದ ಮಾರ್ಪಾಡು ಮಾಡಲಾಗಿದೆ. ನೆಲಮಹಡಿ ಜೊತೆಗೆ 3(ಜಿ+3) ಮಹಡಿಗಳ ನಿರ್ಮಾಣ, ವಾರ್ಷಿಕ ಮೂರು ಲಕ್ಷ ರೂ. ಆದಾಯ ಉಳ್ಳವರಿಗೂ ಅರ್ಜಿ ಹಾಕಲು ಅವಕಾಶ ನೀಡಲು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ.

ಸಚಿವ ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಹಿಂದಿನ ಸರ್ಕಾರದ 14 ಮಹಡಿ ತೀರ್ಮಾನ ಹಿಂದಕ್ಕೆ ಪಡೆದು ಜಿ+3 ಮಹಡಿಗೆ ಸೀಮಿತಗೊಳಿಸಲಾಗಿದೆ. ಹೆಚ್ಚು ಅರ್ಜಿದಾರರಿಗೆ ಅವಕಾಶ ನೀಡಲೆಂದು ಆದಾಯದ ಮಿತಿ ವಾರ್ಷಿಕ ಮೂರು ಲಕ್ಷ ರೂ.ಗೆ ಹೆಚ್ಚಿಸಲಾಗಿದೆ. ವಸತಿ ಸೌಲಭ್ಯ ಕಲ್ಪಿಸಿದ ಬಳಿಕ ತಲೆದೋರಬಹುದಾದ ನಿರ್ವಹಣೆ ಇನ್ನಿತರ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಮಹಡಿ ಸಂಖ್ಯೆ ಕಡಿತಗೊಳಿಸಲಾಗಿದೆ. ಸದ್ಯ ಪೂರ್ಣಗೊಂಡ, ನಿರ್ಮಾಣ ಹಂತದ 37 ಸಾವಿರ ಮನೆಗಳನ್ನು ಬಿಟ್ಟು ಮುಂದೆ ಟೆಂಡರ್ ಕರೆದು ಗುತ್ತಿಗೆ ನೀಡುವ ಕಾಮಗಾರಿಗೆ ಜಿ+3 ಮಹಡಿ ಅನ್ವಯಿಸುತ್ತದೆ.

ಆಧಾರ–ವಿಜಯವಾಣಿ 31.12.2019

* * * * *

ಭಾಗ–5

ರಾಜ್ಯ ಜಲ ನೆಲ ಭಾಷೆ ಸುದ್ದಿಗಳು

1. ಆಲಮಟ್ಟಿ ಎತ್ತರಿಸಲು 20 ಸಾವಿರ ಕೋಟಿ

ಆಲಮಟ್ಟಿ ಡ್ಯಾಂನ್ನು 519.60 ಮೀಟರ್‌ನಿಂದ 524.256 ಮೀಟರ್ ಎತ್ತರಿಸುವುದರ ಮೂಲಕ 173 ಟಿಎಂಸಿ ನೀರನ್ನು ಸದ್ಬಳಕೆ ಮಾಡಿಕೊಳ್ಳಲಾಗುತ್ತದೆ. ಇದಕ್ಕಾಗಿ ಬಜೆಟ್‌ನಲ್ಲಿ 20 ಸಾವಿರ ಕೋಟಿ ರೂ. ಒದಗಿಸಲಾಗುತ್ತದೆ. ಅಣೆಕಟ್ಟು ಎತ್ತರಿಸುವುದರಿಂದ 20 ಗ್ರಾಮಗಳನ್ನು ಸ್ಥಳಾಂತರಿಸಬೇಕಾಗುತ್ತದೆ. ಇಷ್ಟೂ ಜನರಿಗೆ ಯೋಗ್ಯ ಮರುವಸತಿ ಕಲ್ಪಿಸಲಾಗುತ್ತದೆ ಎಂದು ಸಿಎಂ ಯಡಿಯೂರಪ್ಪ ಘೋಷಿಸಿದರು.

ಆಲಮಟ್ಟಿ ಜಲಾಶಯಕ್ಕೆ ಬಾಗಿನ ಅರ್ಪಿಸಿದ ನಂತರ ಮಾತನಾಡಿದ ಅವರು, ಬ್ರಿಜೇಶ್‌ಕುಮಾರ್ ನೇತೃತ್ವದ ನ್ಯಾಯಾಧೀಕರಣ ತೀರ್ಪು ನೀಡಿದಂತೆ ಆಲಮಟ್ಟಿ ಎತ್ತರಿಸಿ ಹಂಚಿಕೆಯಾದ ನೀರನ್ನು ಬಳಕೆ ಮಾಡಿಕೊಳ್ಳುವುದು ನಮ್ಮ ಸರ್ಕಾರದ ಮೊದಲ ಆದ್ಯತೆಯಾಗಿದೆ. ಅದಕ್ಕಾಗಿ ಮುಂದಿನ ಬಜೆಟ್‌ನಲ್ಲಿ ಬಾಧಿತ ಗ್ರಾಮಗಳ ಸ್ಥಳಾಂತರ, ಪುನರ್‌ವಸತಿ, ಪುನರ್‌ನಿರ್ಮಾಣ ಕಾರ್ಯಕ್ಕಾಗಿ 20 ಸಾವಿರ ಕೋಟಿ ಕಾಯ್ದಿರಿಸಲಾಗುವುದು. ಕೇಂದ್ರದಿಂದಲೂ ನೆರವು ಪಡೆಯಲಾಗುವುದು ಎಂದರು.

ಆಲಮಟ್ಟಿ ಡ್ಯಾಂ ಎತ್ತರಿಸಲು, ನ್ಯಾಯಾಧೀಕರಣದ ತೀರ್ಪಿನ ಕುರಿತು ಅಧಿಸೂಚನೆ ಹೊರಡಿಸಲು ಆಂಧ್ರ ಹಾಗೂ ತೆಲಂಗಾಣ ರಾಜ್ಯಗಳು ಸುಪ್ರಿಂಕೋರ್ಟ್‌ನಲ್ಲಿ ಸಲ್ಲಿಸಿದ ಮೇಲ್ಮನವಿ ಅಡ್ಡಿಯಾಗಿದೆಯಲ್ಲ ಎಂದಾಗ, ವಿಚಾರಣೆ ಪೂರ್ಣಗೊಂಡು ತೀರ್ಪು ಪ್ರಕಟಗೊಳ್ಳುವ ಮೊದಲೇ ಗ್ರಾಮಗಳ ಸ್ಥಳಾಂತರ ಕೈಗೊಳ್ಳಲಾಗುವುದು ಎಂದು ಸಿಎಂ ಉತ್ತರಿಸಿದರು.

ಆಲಮಟ್ಟಿ ಡ್ಯಾಂ ಎತ್ತರಕ್ಕೆ ಸಂಬಂಧಿಸಿದಂತೆ ಈಗಾಗಲೇ ಪ್ರಧಾನಿಗೆ ಮನವಿ ಮಾಡಿಕೊಳ್ಳಲಾಗುವುದು. ತೀರ್ಪು ಪ್ರಕಟಗೊಳ್ಳುವ ಮುನ್ನ ಸಂಬಂಧಿಸಿದ ರಾಜ್ಯಗಳ ಜೊತೆ ಮಾತುಕತೆ ನಡೆಸಲಾಗುವುದು ಎಂದು ಯಡಿಯೂರಪ್ಪ ತಿಳಿಸಿದರು.

ಆಧಾರ– ವಿಜಯಕರ್ನಾಟಕ 06.10.2019

2. ಬಯಲು ಸೀಮೆಗೆ ಹರಿದಳು ಭದ್ರೆ

ಭದ್ರಾ ಮೇಲ್ದಂಡೆಯಿಂದ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ವಾಣಿ ವಿಲಾಸ ಸಾಗರಕ್ಕೆ ಪ್ರಾಯೋಗಿಕವಾಗಿ ನೀರು ಹರಿಸುವ ಮೂಲಕ ಬಯಲು ಸೀಮೆಯ ದಶಕಗಳ ಕನಸು ನನಸಾಗುತ್ತಿದೆ ಸ್ವಾತ್ರಂತ್ರ್ಯಾ ನಂತರದ ಆರಂಭದ ದಶಕಗಳಿಂದ ಈ ಯೋಜನೆ ಜಾರಿ ಕುರಿತು ಘೋಷಣೆಗಳಿದ್ದವಾದರೂ ತೊಂಭತ್ತರ ದಶಕದ ಮಧ್ಯಭಾಗದ ನಂತರ ಆರಂಭವಾದ ನಿರಂತರ ಹೋರಾಟ, ಒತ್ತಡಗಳು ಈ ಯೋಜನೆ ಮೂರ್ತ ಸ್ವರೂಪ ಪಡೆದುಕೊಳ್ಳಲು ಒತ್ತಾಸೆಯಾದವು. ನಿಜಾರ್ಥದಲ್ಲಿ ಇದು ಜನತೆಯ ಹೋರಾಟದ ಗೆಲುವು.

ಭದ್ರ ಹಾಗೂ ತುಂಗಾ ಜಲಾಶಯದಿಂದ 29.9 ಟಿಎಂಸಿ ನೀರನ್ನು ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ತುಮಕೂರು ಜಿಲ್ಲೆಯ 2.25 ಲಕ್ಷ ಹೆಕ್ಟೇರ್ ಭೂಮಿಗೆ ಮುಂಗಾರು ಹಂಗಾಮಿನಲ್ಲಿ ಹನಿ ನೀರಾವರಿ (ಮೈಕ್ರೋ ಡ್ರಿಪ್ ಇರಿಗೇಶನ್) ಮೂಲಕ ನೀರುಣಿಸುವುದು. 4 ಜಿಲ್ಲೆಗಳ ವ್ಯಾಪ್ತಿಯ 367 ಕೆರೆಗಳಿಗೆ ಅವುಗಳ ಸಾಮರ್ಥ್ಯದ ಶೇ.50ರಷ್ಟು ನೀರು ತುಂಬಿಸಿ, ಅಂತರ್ಜಲ ವೃದ್ಧಿಸುವುದು ಭದ್ರಾ ಮೇಲ್ದಂಡೆ ಯೋಜನೆಯ ಮುಖ್ಯ ಉದ್ದೇಶ, ತುಂಗಾ ಮೇಲ್ದಂಡೆಯ ಹಿನ್ನೀರಿನಿಂದ 17.4 ಟಿಎಂಸಿ ನೀರನ್ನು ಭದ್ರಾ ಜಲಾಶಯಕ್ಕೆ ಲಿಫ್ಟ್ ಮಾಡುವುದರ ಜೊತೆಗೆ ಭದ್ರಾ ಜಲಾಶಯದ 12.5 ಟಿಎಂಸಿ ಸೇರಿ ಒಟ್ಟು 29.9 ಟಿಎಂಸಿ ನೀರನ್ನು ಹರಿಸಲಾಗುವುದು.

- ಈ ಯೋಜನೆಯ ಒಟ್ಟಾರೆ ವೆಚ್ಚ ರೂ. 12,340 ಕೋಟಿ
- 2007 ರಿಂದ ಇಲ್ಲಿಯವರೆಗೆ ಯೋಜನೆಯ ವೆಚ್ಚ ರೂ.3000 ಕೋಟಿ
- ಸದ್ಯ ಕಾಮಗಾರಿ ಪೂರ್ಣಗೊಂಡಿರುವ ಪ್ರಮಾಣ ಶೇ. 50
- 2022–23 ಹೊತ್ತಿಗೆ ಇಡೀ ಯೋಜನೆ ಪೂರ್ಣಗೊಳ್ಳಲಿದೆ
- 367 ಕೆರೆಗಳಿಗೆ ಈ ಯೋಜನೆಯಿಂದ ನೀರು ಹರಿಸಲಾಗುವುದು.

ಆಧಾರ–ವಿಜಯಕರ್ನಾಟಕ ದಿ:6.10.2019

3. ನೆರೆ ಬಂದರೂ 21,000 ಕೆರೆಗಳಲ್ಲಿ ನೀರಿಲ್ಲ!

ಪ್ರಸಕ್ತ ಮುಂಗಾರು ಅವಧಿಯಲ್ಲಿ ದಶಕದ ಮಹಾ ಮಳೆ ಸುರಿದರೂ ರಾಜ್ಯದ ಸುಮಾರು 21 ಸಾವಿರ ಕೆರೆಗಳಲ್ಲಿ ಸಂಗ್ರಹವಾದ ನೀರಿನ ಪ್ರಮಾಣ ಶೇ.10ಕ್ಕಿಂತ ಕಡಿಮೆಯಾಗಿದೆ.

2009ರ ನಂತರದ ವರ್ಷಗಳಲ್ಲಿ ಸುರಿದ ಮಳೆಯ ಪ್ರಮಾಣಕ್ಕಿಂತ ಈ ಬಾರಿ ಮುಂಗಾರು ಅವಧಿಯಲ್ಲಿ ಅತಿ ಹೆಚ್ಚು ಮಳೆಯಾಗಿದ್ದು, ರಾಜ್ಯದ ನದಿಗಳು ಉಕ್ಕಿ ಹರಿದು ಜಲಾಶಯಗಳು ತುಂಬಿ ಲಕ್ಷಾಂತರ ಕ್ಯೂಸೆಕ್ ನೀರನ್ನು ಹೊರ ಬಿಡಲಾಗಿತ್ತು. 22 ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿ ರಾಜ್ಯದ ಜನ ಜಲ ಗಂಡಾಂತರಕ್ಕೆ ಸಿಲುಕಿ ತತ್ತರಿಸಿ ಹೋಗಿದ್ದರು. ವಿಪರ್ಯಾಸವೆಂದರೆ ಇಂದಿಗೂ ರಾಜ್ಯದ ಬಹುತೇಕ ಕೆರೆಗಳಿಗೆ ನೀರು ಬಾರದೇ ಒಣಗಿ ಬಾಯಿ ತೆರೆದುಕೊಂಡಿದೆ.

ರಾಜ್ಯದ ಒಟ್ಟು 36,969 ಕೆರೆಗಳಲ್ಲಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ 40 ಹೆಕ್ಟೇರ್‌ಗಿಂತ ಕಡಿಮೆ ವಿಸ್ತೀರ್ಣದ ಸುಮಾರು 28,500 ಕೆರೆಗಳ ಪೈಕಿ 21 ಸಾವಿರ ಕೆರೆಗಳಲ್ಲಿ (ಶೇ.70 ರಷ್ಟು ಕೆರೆಗಳು) ಮುಂಗಾರು ಅವಧಿ ಪೂರ್ಣಗೊಂಡರೂ ಶೇ.10 ರಷ್ಟು ಪ್ರಮಾಣದ ನೀರು ಶೇಖರಣೆಯಾಗಿಲ್ಲ. ಸೆಪ್ಟೆಂಬರ್ ಅಂತ್ಯಕ್ಕೆ ಕೇವಲ ಸುಮಾರು 1,200 ಕೆರೆಗಳು (ಶೇ.5 ರಷ್ಟು) ಮಾತ್ರ ಭರ್ತಿಯಾಗಿವೆ ಎಂಬ ಆತಂಕಕಾರಿ ಅಂಶವನ್ನು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ) ಅಕ್ಟೋಬರ್ ವರದಿಯಲ್ಲಿ ಬಹಿರಂಗ ಪಡಿಸಿದೆ.

ಕೆರೆಗಳಿಗೆ ನೀರು ಏಕೆ ಬರುತ್ತಿಲ್ಲ ಎಂಬುದಕ್ಕೆ ಕೆಎಸ್‌ಎನ್‌ಡಿಎಂಸಿ ನಿರ್ದೇಶಕ ಶ್ರೀನಿವಾಸ್ ರೆಡ್ಡಿ ಕೆಲವು ಕಾರಣಗಳನ್ನು ನೀಡಿದ್ದಾರೆ.

1. ಇತ್ತೀಚಿನ ದಿನಗಳಲ್ಲಿ ಅಂತರ್ಜಲ ಕುಸಿತ ಹೆಚ್ಚಿದ್ದರಿಂದ ನೀರು ಭೂಮಿಯ ಅಂತರಾಳ ಸೇರುತ್ತಿದೆ.
2. ಕೃಷಿಗಾಗಿ ಭೂ ಬಳಕೆ ಪದ್ಧತಿ ಬದಲಾವಣೆ ಮಾಡಿಕೊಳ್ಳಲಾಗಿದೆ. ಟ್ರ್ಯಾಕ್ಟರ್‌ನಿಂದ ಸುಮಾರು 1 ರಿಂದ 3 ಅಡಿಯವರೆಗೆ ಭೂಮಿಯನ್ನು ಉಳುಮೆ ಮಾಡಲಾಗುತ್ತಿದೆ. ಇದರಿಂದ ಮಳೆನೀರು ಹರಿದು ಬರುವುದಿಲ್ಲ.
3. ಇನ್ನು ಕೆರೆಗಳಿಗೆ ನೀರು ಹರಿದು ಬರುವ ಜಾಡು, ಹಳ್ಳ, ತೊರೆಗಳನ್ನು ಒತ್ತುವರಿ ಮಾಡಲಾಗಿದೆ. ಇದರಿಂದ ಕೆರೆಗೆ ಹರಿದು ಬರುವ ನೀರಿನ ಪ್ರಮಾಣ ಕುಸಿದಿದೆ.
4. ಚೆಕ್ ಡ್ಯಾಂ, ಕೃಷಿಹೊಂಡ ಸೇರಿ ವಿವಿಧ ವಿಧಾನಗಳ ಮೂಲಕ ಮಳೆ ನೀರು ಹಿಡಿದಿಡುವ ಕೆಲಸ ಮಾಡಲಾಗುತ್ತಿದೆ. ಇದು ಒಂದು ಕಾರಣವಾಗಿದೆ.

ಆಧಾರ–ಕನ್ನಡ ಪ್ರಭ:15.10.19

4. ಕಳಸಾ–ಬಂಡೂರಿಗೆ ಕೇಂದ್ರದ ಸಹಮತ

ಹುಬ್ಬಳ್ಳಿ–ಧಾರವಾಡ, ಗದಗ ಜಿಲ್ಲೆಗಳ ಪಟ್ಟಣಗಳು, ಹಳ್ಳಿಗಳಿಗೆ ಕುಡಿಯುವ ನೀರೊದಗಿಸುವ ಕಳಸಾ–ಬಂಡೂರಿ ಯೋಜನೆಗೆ ಯಾವುದೇ ಅಡ್ಡಿಯಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಇದರಿಂದ ಕಾಮಗಾರಿ ಆರಂಭಿಸಲು ರಾಜ್ಯ ಸರ್ಕಾರಕ್ಕೆ ಅವಕಾಶ ಸಿಕ್ಕಿದೆ. ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವ ಪ್ರಕಾಶ್ ಜಾವಡೇಕರ್ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರಿಗೆ ಬರೆದ ಪತ್ರದಲ್ಲಿ ಈ ಸ್ಪಷ್ಟೀಕರಣ ನೀಡಿದ್ದಾರೆ. ಇದರಿಂದ ಗೊಂದಲ ನಿವಾರಣೆ ಆಗಿದೆ. ಆದರೆ ನ್ಯಾಯಾಧೀಕರಣದ ತೀರ್ಪು ಗೆಜೆಟ್‌ನಲ್ಲಿ ಪ್ರಕಟವಾದ ನಂತರ ಕಾಮಗಾರಿ ಆರಂಭಿಸಬಹುದು. ಕುಡಿಯುವ ನೀರಿನ ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ಅಗತ್ಯವಿಲ್ಲ ಎಂಬ 2006ರ ಅಧಿಸೂಚನೆಯನ್ನು ಅಮಾನತ್ತಿನಲ್ಲಿ ಇಟ್ಟಿಲ್ಲ. ಪರಿಸರ ಪ್ರಭಾವದ ಮೌಲ್ಯಮಾಪನ ಅಧಿಸೂಚನೆ ಅಮಾನತ್ತು ಮಾಡಿಲ್ಲ ಎಂದು ಹೇಳಿದ್ದಾರೆ. ತೀರ್ಪಿನ ಗೆಜೆಟ್ ಪ್ರಕಟಣೆ ನಂತರ ಕಾಮಗಾರಿ ಆರಂಭಿಸಬಹುದು. ಆದರೆ ಯೋಜನೆಗೆ ಅರಣ್ಯ ಇಲಾಖೆ ಅನುಮತಿ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಗೋವಾ ಸರ್ಕಾರದ ಒತ್ತಡದ ಮೇಲೆ ಕೇಂದ್ರ ಸರ್ಕಾರ ಈ ಯೋಜನೆ ಜಾರಿಗೆ ನೀಡಿದ್ದ ಅನುಮತಿಯನ್ನು ತಡೆ ಹಿಡಿದಿದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಕಳೆದ ಡಿಸೆಂಬರ್, 19 ರಂದು ಗೃಹ ಸಚಿವರು ಕೇಂದ್ರ ಸಚಿವರಿಗೆ ಪತ್ರ ಬರೆದು ಸ್ಪಷ್ಟನೆ ಕೋರಿದ್ದರು.

ಆಧಾರ–ಸಂಯುಕ್ತ ಕರ್ನಾಟಕ 25.12.19

* * * * *

ಭಾಗ–6

ಚುನಾವಣಾ ಸುದ್ದಿಗಳು

1. ಪ್ರಗತಿ ಮಂದಗತಿ: ಅವಕಾಶ ಬಳಸಿಕೊಳ್ಳಲು ಚುನಾವಣೆ ಆಯೋಗ ಮನವಿ:

ಪ್ರತಿಯೊಬ್ಬ ಅರ್ಹ ಮತದಾರನಿಗೆ ಹಕ್ಕು ಚಲಾಯಿಸುವ ಅವಕಾಶ ಸಿಗಬೇಕು. ಮತದಾರರ ಪಟ್ಟಿ ದೋಷರಹಿತ ಪರಿಪಕ್ವ, ಪರಿಪೂರ್ಣ ಹಾಗೂ ಪರಿಶುದ್ಧವಾಗಿರಬೇಕೆಂಬ ಉದ್ದೇಶದಿಂದ ಚುನಾವಣೆ ಆಯೋಗ ಇವಿಪಿ ಹಮ್ಮಿಕೊಂಡಿದೆ. ಈ ಅವಧಿಯಲ್ಲಿ ಪ್ರತಿಯೊಬ್ಬರು ಮತದಾರರ ಪಟ್ಟಿಯಲ್ಲಿ ತಮ್ಮ ವೈಯಕ್ತಿಕ ಮಾಹಿತಿಗಳನ್ನು ಪರಿಶೀಲಿಸಿಕೊಂಡು ದೃಢೀಕರಿಸಿಕೊಳ್ಳಬೇಕು. ಇದರಿಂದಾಗಿ ಮತದಾರರ ಪಟ್ಟಿ ಪರಿಷ್ಕರಣೆ ಹಾಗೂ ಮತದಾರರ ಅಂತಿಮ ಪಟ್ಟಿ ಪ್ರಕಟಿಸಲು ಅನುಕೂಲವಾಗಲಿದೆ ಎನ್ನುವುದು ಆಯೋಗದ ಪ್ರತಿಪಾದನೆ.

ರಾಜ್ಯದಲ್ಲಿ ಇವಿಪಿ ಮಂದಗತಿಯಲ್ಲಿ ಸಾಗಿದೆ. ಮತದಾರರು ಇದರ ಉಪಯೋಗ ಪಡೆದುಕೊಳ್ಳಲು ಮುಂದೆ ಬರುತ್ತಿಲ್ಲ. ಚುನಾವಣೆ ಸಂದರ್ಭದಲ್ಲಿ ದೂರುಗಳನ್ನು ಹೇಳಿಕೊಂಡರೆ ಪರಿಹಾರ ಸಿಗುವುದಿಲ್ಲ. ಆಗಸ್ಟ್ 15 ರವರೆಗೆ ಇವಿಪಿ ನಡೆಯುತ್ತದೆ. ಇನ್ನೂ 11 ದಿನ ಕಾಲಾವಕಾಶವಿದೆ. ಅಧಿಕ ಸಂಖ್ಯೆಯಲ್ಲಿ ಮತದಾರರು ತಮ್ಮ ವೈಯಕ್ತಿಕ ಮಾಹಿತಿಗಳನ್ನು ಪರಿಶೀಲಿಸಿಕೊಂಡು ದೃಢೀಕರಿಸಿಕೊಳ್ಳಿ. ತಪ್ಪು ಅಥವಾ ತಿದ್ದುಪಡಿಗಳಿದ್ದರೆ ಸರಿಪಡಿಸಿಕೊಳ್ಳಿ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಯವರು ತಿಳಿಸಿದರು.

ಆಧಾರ–04.10.2019 ಉದಯವಾಣಿ

2. 14 ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಫಲಿತಾಂಶ ಪ್ರಕಟವಾಗಿದ್ದು, ಬಿ.ಜೆ.ಪಿ.ಯ ಶಕ್ತಿ ವರ್ಧನೆಗೊಂಡಿದೆ. ಕಾಂಗ್ರೆಸ್‌ಗೆ ಸಮಾಧಾನಕರ ಫಲಿತಾಂಶ ದೊರೆತಿದೆ.

ಮಂಗಳೂರು ಮಹಾನಗರ ಪಾಲಿಕೆ ಕಾಂಗ್ರೆಸ್‌ನಿಂದ ಬಿಜೆಪಿ ತೆಕ್ಕೆಗೆ ಬಂದಿದ್ದರೆ, ದಾವಣಗೆರೆ ಪಾಲಿಕೆಯಲ್ಲಿ ಕಾಂಗ್ರೆಸ್ ಅತಿ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿದೆ. 6 ನಗರ ಸಭೆಗಳ ಪೈಕಿ 3 ಕಾಂಗ್ರೆಸ್ ಪಾಲಾಗಿದ್ದು, 3 ರಲ್ಲಿ ಅತಂತ್ರ ಸ್ಥಿತಿ ಇದೆ. 3 ಪುರಸಭೆ ಪೈಕಿ ತಲಾ 1 ರಲ್ಲಿ ಬಿಜೆಪಿ ಮತ್ತು ಜೆಡಿಎಸ್ ಹಾಗೂ 1 ರಲ್ಲಿ ಅತಂತ್ರ ಸ್ಥಿತಿಯಲ್ಲಿದೆ. 3 ಪಟ್ಟಣ ಪಂಚಾಯಿತಿಗಳಲ್ಲಿ 2 ರಲ್ಲಿ ಬಿಜೆಪಿ ಹಾಗೂ 1 ರಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ.

ಆಧಾರ–ಪ್ರಜಾವಾಣಿ 15.11.2019

3. ಬಣ್ಣದ ಫೋಟೋವುಳ್ಳ ಸ್ಮಾರ್ಟ್ ಕಾರ್ಡ್ ರೀತಿಯ ವೋಟರ್ ಐಡಿ

ಮತದಾರರ ಗುರುತಿನ ಚೀಟಿಯಲ್ಲಿ ಚುನಾವಣಾ ಆಯೋಗವು ಬದಲಾವಣೆ ಮಾಡಿದ್ದು, ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಸ್ಮಾರ್ಟ್‌ಕಾರ್ಡ್ ಮಾದರಿಯಲ್ಲಿ ಗುರುತಿನ ಚೀಟಿ ನೀಡಲಾಗುವುದು ಎಂದು ಮುಖ್ಯ ಚುನಾವಣಾಧಿಕಾರಿ ಶ್ರೀ ಸಂಜೀವ್ ಕುಮಾರ್ ತಿಳಿಸಿದರು.

ಹೊಸದಾಗಿ ಬಣ್ಣದ ಗುರುತಿನ ಚೀಟಿ ವಿತರಣೆ ಮಾಡಲಾಗುತ್ತಿದೆ. ಮೊದಲ ಬಾರಿಗೆ ನೋಂದಣಿ ಮಾಡುತ್ತಿರುವವರಿಗೆ ಉಚಿತವಾಗಿ ಗುರುತಿನ ಚೀಟಿ ವಿತರಣೆ ಮಾಡಲಾಗುತ್ತಿದೆ. ಈಗಾಗಲೇ ಗುರುತಿನ ಚೀಟಿ ಹೊಂದಿರುವವರು ರೂ.30 ಶುಲ್ಕ ಪಾವತಿಸಿ ಸ್ಮಾರ್ಟ್‌ಕಾರ್ಡ್ ಗುರುತಿನ ಚೀಟಿ ಪಡೆದುಕೊಳ್ಳಬಹುದಾಗಿದೆ. ಬಾರ್‌ಕೋಡ್‌ನೊಂದಿಗೆ ಮತದಾರರ ಸಂಪೂರ್ಣ ವಿವರ ಕಾರ್ಡ್‌ನಲ್ಲಿ ಇರಲಿದೆ ಎಂದು ತಿಳಿಸಿದ್ದಾರೆ.

ಆಧಾರ–ಕನ್ನಡಪ್ರಭ 22.11.2019

4. 80 ಉಪ ಚುನಾವಣೆಗಳು

ರಾಜ್ಯಗಳ ವಿಧಾನಸಭೆಗಳಿಗೆ ಉಪ ಚುನಾವಣೆಗಳು ಹೊಸದಲ್ಲ. ಆಯಾ ರಾಜ್ಯಗಳಲ್ಲಿ ಪ್ರತಿ ವಿಧಾನ ಸಭೆಯ ಅವಧಿಯಲ್ಲಿ ವಿವಿಧ ಕಾರಣಗಳಿಗೆ ಉಪ ಚುನಾವಣೆಗಳು ನಡೆಯುತ್ತಲೇ ಬಂದಿದೆ. ಅದರಂತೆ, 2019ರಲ್ಲಿ ಇಲ್ಲಿಯವರೆಗೆ ದೇಶದಲ್ಲಿ ಒಟ್ಟು 80 ಕ್ಷೇತ್ರಗಳಿಗೆ ಉಪ ಚುನಾವಣೆ ನಡೆದಿದೆ. 2019ರ ಏಪ್ರಿಲ್‌ನಿಂದ

ಅಕ್ಟೋಬರ್‌ವರೆಗೆ ತಮಿಳುನಾಡಿನಲ್ಲಿ 24, ಉತ್ತರ ಪ್ರದೇಶದಲ್ಲಿ 14, ಪಶ್ಚಿಮ ಬಂಗಾಳದಲ್ಲಿ 11, ಗುಜರಾತಿನಲ್ಲಿ 16 ವಿಧಾನ ಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆದಿದೆ.

ಆಧಾರ–ಕನ್ನಡಪ್ರಭ 24.11.2019

5. ಕರ್ತವ್ಯ ಲೋಪ 6 ಚುನಾವಣಾಧಿಕಾರಿಗಳ ಅಮಾನತ್ತು

ವಿಧಾನ ಸಭಾ ಕ್ಷೇತ್ರಗಳ ಉಪ ಚುನಾವಣೆ ಹಿನ್ನೆಲೆಯಲ್ಲಿ ಬೆಂಗಳೂರು ನಗರದ ವಿವಿಧ ಚೆಕ್‌ಪೋಸ್ಟ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕೆ.ಆರ್.ಪುರಂ. ವಿಧಾನಸಭಾ ಕ್ಷೇತ್ರದ ಟಿ.ಸಿ. ಪಾಳ್ಯ, ಯಶವಂತಪುರದ ಮಾಗಡಿ ನೈಸ್ ರಸ್ತೆಯ ದೊಡ್ಡಗೊಲ್ಲರಟ್ಟಿ ಹಾಗೂ ತಾವರೆಕೆರೆ ಚೆಕ್‌ಪೋಸ್ಟ್‌ಗಳಲ್ಲಿ ತಲಾ ಒಬ್ಬರು ಮತ್ತು ಶಿವಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಹಲಸೂರು ಚೆಕ್‌ಪೋಸ್ಟ್‌ನಲ್ಲಿ ಇಬ್ಬರು ಸೇರಿ ಒಟ್ಟು ಆರು ಮಂದಿಯನ್ನು ಅಮಾನತ್ತುಗೊಳಿಸಿದೆ ಎಂದು ಮುಖ್ಯ ಚುನಾಣಾಧಿಕಾರಿಗಳು ತಿಳಿಸಿದರು.

ಆಧಾರ–ಉದಯವಾಣಿ 27.11.2019

6. 26000 ಯುವ ಜನರಿಂದ ಮೊದಲ ಬಾರಿ ಮತದಾನ

ದಿನಾಂಕ 27.11.2019ರಂದು ಬಿ.ಬಿ.ಎಂ.ಪಿ. ಕೇಂದ್ರ ಕಛೇರಿಯಲ್ಲಿ ಚುನಾವಣಾಧಿಕಾರಿ ಶ್ರೀ ಬಿ.ಹೆಚ್.ಅನಿಲ್ ಕುಮಾರ್ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಡಿಸೆಂಬರ್ 5 ರಂದು ಬೆಂಗಳೂರು ನಗರದಲ್ಲಿ ವ್ಯಾಪ್ತಿಯಲ್ಲಿ ಬರುವ ಕೆ.ಆರ್.ಪುರಂ, ಶಿವಾಜಿನಗರ, ಯಶವಂತಪುರ ಹಾಗೂ ಮಹಾಲಕ್ಷ್ಮಿ ಲೇಔಟ್ ಕ್ಷೇತ್ರಗಳಿಗೆ ನಡೆಯುವ ಉಪ ಚುನಾವಣೆಯಲ್ಲಿ 26,233 ಯುವ ಜನರು ಪ್ರಥಮ ಬಾರಿಗೆ ಮತದಾನ ಮಾಡಲಿದ್ದಾರೆ ಎಂದು ತಿಳಿಸಿದರು.

2019ರ ಮಾರ್ಚ್ 17 ರಿಂದ ನವೆಂಬರ್ 8ರ ವರೆಗೆ 18 ವರ್ಷ ತುಂಬಿದ 33,156 ಯುವ ಮತದಾರರು ಫಾರಂ 6ರ ಮೂಲಕ ತಮ್ಮ ಹೆಸರುಗಳನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಿಕೊಳ್ಳುವುದಕ್ಕೆ ಅರ್ಜಿ ಸಲ್ಲಿಕೆ ಮಾಡಿದ್ದರು. ಅದರಲ್ಲಿ 29,858 ಅರ್ಜಿಗಳು ಸ್ವೀಕೃತವಾಗಿವೆ. 1,412 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. 26,233 ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸಲಾಗಿದೆ. ಹೊಸ ಮತದಾರರಿಗೆ ನವೆಂಬರ್ 28 ರಿಂದ ಡಿಸೆಂಬರ್ 1 ರೊಳಗಾಗಿ ಮತದಾರರ ಗುರುತಿನ ಚೀಟಿ ವಿತರಣೆ ಮಾಡಲಾಗುವುದು ಎಂದರು.

ಆಧಾರ–ಕನ್ನಡ ಪ್ರಭ 28.11.2019

7. 884 ಸೂಕ್ಷ್ಮ ಮತಗಟ್ಟೆಗಳಲ್ಲಿ ಕಟ್ಟೆಚ್ಚರ

ರಾಜ್ಯದ 15 ವಿಧಾನಸಭಾ ಕ್ಷೇತ್ರಗಳಲ್ಲಿ ದಿನಾಂಕ 05.12.2019ರಂದು ಉಪ ಚುನಾವಣೆಗೆ ಮತದಾನ ನಡೆಯಲಿದ್ದು 4,185 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಇದರಲ್ಲಿ 884 ಸೂಕ್ಷ್ಮ ಮತಗಟ್ಟೆಗಳೆಂದು ಗುರುತಿಸಲಾಗಿದೆ.

884 ಸೂಕ್ಷ್ಮ ಮತಗಟ್ಟೆಗಳ ಪೈಕಿ 414 ಮತಗಟ್ಟೆಗಳಲ್ಲಿ ಸಿಆರ್‌ಪಿಎಫ್ ತಂಡ ಕಾರ್ಯನಿರ್ವಹಿಸಲಿದ್ದು, 805 ಮತಗಟ್ಟೆಗಳಲ್ಲಿ ಸೂಕ್ಷ್ಮ ವೀಕ್ಷಕರು, 206 ಮತಗಟ್ಟೆಗಳಲ್ಲಿ ವೆಬ್ ಕ್ಯಾಮರಾ ಹಾಗೂ 259 ಮತಗಟ್ಟೆಗಳಲ್ಲಿ ವಿಡಿಯೊ ಚಿತ್ರೀಕರಣ ಮಾಡಲಾಗುತ್ತದೆ. ಮತದಾನ ಸಂದರ್ಭದಲ್ಲಿ ಯಾವುದೇ ಅಡತಡೆಗಳು ಉಂಟಾಗದಂತೆ ಮುಂಜಾಗ್ರತಾ ಕ್ರಮಗಳನ್ನು ವಹಿಸಲಾಗಿದೆ.

ಉಪಚುನಾವಣೆ ಸಂದರ್ಭದಲ್ಲಿ ಮತದಾರರು ಭಾವಚಿತ್ರವುಳ್ಳ ಗುರುತಿನ ಚೀಟಿ ತೋರಿಸಿ ಮತದಾನ ಮಾಡಬೇಕಾಗುತ್ತದೆ. ಒಂದು ವೇಳೆ ಮತದಾರರ ಗುರುತಿನ ಚೀಟಿ ಇರದಿದ್ದಲ್ಲಿ ಪಾಸ್‌ಪೋರ್ಟ್, ಚಾಲನಾ ಪರವಾನಗಿ ಪತ್ರ ಖಾಸಗಿ ಕಂಪನಿಗಳು ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿ, ಬ್ಯಾಂಕ್ ಪಾಸ್‌ಬುಕ್, ಪಾನ್‌ಕಾರ್ಡ್, ನರೇಗಾಕಾರ್ಡ್, ಹೆಲ್ತ್‌ಕಾರ್ಡ್, ಸರ್ಕಾರಿ ಅಧಿಕೃತ ಕಾರ್ಡ್ ಹಾಗೂ ಆಧಾರ್ ಕಾರ್ಡ್ ಬಳಸಿ ಮತದಾನ ಮಾಡಬಹುದೆಂದು ಮುಖ್ಯ ಚುನಾವಣಾಧಿಕಾರಿ ಶ್ರೀ ಸಂಜೀವ್ ಕುಮಾರ್ ತಿಳಿಸಿದರು.

ಆಧಾರ–ಸಂಯುಕ್ತ ಕರ್ನಾಟಕ 05.12.2019

* * * * *

ಭಾಗ–7

ಸರ್ವೋಚ್ಚ ನ್ಯಾಯಾಲಯ/ಉಚ್ಚ ನ್ಯಾಯಾಲಯಗಳ ಪ್ರಮುಖ ಸುದ್ದಿಗಳು

1. ಶ್ರೀ ರಾಮನಿಗೇ ಜನ್ಮ ಭೂಮಿ

ರಾಮನಿಗೆ ಜಯ, ರಹೀಮನಿಗೂ ನ್ಯಾಯ, ದೇಗುಲದ ಜೊತೆ ಮಸೀದಿಗೂ ಅವಕಾಶ ಸರ್ವರಿಗೂ ಸುಪ್ರೀಂ ಸರ್ವೋಚ್ಚ ಪಾಲು

ಅಯೋಧ್ಯೆ ತೀರ್ಪನ್ನು ಪ್ರಕಟಿಸುವ ಮೂಲಕ ಸುಪ್ರೀಂಕೋರ್ಟ್ ಶತಮಾನದ ವಿವಾದಕ್ಕೆ ತೆರೆ ಎಳೆದಿದ್ದು, ರಾಮ ಜನ್ಮಭೂಮಿಯಲ್ಲಿ ಮಂದಿರ ಮೈದಳೆಯಬೇಕೆಂಬ ಕೋಟ್ಯಾಂತರ ಹಿಂದೂಗಳ ಭಾವನೆಗೆ ಇದರಿಂದ ಇಂಬು ಸಿಕ್ಕಿದರೆ, ಅದೇ ಸಂದರ್ಭದಲ್ಲಿ, ಮಸೀದಿ ನಿರ್ಮಾಣಕ್ಕೆ ಅಯೋಧ್ಯೆಯಲ್ಲಿ ಐದು ಎಕರೆ ಜಾಗ ನೀಡಬೇಕೆಂದು ಸೂಚಿಸುವ ಮೂಲಕ ನ್ಯಾಯಾಲಯ ಸಮತೋಲಿತ ತೀರ್ಪು ನೀಡಿದೆ. ವಿವಾದಿತ 2.77 ಎಕರೆ ಸ್ಥಳದಲ್ಲಿ ರಾಮಮಂದಿರ ನಿರ್ಮಾಣದ ಹೊಣೆಯನ್ನು ಕೋರ್ಟು ಕೇಂದ್ರ ಸರ್ಕಾರದ ಹೆಗಲಿಗೇರಿಸಿದೆ.

ಸಿಜೆಐ ರಂಜನ್ ಗೊಗೋಯ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠ ಸರ್ವಾನುಮತದಿಂದ ಈ ತೀರ್ಪಿತ್ತಿದೆ.

ಸುಪ್ರೀಂನ ಪ್ರಮುಖಾಂಶ:

- ಎಲ್ಲ ಧರ್ಮಗಳ ನಂಬಿಕೆಯನ್ನೂ ನ್ಯಾಯಾಲಯ ಗೌರವಿಸುತ್ತದೆ. ಯಾರ ನಂಬಿಕೆಗಳಿಗೂ ಧಕ್ಕೆಯುಂಟು ಮಾಡುವುದಿಲ್ಲ.
- ಪುರಾತತ್ವ ಇಲಾಖೆ ವರದಿ ಪ್ರಕಾರ, ಬಾಬರಿ ಕಟ್ಟಡವನ್ನು ಖಾಲಿ ಜಾಗದಲ್ಲಿ ನಿರ್ಮಿಸಲಾಗಿಲ್ಲ. ಮೊದಲೇ ಅಲ್ಲಿ ಬೃಹತ್ ಕಟ್ಟಡವಿತ್ತು. ಆ ಕಟ್ಟಡ ಇಸ್ಲಾಮಿಕ್ ಶೈಲಿಯದ್ದಾಗಿರಲಿಲ್ಲ. ಕಟ್ಟಡದಲ್ಲಿ ಇಸ್ಲಾಮೇತರ ಕಟ್ಟಡದ ಅವಶೇಷವಿತ್ತು.
- ಅಯೋಧ್ಯೆಯನ್ನು ರಾಮನ ಜನ್ಮಸ್ಥಳ ಎಂದು ಹಿಂದೂಗಳು ನಂಬಿದ್ದಾರೆ. ಇದು ಧಾರ್ಮಿಕ ನಂಬಿಕೆಗೆ ಸಂಬಂಧಿಸಿದ ವಿಚಾರ. ಮುಸ್ಲಿಮರೂ ಆ ಜಾಗವನ್ನು ಬಾಬರಿ ಮಸೀದಿಗೆ ಸೇರಿದ್ದೆನ್ನುತ್ತಾರೆ. ರಾಮ ಅಲ್ಲಿ ಜನಿಸಿದ್ದು ಎಂಬ ಹಿಂದೂಗಳ ನಂಬಿಕೆ ವಿವಾದ ರಹಿತವಾದದ್ದು
- ಈ ಹಿಂದೆ ಅಲಹಾಬಾದ್ ಹೈಕೋರ್ಟ್ ನೀಡಿದ್ದ ತೀರ್ಪು ದೋಷಪೂರಿತವಾಗಿದೆ. ವಿವಾದಿತ ಸ್ಥಳವನ್ನು ಮೂರು ಭಾಗವಾಗಿ ವಿಂಗಡಿಸಿದ ರೀತಿ ಸರಿಯಲ್ಲ.
- ಕಾನೂನಿನ ಸಾಕ್ಷ್ಯದ ಮೇಲೆಯೇ ಭೂಮಿಯ ಹಕ್ಕನ್ನು ನಿರ್ಧರಿಸಲಾಗುತ್ತದೆ.
- ವಿವಾದಿತ 2.77 ಎಕರೆ ಜಮೀನನ್ನು ಪ್ರಕರಣದ ಅರ್ಜಿದಾರ ರಾಮಲಲ್ಲಾಗೆ ನೀಡಬೇಕು. ಈ ಜಾಗದಲ್ಲಿ ರಾಮಮಂದಿರ ನಿರ್ಮಿಸಲು ಕೇಂದ್ರ 3 ತಿಂಗಳಲ್ಲಿ ಟ್ರಸ್ಟ್ ರಚಿಸಬೇಕು ಮತ್ತು ಮಸೀದಿಗೆ ಅಯೋಧ್ಯೆಯಲ್ಲಿ ಐದು ಎಕರೆ ಭೂಮಿ ನೀಡಬೇಕು.

ಆಧಾರ–ವಿಜಯವಾಣಿ **10.11.2019**

2. ಆರ್‌ಟಿಐ ವ್ಯಾಪ್ತಿಗೆ ಸಿಜೆಐ

ಸುಪ್ರೀಂ ಮಹತ್ವದ ತೀರ್ಪು: ಆರ್‌ಟಿಐ ದುರ್ಬಳಕೆ ಬಗ್ಗೆ ಕಳವಳ

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಕಛೇರಿ ಸಹ ಸಾರ್ವಜನಿಕ ಕಾರ್ಯಾಲಯವಾಗಿದ್ದು, ಸಿಜೆಐ ಕೂಡ ಮಾಹಿತಿ ಹಕ್ಕು (ಆರ್‌ಟಿಐ) ಕಾಯಿದೆ ವ್ಯಾಪ್ತಿಗೆ ಒಳಪಡುತ್ತಾರೆಂದು ಸುಪ್ರೀಂಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಸಿಜೆಐ ರಂಜನ್ ಗೊಗೋಯ್ ನೇತೃತ್ವದ ಸಂವಿಧಾನ ಪೀಠವು ಈ ಸಂಬಂಧ 2010ರಲ್ಲಿ ದಿಲ್ಲಿ ಹೈಕೋರ್ಟ್ ನೀಡಿದ ತೀರ್ಪನ್ನು ಎತ್ತಿ ಹಿಡಿದಿದೆ. ದಿಲ್ಲಿ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸುಪ್ರೀಂಕೋರ್ಟ್ ಪ್ರಧಾನ ಕಾರ್ಯದರ್ಶಿ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿ ಸಲ್ಲಿಸಿದ್ದ ಮೂರು ಮೇಲ್ಮನವಿಗಳನ್ನು ನ್ಯಾಯಪೀಠ ತಳ್ಳಿಹಾಕಿದೆ. ಸಿಜೆಐ ಜೊತೆಗೆ ನ್ಯಾ.ಎನ್.ವಿ.ರಮಣ, ನ್ಯಾ.ಡಿ.ವೈ.ಚಂದ್ರಚೂಡ, ನ್ಯಾ.ದೀಪಕ್ ಗುಪ್ತ ಮತ್ತು ಸಂಜೀವ ಖನ್ನ ಒಳಗೊಂಡಂತೆ ಪೀಠವು 3:2 ಬಹುಮತದಿಂದ ತೀರ್ಪು ನೀಡಿದೆ.

ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗೆ ಮಾಹಿತಿ ಹಕ್ಕು ಕಾಯಿದೆ ಅನ್ವಯವಾಗುತ್ತದೆ ಆದರೂ ಅದು ಕೆಲ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ಎಷ್ಟರಮಟ್ಟಿಗೆ ಅನ್ವಯವಾಗುತ್ತದೆ ಎಂಬುದನ್ನು ಆಯಾ ಪ್ರಕರಣಗಳ ಸೂಕ್ಷ್ಮತೆ ಹಾಗೂ ರೂಪಿಸಿರುವ ಮಾನದಂಡಗಳ ಆಧಾರದ ಮೇಲೆ ನಿರ್ಧರಿಸಬೇಕಾಗುತ್ತದೆ. ಕೇಳುವ ಮಾಹಿತಿಗಳು ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆಯಗುವ ರೀತಿ ಇರಬಾರದು. ದುರುದ್ದೇಶದಿಂದ ಕೂಡಿದ ಮೂರನೇ ವ್ಯಕ್ತಿ ಸಂಬಂಧಿಸಿದ ಹಾಗೂ ಯಾವುದೇ ವೈಯಕ್ತಿಕ ಮಾಹಿತಿ ಕೇಳುವಂತಿಲ್ಲ.

ಆಧಾರ–ವಿಜಯ ಕರ್ನಾಟಕ/ವಿಜಯವಾಣಿ 14.11.2019

3. ವಿತ್ತ ಶಾಸನಕ್ಕೆ ಕಂಟಕ

ರಾಷ್ಟ್ರೀಯ ಹಸಿರು ಪೀಠ ಸಹಿತ ವಿವಿಧ ಪ್ರಾಧಿಕಾರ ಹಾಗೂ ನ್ಯಾಯ ಮಂಡಳಿಗಳಿಗೆ ಸದಸ್ಯರ ನೇಮಕಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ನೇಮಕಾತಿಯ ನೇರ ಪಾತ್ರಕ್ಕೆ ಸುಪ್ರೀಂಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಪ್ರಾಧಿಕಾರಗಳಿಗೆ ಸದಸ್ಯರನ್ನು ನೇಮಿಸುವ ವಿಷಯದಲ್ಲಿ ರೂಪುಗೊಂಡಿರುವ ಕಾಯಿದೆಗಳ ಅಡಿಯಲ್ಲಿಯೇ ಈ ಪ್ರಕ್ರಿಯೆ ನಡೆಯಬೇಕು ಎಂದು ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರಕ್ಕೆ ಸ್ಪಷ್ಟ ನಿರ್ದೇಶನ ನೀಡಿದೆ. ಈ ಉದ್ದೇಶಕ್ಕಾಗಿ ಹಣಕಾಸು ಶಾಸನ–2017ರಲ್ಲಿ ರೂಪಿಸಲಾಗಿರುವ ನಿಯಮಗಳನ್ನು ಸಂವಿಧಾನ ಬಾಹಿರ ಎಂದಿದೆ.

ಹಣಕಾಸು ಶಾಸನ – 2017 ಅನ್ನು, 19–ಧನವಿನಿಯೋಗ ವಿಧೇಯಕ ರೂಪದಲ್ಲಿ ಮಂಡಿಸಿ ಕೇಂದ್ರ ಸರ್ಕಾರ ಸಂಸತ್ತಿನ ಅಧಿವೇಶನದಲ್ಲಿ ಅಂಗೀಕಾರ ಪಡೆದುಕೊಂಡಿರುವ ಕ್ರಮದ ಮಾನ್ಯತೆ ಕುರಿತು ವಿಸ್ತೃತ ಪೀಠ ಪರಿಶೀಲಿಸಬೇಕು ಎಂದು ಸಿಜೆ ರಂಜನ್ ಗೊಗೋಯ್ ನೇತೃತ್ವದ ಪೀಠ ಅಭಿಪ್ರಾಯಪಟ್ಟಿದೆ.

ಪ್ರಾಧಿಕಾರಗಳಿಗೆ ಸದಸ್ಯರ ನೇಮಕಾತಿ ನಡೆಸುವ ಸಲುವಾಗಿಯೇ ರಾಷ್ಟ್ರೀಯ ಪ್ರಾಧಿಕಾರ ಆಯೋಗ ಅಥವಾ ಭಾರತ ಪ್ರಾಧಿಕಾರ ಸೇವೆಗಳನ್ನು ಸ್ಥಾಪಿಸುವಂತೆಯೂ ಕೂಡ ನ್ಯಾಯಪೀಠ ಪ್ರಸ್ತಾಪಿಸಿದೆ.

ಆಧಾರ–ಸಂಯುಕ್ತ ಕರ್ನಾಟಕ 14.11.2019

4. ಕೋಲಾರ ಅಣೆಕಟ್ಟು ತಮಿಳುನಾಡಿಗೆ ಮುಖಭಂಗ

ಮಾರ್ಕಂಡೇಯ ನದಿಗೆ ಕೋಲಾರದ ಬಂಗಾರಪೇಟೆಯ ಯರಗೋಳ್‌ನಲ್ಲಿ ಕಟ್ಟುತ್ತಿರುವ ಅಣೆಕಟ್ಟಿಗೆ ತಮಿಳುನಾಡು ಎತ್ತಿದ ಆಕ್ಷೇಪವನ್ನು ಸುಪ್ರೀಂಕೋರ್ಟ್ ತಳ್ಳಿಹಾಕಿದ್ದು, ಯೋಜನೆಗೆ ಹಸಿರು ನಿಶಾನೆ ತೋರಿದೆ. ಸುಪ್ರೀಂಕೋರ್ಟ್ ತಮಿಳುನಾಡಿನ ವಾದವನ್ನು ತಾಂತ್ರಿಕ ನೆಲೆಯಲ್ಲಿಯೇ ತಳ್ಳಿ ಹಾಕಿದೆ. ಕೋಲಾರದಲ್ಲಿ ಹರಿಯುವ ಮಾರ್ಕಂಡೇಯ ನದಿಗೆ 40 ಮೀಟರ್ ಎತ್ತರದ ಅಣೆಕಟ್ಟು ಕಟ್ಟಿ 500 ಮಿಲಿಯನ್ ಕ್ಯೂಬಿಕ್ ಫೀಟ್ (ಎಂಸಿ ಅಡಿ) ನೀರು ಸಂಗ್ರಹಿಸಿ ಮಾಲೂರು, ಬಂಗಾರಪೇಟೆ ಮತ್ತು ಕೋಲಾರ ನಗರದ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ರಾಜ್ಯ ಸರ್ಕಾರ–2007ರಲ್ಲಿ ಯೋಜನೆಗೆ ಚಾಲನೆ ನೀಡಿತ್ತು.

ಆಧಾರ–ಕನ್ನಡ ಪ್ರಭ 15.11.2019

5. ಶಾಶ್ವತ ಮಹಿಳಾ ಆಯೋಗ ನೇಮಿಸಿ ಸುಪ್ರೀಂ ಆದೇಶ

ಭಾರತೀಯ ಸೇನೆಯಲ್ಲಿ ಸೇವೆಯಲ್ಲಿರುವ ಮಹಿಳಾ ಸೇನಾಧಿಕಾರಿಗಳ ಅಹವಾಲುಗಳನ್ನು ಆಲಿಸುವ ಬಗ್ಗೆ ಭಾರತ ಸೇನೆಯಲ್ಲಿ ಶಾಶ್ವತ ಆಯೋಗವನ್ನು ಸ್ಥಾಪಿಸುವ ಬಗ್ಗೆ ಶೀಘ್ರವೇ ನಿರ್ಧರಿಸಬೇಕೆಂದು ಭಾರತೀಯ ಸೇನೆಗೆ ಸುಪ್ರೀಂಕೋರ್ಟ್ ಸೂಚಿಸಿದೆ.

ಆಧಾರ–ಉದಯವಾಣಿ 20.11.2019

6. ಹಂತ ಹಂತದ ಕಾರ್ಯಾಚರಣೆಗೆ ನಿರ್ದೇಶನ ನೀಡಿದ ಹೈಕೋರ್ಟ್

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿರುವ ಅನಧಿಕೃತ ಕಟ್ಟಡಗಳನ್ನು ಹಂತ ಹಂತವಾಗಿ ತೆರವುಗೊಳಿಸುವ ಬಗ್ಗೆ ಡಿಸೆಂಬರ್–18ರೊಳಗೆ ನಿರ್ದಿಷ್ಟ ಕಾಲಮಿತಿಯ ವೇಳಾ ಪಟ್ಟಿ ಸಲ್ಲಿಸಿ ಎಂದು ಬಿಬಿಎಂಪಿಗೆ ಹೈಕೋರ್ಟ್ ಆದೇಶಿಸಿದೆ.

ಈ ಕುರಿತು ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಾಮೂರ್ತಿ ಎಸ್.ಓಕಾ ನೇತೃತ್ವ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಮಹತ್ವದ ಆದೇಶ ನೀಡಿದೆ.

ತೆರವು ಕಾರ್ಯಕ್ಕೆ ಪಾಲಿಕೆ ಸ್ವತಂತ್ರವಾಗಿ ಯಾವುದೇ ಗುತ್ತಿಗೆದಾರರನ್ನು ಅಥವಾ ಹೊರ ಗುತ್ತಿಗೆ ಏಜೆನ್ಸಿಯನ್ನು ಬಳಸಬಾರದು. ಇದಕ್ಕಾಗಿ ಸರ್ಕಾರ ಸಿಬ್ಬಂದಿಯನ್ನೇ ಬಳಸಬೇಕು ಎಂದು ಪೀಠ ನಿರ್ದೇಶಿಸಿದೆ.

'ಅನಧಿಕೃತ ಕಟ್ಟಡಗಳ ಬಗ್ಗೆ ನವೆಂಬರ್, ಡಿಸೆಂಬರ್‌ನಲ್ಲಿ ಎಷ್ಟು ದೂರು ಬಂದಿವೆ ಎಂದು ಮಾಹಿತಿ ನೀಡಬೇಕು ಮತ್ತು ಆ ದೂರುಗಳ ಅನುಸಾರ ಕೈಗೊಂಡ ಕ್ರಮಗಳ ವಿವರಣೆ ನೀಡಬೇಕು' ಎಂದು ತಾಕೀತು ಮಾಡಿದೆ.

'ಅನಧಿಕೃತ ಕಟ್ಟಡಗಳ ಬಗ್ಗೆ ದೂರು ನೀಡುವ ಸಾರ್ವಜನಿಕ ವಿವರಗಳನ್ನು ಗೋಪ್ಯವಾಗಿಡಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆಧಾರ–ಪ್ರಜಾವಾಣಿ 26.11.2019

7. ಅಪ್ರಾಪ್ತ ವಯಸ್ಸಿನಲ್ಲಿ ಅಪರಾಧ: ಸರ್ಕಾರಿ ನೌಕರಿಗೆ ಅಡ್ಡಿಯಾಗದು

ಅಪ್ರಾಪ್ತ ವಯಸ್ಸಿನಲ್ಲಿ (18 ವರ್ಷಕ್ಕಿಂತ ಕಡಿಮೆ) ಮಾಡಿದ ಅಪರಾಧಕ್ಕೆ ಶಿಕ್ಷೆಗೆ ಒಳಗಾಗಿದ್ದರೆ ಅಥವಾ ಕ್ರಿಮಿನಲ್ ಆರೋಪ ಎದುರಿಸಿದ್ದರೂ ಯಾವುದೇ ವ್ಯಕ್ತಿಗೆ ಸರ್ಕಾರಿ ನೌಕರಿಯನ್ನು ನಿರಾಕರಿಸುವಂತಿಲ್ಲ ಎಂದು ಸುಪ್ರೀಂಕೋರ್ಟ್ ತಿಳಿಸಿದೆ.

ಬಾಲ ನ್ಯಾಯ (ಮಕ್ಕಳ ರಕ್ಷಣೆ ಮತ್ತು ಹಾರೈಕೆ) ಕಾಯಿದೆ–2000 ಮತ್ತು 2015ರನ್ವಯ ಅಪ್ರಾಪ್ತ ವಯಸ್ಸಿನಲ್ಲಿ ಅಪರಾಧಿಯಾಗಿದ್ದರೂ ಆ ಕಳಂಕವನ್ನು ತೆಗೆದು ಹಾಕಬೇಕು. ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾಗುವ ಮಕ್ಕಳನ್ನು ಕಳಂಕ ಇಲ್ಲದ ಸಾಮಾನ್ಯ ವ್ಯಕ್ತಿಯಂತೆ ಸಮಾಜವು ಪರಿಗಣಿಸಬೇಕು ಎನ್ನುವ ಉದ್ದೇಶ ಈ ಕಾಯಿದೆ ಹೊಂದಿದೆ ಎಂದು ನ್ಯಾಯಾಲಯ ತಿಳಿಸಿದೆ.

ನ್ಯಾಯಾಮೂರ್ತಿಗಳಾದ ಯು.ಯು. ಲಲಿತ್ ಮತ್ತು ವಿನೀತ್ ಶರಣ್ ಅವರನ್ನು ಒಳಗೊಂಡ ಪೀಠವು ಈ ತೀರ್ಪು ನೀಡಿದೆ.

ಆಧಾರ–ಪ್ರಜಾವಾಣಿ 01.12.2019

8. ಆಸ್ತಿ ಸಿಕ್ಕ ಬಳಿಕ ಹೆತ್ತವರ ನಿರ್ಲಕ್ಷ್ಯಿಸಿದ್ದಕ್ಕೆ ಆಸ್ತಿ ವಾಪಸ್

ವಯಸ್ಸಾದ ತಂದೆ ತಾಯಿಯಿಂದ ಆಸ್ತಿಯನ್ನು ತಮ್ಮ ಹೆಸರಿಗೆ ಬರೆಸಿಕೊಂಡ ಬಳಿಕ ಬೇಕಾಬಿಟ್ಟಿ ನಡೆಸಿಕೊಳ್ಳುವ ಮಕ್ಕಳು ಶಿಕ್ಷೆಗೆ ಅರ್ಹರು ಎಂದು ಕೇಂದ್ರ ಸರ್ಕಾರ ಕಾನೂನು ರೂಪಿಸಿರುವ ಬೆನ್ನಲ್ಲೇ ಕೊಪ್ಪಳ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯ ಮಹತ್ವ ತೀರ್ಪು ನೀಡಿದೆ.

ಹಿರಿಯ ನಾಗರಿಕರ ಜೀವನವನ್ನು ಸುಧಾರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ 'ಹಿರಿಯ ನಾಗರೀಕರ ಕಲ್ಯಾಣ ಕಾಯಿದೆ–2007ಕ್ಕೆ' ತಿದ್ದುಪಡಿ ತಂದಿರುವ ಬೆನ್ನಲ್ಲೇ ಇಂತಹ ತೀರ್ಪು ಹೊರಬಂದಿರುವುದು ಹಿರಿಯ ನಾಗರಿಕರಲ್ಲಿ ನೆಮ್ಮದಿ ಮೂಡಿಸಿದೆ. ಆಸ್ತಿ ವರ್ಗಾವಣೆಯಾದ ಬಳಿಕ ಹೆತ್ತವರನ್ನು ಹೇಗೆ ಬೇಕಾದರೂ ನಡೆಸಬಹುದು ಎಂಬಂತೆ ವರ್ತಿಸುವ ಮಕ್ಕಳಿಗೆ ಎಚ್ಚರಿಕೆಯ ಗಂಟೆಯಾಗಿದೆ.

ಆಧಾರ–ಕನ್ನಡಪ್ರಭ 08.12.2019

9. ಸುಪ್ರೀಂ ತೀರ್ಪು ಇನ್ನು ಕನ್ನಡದಲ್ಲಿ ಲಭ್ಯ

ಸುಪ್ರೀಂಕೋರ್ಟ್‌ನಲ್ಲಿ ಇತ್ಯರ್ಥವಾಗುವ ಪ್ರಕರಣಗಳ ತೀರ್ಪಿನ ಪ್ರತಿಗಳನ್ನು ಕನ್ನಡ ಸೇರಿ ಭಾರತದ ಪ್ರಮುಖ ಒಂಭತ್ತು ಭಾಷೆಗಳಿಗೆ ಭಾಷಾಂತರಗೊಳಿಸಬಲ್ಲ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸಲಾಗಿದ್ದು, ಈಗಾಗಲೇ ಆ ನಿಟ್ಟಿನಲ್ಲಿ ಕಾರ್ಯಾರಂಭ ಮಾಡಲಾಗಿದೆ ಎಂದು ಕೇಂದ್ರ ಕಾನೂನು ಸಚಿವ ರವಿಶಂಕರ್ ಪ್ರಸಾದ್ ರಾಜ್ಯ ಸಭೆಗೆ ತಿಳಿಸಿದರು. ಮೇಲ್ಮನೆಯ ಕಲಾಪದ ಪ್ರಶ್ನೋತ್ತರ ವೇಳೆಯಲ್ಲಿ ಈ ವಿಚಾರ ತಿಳಿಸಿದ ಅವರು ಹೊಸ ಸಾಫ್ಟ್‌ವೇರ್, ಕೃತಕ ಬುದ್ಧಿಮತ್ತೆಯಿಂದ ಕಾರ್ಯ ನಿರ್ವಹಿಸುವಂತದ್ದಾಗಿದೆ. ಇದರ ಸಹಾಯದಿಂದ ಸುಪ್ರೀಂಕೋರ್ಟ್ ತೀರ್ಪುಗಳನ್ನು ಸದ್ಯಕ್ಕೆ ಕನ್ನಡ, ಬೆಂಗಾಲಿ, ಅಸ್ಸಾಮಿ, ಹಿಂದಿ, ಮರಾಠಿ, ಒರಿಯಾ, ತಮಿಳು, ತೆಲುಗು ಮತ್ತು ಉರ್ದು ಭಾಷೆಗಳ ಆಡುಭಾಷೆಯ ಶೈಲಿಗೆ ತರ್ಜುಮೆ ಮಾಡಬಹುದಾಗಿದೆ. ಮುಂದಿನ ದಿನಗಳಲ್ಲಿ ಭಾರತದ ಮತ್ತಷ್ಟು ಭಾಷೆಗಳನ್ನು ಈ ಸಾಫ್ಟ್‌ವೇರ್ ವ್ಯಾಪ್ತಿಗೆ ತರಲಾಗುತ್ತದೆ ಎಂದರು.

ಆಧಾರ–ಉದಯವಾಣಿ, 13.12.2019

* * * * *

ಭಾಗ–8

ಹೊರ ರಾಜ್ಯಗಳ ಸುದ್ದಿಗಳು

1. ಬಿಹಾರದಲ್ಲಿ ಜಲಪ್ರಳಯ

ಸತತ ಮೂರು ದಿನಗಳಿಂದ ಸುರಿಯುತ್ತಿರುವ ಧಾರಾಕಾರದ ಮಳೆಗೆ ಬಿಹಾರ ಹಾಗೂ ಉತ್ತರ ಪ್ರದೇಶಗಳ ಅನೇಕ ಜಿಲ್ಲೆಗಳು ಭಾಗಶಃ ಮುಳುಗಡೆಯಾಗಿದ್ದು, ಬಿಹಾರದಲ್ಲಿ 29 ಜನರು ಮರಣ ಹೊಂದಿದ್ದಾರೆ. ಉತ್ತರ ಪ್ರದೇಶದಲ್ಲಿ ಕಳೆದ ಐದು ದಿನಗಳಿಂದ ಮೃತಪಟ್ಟವರ ಸಂಖ್ಯೆ 104ಕ್ಕೆ ಏರಿದೆ. ದೇಶದ ವಿವಿಧ ಭಾಗಗಳಲ್ಲಿ ಮಳೆ ಸಂಬಂಧ ಘಟನೆಗಳಲ್ಲಿ ಮೃತಪಟ್ಟವರ ಸಂಖ್ಯೆ 145ಕ್ಕೆ ತಲುಪಿದೆ. ಮುಂದಿನ 48 ಗಂಟೆಗಳಲ್ಲಿ ಬಿಹಾರದ 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿತ್ತು.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ 19 ತಂಡಗಳು ಕಾರ್ಯಾಚರಣೆಯಲ್ಲಿ ನಿರತವಾಗಿದ್ದು, ಸಾವಿರಾರು ಮನೆಗಳು ಜಲಾವೃತವಾಗಿದ್ದರಿಂದ ನಿರಾಶ್ರಿತರ ಕೇಂದ್ರಗಳನ್ನು ತೆರೆಯಲಾಯಿತು. ರಕ್ಷಣಾ ಕಾರ್ಯ ನಡೆಸಲು ಹಾಗೂ ಊಟ, ಔಷಧಿಗಳನ್ನು ಸರಬರಾಜು ಮಾಡಲು ಎರಡು ಹೆಲಿಕಾಪ್ಟರ್‌ಗಳನ್ನು ನೀಡುವಂತೆ ಸೇನೆಗೆ ಬಿಹಾರ ಸರ್ಕಾರ ಮನವಿ ಮಾಡಿತು. ಕೋಲ್ ಇಂಡಿಯಾ ಗಣಿ ಕಂಪನಿಗೆ ಬೃಹತ್ ಪಂಪ್‌ಸೆಟ್‌ಗಳನ್ನು ಒದಗಿಸುವಂತೆಯೂ ಕೋರಿತು. ಮುಖ್ಯಮಂತ್ರಿ ನಿತೀಶ್ ಕುಮಾರ್ ಹಾಗೂ ಉಪ ಮುಖ್ಯಮಂತ್ರಿ ಸುಶೀಲ್ ಮೋದಿ ಪ್ರವಾಹಪೀಡಿತ ಜಿಲ್ಲೆಗಳ ಅಧಿಕಾರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ಮೂಲಕ ಪರಿಸ್ಥಿತಿ ಅವಲೋಕನ ನಡೆಸಿದ್ದು, ತ್ವರಿತ ರಕ್ಷಣೆ ಹಾಗೂ ಪರಿಹಾರ ಕಾರ್ಯಕ್ಕೆ ಆದೇಶಿಸಿದರು.

ಬಿಹಾರದಲ್ಲಿ 1975ರ ನಂತರ ಪ್ರವಾಹದಿಂದ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿರುವುದು ಇದೇ ಮೊದಲು ಎನ್ನಲಾಗಿದೆ.

ಆಧಾರ–ವಿಜಯಕರ್ನಾಟಕ 01.10.2019

2. ಕಾವೇರಿ – ಗೋದಾವರಿ ಜೋಡಣೆಗೆ ಡಿಪಿಆರ್

ಆಂಧ್ರ ಪ್ರದೇಶ–ತೆಲಂಗಾಣದಲ್ಲಿ ಹರಿಯುವ ಗೋದಾವರಿ ಹಾಗೂ ಕರ್ನಾಟಕ–ತಮಿಳುನಾಡಿನಲ್ಲಿ ಹರಿಯುವ ಕಾವೇರಿ ನದಿಗಳನ್ನು ಜೋಡಿಸಲು ಕೇಂದ್ರ ಸರ್ಕಾರ ವಿಸ್ತೃತ ಯೋಜನಾ ವರದಿ(ಡಿಪಿಆರ್) ಸಿದ್ಧಪಡಿಸುತ್ತಿದೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಡಪ್ಪಾಡಿ ಕೆ. ಪಳನಿಸ್ವಾಮಿ ತಿಳಿಸಿದರು.

ಆಧಾರ–ಕನ್ನಡಪ್ರಭ 09.10.2019

3. ಮೇಕೆದಾಟು ಯೋಜನೆಗೆ ಒಪ್ಪಿಗೆ ಬೇಡ

ಕರ್ನಾಟಕ ಮೇಕೆದಾಟುವಿನಲ್ಲಿ ಕೈಗೊಂಡಿರುವ ಯೋಜನೆಯನ್ನು ಒಪ್ಪುವುದಿಲ್ಲ ಅದನ್ನು ಕೇಂದ್ರ ಸರ್ಕಾರ ತಿರಸ್ಕರಿಸಲೇಬೇಕು ಎಂದು ತಮಿಳುನಾಡು ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ಒತ್ತಾಯಿಸಿದ್ದಾರೆ. ಅದಕ್ಕೆ ಒಪ್ಪಿಗೆ ಕೊಡಲೇಬಾರದು ಎಂದು ಕೇಂದ್ರ ಜಲಶಕ್ತಿ ಖಾತೆ ಸಚಿವ ಗಜೇಂದ್ರ ಸಿಂಗ್ ಚೌಹಾಣ್‌ಗೆ ಬರೆದಿರುವ ಪತ್ರದಲ್ಲಿ ಒತ್ತಾಯಿಸಿದ್ದಾರೆ. ಇದರ ಜೊತೆಗೆ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವ ಪ್ರಕಾಶ್ ಜಾವಡೇಕರ್‌ಗೂ ಪತ್ರ ಬರೆದಿದ್ದು, ಪ್ರಕರಣ ಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿ ಇದೆ ಎಂದಿದ್ದಾರೆ. ಕಾವೇರಿ ಮುಖಜ ಭೂಮಿಯನ್ನು ಹೇರಳವಾಗಿ ನೀರು ಸಂಗ್ರಹಿಸಿ ಇರಿಸುವ ವ್ಯವಸ್ಥೆ ಇದೆ ಮತ್ತು ಕೆಳ ಹಂತದ ರಾಜ್ಯಗಳಿಗೆ ಸೂಚಿತವಾಗಿರುವಂತೆ ನೀರು ಹರಿಸಬೇಕು ಎಂದು ಕಾವೇರಿ ಜಲ ವಿವಾದ ನ್ಯಾಯಮಂಡಳಿ ಮತ್ತು ಸುಪ್ರೀಂಕೋರ್ಟ್ ಉಲ್ಲೇಖಿಸಿರುವುದನ್ನು ಪತ್ರದಲ್ಲಿ ತಮಿಳುನಾಡು ಮುಖ್ಯಮಂತ್ರಿ ಬರೆದಿದ್ದಾರೆ.

ಆಧಾರ– ಉದಯವಾಣಿ 11.10.2019

4. ಚುನಾಯಿತರಿಂದಲೇ ಮೇಯರ್ ಆಯ್ಕೆಗೆ ರಾಜಸ್ಥಾನ ಸಂಪುಟ ಸಮ್ಮತಿ

ಮಹಾನಗರ ಪಾಲಿಕೆಯ ಮೇಯರ್ ಹಾಗೂ ನಗರಸಭೆ, ಪುರಸಭೆಗಳ ಅಧ್ಯಕ್ಷರನ್ನು ಆಯಾ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರೇ ಆಯ್ಕೆ ಮಾಡಬೇಕು ಎಂಬ ತೀರ್ಮಾನವನ್ನು ರಾಜಸ್ಥಾನ ಸಚಿವ ಸಂಪುಟ ಕೈಗೊಂಡಿದೆ. -ರಾಜ್ಯದಲ್ಲಿ 2009ರಲ್ಲಿ ಜಾರಿಗೆ ಬಂದಿರುವ ವ್ಯವಸ್ಥೆ ಪ್ರಕಾರ, ಮೇಯರ್ ಹಾಗೂ ನಗರಸಭೆ, ಪುರಸಭೆಗಳ ಅಧ್ಯಕ್ಷರು ಜನರಿಂದ ನೇರವಾಗಿ ಚುನಾಯಿತರಾಗುತ್ತಾರೆ. ಇನ್ನು ಮುಂದೆ ಆ ಹುದ್ದೆಗಳಿಗೆ ನೇರ

ಚುನಾವಣೆ ಬದಲಾಗಿ ಪರೋಕ್ಷ ಚುನಾವಣೆಯ ಮೂಲಕ ಆಯ್ಕೆ ನಡೆಯಲಿದೆ. "ಜನರಿಂದ ನೇರವಾಗಿ ಚುನಾಯಿತರಾದ ಮೇಯರ್ ಹಾಗೂ ನಗರಸಭೆಗಳ ಅಧ್ಯಕ್ಷರು, ಆಯಾ ಸಂಸ್ಥೆಗಳ ಚುನಾಯಿತ ಸದಸ್ಯರನ್ನು ಕಡೆಗಣಿಸುತ್ತಾರೆ ಎನ್ನುವ ಆರೋಪವಿದೆ. ಅಲ್ಲದೇ, ಮೇಯರ್ ಅಥವಾ ಅಧ್ಯಕ್ಷರು ಒಂದು ಪಕ್ಷದವರಾಗಿದ್ದು, ಆ ನಗರ ಸ್ಥಳೀಯ ಸಂಸ್ಥೆಯಲ್ಲಿ ಮತ್ತೊಂದು ಪಕ್ಷಕ್ಕೆ ಬಹುಮತವಿದ್ದರೆ ಅಭಿವೃದ್ಧಿಗೆ ಹಿನ್ನಡೆಯಾಗುತ್ತದೆ. ಈ ಎಲ್ಲ ಸಂಗತಿಗಳನ್ನು ಪರಿಶೀಲಿಸಿದ ಬಳಿಕ ಆಯಾ ಸಂಸ್ಥೆಗಳ ಚುನಾಯಿತ ಸದಸ್ಯರೇ ಮೇಯರ್, ಅಧ್ಯಕ್ಷರನ್ನು ಆಯ್ಕೆ ಮಾಡುವುದು ಸೂಕ್ತ ಎನ್ನುವ ನಿರ್ಧಾರಕ್ಕೆ ಬರಲಾಯಿತು ಎಂದು ಸಂಸದೀಯ ವ್ಯವಹಾರಗಳ ಸಚಿವ ಶಾಂತಿಕುಮಾರ್ ಧಾರಿವಾಲ್ ಸುದ್ದಿಗಾರರಿಗೆ ತಿಳಿಸಿದರು.

ಆಧಾರ–ವಿಜಯಕರ್ನಾಟಕ 15.10.2019

5. ಪ್ರಥಮ ಅಂಧ ಐಎಎಸ್ ಅಧಿಕಾರಿ

ದೃಷ್ಟಿಹೀನ ಐಎಎಸ್ ಅಧಿಕಾರಿ ಪ್ರಾಂಜಲ್ ಪಾಟೀಲ್ ಅವರು ಕೇರಳದ ತಿರುವನಂತಪುರದ ಉಪವಿಭಾಗಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದರು. ಇವರು ದೇಶದ ಮೊದಲ ಅಂಧ ಐಎಎಸ್ ಅಧಿಕಾರಿ ಎನಿಸಿದ್ದಾರೆ.

ಆಧಾರ–ವಿಶ್ವವಾಣಿ 16.10.2019

6. ಮಾಧ್ಯಮಗಳಿಗೆ ಜಗನ್ ಮೂಗುದಾರ
ಸರ್ಕಾರದ ಇಮೇಜ್‌ಗೆ ಧಕ್ಕೆ ತರುವ ಸುದ್ದಿ ವಿರುದ್ಧ ಕೇಸಿಗೆ ಆದೇಶ

ಕೆಲ ದಿನಗಳ ಹಿಂದಷ್ಟೇ ಸರ್ಕಾರದ ವಿರುದ್ಧ ಸುದ್ದಿ ಪ್ರಸಾರ ಮಾಡಿದ್ದಕ್ಕೆ ಎರಡು ತೆಲುಗು ವಾಹಿನಿಗಳ ಪ್ರಸಾರ ಬಂದ್ ಮಾಡಿಸುವ ವಿರುದ್ಧ ಅಘೋಷಿತ ಸಮರ ಸಾರಿದ್ದ ಜಗನ್ಮೋಹನ್ ರೆಡ್ಡಿ ನೇತೃತ್ವದ ಆಂಧ್ರಪ್ರದೇಶ ಸರ್ಕಾರ ಈಗ ಮಾಧ್ಯಮ ಸ್ವಾತಂತ್ರ್ಯಕ್ಕೆ ಮೂಗುದಾರ ಹಾಕಲು ಹೊರಟಿದೆ. ರಾಜ್ಯದ ಅಭಿವೃದ್ಧಿಗೆ ಮಾರಕವಾಗುವ ಸುದ್ದಿ ಹರಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲು ಇಲಾಖಾ ಕಾರ್ಯದರ್ಶಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿ ರಾಜ್ಯ ಸಚಿವ ಸಂಪುಟ ಸಭೆ ಆದೇಶ ಹೊರಡಿಸಿದೆ. ಜಗನ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದ್ದು, ಮುದ್ರಣ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನು ಹರಡುವ ವ್ಯಕ್ತಿ ಸಂಸ್ಥೆಗಳ ವಿರುದ್ಧ 24 ಗಂಟೆಯೊಳಗೆ ಕಾನೂನು ಕ್ರಮ ಕೈಗೊಳ್ಳಲು ಕಾರ್ಯದರ್ಶಿಗಳಿಗೆ ಅಧಿಕಾರ ನೀಡಲಾಗಿದೆ. ಸುಳ್ಳು ಸುದ್ದಿಗಳು ಇಲಾಖೆ ಹಾಗೂ ಅಧಿಕಾರಿ ವಿರುದ್ಧ ನಂಬಿಕೆ ಕಳೆದುಕೊಳ್ಳುವಂತೆ ಮಾಡುತ್ತಿದೆ ಇದರಿಂದಾಗಿ ರಾಜ್ಯದ ಅಭಿವೃದ್ಧಿಗೆ ತೊಡಕಾಗುತ್ತಿದ್ದು, ಈ ನಿರ್ಧಾರ ಕೈಗೊಳ್ಳಲಾಗಿದೆಯೆಂದು ಸಾರ್ವಜನಿಕ ಸಂಪರ್ಕ ಸಚಿವ ಪೆರ್ನಿ ವೆಂಕಟರಾಮಯ್ಯ ಸರ್ಕಾರದ ನಿಲುವನ್ನು ಸಮರ್ಥಿಸಿಕೊಂಡಿದ್ದಾರೆ.

ಆಧಾರ–ಕನ್ನಡಪ್ರಭ 17.10.2019

7. ತಿರುಮಲದಲ್ಲಿ ವಸತಿ ಕಟ್ಟಡಕ್ಕಾಗಿ ಮನವಿ

ಆಂಧ್ರಪ್ರದೇಶದ ತಿರುಮಲದಲ್ಲಿ ಕರ್ನಾಟಕ ಹೊಂದಿರುವ 7 ಎಕರೆ ಜಾಗದಲ್ಲಿ ಯಾತ್ರಾರ್ಥಿಗಳಿಗೆ ವಸತಿ ಕಟ್ಟಡ ನಿರ್ಮಿಸಲು ಅನುಮತಿ ನೀಡುವಂತೆ ಆಂಧ್ರ ಸಿಎಂಗೆ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಸ್.ಆರ್. ವಿಶ್ವನಾಥ್ ಮನವಿ ಮಾಡಿದ್ದಾರೆ.

" ರಾಜ್ಯ ಸರ್ಕಾರ ತಿರುಮಲದ 7 ಎಕರೆ ಜಾಗದಲ್ಲಿ 20 ಕೋಟಿ ರೂ. ವೆಚ್ಚದಲ್ಲಿ ವಸತಿ ಕಟ್ಟಡ ನಿರ್ಮಿಸಲು ಉದ್ದೇಶಿಸಿದೆ. ಇದಕ್ಕೆ ಸಂಬಂಧಿಸಿದ ಅನುಮತಿಗಳನ್ನು ನೀಡಲು ಆಂಧ್ರದ ಧಾರ್ಮಿಕ ದತ್ತಿ ಇಲಾಖೆ ಹಾಗೂ ಟಿಟಿಡಿ ಆಡಳಿತ ಮಂಡಳಿಗೆ ನಿರ್ದೇಶನ ನೀಡಬೇಕು" ಎಂದು ವಿಶ್ವನಾಥ್ ಕೋರಿದ್ದಾರೆ.

ಆಧಾರ–ವಿಜಯಕರ್ನಾಟಕ 17.10.2019

8. ಜಮ್ಮು – ಕಾಶ್ಮೀರ ವಿಧಾನ ಪರಿಷತ್ತು ರದ್ದು

1957 ರಿಂದ ಅಸ್ತಿತ್ವದಲ್ಲಿದ್ದ 36 ಸದಸ್ಯರ ಮೇಲ್ಮನೆ ಇನ್ನು ನೆನಪು ಮಾತ್ರ

ವಿಶೇಷ ಸ್ಥಾನಮಾನ ಕಳೆದುಕೊಂಡಿದ್ದ ಜಮ್ಮು–ಕಾಶ್ಮೀರ, ಈಗ ವಿಧಾನ ಪರಿಷತ್ತಿನಿಂದಲೂ ವಂಚಿತವಾಗಲಿದೆ. ಕಳೆದ 62 ವರ್ಷಗಳಿಂದ ಇದ್ದ ವಿಧಾನ ಪರಿಷತ್ತನ್ನು ರದ್ದುಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ವಿಧಾನ ಪರಿಷತ್ತಿನಲ್ಲಿ ಕೆಲಸ ಮಾಡುತ್ತಿದ್ದ 116 ಸರ್ಕಾರಿ ಸಿಬ್ಬಂದಿಗೆ ಅಕ್ಟೋಬರ್ 22 ರಿಂದ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಕಾರ್ಯನಿರ್ವಹಿಸಲು ಸೂಚಿಸಲಾಗಿದೆ.

ಈ ಪೈಕಿ ಜಮ್ಮು–ಕಾಶ್ಮೀರವು ವಿಧಾನ ಸಭೆ ಹೊಂದಿದ ಕೇಂದ್ರಾಡಳಿತ ಪ್ರದೇಶವಾಗಿದ್ದು, ಇನ್ನು ಮುಂದೆ ವಿಧಾನ ಪರಿಷತ್ತು ಇರುವುದಿಲ್ಲ. ಇನ್ನು ವಿಧಾನಸಭೆ 87 ಸ್ಥಾನಗಳನ್ನು ಹೊಂದಿದೆ.

ಆಧಾರ–ಕನ್ನಡಪ್ರಭ 19.10.2019

9. ಮಿಜೋರಾಂ ರಾಜ್ಯಪಾಲರಾಗಿ ಪಿಳ್ಳೈ

ಕೇರಳದ ಬಿಜೆಪಿ ಘಟಕದ ಅಧ್ಯಕ್ಷ ಪಿ.ಎಸ್.ಶ್ರೀಧರನ್ ಪಿಳ್ಳೈ (86) ಅವರನ್ನು ಮಿಜೋರಾಂನ ನೂತನ ರಾಜ್ಯಪಾಲರನ್ನಾಗಿ ನೇಮಕ ಮಾಡಲಾಗಿದೆ ಎಂದು ರಾಷ್ಟ್ರಪತಿ ಭವನ ತಿಳಿಸಿದೆ. ಶ್ರೀಧರನ್ ಅವರು ಕೇರಳದ ಅಳಪ್ಪುಳ ಜಿಲ್ಲೆಯ ವೆನ್ಮೋನಿಯವರು ಎಬಿವಿಪಿ ಕಾರ್ಯಕರ್ತರಾಗಿ ರಾಜಕೀಯಕ್ಕೆ ಬಂದ ಅವರು ಖ್ಯಾತ ವಕೀಲ, ಲೇಖಕ ಹಾಗೂ ಅಂಕಣಕಾರರೂ ಆಗಿದ್ದಾರೆ.

ಆಧಾರ–ಉದಯವಾಣಿ 26.10.2019

10. ಕನ್ನಡದಲ್ಲಿ ಪ್ರಮಾಣ ವಚನ

ಮಂಜೇಶ್ವರ ವಿಧಾನಸಭಾ ಕ್ಷೇತ್ರದಿಂದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಅಭ್ಯರ್ಥಿಯಾಗಿ ಕೇರಳ ವಿಧಾನಸಭೆಗೆ ಆಯ್ಕೆಯಾಗಿರುವ ಎಂ.ಸಿ.ಕಮರುದ್ದೀನ್ ಅವರು ದಿನಾಂಕ: 28.10.2019ರಂದು ಕನ್ನಡದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಆಧಾರ–ಪ್ರಜಾವಾಣಿ 29.10.2019

11. ಹರಿಯಾಣ ಸರ್ಕಾರ ರಚನೆ

ಹರಿಯಾಣದಲ್ಲಿ ಭಾರತೀಯ ಜನತಾ ಪಾರ್ಟಿ ಸರ್ಕಾರದ ಎರಡನೇ ಅವಧಿ ಆರಂಭವಾಗಿದ್ದು, ಮನೋಹರಲಾಲ್‌ಖಟ್ಟರ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಜನನಾಯಕ ಜನತಾ ಪಾರ್ಟಿಯ ದುಷ್ಯಂತ್ ಚೌಟಾಲ ಉಪ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದು, ರಾಜ್ಯಪಾಲ ಸತ್ಯದೇವ ನಾರಾಯಣ ಆರ್ಯ ಪ್ರಮಾಣ ವಚನ ಭೋದಿಸಿದರು.

ಆಧಾರ–ಸಂಯುಕ್ತಕರ್ನಾಟಕ :29.10.2019

12. ಜಮ್ಮು–ಕಾಶ್ಮೀರ ಇಬ್ಭಾಗ ಅಧಿಕೃತ

ಜಮ್ಮು–ಕಾಶ್ಮೀರ ಹಾಗೂ ಲಡಾಕ್ ಕೇಂದ್ರಾಡಳಿತ ಪ್ರದೇಶಗಳು ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿವೆ. ಗಿರೀಶ್ ಚಂದ್ರ ಮತ್ತು ರಾಧಾಕೃಷ್ಣ ಮಾಥುರ್ ಅನುಕ್ರಮವಾಗಿ 2 ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್ ಆಗಿ ಅಧಿಕಾರ ಸ್ವೀಕರಿಸಿದರು. ಇದರೊಂದಿಗೆ 2017ರಿಂದ ಜಾರಿಯಲ್ಲಿದ್ದ ರಾಷ್ಟ್ರಪತಿ ಆಡಳಿತ ಕೊನೆಗೊಂಡಿದೆ. ಜಮ್ಮು–ಕಾಶ್ಮೀರಕ್ಕೆ ರಾಜಕೀಯ ಸ್ಥಿರತೆ ಸಿಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಆಧಾರ–ವಿಜಯವಾಣಿ, 01.11.2019

13. ನೂತನ ಕಾಶ್ಮೀರ ಮತ್ತು ಲಡಾಖ್ ಅಸ್ತಿತ್ವಕ್ಕೆ

ವಿಶೇಷ ಸ್ಥಾನಮಾನ ರದ್ದುಗೊಂಡ ಬಳಿಕ ಸ್ವರೂಪ ಬದಲಿಸಿಕೊಂಡ ಜಮ್ಮು-ಕಾಶ್ಮೀರ ಹಾಗೂ ಲಡಾಖ್ ಕೇಂದ್ರಾಡಳಿತ ಪ್ರದೇಶಗಳಾಗಿ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿದ್ದು, ಗಿರೀಶ್ ಚಂದ್ರ್ ಮುರ್ಮು ಮತ್ತು ರಾಧಾಕೃಷ್ಣ ಮಾಥುರ್ ಅನುಕ್ರಮವಾಗಿ ಎರಡು ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್ ಆಗಿ ಅಧಿಕಾರ ಸ್ವೀಕರಿಸಿದರು. ಇದರೊಂದಿಗೆ 2017ರಿಂದ ಜಾರಿಯಲ್ಲಿದ್ದ ರಾಷ್ಟ್ರಪತಿ ಆಡಳಿತ ಕೊನೆಗೊಂಡಿದೆ.

ಆಧಾರ-ವಿಜಯವಾಣಿ, 01.11.2019

14. ಕರ್ತಾರ್ ಪುರ ಕಾರಿಡಾರ್ ಉದ್ಘಾಟನೆ

ಪಂಜಾಬ್ ಡೇರಾ ಬಾಬಾ ನಾನಕ್ ಸ್ಮಾರಕ ಮತ್ತು ಪಾಕಿಸ್ತಾನದಲ್ಲಿರುವ ಗುರುದ್ವಾರ ದರ್ಬಾರ್ ಸಾಹಿಬ್ ನಡುವೆ ಸಂಪರ್ಕ ಕಲ್ಪಿಸುವ ಬಹು ನಿರೀಕ್ಷಿತ ಕರ್ತಾರ್ ಪುರ ಕಾರಿಡಾರ್ ಸಾರ್ವಜನಿಕ ಸೇವೆಗೆ ಮುಕ್ತವಾಯಿತು. ಐದುನೂರು ಯಾತ್ರಿಗಳಿದ್ದ ನಿಯೋಗದ ಪ್ರವಾಸಕ್ಕೆ ಹಸಿರು ನಿಶಾನೆ ತೋರಿಸಿದ ಪ್ರಧಾನಿ ನರೇಂದ್ರ ಮೋದಿ ಕಾರಿಡಾರ್ ಅನ್ನು ಉದ್ಘಾಟಿಸಿದರು. ಹಲವು ಪ್ರಮುಖರನ್ನು ಒಳಗೊಂಡ ಯಾತ್ರಿಗಳ ನಿಯೋಗ ಪಾಕಿಸ್ತಾನದ ಗುರುತ್ವವನ್ನು ತಲುಪಿದ್ದು ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಭಾರತದ ಭಾಗದಲ್ಲಿ ಚಾಲನೆ ನೀಡಿದ ಪ್ರಧಾನಿ ಮೋದಿ ನೂತನ 4.5 ಕಿಲೋಮೀಟರ್ ಉದ್ದದ ಕಾರಿಡಾರ್ ಮತ್ತು ಸಮಗ್ರ ಚೆಕ್ ಪೋಸ್ಟ್ ಕಾರ್ಯಾರಂಭ ಮಾಡಲಿದೆ, ಸಂಭ್ರಮವನ್ನು ತರಲಿದೆ ಎಂದು ಬಣ್ಣಿಸಿದರು. ಕರ್ತಾರಪುರ ಕಾರಿಡಾರ್ ನಿರ್ಮಾಣದ ಅಗತ್ಯ ಮಹತ್ವ ಕುರಿತು ಭಾರತೀಯರ ಭಾವನೆಗಳನ್ನು ಅರ್ಥ ಮಾಡಿಕೊಂಡು ಸಹಕರಿಸಿದ್ದಕ್ಕಾಗಿ ಪಾಕ್ ಪ್ರಧಾನಿ ಇಮ್ರಾನ್ ಖಾನ್ ಅವರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ಪಾಕಿಸ್ತಾನದ ನೆಲದಲ್ಲಿ ಕಾರಿಡಾರ್ ನಿರ್ಮಿಸುವ ಕಾರ್ಯದಲ್ಲಿ ತೊಡಗಿಸಿಕೊಂಡ ಕಾರ್ಮಿಕರಿಗೂ ಅಭಿನಂದಿಸಿದ ಪ್ರಧಾನಿ ಮೋದಿಯವರು ಕರ್ತಾರ್ ಪುರ ಕಾರಿಡಾರ್ ಉದ್ಘಾಟನೆ ಪ್ರಾದೇಶಿಕ ಹಂತದಲ್ಲಿ ಶಾಂತಿಯನ್ನು ಬಯಸುವ ಪಾಕಿಸ್ತಾನದ ಬದ್ಧತೆಗೆ ನಿದರ್ಶನ ಎಂದು ಪ್ರಧಾನಿ ಇಮ್ರಾನ್ ಖಾನ್ ಹೇಳಿದ್ದಾರೆ. ಉದ್ಘಾಟನಾ ಸಮಾರಂಭದಲ್ಲಿ ಅವರು ವಿಷಯ ಪ್ರಸ್ತಾಪಿಸಿ ಕಾಶ್ಮೀರ ವಿಷಯ ಪ್ರಸ್ತಾಪಿಸಿ ಕಾಶ್ಮೀರಿಗಳಿಗೆ ನ್ಯಾಯ ಒದಗಿಸಲು ಹೊಸ ಸಂವಹನ ಮಾರ್ಗ ದೊರೆತಿದೆ ಎಂದಿದ್ದಾರೆ. ಈ ಘಟನೆ ಉಭಯ ರಾಷ್ಟ್ರಗಳ ನಡುವಿನ ಬಾಂಧವ್ಯ ವೃದ್ಧಿ ಶಾಂತ ಪರಿಸ್ಥಿತಿ ನಿರ್ಮಾಣಕ್ಕೆ ನೆರವಾಗಲಿದೆ ಎಂದು ಆಶಿಸಿದರು.

ಆಧಾರ-ವಿಶ್ವವಾಣಿ, 11.11.2019

15. ಮಿಜೋರಾಂ ಶಾಸಕರ ಸಂಬಳ ಶೇಕಡ 130 ರಷ್ಟು ಏರಿಕೆ

ಶಾಸಕರ ವೇತನ ಹಾಗೂ ತುಟ್ಟಿಭತ್ಯೆಯನ್ನು ಶೇ. 130 ರಷ್ಟು ಹೆಚ್ಚಿಸುವ ತಿದ್ದುಪಡಿ ಮಸೂದೆಯನ್ನು ಮಿಜೋರಾಂ ವಿಧಾನ ಸಭೆ ಅಂಗೀಕರಿಸಿದೆ. ಶಾಸಕರ ವೇತನ ರೂ. 65 ಸಾವಿರಗಳಿಂದ ರೂ. 1 ಲಕ್ಷಕ್ಕೆ ಹೆಚ್ಚಳವಾಗಿದೆ. ಪರಿಷ್ಕೃತ ವೇತನದ ಪ್ರಕಾರ ಮುಖ್ಯಮಂತ್ರಿಗೆ ತಿಂಗಳಿಗೆ 1.84 ಲಕ್ಷ ರೂ. ಸಂಬಳ ದೊರೆಯಲಿದೆ. ಸ್ಪೀಕರ್‌ಗೆ 1.73 ಲಕ್ಷ ರೂಪಾಯಿಗಳಾದರೆ ಪ್ರತಿಪಕ್ಷ ನಾಯಕರಿಗೆ ರೂ. 1.68 ಲಕ್ಷ ಸಂಬಳ ಪಡೆಯಲಿದ್ದಾರೆ. ಪಿಂಚಣಿಯ ಮೊತ್ತ ತಿಂಗಳಿಗೆ ರೂ. 25 ಸಾವಿರದಿಂದ 40 ಸಾವಿರಕ್ಕೆ ಏರಿಕೆಯಾಗಿದೆ. ಒಂದಕ್ಕಿಂತ ಹೆಚ್ಚು ಬಾರಿ ಆಯ್ಕೆಯಾದ ಶಾಸಕರಿಗೆ ಹೆಚ್ಚುವರಿಯಾಗಿ 5000 ರೂ. ದೊರೆಯಲಿದೆ.

ಆಧಾರ-ಪ್ರಜಾವಾಣಿ, 22.11.2019

16. 21ನೇ ವಯಸ್ಸಿಗೆ ನ್ಯಾಯಮೂರ್ತಿಯಾದ ರಾಜಸ್ಥಾನದ ಪ್ರತಾಪ್ ಸಿಂಗ್

ರಾಜಸ್ಥಾನದ ಜೈಪುರದ 21 ದೇಶದ ಅತಿ ಕಿರಿಯ ನ್ಯಾಯಾಧೀಶ ವರ್ಷದ ಯುವಕ ಮಯಾಂಕ್ ಪ್ರತಾಪ್ ಸಿಂಗ್ ಎಂಬುವರು ರಾಜಸ್ಥಾನ ನ್ಯಾಯಾಂಗ ಸೇವಾ ಪರೀಕ್ಷೆ 2018ಅನ್ನು ಪಾಸ್ ಮಾಡುವ ಮೂಲಕ ಇತಿಹಾಸ ನಿರ್ಮಿಸಿದ್ದು, ದೇಶದ ಅತಿ ಕಿರಿಯ ನ್ಯಾಯಾಧೀಶ ಎನಿಸಿಕೊಳ್ಳಲಿದ್ದಾರೆ. ನ್ಯಾಯಾಂಗ ಸೇವಾ ಪರೀಕ್ಷೆಗೆ ಹಾಜರಾಗಲು ಇದ್ದ ಕನಿಷ್ಠ ವಯೋಮಿತಿಯನ್ನು ರಾಜಸ್ಥಾನ ಸರ್ಕಾರ 23 ವರ್ಷದಿಂದ 21 ವರ್ಷಕ್ಕೆ ಇಳಿಸಿತ್ತು. ಹೀಗಾಗಿ ಮಯಾಂಕ್ ನ್ಯಾಯಾಧೀಶ ಹುದ್ದೆಗೆ ಆಯ್ಕೆಯಾಗಲು ಸಾಧ್ಯವಾಗಿದೆ.

ಆಧಾರ-ಕನ್ನಡಪ್ರಭ, 23.11.2019

17. ಸರಯೂ ತಟದಲ್ಲಿ ಇಕ್ಷ್ವಾಕುಪುರಿ

ಅಯೋಧ್ಯೆ ರಾಮಮಂದಿರ ನಿರ್ಮಾಣಕ್ಕೆ ಸುಪ್ರೀಂಕೋರ್ಟ್ ಹಸಿರು ನಿಶಾನೆ ತೋರಿದ ಬೆನ್ನಲ್ಲೇ ಉತ್ತರಪ್ರದೇಶದ ಯೋಗಿ ಆದಿತ್ಯನಾಥ್ ಸರ್ಕಾರ, ಪ್ರವಾಸಿಗರನ್ನು ಸೆಳೆಯಲು ಅನೇಕ ಯೋಜನೆಗಳನ್ನು ಕೈಗೆತ್ತಿಗೊಂಡಿದೆ. ಇದರಲ್ಲಿ ಇಕ್ಷ್ವಾಕುಪುರಿ ಯೋಜನೆಯು ಒಂದಾಗಿದ್ದು, ಸರಯೂ ನದಿ ದಡದಲ್ಲಿನ ಗಿಫ್ತಾರ್ ಘಾಟ್‌ನಿಂದ ಬ್ರಹ್ಮಕುಂಡ್ ಗುರುದ್ವಾರದವರೆಗಿನ ಪ್ರದೇಶವನ್ನು ಗ್ರೀನ್ ಸಿಟಿಯಾಗಿ ಅಭಿವೃದ್ಧಿಪಡಿಸಲಾಗುತ್ತಿದೆ.

ಆಧಾರ–ವಿಜಯವಾಣಿ 02.12.2019

18. ಸಂವಿಧಾನದ 8ನೇ ಪರಿಚ್ಛೇದಕ್ಕೆ ತುಳು ಸೇರಿಸಿ: ಕೇರಳ ಸಂಸದ

ತುಳು ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಬೇಕು ಎಂದು ಕಾಸರಗೋಡಿನ ಸಂಸದ ರಾಜ್ ಮೋಹನ್ ಉನ್ನಿಥಾನ್, ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಲೋಕಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಮಾತನಾಡಿದ ಉನ್ನಿಥಾನ್, 2011ರ ಜನಗಣತಿಯ ಪ್ರಕಾರ 18,46,427 ಮಂದಿ ತುಳು ಭಾಷಿಕರಾಗಿದ್ದು, ಎಂಟನೇ ಪರಿಚ್ಛೇದದಲ್ಲಿ ಸ್ಥಾನ ಪಡೆದಿರುವ ಸಂಸ್ಕೃತ ಮತ್ತು ಮಣಿಪುರಿ ಭಾಷೆಗಿಂತ ಹೆಚ್ಚು ಮಂದಿ ತುಳು ಮಾತನಾಡುತ್ತಿದ್ದಾರೆ. ತುಳು ದೇಶದ ಅಧಿಕೃತ ಭಾಷೆಯಾಗಿ ಸ್ಥಾನ ಪಡೆದಿಲ್ಲ. ಒಂದು ವೇಳೆ ತುಳುವನ್ನು ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರಿಸಿದ್ದೇ ಆದರೆ, ಸಾಹಿತ್ಯ ಅಕಾಡೆಮಿಯು ತುಳುವಿಗೆ ಮಾನ್ಯತೆ ನೀಡಲಿದೆ. ಆ ಬಳಿಕ ತುಳು ಕೃತಿಗಳು ದೇಶದ ಇನ್ನಿತರ ಅಧಿಕೃತ ಭಾಷೆಗಳಿಗೆ ಭಾಷಾಂತರಗೊಳ್ಳುವ ಪ್ರಕ್ರಿಯೆ ನಡೆಯಲಿದೆ. ತುಳುವಿನಲ್ಲಿ ಸಂಸತ್ತಿನಲ್ಲಿ, ವಿಧಾನ ಸಭೆಯಲ್ಲಿ ಮಾತನಾಡುವ ಅವಕಾಶ ಸಿಗಲಿದೆ. ನಾಗರಿಕ ಸೇವಾ ಪರೀಕ್ಷೆಗಳನ್ನು ತುಳುವಿನಲ್ಲಿ ಬರೆಯಬಹುದು. ಆದ್ದರಿಂದ ತುಳುವನ್ನು ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಆಧಾರ–ಕನ್ನಡಪ್ರಭ 04.12.2019

19. ಆಂಧ್ರದಲ್ಲಿನ್ನು 1–6ನೇ ತರಗತಿಗೆ ತೆಲುಗು ಬದಲು ಆಂಗ್ಲ ಮಾಧ್ಯಮ ಬೋಧನೆ

ಆಂಧ್ರರಾಜ್ಯದಲ್ಲಿನ 1 ರಿಂದ 6ನೇ ತರಗತಿವರೆಗಿನ ಎಲ್ಲಾ ಸರ್ಕಾರಿ, ಖಾಸಗಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮದಲ್ಲೇ ಬೋಧನೆ ಮಾಡುವುದನ್ನು ಕಡ್ಡಾಯ ಮಾಡುವ ಮಸೂದೆಯನ್ನು ಆಂಧ್ರಪ್ರದೇಶ ವಿಧಾನ ಸಭೆ ಅಂಗೀಕರಿಸಿದೆ. ಈ ನಿರ್ಧಾರದ ಅನ್ವಯ ಮೊದಲ ಹಂತದಲ್ಲಿ 1–6ನೇ ತರಗತಿವರೆಗಿನ ಎಲ್ಲಾ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳನ್ನೂ 2020–21ರ ಸಾಲಿನಿಂದ ಆಂಗ್ಲ ಮಾಧ್ಯಮವಾಗಿ ಬದಲಾಯಿಸಲಾಗುವುದು. 2021–22ನೇ ಸಾಲಿನಿಂದ 7–10ನೇ ತರಗತಿಗಳನ್ನು ಆಂಗ್ಲ ಮಾಧ್ಯಮಕ್ಕೆ ಬದಲಾಯಿಸಲಾಗುವುದು. ಭವಿಷ್ಯದ ಸವಾಲುಗಳನ್ನು ಎದುರಿಸುವ ಸಲುವಾಗಿ ವಿದ್ಯಾರ್ಥಿಗಳನ್ನು ರೂಪಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದಿದ್ದಾರೆ ಸಿ.ಎಂ. ಜಗನ್ ಮೋಹನ್ ರೆಡ್ಡಿ.

ಆಧಾರ–ಕನ್ನಡಪ್ರಭ 17.12.2019

20. ಮಹಾರಾಷ್ಟ್ರ: ರೈತರ ಕೃಷಿ ಸಾಲ ಮನ್ನಾ

ಮಹಾರಾಷ್ಟ್ರದಲ್ಲಿ ಆಡಳಿತ ಚುಕ್ಕಾಣಿ ಹಿಡಿದ ಕೆಲವೇ ದಿನಗಳಲ್ಲಿ ಉದ್ಧವ್ ಠಾಕ್ರೆ ನೇತೃತ್ವದ ಮಹಾ ವಿಕಾಸ್ ಅಘಾಡಿ ಮೈತ್ರಿ ಸರ್ಕಾರ ಎರಡು ಯೋಜನೆಗಳನ್ನು ಜಾರಿಗೆ ತರುವ ಮೂಲಕ ನಾಂದಿ ಹಾಡಿದೆ. ರೈತರ ಎರಡು ಲಕ್ಷ ರೂಪಾಯಿವರೆಗಿನ ಕೃಷಿ ಸಾಲ ಮನ್ನಾ ಮಾಡುವುದಾಗಿ ಮಹಾರಾಷ್ಟ್ರ ಸರ್ಕಾರ ಘೋಷಿಸಿದೆ.

ಚಳಿಗಾಲ ಅಧಿವೇಶನದ ಕೊನೆಯ ದಿನ ವಿಧಾನ ಸಭೆಯಲ್ಲಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು 'ಮಹಾತ್ಮ ಜ್ಯೋತಿರಾವ್ ಫುಲೆ ಸಾಲ ಮನ್ನಾ ಯೋಜನೆ' ಅಡಿ ರೈತರ ಸಾಲ ಮನ್ನಾ ಮಾಡುವುದಾಗಿ ಸಿ.ಎಂ. ತಿಳಿಸಿದ್ದಾರೆ.

ಆಧಾರ–ವಿಶ್ವವಾಣಿ 22.12.2019

* * * * *

ಭಾಗ– 9

ಅಂತರರಾಷ್ಟ್ರೀಯ ಸುದ್ದಿಗಳು

1. ಬ್ರೆಕ್ಸಿಟ್ ವಿಳಂಬಕ್ಕೆ ಸಂಸತ್ ಬೆಂಬಲ

28 ದೇಶಗಳು ರಚಿಸಿಕೊಂಡಿರುವ ರಾಜಕೀಯ ಮತ್ತು ಆರ್ಥಿಕ ಸಂಘಟನೆಯೇ ಐರೋಪ್ಯ ಒಕ್ಕೂಟ.

ಐರೋಪ್ಯ ಒಕ್ಕೂಟದಿಂದ ಬ್ರಿಟನ್ ಹೊರನಡೆಯುವ ಬ್ರೆಕ್ಸಿಟ್ ಪ್ರಕ್ರಿಯೆಗೆ ಬೆಂಬಲ ನೀಡಬೇಕೆಂಬ ಪ್ರಧಾನಿ ಬೋರಿಸ್ ಜಾನ್ಸನ್‌ರ ಮನವಿಗೆ ಸಂಸದರು ಮಣೆ ಹಾಕದೆ ವಿಳಂಬದ ಗೊತ್ತುವಳಿ ಪರವಾಗಿ ಮತ ಚಲಾಯಿಸಿದ್ದಾರೆ. 37 ವರ್ಷಗಳಲ್ಲಿ ಮೊದಲ ಬಾರಿಗೆ ಅಧಿವೇಶನ ನಡೆಸಿದ ಬ್ರಿಟನ್ ಸಂಸತ್ತು. ಬ್ರೆಕ್ಸಿಟ್ ವಿಳಂಬ ಪ್ರಕ್ರಿಯೆಗೆ ಸಾಕ್ಷಿಯಾಯಿತು. ಇದರಿಂದ ಜಾನ್ಸನ್‌ರಿಗೆ ಇನ್ನೊಂದು ಹಿನ್ನಡೆಯಾಗಿದೆ.

ಪ್ರತಿಪಕ್ಷ ಮಂಡಿಸಿದ ತಿದ್ದುಪಡಿ ಪರವಾಗಿ 322 ಹಾಗೂ ಅದರ ವಿರುದ್ಧ 306 ಮತಗಳು ಬಿದ್ದವು. ವಿಶೇಷ ಅಧಿವೇಶನದಲ್ಲಿ ಕನ್ಸರ್ವೇಟಿವ್ ಪಕ್ಷದ ಸದಸ್ಯ ಓಲಿವರ್ ಲೆಟ್ವಿನ್ ಮಂಡಿಸಿದ್ದ ತಿದ್ದುಪಡಿಗೆ ಬೆಂಬಲ ವ್ಯಕ್ತವಾಯಿತು. ಅಕ್ಟೋಬರ್ 31ರ ಗಡುವು ಜಾರಿಯಲ್ಲಿರುವ ತನಕ ಬ್ರೆಕ್ಸಿಟ್ ಬಗ್ಗೆ ಯಾವುದೇ ಹೊಸ ಒಪ್ಪಂದಕ್ಕೆ ಸಮ್ಮತಿ ಸೂಚಿಸದಿರಲು ಈ ತಿದ್ದುಪಡಿಯಲ್ಲಿ ಪ್ರಸ್ತಾಪಿಸಲಾಗಿತ್ತು.

ಅಕ್ಟೋಬರ್ ಕೊನೆಯೊಳಗೆ ಬ್ರೆಕ್ಸಿಟ್ ಪ್ರಕ್ರಿಯೆ ಪೂರ್ಣಗೊಳ್ಳಬೇಕೆಂಬ ಗಡುವನ್ನು ವಿಸ್ತರಿಸಬೇಕೆಂದು ಐರೋಪ್ಯ ಒಕ್ಕೂಟಕ್ಕೆ ಕೋರುವುದಿಲ್ಲ ಎಂದು ಸಂಸತ್‌ನಲ್ಲಿ ಮತದಾನ ನಡೆದ ಬೆನ್ನಲ್ಲೇ ಜಾನ್ಸನ್ ಹೇಳಿದ್ದಾರೆ. ಮತದಾನದಿಂದ ತಾನು ಹತಾಶನಾಗಿಲ್ಲ ಎಂದು ಹೇಳಿರುವ ಜಾನ್ಸನ್, ತಮ್ಮ ಹೊಸ ಒಡಂಬಡಿಕೆ ಸಂಬಂಧ ಸರ್ಕಾರ ಅಗತ್ಯ ಕಾನೂನನ್ನು ಮಂಡಿಸಲಿದೆ ನಂತರ ಮತದಾನ ನಡೆಯಲಿದೆ ಎಂದಿದ್ದಾರೆ.

ಆಧಾರ–ವಿಜಯವಾಣಿ 20.10.2019

2. ಜಪಾನ್ ನೂತನ ದೊರೆ ನರುಹಿಟೊ ಪಟ್ಟಾಭಿಷೇಕ

180 ದೇಶಗಳ 2 ಸಾವಿರಕ್ಕೂ ಹೆಚ್ಚು ಗಣ್ಯರ ಸಮ್ಮುಖದಲ್ಲಿ ಜಪಾನ್‌ನ ರಾಜನಾಗಿ ನರುಹಿಟೊಗೆ ಪಟ್ಟಾಭಿಷೇಕ ಮಾಡಲಾಯಿತು.

ರಾಷ್ಟ್ರಪತಿ ರಾಮನಾಥ್ ಕೋವಿಂದ್, ಇಂಗ್ಲೆಂಡ್‌ನ ರಾಜಕುಮಾರ ಚಾರ್ಲ್ಸ್, ಚೀನಾದ ಉಪಾಧ್ಯಕ್ಷ ವಾಂಗ್ ಖಿಶಾನ್ ಮತ್ತು ದಕ್ಷಿಣ ಕೊರಿಯಾ ಪ್ರಧಾನಿ ಲೀ ನಾಕ್‌ಯೋನ್ ಸೇರಿದಂತೆ ಹಲವು ಗಣ್ಯರು ಹಾಜರಿದ್ದರು.

ಆಧಾರ–ಉದಯವಾಣಿ 23.10.2019

3. ಕೆನಡಾ ಚುನಾವಣೆ: ತ್ರುದೌಗೆ ಪ್ರಯಾಸದ ಜಯ

ಕೆನಡಾ ಸಂಸತ್‌ನಲ್ಲಿ ನಡೆದ ಚುನಾವಣೆ ಫಲಿತಾಂಶ ಪ್ರಕಟವಾಗಿದ್ದು, ಪ್ರಧಾನಿ ಜಸ್ಟಿನ್ ತ್ರುದೌ ನೇತೃತ್ವದ ಲಿಬರಲ್ ಪಾರ್ಟಿ 338 ಸ್ಥಾನಗಳ ಪೈಕಿ 157 ಸ್ಥಾನಗಳನ್ನು ಗೆದ್ದಿದೆ. ಚುನಾವಣೆಯಲ್ಲಿ ಜಯಗಳಿಸಲು ತ್ರುದೌ ಸಫಲರಾಗಿದ್ದರೂ, ಬಹುಮತ ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ.

ಆಧಾರ– ಉದಯವಾಣಿ 23.10.2019

4. ಸರ್ಕಾರ ರಚಿಸಲು ನೆತನ್ಯಾಹು ವಿಫಲ

ಇಸ್ರೇಲ್ ಸಂಸತ್‌ನಲ್ಲಿ ಚುನಾವಣೆ ವೇಳೆ ಅತಂತ್ರ ಫಲಿತಾಂಶ ಉಂಟಾಗಿರುವುದರಿಂದ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸರ್ಕಾರ ರಚಿಸಲು ಮತ್ತೆ ವಿಫಲರಾಗಿದ್ದಾರೆ. ಇದರಿಂದಾಗಿ ಅವರ ಪ್ರಬಲ ಪ್ರತಿಸ್ಪರ್ಧಿ ಬೆನ್ನಿ ಗಾಂಟ್ಸ್‌ಗೆ ಸರ್ಕಾರದ ನೇತೃತ್ವ ವಹಿಸಲು ಅವಕಾಶ ನೀಡಿದಂತಾಗಿದೆ. ಸರ್ಕಾರ ರಚಿಸಲು ಬೇಕಾಗಿದ್ದ 61 ಸ್ಥಾನಗಳನ್ನು ಪಡೆಯಲು ನೆತನ್ಯಾಹು ವಿಫಲರಾಗಿದ್ದಾರೆ.

ಆಧಾರ– ಉದಯವಾಣಿ 23.10.2019

5. ಕೆನಡಾ ಸಂಸತ್‌ಗೆ ಕನ್ನಡಿಗ ಮನರಾಯ್ಕೆ

ಕೆನಡಾದ ಸಾರ್ವತ್ರಿಕ ಚುನಾವಣೆಯಲ್ಲಿ ಕನ್ನಡಿಗ ಚಂದ್ರ ಆರ್ಯ ಅವರು ನೇಪಿಯನ್ ಕ್ಷೇತ್ರದಿಂದ ಪುನರಾಯ್ಕೆಯಾಗಿದ್ದಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದಿರುವ ಅವರು, ವ್ಯಾಸಂಗದ ಬಳಿಕ ಬೆಂಗಳೂರಿನಲ್ಲಿ ಉದ್ಯಮಿಯಾಗಿ ಗುರುತಿಸಿಕೊಂಡಿದ್ದರು.

ಆಧಾರ–ವಿಜಯಕರ್ನಾಟಕ 24.10.2019

6. ಮಸೂದೆ ಹಿಂಪಡೆದ ಹಾಂಕಾಂಗ್

ಹಾಂಕಾಂಗ್‌ನಲ್ಲಿ ಭಾರಿ ಪ್ರತಿಭಟನೆಗೆ ಕಾರಣವಾಗಿದ್ದ ಅಪರಾಧಿಗಳನ್ನು ಹಾಂಕಾಂಗ್‌ನಿಂದ ಚೀನಾಗೆ ಗಡಿಪಾರು ಮಾಡುವ ಮಸೂದೆಯನ್ನು ಹಿಂಪಡೆದಿರುವುದಾಗಿ ಹಾಂಕಾಂಗ್ ಶಾಸನಸಭೆ ಘೋಷಿಸಿದೆ. ಸಾವಿರಾರು ಜನರು ಬೀದಿಗಿಳಿದು ಈ ಮಸೂದೆ ವಿರುದ್ಧ ಪ್ರತಿಭಟಿಸಿದ್ದರು. ಕೊನೆಗೂ ಈ ಮಸೂದೆಯನ್ನು ರದ್ದುಗೊಳಿಸಲು ನಿರ್ಧರಿಸಲಾಗಿದೆ.

'ಹಸ್ತಾಂತರ ಮಸೂದೆ ಹಿಂಪಡೆಯಲಾಗಿದೆ' ಎಂದು ರಕ್ಷಣಾ ಕಾರ್ಯದರ್ಶಿ ಜಾನ್ ಲೀ ಪ್ರಕಟಿಸಿದರು. ಪ್ರಜಾಪ್ರಭುತ್ವ ಪರ ಶಾಸಕರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಅವರು, 'ಈ ಕುರಿತು ಚರ್ಚೆಗೆ ಅನುಮತಿ ಇಲ್ಲ' ಎಂದು ಹೇಳಿದರು.

ಹಾಂಕಾಂಗ್ ವಿವಾದಾತ್ಮಕ ಮಸೂದೆ ರದ್ದು: ಪ್ರತಿಭಟನೆ ಮುಂದುವರಿಕೆ

ಹೋರಾಟಕ್ಕೆ ಮಣಿದ ಆಡಳಿತ

ಸುಮಾರು ಆರು ತಿಂಗಳಿಂದ ಹಾಂಕಾಂಗ್‌ನಲ್ಲಿ ಅಶಾಂತಿ ಸೃಷ್ಟಿಸಿದ್ದ 'ಶಂಕಿತ ಅಪರಾಧಿಗಳನ್ನು ವಿಚಾರಣೆಗಾಗಿ ಚೀನಾ ಮೈನ್‌ಲ್ಯಾಂಡ್‌ಗೆ ಗಡಿಪಾರು ಮಾಡುವ ವಿವಾದಾತ್ಮಕ ಮಸೂದೆ'ಯನ್ನು ಹಾಂಕಾಂಗ್ ಅಸೆಂಬ್ಲಿ ಕೊನೆಗೂ ರದ್ದು ಮಾಡಿದೆ. ಬ್ರಿಟನ್ ಹಿಡಿತದಿಂದ ಚೀನಾ ತೆಕ್ಕೆಗೆ ಬಂದ ಎರಡು ದಶಕದ ನಂತರ ಹಾಂಕಾಂಗ್ ಎದುರಿಸಿದ ಅತ್ಯಂತ ಕಠಿಣ ಪರಿಸ್ಥಿತಿ ಇದಾಗಿತ್ತು.

ಆಧಾರ–ಉದಯವಾಣಿ, ವಿಜಯವಾಣಿ 24.10.2019

7. ಕರ್ತಾರ್‌ಪುರ ಕಾರಿಡಾರ್

ಒಪ್ಪಂದಕ್ಕೆ ಭಾರತ– ಪಾಕ್ ಸಹಿ

ವೀಸಾ ರಹಿತ ಪ್ರಯಾಣ ಸಾಧ್ಯ । ಪ್ರತಿಯೊಬ್ಬರಿಗೂ ರೂ.1500 ಶುಲ್ಕ

ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿನ ಸಿಖ್ಖರ ಪವಿತ್ರ ಸ್ಥಳ ದರ್ಬಾರ್ ಸಾಹಿಬ್‌ಗೆ ವೀಸಾ ರಹಿತ ಪ್ರಯಾಣ ಕಲ್ಪಿಸುವ ಐತಿಹಾಸಿಕ ಕರ್ತಾರ್‌ಪುರ ಕಾರಿಡಾರ್ ಒಪ್ಪಂದಕ್ಕೆ ಭಾರತ ಹಾಗೂ ಪಾಕಿಸ್ತಾನ ಸಹಿ ಮಾಡಿವೆ.

ಒಪ್ಪಂದದ ಬಳಿಕ ಆನ್ಲೈನ್ ನೋಂದಣಿ ಕೂಡ ಆರಂಭವಾಗಿದ್ದು, ಪ್ರತಿನಿತ್ಯ 5,000 ಮಂದಿ ಹಾಗೂ ವಿಶೇಷ ಸಂದರ್ಭಗಳಲ್ಲಿ 10,000 ಪ್ರವಾಸಿಗರು ಭೇಟಿ ನೀಡಬಹುದಾಗಿದೆ. ಭಾರತದ ವಿರೋಧವಿದ್ದಾಗ್ಯೂ, ಪ್ರತಿ ಯಾತ್ರಾರ್ಥಿಗಳಿಗೆ ರೂ.1500 ಶುಲ್ಕ ಹಿಂಪಡೆಯಲು ಪಾಕಿಸ್ತಾನ ನಿರಾಕರಿಸಿದ್ದು, ಭೇಟಿ ನೀಡುವ ಪ್ರತಿಯೊಬ್ಬರೂ ಈ ಶುಲ್ಕ ಪಾವತಿಸಬೇಕು. ಯಾತ್ರಾರ್ಥಿಗಳು ಬೆಳಿಗ್ಗೆ ತೆರಳಿ ಸಂಜೆ ವೇಳೆ ಮರಳಬೇಕು ಎಂದು ಒಪ್ಪಂದದಲ್ಲಿ ಹೇಳಲಾಗಿದೆ.

ಆಧಾರ–ಕನ್ನಡಪ್ರಭ 25.10.2019

8. ಡೊನಾಲ್ಡ್ ಟ್ರಂಪ್ ಪದಚ್ಯುತಿ ಪ್ರಕ್ರಿಯೆಗೆ ಮತದಾನದ ಒಪ್ಪಿಗೆ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರ ಪದಚ್ಯುತಿ ಪ್ರಕ್ರಿಯೆಯನ್ನು ಮುಂದುವರಿಸಲು ಅಮೆರಿಕ ಸಂಸತ್ ಮತದಾನದ ಮೂಲಕ ಒಪ್ಪಿಗೆ ಸೂಚಿಸಿದೆ. ಮತದಾನ ಪ್ರಕ್ರಿಯೆಯಲ್ಲಿ ನಿರ್ಣಯದ ಪರವಾಗಿ 232 ಮತ್ತು

ವಿರುದ್ಧವಾಗಿ 196 ಮತ ಚಲಾವಣೆಯಾಗಿದ್ದು, ಪದಚ್ಯುತಿ ಪ್ರಕ್ರಿಯೆಯನ್ನು ಅಧಿಕೃತವಾಗಿ ಮುಂದುವರಿಸಲು ಅನುಮೋದನೆ ನೀಡಲಾಗಿದೆ.

ಆಧಾರ–ವಿಜಯವಾಣಿ 01.11.2019

9.ಚೀನಾ ಕನಸಿಗೆ ಜಪಾನ್ ಬರೆ

ಆರ್‌ಸಿಇಪಿ ಒಪ್ಪಂದ ವಿಚಾರದಲ್ಲಿ ಭಾರತ ಪರ ನಿಲುವು

ಪ್ರಾದೇಶಿಕ ಸಮಗ್ರ ಆರ್ಥಿಕ ಸಹಭಾಗಿತ್ವ (ಆರ್‌ಸಿಇಪಿ)ಗೆ ಭಾರತ ಸಹಿ ಹಾಕದಿದ್ದರೆ, ತಾನೂ ಹಾಕುವುದಿಲ್ಲ ಎಂದು ಜಪಾನ್ ಸ್ಪಷ್ಟವಾಗಿ ಹೇಳಿದೆ.

ಜಪಾನ್‌ನ ನಿರ್ಧಾರ ಪ್ರಕಟಿಸಿರುವ ಅಲ್ಲಿನ ಹಣಕಾಸು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಸಹಾಯಕ ಸಚಿವ ಹಿಡೆಕಿ ಮಕಿಹರ, "ಚೀನಾ ಬೆಂಬಲಿತ ಆರ್‌ಸಿಇಪಿ ಒಪ್ಪಂದಕ್ಕೆ ಸಹಿ ಹಾಕುವ ಬಗ್ಗೆ ಜಪಾನ್ ಇನ್ನೂ ನಿರ್ಧರಿಸಿಲ್ಲ. ಭಾರತವನ್ನು ಬದಿಗಿಟ್ಟು ನಾವು ಒಪ್ಪಂದಕ್ಕೆ ಸಹಿ ಹಾಕಲ್ಲ" ಎಂದು ಖಡಾಖಂಡಿತವಾಗಿ ಹೇಳಿದ್ದಾರೆ.

ಆಧಾರ–ಉದಯವಾಣಿ 01.12.2019

10. 34ರ ಮೆರಿನ್ ವಿಶ್ವದ ಅತಿ ಕಿರಿಯ ಪ್ರಧಾನಿ

ಫಿನ್ಲೆಂಡ್‌ನ ನೂತನ ಪ್ರಧಾನಿಯಾಗಿ ಸನ್ನಾ ಮೆರಿನ್ (34) ಆಯ್ಕೆಯಾಗಿದ್ದು, ಇವರು ವಿಶ್ವದ ಅತಿ ಕಿರಿಯ ವಯಸ್ಸಿನ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಆಧಾರ–ಉದಯವಾಣಿ 11.12.2019

11. ಬ್ರಿಟನ್ ಮಹಾ ಚುನಾವಣೆ: ಜಾನ್ಸನ್ ಜಯಭೇರಿ

ಬ್ರಿಟನ್ ಸಂಸದೀಯ ಚುನಾವಣೆಯಲ್ಲಿ ಹಾಲಿ ಪ್ರಧಾನಿ ಹಾಗೂ ಕನ್ಸರ್ವೇಟಿವ್ ಪಕ್ಷದ ನೇತಾರ ಬೋರಿಸ್ ಜಾನ್ಸನ್ ಅವರು ಐತಿಹಾಸಿಕ ಜಯಭೇರಿ ಬಾರಿಸಿದ್ದಾರೆ.

650 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಹುಮತಕ್ಕೆ 326 ಸ್ಥಾನ ಬೇಕಿದ್ದವು. ಜಾನ್ಸನ್ ಅವರ ಕನ್ಸರ್ವೇಟಿವ್ ಪಕ್ಷ 363 ಸ್ಥಾನಗಳನ್ನು ಗೆದ್ದು ಭಾರೀ ಜಯಭೇರಿ ಕಂಡಿತು.

ಆಧಾರ– ಕನ್ನಡ ಪ್ರಭ 14.12.2019

12. ಅಕ್ರಮ ವಲಸಿಗರನ್ನು ವಾಪಸ್ ಕರೆಸಿಕೊಳ್ಳಲು ಬಾಂಗ್ಲಾ ನಿರ್ಧಾರ

ಬಾಂಗ್ಲಾದೇಶದ ಯಾವುದೇ ಪ್ರಜೆ ಭಾರತದಲ್ಲಿ ಅಕ್ರಮವಾಗಿ ನೆಲೆಸಿರುವ ಬಗ್ಗೆ ಪುರಾವೆ ಒದಗಿಸಿದರೆ ಅಂಥವರನ್ನು ತಮ್ಮ ದೇಶ ವಾಪಸ್ ಕರೆಸಿಕೊಳ್ಳಲಿದೆ ಎಂದು ಬಾಂಗ್ಲಾದೇಶ ಘೋಷಿಸಿದೆ.

ಆಧಾರ–ವಿಜಯವಾಣಿ 18.12.2019

13. ಟ್ರಂಪ್‌ಗೆ ಮಹಾಭಿಯೋಗ ಬಿಸಿ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧ ಮಹಾಭಿಯೋಗ ಗೊತ್ತುವಳಿ ಹೌಸ್ ಆಫ್ ರೆಪ್ರೆಸೆಂಟೇಟೀವಿವ್ಸ್‌ನಲ್ಲಿ (ಅಮೆರಿಕ ಸಂಸತ್ತಿನ ಕೆಳಮನೆ) ಮಂಡನೆಯಾಗುವ ಸಾಧ್ಯತೆ ಇದೆ.

ಹೌಸ್ ಆಫ್ ರೆಪ್ರೆಸೆಂಟೇಟೀವ್ಸ್‌ನಲ್ಲಿ ಟ್ರಂಪ್ ಅವರ ರಿಪಬ್ಲಿಕನ್ ಪಕ್ಷ 199 ಸದಸ್ಯರನ್ನು ಹೊಂದಿದ್ದು, ವಿರೋಧ ಪಕ್ಷ ಡೆಮಾಕ್ರಟಿಕ್ 235 ಸದಸ್ಯರನ್ನು ಹೊಂದಿದೆ. ಕೆಳಮನೆಯಲ್ಲಿ ಡೆಮಾಕ್ರಟಿಕ್ ಪಕ್ಷದ ನ್ಯಾನ್ಸಿ ಪೆಲೋಸಿ ಸ್ಪೀಕರ್ ಆಗಿರುವುದು ಟ್ರಂಪ್ ಆತಂಕಕ್ಕೆ ಕಾರಣವಾಗಿದೆ. ಟ್ರಂಪ್ ವಿರುದ್ಧ ಎರಡು ಆರೋಪಗಳನ್ನು ಸದನದ ನ್ಯಾಯಾಂಗ ಸಮಿತಿಯು 23 ಮತ್ತು 17 ಮತಗಳ ಅಂತರದಲ್ಲಿ ಅದನ್ನು ಅನುಮೋದಿಸಿರುವುದು ಟ್ರಂಪ್‌ಗೆ ದುಗುಡ ಹೆಚ್ಚಿದೆ. ಟ್ರಂಪ್‌ರನ್ನು ಅಧಿಕಾರದಿಂದ ಕೆಳಗೆ ಇಳಿಸಬೇಕಾದರೆ ಮಹಾಭಿಯೋಗದ ಗೊತ್ತುವಳಿ ಸೆನೆಟ್‌ನಲ್ಲೂ (ಸಂಸತ್ತಿನ ಮೇಲ್ಮನೆ) ಅಂಗೀಕಾರವಾಗಬೇಕು. ಆದರೆ ಸೆನೆಟ್‌ನಲ್ಲಿ ರಿಪಬ್ಲಿಕನ್ ಪಕ್ಷದ

ಸದಸ್ಯರಿದ್ದು, ಡೆಮಾಕ್ರಟಿಕ್ ಪಕ್ಷ 45 ಸದಸ್ಯರು ಇದ್ದಾರೆ. ಹೀಗಾಗಿ ಗೊತ್ತುವಳಿಗೆ ಸೋಲಾಗುತ್ತದೆ ಎನ್ನಲಾಗಿದೆ. ಎರಡೂ ಸದನಗಳಲ್ಲಿ ಮಹಾಭಿಯೋಗ ಗೊತ್ತುವಳಿ ಅನುಮೋದನೆ ಆಗಬೇಕಾದರೆ ಬಹುಮತ ಅಗತ್ಯ. ಈ ಹಿಂದೆ 1974ರಲ್ಲಿ ರಿಚರ್ಡ್ ನಿಕ್ಸನ್ ಮಹಾಭಿಯೋಗಕ್ಕೆ ಗುರಿಯಾಗಿ ಅಧಿಕಾರ ಕಳೆದುಕೊಂಡಿದ್ದರು. 1868ರಲ್ಲಿ ಆಂಡ್ರೊ ಜಾನ್ಸನ್ ಮತ್ತು 1998ರಲ್ಲಿ ಬಿಲ್ ಕ್ಲಿಂಟನ್ ವಿರುದ್ಧ ಮಹಾಭಿಯೋಗ ಮಂಡನೆಯಾಗಿತ್ತು. ಆದರೆ, ಅದಕ್ಕೆ ಸೆನೆಟ್‌ನಲ್ಲಿ ಸೋಲುಂಟಾಗಿತ್ತು. ಡೆಮಾಕ್ರಟಿಕ್ ಮುಖಂಡ, ಮಾಜಿ ಉಪಾಧ್ಯಕ್ಷ ಜೋ ಬಿಡೆನ್ 2020ರ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸಿದ್ದು, ಅವರನ್ನು ಹಗರಣದಲ್ಲಿ ಸಿಲುಕಿಸಲು ಅಧ್ಯಕ್ಷ ಟ್ರಂಪ್, ಉಕ್ರೇನ್ ಅಧ್ಯಕ್ಷ ವೊಲೊಡಿಮ್ಯೆರ್ ಜೆಲೆನ್ಸ್ಕಿ ಮೇಲೆ ಪ್ರಭಾವ ಬೀರಿ ಅಧಿಕಾರ ದುರುಪಯೋಗ ಮಾಡಿದ್ದಾರೆ ಎಂಬುದು ಮಹಾಭಿಯೋಗಕ್ಕೆ ಪ್ರಮುಖ ಕಾರಣ.

ಆಧಾರ–ವಿಜಯವಾಣಿ 18.12.2019

14. ಟ್ರಂಪ್ ವಾಗ್ದಂಡನೆ ನಿರ್ಣಯ ಅಂಗೀಕಾರ

ಅಧಿಕಾರ ದುರ್ಬಳಕೆ ಮತ್ತು ಸಂಸತ್ ತನಿಖೆಗೆ ಅಡ್ಡಿಪಡಿಸಿದ ಆರೋಪದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧ ಅಮೆರಿಕದ ಸಂಸತ್ತಿನ ಕೆಳಮನೆ ಹೌಸ್ ಆಫ್ ರೆಪ್ರಸೆಂಟೆಟಿವ್ಸ್‌ನಲ್ಲಿ ಮಂಡನೆಯಾದ ವಾಗ್ದಂಡನೆ ನಿರ್ಣಯ ಅಂಗೀಕಾರವಾಗಿದೆ. ಈ ಮೂಲಕ ಅಮೆರಿಕದ ಇತಿಹಾಸದಲ್ಲಿ ವಾಗ್ದಂಡನೆಗೆ ಗುರಿಯಾದ ನಾಲ್ಕನೇ ಅಧ್ಯಕ್ಷ ಎಂಬ ಕುಖ್ಯಾತಿಗೆ ಟ್ರಂಪ್ ಗುರಿಯಾಗಿದ್ದಾರೆ.

ಸುಮಾರು 8 ತಾಸುಗಳ ದೀರ್ಘಾವಧಿ ಚರ್ಚೆ ಬಳಿಕ ಟ್ರಂಪ್ ವಿರುದ್ಧ ವಾಗ್ದಂಡನೆ ನಿರ್ಣಯವನ್ನು ಮತಕ್ಕೆ ಹಾಕಲಾಯಿತು. ಅದರಲ್ಲಿ ಎರಡು ಭಾಗಗಳಿದ್ದವು. ಅಧಿಕಾರ ದುರ್ಬಳಕೆ ಮಾಡಿಕೊಂಡು ಉಕ್ರೇನ್ ಅಧ್ಯಕ್ಷರ ಮೇಲೆ ಒತ್ತಡ ಹೇರಿದ ಹಾಗೂ ಅಧಿಕಾರ ದುರ್ಬಳಕೆ ಮಾಡಿಕೊಂಡು ಸಂಸತ್ ತನಿಖೆಗೆ ಅಡ್ಡಿಪಡಿಸಿದ ಆರೋಪವಿತ್ತು. ಎರಡೂ ನಿರ್ಣಯಗಳು ಕ್ರಮವಾಗಿ 230–197 ಹಾಗೂ 229–198 ಅಂತರದಿಂದ ಅಂಗೀಕಾರಗೊಂಡವು. ಪ್ರತಿಪಕ್ಷದ ಇಬ್ಬರು ಸಂಸದರು ವಾಗ್ದಂಡನೆ ವಿರೋಧಿಸಿ ಮತ ಚಲಾಯಿಸಿದ್ದಾರೆ. ಮಿನ್ನೆಸೊಟ ಸಂಸದ ಕೊಲ್ಲಿನ್ ಪೀಟರ್‌ಸನ್ ಮತ್ತು ನ್ಯೂಜೆರ್ಸಿ ಸಂಸದ ಜೆಫ್ ವ್ಯಾನ್ ಡ್ರ್ಯೂ ಅವರು ಅಧ್ಯಕ್ಷ ಟ್ರಂಪ್ ಪರವಾಗಿ ನಿಂತಿದ್ದಾರೆ.

ಸಂಸತ್‌ನ ಮೇಲ್ಮನೆಯಾದ ಸೆನೆಟ್‌ನಲ್ಲಿ ನಿರ್ಣಯ ಮಂಡನೆಯಾಗಿ ಚರ್ಚೆ ಆರಂಭವಾಗಲಿದೆ. ಸದನದಲ್ಲಿ ಟ್ರಂಪ್ ಪಕ್ಷಕ್ಕೆ ಬಹುಮತ ಇರುವುದರಿಂದ ಅಲ್ಲಿ ನಿರ್ಣಯಕ್ಕೆ ಸೋಲಾಗುವ ಸಾಧ್ಯತೆ ಇದೆ.

ಆಧಾರ–ವಿಜಯಕರ್ನಾಟಕ 20.12.2019

15. ಕಾಶ್ಮೀರ ಕುರಿತ ಗೊತ್ತುವಳಿ ಮಂಡನೆಗೆ ಭಾರತ ಅತೃಪ್ತಿ

ಪ್ರಮೀಳಾ ಭೇಟಿಗೆ ನಕಾರ

ಕಾಶ್ಮೀರದಲ್ಲಿ ಹೇರಲಾಗಿರುವ ನಿಷೇಧಾತ್ಮಕ ಕ್ರಮಗಳನ್ನು ಹಿಂಪಡೆಯಬೇಕು ಎಂದು ಅಮೆರಿಕದ ಸಂಸತ್‌ನಲ್ಲಿ ಗೊತ್ತುವಳಿ ಮಂಡಿಸಿದ ಸಂಸದೆ, ಭಾರತೀಯ ಮೂಲದ ಪ್ರಮೀಳಾ ಜಯಪಾಲ್‌ರನ್ನು ಭೇಟಿಯಾಗಲು ವಿದೇಶಾಂಗ ಸಚಿವ ಎಸ್. ಜೈಶಂಕರ್ ನಿರಾಕರಿಸಿದ್ದಾರೆ. 2ನೇ ಆವೃತ್ತಿಯ 2+2 ಮಾತುಕತೆ ಬಳಿಕ ಭಾರತದ ಪತ್ರಕರ್ತರೊಂದಿಗೆ ಮಾತನಾಡಿದ ಜೈಶಂಕರ್, ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನಲ್ಲಿ ಮಂಡಿಸಲಾದ ಗೊತ್ತುವಳಿಯ ಬಗ್ಗೆ ಮಾಹಿತಿ ಇದೆ. ಇದು ಸೂಕ್ತ ಕ್ರಮವಲ್ಲ ಎಂದು ಹೇಳಿದ್ದಾರೆ. ಪ್ರಮೀಳಾ ಜಯಪಾಲ್ ನೇತೃತ್ವದ ಸಂಸತ್ ನಿಯೋಗವನ್ನು ಭೇಟಿ ಮಾಡುವುದಕ್ಕೆ ಉತ್ಸಾಹವನ್ನೂ ಹೊಂದಿಲ್ಲ ಎಂದು ಹೇಳಿದ್ದಾರೆ.

ಆಧಾರ–ಉದಯವಾಣಿ 21.12.2019

16. ಗಲ್ಲು ಶಿಕ್ಷೆ ಪ್ರಶ್ನಿಸಿದ್ದ ಅರ್ಜಿ ವಾಪಸ್

ತಮಗೆ ವಿಧಿಸಿರುವ ಗಲ್ಲುಶಿಕ್ಷೆ ಪ್ರಶ್ನಿಸಿ ಪಾಕಿಸ್ತಾನದ ಮಾಜಿ ಅಧ್ಯಕ್ಷ ಪರ್ವೇಜ್ ಮುಷರಫ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಲಾಹೋರ್ ಹೈಕೋರ್ಟ್ ಹಿಂದಿರುಗಿಸಿದೆ. “ಚಳಿಗಾಲದ ರಜಾಕಾಲ ಇರುವುದರಿಂದ

ಪೂರ್ಣ ನ್ಯಾಯಪೀಠ ಸದ್ಯಕ್ಕೆ ವಿಚಾರಣೆಗೆ ಲಭ್ಯವಿಲ್ಲ." ಎಂದು ಹೈಕೋರ್ಟ್ ಕಾರಣ ನೀಡಿ ಅರ್ಜಿಯನ್ನು ಮರಳಿಸಿದೆ. 86 ಪುಟಗಳ ಸುದೀರ್ಘ ಅರ್ಜಿ ಸಲ್ಲಿಸಿದ್ದ ಮುಷರಫ್ ಅವರು ತ್ರಿಸದಸ್ಯ ನ್ಯಾಯಪೀಠ ತಮಗೆ ವಿಧಿಸಿರುವ ಶಿಕ್ಷೆಯ ಮರುಪರಿಶೀಲನೆಗೆ ಆಗ್ರಹಿಸಿದ್ದರು. ಹೊಸ ನ್ಯಾಯಪೀಠದಿಂದ ವಿಚಾರಣೆಗೆ ಮನವಿ ಮಾಡಿದ್ದರು. ಆದರೆ ಕೋರ್ಟ್‌ನ ರಿಜಿಸ್ಟ್ರಾರ್ ಅವರು ಅರ್ಜಿಯನ್ನು ಸ್ವೀಕರಿಸದೆ ಮುಷರಫ್ ಅವರ ವಕೀಲರಾದ ಅಝುರ್ ಸಿದ್ದಿಕಿಗೆ ಅದನ್ನು ಹಿಂದಿರುಗಿಸಿದ್ದಾರೆ. ಜನವರಿ ತಿಂಗಳ ಮೊದಲ ವಾರದಲ್ಲಿ ಅರ್ಜಿ ಸಲ್ಲಿಸುವಂತೆಯೂ ಸೂಚಿಸಿದ್ದಾರೆ. 2007ರಲ್ಲಿ ದೇಶದಾದ್ಯಂತ ತುರ್ತು ಪರಿಸ್ಥಿತಿ ಹೇರಿ ಸಂವಿಧಾನವನ್ನು ತಿರುಚಿದ ಪ್ರಕರಣದಲ್ಲಿ ಡಿ.17ರಂದು ಲಾಹೋರ್ ಹೈಕೋರ್ಟ್ ಮುಷರಫ್ ಅವರು ಅಪರಾಧಿ ಎಂದು ಘೋಷಿಸಿ ಅವರಿಗೆ ಗಲ್ಲು ಶಿಕ್ಷೆ ವಿಧಿಸಿತ್ತು.

ಆಧಾರ–ವಿಜಯಕರ್ನಾಟಕ 29.12.2019

* * * * *

ಭಾಗ–10

ಶ್ರದ್ಧಾಂಜಲಿ

1. ಸ್ಯಾಕ್ಸೋಫೋನ್ ಚಕ್ರವರ್ತಿ ಕದ್ರಿ ಗೋಪಾಲನಾಥ್

ಕರ್ನಾಟಕ ಶಾಸ್ತ್ರೀಯ ಸಂಗೀತ ಪರಿಣಿತ ಸ್ಯಾಕ್ಸೋಫೋನ್ ವಾದನದಿಂದ ಜಗದಗಲ ಕೀರ್ತಿ ಪಡೆದು ದೇಶದ ಹೆಸರು ಬೆಳಗಿಸಿದವರು ಪದ್ಮಶ್ರೀ ಪುರಸ್ಕೃತ ಕದ್ರಿ ಗೋಪಾಲನಾಥ್ (70) ಅವರು ದಿನಾಂಕ:11.10.2019ರಂದು ನಿಧನರಾದರು.

ದಿನಾಂಕ:06.12.1949ರಂದು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಜಿಲ್ಲೆಯ ಸಜಿಪಮೂಡದಲ್ಲಿ ಜನಿಸಿದರು. ಕರ್ನಾಟಕ ಶಾಸ್ತ್ರಿಯ ಸಂಗೀತ ನಿಟ್ಟಿನಲ್ಲಿ ಸ್ಯಾಕ್ಸೋಫೋನ್‌ಗೆ ಇನ್ನೊಂದು ಹೆಸರೇ ಕದ್ರಿ ಗೋಪಾಲನಾಥ್ ಭಾರತದಲ್ಲಿ ಮತ್ತು ಹೊರಗೆ ಅನೇಕ ಸಂಗೀತ ಕಛೇರಿಗಳನ್ನು ನಡೆಸಿಕೊಂಡು ಬಂದಿದ್ದ ಅವರು ಸ್ಯಾಕ್ಸೋಫೋನ್ ಚಕ್ರವರ್ತಿಯೆಂದೇ ಹೆಸರಾಗಿದ್ದಾರೆ.

ಹಿಂದೂಸ್ಥಾನಿ ಶಾಸ್ತ್ರೀಯ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿಗಳಲ್ಲಿ ಮನ್ನಣೆ ಪಡೆದ ಹಲವಾರು ಕಲಾವಿದರೊಂದಿಗೆ ಕಲೈಮಾಮಣಿ ಎಂದೇ ಹೆಸಾಗಿರುವ ಕದ್ರಿಯವರು ಸ್ಯಾಕ್ಸೋಫೋನ್ ಶಾಸ್ತ್ರೀಯ ಸಂಗೀತದ ಗೌರವ ದೊರಕಿಸಿಕೊಟ್ಟವರು.

ಅವರಿಗೆ ಪದ್ಮಶ್ರೀ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ತಮಿಳುನಾಡು ಸರ್ಕಾರದ ಕಲೈಮಾಮಣಿ, ಕರ್ನಾಟಕ ಕಲಾಶ್ರೀ, ಗಾನಕಲಾ ಭೂಷಣ, ನಾದ ಗಂಧರ್ವ ಹೀಗೆ ಹಲವಾರು ಪ್ರಶಸ್ತಿ ಮತ್ತು ಬೆಂಗಳೂರು, ಮಂಗಳೂರು ವಿಶ್ವವಿದ್ಯಾಲಯದ ಡಾಕ್ಟರೇಟ್ ಗೌರವಗಳು ಬಂದಿವೆ.

ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಭಾರತೀಯ ಯೋಧರ ಬಲಿದಾನಕ್ಕೆ ಮಿಡಿದ ಕದ್ರಿಯವರು ಯೋಧರ ಕುಟುಂಬದವರಿಗೆ ನೆರವಾಗಿದ್ದರು.

ಆಧಾರ–ವಿಜಯವಾಣಿ 12.10.2019

2. ಕೆ.ಬಿ. ಸಿದ್ದಯ್ಯ, ಹಿರಿಯ ಸಾಹಿತಿ

ಕೆ.ಬಿ. ಸಿದ್ದಯ್ಯ, ಹಿರಿಯ ಸಾಹಿತಿ (65) ಇವರು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ದಿನಾಂಕ:18.10.2019ರಂದು ನಿಧನರಾದರು.

ಸದರಿಯವರು ಮಾಗಡಿ ತಾಲ್ಲೂಕಿನ ಕೆಂಕೆರೆಯಲ್ಲಿ ದಿನಾಂಕ:02.03.1954ರಲ್ಲಿ ಜನಿಸಿದ್ದರು. ರಾಜ್ಯದಲ್ಲಿ ದಲಿತ ಹೋರಾಟಗಳಿಗೆ ತಾತ್ವಿಕ ಶಕ್ತಿಯಾಗಿದ್ದರು.

ದಲಿತರು ಸೇರಿದಂತೆ ಧ್ವನಿ ಇಲ್ಲದವರ ಪರ ಹೋರಾಟಗಳಲ್ಲಿ ಅವರು ಪಾಲ್ಗೊಳ್ಳಲು ಹಿಂದೆ ಬೀಳುತ್ತಿರಲಿಲ್ಲ. ಕೆಳಕ್ಕೆ ಬಿದ್ದವರ ಕೈ ಹಿಡಿಯಬೇಕು ಎನ್ನುವುದಷ್ಟೆ ಅವರ ಚಿಂತನೆ ಆಗಿರುತ್ತಿತ್ತು. ದಕ್ಷ ಕಥಾದೇವಿ, ಬಕಾಲ, ಅನಾತ್ಮ, ಗಲ್ಲೇಬಾನಿ ಅವರ ಕೃತಿಗಳು.

ಆಧಾರ–ಪ್ರಜಾವಾಣಿ 19.10.2019

3. ಎನ್. ವೆಂಕಟಾಚಲ, ನಿವೃತ್ತ ಲೋಕಾಯುಕ್ತ

ಎನ್.ವೆಂಕಟಾಚಲ ಅವರು ದಿನಾಂಕ:30.10.2019ರಂದು ಬೆಂಗಳೂರಿನಲ್ಲಿ ಹೃದಯಘಾತದಿಂದ ನಿಧನರಾದರು.

ದಿನಾಂಕ:03.07.1930ರಂದು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಮಿಟ್ಟೂರಿನ ಕೃಷಿ ಕುಟುಂಬದಲ್ಲಿ ಜನಿಸಿದರು. ಅವರು ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಕಾನೂನು ಪದವಿ ಪಡೆದರು. 1958ರಲ್ಲಿ ಆರ್.ಸಿ. ಕಾನೂನು ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿದ್ದರು. ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ವಕೀಲರಾಗಿ ವೃತ್ತಿ ಆರಂಭಿಸಿದರು. ಅವರು ಸಿವಿಲ್, ಕ್ರಿಮಿನಲ್ ಮತ್ತು ಸಾಂವಿಧಾನಿಕ ಪ್ರಕರಣಗಳಲ್ಲಿ ಹೆಚ್ಚಿನ ಪರಿಣಿತಿ ಹೊಂದಿದ್ದರು.

ಅವರೊಳಗಿದ್ದ ಜನಪರ ಕಾಳಜಿ, ಸಮಾಜದಲ್ಲಿ ತುಂಬಿ ತುಳುಕುತ್ತಿದ್ದ ಭ್ರಷ್ಟಾಚಾರದ ಬಗ್ಗೆ ಕಡು ಕೋಪವಿತ್ತು. 1963 ರಿಂದ 1973ರವರೆಗೆ ಹೆಬ್ಬಾಳದ ಕೃಷಿ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಾಗಿದ್ದರು.

1973–77ರ ಅವಧಿಯಲ್ಲಿ ಹೈಕೋರ್ಟ್ ವಕೀಲರಾಗಿ ನಂತರ ನ್ಯಾಯಮೂರ್ತಿಯಾಗಿ, ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿ ತರುವಾಯ ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದರು.

ಆಧಾರ–ಪ್ರಜಾವಾಣಿ 31.10.2019

4. ವೈಜನಾಥ ಪಾಟೀಲ್, ಮಾಜಿ ಶಾಸಕರು

ವೈಜನಾಥ ಪಾಟೀಲ್, (82) ಮಾಜಿ ಶಾಸಕರು ಬೆಂಗಳೂರಿನಲ್ಲಿ ದಿನಾಂಕ 02.11.2019 ರಂದು ನಿಧನರಾದರು.

ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ಹಕ್ಯಾಳದಲ್ಲಿ 1941ರಲ್ಲಿ ಜನಿಸಿದ ಇವರು ಜಯಪ್ರಕಾಶ್ ನಾರಾಯಣ್ ವಿಚಾರಗಳಿಗೆ ಪ್ರಭಾವಿತರಾಗಿ 1965ರಲ್ಲಿ ರಾಜಕೀಯಕ್ಕೆ ಪ್ರವೇಶಿಸಿದರು. 1984ರಲ್ಲಿ ಶ್ರೀ ರಾಮಕೃಷ್ಣ ಹೆಗಡೆ ಸಂಪುಟದಲ್ಲಿ ತೋಟಗಾರಿಕಾ ಹಾಗೂ 1994ರಲ್ಲಿ ಶ್ರೀ ಹೆಚ್.ಡಿ.ದೇವೇಗೌಡರ ಸಂಪುಟದಲ್ಲಿ ನಗರಾಭಿವೃದ್ಧಿ ಸಚಿವರಾಗಿದ್ದರು.

ಹೈದರಾಬಾದ್–ಕರ್ನಾಟಕ ಹೋರಾಟ ಸಮಿತಿಯನ್ನೇ ಪ್ರಬಲ ಪಕ್ಷವನ್ನಾಗಿ ರೂಪಿಸಬೇಕೆಂದು ಕನಸು ಅವರಿಗಿತ್ತು. ಪ್ರಾದೇಶಿಕ ಅಸಮಾನತೆ ಹೋಗಲಾಡಿಸಲು ಕೊಪ್ಪಳದಿಂದ ಬೀದರ್ ಜಿಲ್ಲೆಯವರೆಗೆ ಅವರು ನಡೆಸಿದ ಹೋರಾಟದ ಫಲವಾಗಿಯೇ 2013ರಲ್ಲಿ ಯುಪಿಎ ಸರ್ಕಾರ ಸಂವಿಧಾನದ 371ನೇ ಕಲಂನ್ನು ಅನಿವಾರ್ಯವಾಗಿ ಜಾರಿಗೊಳಿಸಿತು.

ಆಧಾರ–ಕನ್ನಡಪ್ರಭ 03.11.2019

5. ಟಿ.ಎನ್.ಶೇಷನ್, ಭಾರತದ ಚುನಾವಣಾ ಆಯೋಗದ ಮಾಜಿ ಆಯುಕ್ತರು

ಟಿ.ಎನ್.ಶೇಷನ್, (86) ಕೇಂದ್ರ ಚುನಾವಣಾ ಆಯೋಗದ ಮಾಜಿ ಆಯುಕ್ತರು, ದಿನಾಂಕ 10.11.2019 ರಂದು ನಿಧನ ಹೊಂದಿದರು.

ದಿನಾಂಕ 15.12.1932 ರಂದು ಕೇರಳದ ಪಾಲಕ್ಕಾಡ್‌ನಲ್ಲಿ ಜನಿಸಿದರು. ಅವರು 12.12.1990 ರಿಂದ 11.12.1996ರ ವರೆಗೆ ಭಾರತದ 10ನೇ ಮುಖ್ಯ ಚುನಾವಣಾ ಆಯೋಗದ ಆಯುಕ್ತರಾಗಿದ್ದರು.

ಚುನಾವಣಾ ಆಯೋಗ ಸ್ವಾಯತ್ತ ಸಂಸ್ಥೆ ಎಂಬುದನ್ನು ಮೊದಲ ಬಾರಿಗೆ ತೋರಿಸಿಕೊಟ್ಟವರು. ತಿರುನಲ್ಲೈ ನಾರಾಯಣ ಅಯ್ಯರ್ ಶೇಷನ್ ಅವರು ಮಾದರಿ ಚುನಾವಣಾ ನೀತಿ ಸಂಹಿತೆ ಜಾರಿ, ಮತದಾರರ ಗುರುತಿನ ಚೀಟಿ ಸೇರಿ ಹತ್ತು ಹಲವು ಸುಧಾರಣೆಗಳನ್ನು ಜಾರಿಗೆ ತಂದಿದ್ದು, ಚುನಾವಣಾ ಆಯೋಗದ ನಿಯಮಗಳನ್ನು ಮುರಿಯುತ್ತಿದ್ದವರಿಗೆ ಸಿಂಹ ಸ್ವಪ್ನವಾಗಿದ್ದರು. ಪ್ರಜಾ ಪ್ರಾತಿನಿಧ್ಯ ಕಾಯ್ದೆ 1951ರ ಪ್ರಕಾರ ಚುನಾವಣೆ ಮುಗಿದ ನಂತರ ಅಭ್ಯರ್ಥಿಗಳು ಖರ್ಚು ವೆಚ್ಚದ ಲೆಕ್ಕವನ್ನು ಕಡ್ಡಾಯವಾಗಿ ಎಲ್ಲಾ ಅಭ್ಯರ್ಥಿಗಳೂ ಪಾಲಿಸಬೇಕೆಂಬ ಫರ್ಮಾನು ಹೊರಡಿಸಿದರು. 1996ರಲ್ಲಿ ಆಡಳಿತ ಸೇವೆಗಾಗಿ ಮ್ಯಾಗ್ಸೆಸೆ ಪ್ರಶಸ್ತಿ ದೊರೆಯಿತು.

ಚುನಾವಣಾ ಪ್ರಕ್ರಿಯೆ ಬಗ್ಗೆ ಇವರು ಕೈಗೊಂಡ ಸುಧಾರಣೆಗಳು ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ವಿನೂತನ ಮೈಲುಗಲ್ಲುಗಳಾದವು. ಚುನಾವಣಾ ಕ್ರಮದಲ್ಲಿ ಸುಧಾರಣೆ ಮತ್ತು ಚುನಾವಣಾ ಕಾನೂನಿಗೆ ಅಗತ್ಯ ಮಾರ್ಪಾಡು ತಂದರು.

ಆಧಾರ–ವಿಜಯವಾಣಿ 11.11.2019

6. ರಂ.ಶಾ ಲೋಕಾಪುರ್, ಸಂಶೋಧಕರು

ರಂ.ಶಾ ಲೋಕಾಪುರ್, (87) ಸಂಶೋಧಕರು ದಿನಾಂಕ 19.11.2019ರಂದು ಪುಣೆಯಲ್ಲಿ ನಿಧನ ಹೊಂದಿದರು.

ಕನ್ನಡ ಸಾರಸ್ವತ ಲೋಕದ ಕಾದಂಬರಿಕಾರ, ನಾಟಕಕಾರ, ಸಂಶೋಧಕ ಮತ್ತು ಸಂವೇದನಾಶೀಲ ಲೇಖಕರಾಗಿದ್ದರು.

13ನೇ ಶತಮಾನದಲ್ಲಿ ಮರಾಠಿಯಲ್ಲಿ ರಚನೆಯಾದ ಜ್ಞಾನೇಶ್ವರಿಯನ್ನು ಕನ್ನಡಕ್ಕೆ ಅನುವಾದ ಮಾಡುವ ಮೂಲಕ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಶ್ರೇಷ್ಠ ಅನುವಾದ ಪ್ರಶಸ್ತಿ ದೊರಕಿತು. ಅವರ ಕೃತಿಗಳು ಕನ್ನಡ ಮತ್ತು ಮರಾಠಿ ಬಾಂಧವ್ಯ ಬೆಸೆಯುವ ಕೃತಿಗಳು ಗಮನಾರ್ಹವಾಗಿವೆ.

"ಸಂಸ್ಕಾರ" ಮತ್ತು "ಮರಳಿ ಮಣ್ಣಿಗೆ" ಕಾದಂಬರಿಗಳನ್ನು ಮರಾಠಿಗೆ ಅನುವಾದ ಮಾಡಿದ್ದಾರೆ. ಮರಾಠಿ ಕಾದಂಬರಿ "ಹೋರಪಳ"ವನ್ನು "ಅಗ್ನಿದಿವ್ಯ" ಹೆಸರಿನಿಂದ ಕನ್ನಡಕ್ಕೆ ತಂದಿದ್ದಾರೆ. ಇವರ ಸಾಹಿತ್ಯ ಕೃಷಿಗೆ ಅನೇಕ ಪ್ರಶಸ್ತಿಗಳು ಅರಸಿ ಬಂದಿವೆ.

ಆಧಾರ–ಸಂಯುಕ್ತ ಕರ್ನಾಟಕ 20.11.2019

7. ಅಬ್ದುಲ್ ಮಜೀದ್ ಖಾನ್, ಬಹುಭಾಷಾ ಸಾಹಿತಿ

ಅಬ್ದುಲ್ ಮಜೀದ್ ಖಾನ್, (83) ಬಹುಭಾಷಾ ಸಾಹಿತಿ, ದಿನಾಂಕ 22.11.2019ರಂದು ಬೆಂಗಳೂರಿನಲ್ಲಿ ನಿಧನರಾದರು.

ಅವರು ಕನ್ನಡ, ಉರ್ದು ಮತ್ತು ಆಂಗ್ಲ ಭಾಷೆಗಳಲ್ಲಿ ಕವಿತೆ, ಕಥೆ ಮತ್ತು ಕಾದಂಬರಿಗಳನ್ನು ರಚಿಸಿದ್ದಾರೆ. ಅಲ್ಲದೆ ಅನುವಾದಕರಾಗಿಯೂ ಕೆಲಸ ಮಾಡಿದ್ದಾರೆ. ಸಾಹಿತ್ಯ ಸೇವೆಗಾಗಿ ಕರ್ನಾಟಕ ಸಾಹಿತ್ಯ ಆಕಾಡೆಮಿ ಮತ್ತು ಉರ್ದು ಅಕಾಡೆಮಿ ಗೌರವ ಪ್ರಶಸ್ತಿಗಳು ಬಂದಿವೆ.

ಆಧಾರ–ಉದಯವಾಣಿ 24.11.2019

8. ಚೆನ್ನಣ್ಣ ವಾಲೀಕರ್, ಸಾಹಿತಿ

ಚೆನ್ನಣ್ಣ ವಾಲೀಕರ್, (78) ಸಾಹಿತಿ ದಿನಾಂಕ 24.11.2019ರಂದು ನಿಧನರಾದರು. ಅವರು ಕಲ್ಯಾಣ ಕರ್ನಾಟಕದ ಹಿರಿಯ ಮತ್ತು ಕನ್ನಡ ಸಾರಸ್ವತ ಲೋಕದ ಅಹರ್ನಿಶಿ ಬರಹ, ಬಂಡಾಯ ಸಾಹಿತಿ. ನಾಟಕ ವಿಮರ್ಶೆ, ಕಾದಂಬರಿ ಹಾಗೂ ಕಥೆ ಸೇರಿದಂತೆ ಸಾಹಿತ್ಯ ಕ್ಷೇತ್ರದ ಎಲ್ಲಾ ವಿಭಾಗಗಳಲ್ಲಿ ಕೆಲಸ ಮಾಡಿದ್ದ ಮಹಾನ್ ಸಾಹಿತಿ ಎನಿಸಿಕೊಂಡಿದ್ದರು.

ಆಧಾರ–ಕನ್ನಡಪ್ರಭ 25.11.2019

9. ಡಾ:ಎಸ್.ಎಸ್.ಕಟಗಿಹಳ್ಳಿಮಠ, ಕೀಟ ವಿಜ್ಞಾನಿ

ಡಾ:ಎಸ್.ಎಸ್.ಕಟಗಿಹಳ್ಳಿಮಠ, (101) ಕೀಟ ವಿಜ್ಞಾನಿ, ದಿನಾಂಕ:03.12.2019ರಂದು ನಿಧನರಾದರು.

ಅವರು ಅನೇಕ ಜಿಲ್ಲೆಗಳ ಕೃಷಿ ಫಾರ್ಮುಗಳಿಗೆ ಮಾರ್ಗದರ್ಶಕರಾಗಿ ಕೆಲಸ ಮಾಡಿದ್ದಾರೆ. ಜಮ್ನಾಲಾಲ್ ಬಜಾಜ್ ರಾಷ್ಟ್ರೀಯ ಪ್ರಶಸ್ತಿ ಪಡೆದ ಮೊದಲ ಕನ್ನಡಿಗರಾಗಿದ್ದರು. "ಕೃಷಿ ಋಷಿ" ಎಂದೇ ಖ್ಯಾತರಾಗಿದ್ದರು. ಕೃಷಿ ಕಾಲೇಜಿನಲ್ಲಿ ಕೀಟ ಶಾಸ್ತ್ರಜ್ಞರಾಗಿ ಕೃಷಿಕರಿಗೆ ಸಾಕಷ್ಟು ನೆರವನ್ನು ನೀಡಿದ್ದರು.

ಆಧಾರ–ಸಂಯುಕ್ತಕರ್ನಾಟಕ 04.12.2019

10. ಡಿ.ಎನ್.ದೇಸಾಯಿ, ನೀರಾವರಿ ತಜ್ಞರು

ಡಿ.ಎನ್.ದೇಸಾಯಿ (88) ಖ್ಯಾತ ನೀರಾವರಿ ತಜ್ಞರು ದಿನಾಂಕ:08.12.2019ರಂದು ನಿಧನರಾದರು. ಅವರು ಸುಮಾರು 30 ವರ್ಷಗಳ ಕಾಲ ನೀರಾವರಿ ಕ್ಷೇತ್ರದಲ್ಲಿ ನಾನಾ ಹಂತದ ಜವಾಬ್ದಾರಿ ನಿರ್ವಹಿಸಿದ್ದರು. ನೀರಾವರಿ ಯೋಜನೆಗಳಿಗೆ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷರಾಗಿ ಹಾಗೂ ಕೃಷ್ಣಾ ಮಹದಾಯಿ ಸೇರಿ ಹಲವು ಅಂತರರಾಜ್ಯ ಜಲ ವಿವಾದಗಳಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರಕ್ಕೆ ಪ್ರಧಾನ ಸಲಹೆಗಾರರಾಗಿ ಮಹತ್ವದ ಸೇವೆ ಸಲ್ಲಿಸಿದ್ದಾರೆ. ಕೃಷ್ಣಾ ಭಾಗ್ಯ ಜಲ ನಿಗಮ, ಕರ್ನಾಟಕ ನೀರಾವರಿ ನಿಗಮ, ವಿಶ್ವೇಶ್ವರಯ್ಯ ಜಲ ನಿಗಮದ ನಿರ್ದೇಶಕ ಮಂಡಳಿ ಸದಸ್ಯರಾಗಿಯೂ ಹಾಗೂ ತಾಂತ್ರಿಕ ಉಪಸಮಿತಿ ಅಧ್ಯಕ್ಷರಾಗಿದ್ದರು.

ಆಧಾರ–ಉದಯವಾಣಿ 09.12.2019

11. ಡಾ:ನವರತ್ನ ಶ್ರೀನಿವಾಸ ರಾಜಾರಾಂ, ವಿಜ್ಞಾನಿ ಹಾಗೂ ಕೃತಿಗಳ ಲೇಖಕರು

ಡಾ:ನವರತ್ನ ಶ್ರೀನಿವಾಸ ರಾಜಾರಾಂ, (76) ವಿಜ್ಞಾನಿ ಹಾಗೂ ಕೃತಿಗಳ ಲೇಖಕರು ದಿನಾಂಕ 11.12.2019ರಂದು ಬೆಂಗಳೂರಿನಲ್ಲಿ ನಿಧನರಾದರು.

1943ರಲ್ಲಿ ಮೈಸೂರಿನಲ್ಲಿ ಜನಿಸಿದ್ದ ನವರತ್ನ ಶ್ರೀನಿವಾಸ ರಾಜಾರಾಂ ಅಮೆರಿಕದಲ್ಲಿ ಪಿಹೆಚ್‌ಡಿ ಪದವಿಯನ್ನು ಪಡೆದಿದ್ದರು. 2 ದಶಕಗಳ ಕಾಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಭಾರತದ ಮೂಲ ನಿವಾಸಿಗಳು ಆರ್ಯರಲ್ಲ ಎಂಬ ವಾದವನ್ನು ಒಪ್ಪಿಕೊಂಡಿದ್ದ ಅವರು ತಮ್ಮ ಸಂಶೋಧನೆಗಳ ಮೂಲಕ ಆಧಾರವನ್ನು ಒದಗಿಸಿದ್ದರು.

ಬ್ರಾಹ್ಮಣ ಸಮುದಾಯಕ್ಕೆ ಸೇರಿದ್ದ, ಇವರ ಕುಟುಂಬಿಕರು ಒಂದೇ ತಲೆಮಾರಿನಲ್ಲಿ 9 ವಿದ್ವಾಂಸರನ್ನು ಹೊಂದಿದ್ದರು. ಹಾಗಾಗಿ "ನವರತ್ನ" ಎಂಬ ಹೆಸರು ಕುಟುಂಬಕ್ಕೆ ಬಂದಿತ್ತು ಹಾಗೂ ಹಲವು ಕೃತಿಗಳನ್ನು ರಚಿಸಿದ್ದಾರೆ.

ಆಧಾರ–ಕನ್ನಡಪ್ರಭ 12.12.2019

12. ಸೂರ್ಯನಾರಾಯಣ ರಾವ್, ಹಿರಿಯ ಸಾಹಿತಿ ಹಾಗೂ ಉದ್ಯಮಿ

ಕೋಟೇಶ್ವರ ಸೂರ್ಯನಾರಾಯಣ ರಾವ್ (80) ಹಿರಿಯ ಸಾಹಿತಿ ಹಾಗೂ ಉದ್ಯಮಿ ದಿನಾಂಕ:12.12.2019ರಂದು ನಿಧನರಾದರು.

ಅವರು ಸಾಹಿತಿಯಾಗಿ ಗುರುತಿಸಿಕೊಂಡಿದ್ದರು. ನಂತರ ವಿಜಯವಾಣಿ ಪತ್ರಿಕೆ ಸೇರಿ ಹಲವು ಪತ್ರಿಕೆಗಳಲ್ಲಿ ಲೇಖನವನ್ನು ಬರೆಯುತ್ತಿದ್ದರು.

ಆಧಾರ–ವಿಜಯವಾಣಿ 13.12.2019

13. ಚಂದ್ರಕಾಂತ ಕರದಳ್ಳಿ, ಹಿರಿಯ ಶಿಶು ಸಾಹಿತಿ

ಚಂದ್ರಕಾಂತ ಕರದಳ್ಳಿ, (68) ಹಿರಿಯ ಶಿಶು ಸಾಹಿತಿ ದಿನಾಂಕ:19.12.2019ರಂದು ಬೆಂಗಳೂರಿನಲ್ಲಿ ನಿಧನರಾದರು. ಕನ್ನಡ ಸಾಹಿತ್ಯ ಲೋಕಕ್ಕೆ ಅನನ್ಯ ಕೊಡುಗೆ ನೀಡಿದ್ದರು.

ದಿನಾಂಕ 25.08.1952ರಲ್ಲಿ ಜನಿಸಿದ್ದ ಅವರು ಕರ್ನಾಟಕ ವಿಶ್ವವಿದ್ಯಾಲಯದಿಂದ ಸ್ನಾತಕ ಮತ್ತು ಕನ್ನಡದಲ್ಲಿ ಸ್ನಾತಕೋತ್ತರ ಮತ್ತು ಬಿಇಡಿ ಪದವಿ ಪಡೆದು ಸರ್ಕಾರಿ ಶಿಕ್ಷಕರಾಗಿ ವೃತ್ತಿ ಜೀವನ ಆರಂಭಿಸಿದರು. ಅವರು 47ಕ್ಕೂ ಹೆಚ್ಚು ಶಿಶು ಕಥೆ, ನಾಟಕ, ಮಕ್ಕಳ ಪ್ರವಾಸ ಕಥನ, ಕಥಾ ಸಂಕಲನಗಳನ್ನು ಲೋಕಕ್ಕೆ ಸಮರ್ಪಿಸಿದ್ದಾರೆ.

ವೃತ್ತಿಯಿಂದ ಶಿಕ್ಷಕರಾಗಿದ್ದ ಕರದಳ್ಳಿಯವರು ಹಲವು ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಿದ್ದರು. ಅವರಿಗೆ 2 ಶ್ರೇಷ್ಠ ಪ್ರಶಸ್ತಿಗಳಾದ ಕರ್ನಾಟಕ ರಾಜ್ಯೋತ್ಸವ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿದ್ದವು.

ಆಧಾರ–ವಿಜಯವಾಣಿ 20..12.2019

14. ಪ್ರೊ:ಎಂ.ರಾಮಚಂದ್ರ, ಸಾಹಿತಿ

ಪ್ರೊ: ಎಂ.ರಾಮಚಂದ್ರ, ಪ್ರಾಧ್ಯಾಪಕ ಸಾಹಿತಿ (80) ದಿನಾಂಕ:20.12.2019ರಂದು ನಿಧನರಾದರು.

ಅವರು 1939ರಲ್ಲಿ ಜನಿಸಿದ್ದರು. 1962ರಿಂದ ಕಾರ್ಕಳ ಭುವನೇಂದ್ರ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದರು. 1997ರಲ್ಲಿ ನಿವೃತ್ತಿ ಬಳಿಕ ಸಾಹಿತ್ಯ ಸಂಘ ಸ್ಥಾಪಿಸಿದ್ದರು. ಬಾಡದ ಹೂವುಗಳು, ನೆನಪಿನ ಸುರಗಿ, ಚಿತ್ರ ಚರಿತ್ರೆ ಇವರ ಪ್ರಮುಖ ಪುಸ್ತಕಗಳು. ದಕ್ಷಿಣ ಕನ್ನಡ ಜಿಲ್ಲೆಯ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು 9ನೇ ಸಾಹಿತ್ಯ ಸಮ್ಮೇಳನದ ಕಾರ್ಯದರ್ಶಿಯಾಗಿ, ಧರ್ಮಸ್ಥಳ ಸರ್ವಧರ್ಮದ ಸಾಹಿತ್ಯ ಸಮ್ಮೇಳನ ಸ್ವಾಗತ ಸಾಹಿತಿ ಸದಸ್ಯರಾಗಿದ್ದರು. ಅವರಿಗೆ ಹಲವಾರು ಪುರಸ್ಕಾರ, ಪ್ರಶಸ್ತಿಗಳು ಬಂದಿದ್ದವು.

ಆಧಾರ–ವಿಜಯವಾಣಿ 21..12.2019

15. ಪ್ರೊ:ಎಲ್.ಎಸ್.ಶೇಷಗಿರಿರಾವ್, ಹಿರಿಯ ಸಾಹಿತಿ, ಅನುವಾದಕ ಹಾಗೂ ವಿಮರ್ಶಕ

ಪ್ರೊ:ಎಲ್.ಎಸ್.ಶೇಷಗಿರಿರಾವ್, ಹಿರಿಯ ಸಾಹಿತಿ, ಅನುವಾದಕ ಹಾಗೂ ವಿಮರ್ಶಕ (95) ದಿನಾಂಕ:20.12.2019ರಂದು ಬೆಂಗಳೂರಿನಲ್ಲಿ ನಿಧನರಾದರು.

ಅವರು ದಿನಾಂಕ 16.02.1925ರಂದು ಜನಿಸಿದರು. ಅವರು ಅಧ್ಯಾಪಕರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ, ಕಾಲೇಜಿನ ಹಿರಿಯ ಉಪನ್ಯಾಸಕರಾಗಿ, ಫಾರಿನ್ ಲಾಂಗ್ವೇಜಸ್‌ನಲ್ಲಿ ಭಾಷಾ ಶಾಸ್ತ್ರದಲ್ಲಿ ತರಬೇತಿ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ, ಕನ್ನಡ ಪುಸ್ತಕ ಪ್ರಾಧಿಕಾರದ ಮೊದಲ ಅಧ್ಯಕ್ಷರಾಗಿ ಹಾಗೂ 74ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಹೊಂದಿದ್ದರು.

ಪ್ರೊ.ಎಲ್.ಎಸ್.ಶೇಷಗಿರಿರಾವ್ ಅವರು ಇಂಗ್ಲಿಷ್ ಸಾಹಿತ್ಯವನ್ನು ಕುರಿತು ಬರೆದಿರುವ ವಿಮರ್ಶೆಗಳು, ಲೇಖನಗಳು, ಪುಸ್ತಕಗಳು ಅವರಿಗೆ ಕನ್ನಡ ಸಾಹಿತ್ಯದಲ್ಲಿ ಶಾಶ್ವತ ಸ್ಥಾನವನ್ನು ಒದಗಿಸಿವೆ. ಅವರ ದೀರ್ಘ ಕಾಲದ ಅಧ್ಯಯನ ಮತ್ತು ಅಧ್ಯಾಪನದಿಂದ ಸಿದ್ಧವಾದ ಮಹತ್ವದ ಕೃತಿ **"ಇಂಗ್ಲಿಷ್ ಸಾಹಿತ್ಯ ಚರಿತ್ರೆ"** 500 ಪುಟಗಳ ಬೃಹತ್ಕೃತಿಯಂಥ ಮತ್ತೊಂದು ಕೃತಿ ಬಹುಶಃ ಭಾರತದ ಮತ್ತ್ಯಾವುದೇ ಭಾಷೆಯಲ್ಲಿ ಬಂದಿಲ್ಲ. ಈ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯು ಲಭಿಸಿತ್ತು. ಈ ಗ್ರಂಥವನ್ನು ವಿದ್ಯಾರ್ಥಿಗಳಿಗೆ ಸಮರ್ಪಿಸಿದ್ದಾರೆ. ಅವರು ಸಣ್ಣ ಕಥೆ ಹಾಗೂ ನಾಟಕಗಳನ್ನು ಬರೆದಿದ್ದಾರೆ. ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವದ ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಾವ್ಯಾನಂದ ಪುರಸ್ಕಾರ, ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಮತ್ತು ಮಾಸ್ತಿ ಪ್ರಶಸ್ತಿ ಇತ್ಯಾದಿಗಳು ಬಂದಿವೆ.

ಆಧಾರ–ವಿಜಯವಾಣಿ 21..12.2019

16. ಷಣ್ಮುಗ ಸುಂದರಂ ಮೋಹನ್, ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿ

ಷಣ್ಮುಗ ಸುಂದರಂ ಮೋಹನ್, ಸುಪ್ರೀಂಕೋರ್ಟಿನ ನಿವೃತ್ತ ನ್ಯಾಯಮೂರ್ತಿ ಹಾಗೂ ಕರ್ನಾಟಕದ ಹಂಗಾಮಿ ರಾಜ್ಯಪಾಲರಾಗಿದ್ದ ಅವರು ದಿನಾಂಕ: 27.12.2019ರಂದು ನಿಧನರಾದರು.

1954ರಲ್ಲಿ ಮದ್ರಾಸ್ ಹೈಕೋರ್ಟಿನಲ್ಲಿ ಅಡ್ವೊಕೇಟ್ ಆಗಿ ತಮ್ಮ ವೃತ್ತಿ ಜೀವನ ಆರಂಭಿಸಿದ್ದ ಅವರು 26.10.1989ರಂದು ಕರ್ನಾಟಕ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. ದಿನಾಂಕ 05.02.1990ರಿಂದ 08.05.1990ರವರೆಗೆ ಕರ್ನಾಟಕದ ಹಂಗಾಮಿ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದರು. 1991ರಲ್ಲಿ ಸುಪ್ರೀಂಕೋರ್ಟಿನ ನ್ಯಾಯಮೂರ್ತಿಯಾಗಿ ಬಡ್ತಿ ಪಡೆದಿದ್ದ ಅವರು ದಿನಾಂಕ 10.02.1995ರಂದು ನಿವೃತ್ತಿ ಹೊಂದಿದ್ದರು.

ಆಧಾರ–ಉದಯವಾಣಿ 28..12.2019

17. ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥರು

ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀಗಳು (88) ದಿನಾಂಕ:29.12.2019ರಂದು ನಿಧನರಾದರು.

ಅವರು ದಿನಾಂಕ 27.04.1931ರಂದು ಜನಿಸಿದರು. ಅನನ್ಯ ಕೃಷ್ಣ ಭಕ್ತಿ, ಪ್ರಖರ ಚಿಂತನೆ, ಜನಪರ ಕಾಳಜಿ ಸಮಾಜದ ಕಟ್ಟಕಡೆಯ ವ್ಯಕ್ತಿ ಸೇವೆಯ ಮೂಲಕ ಜಗದಗಲ ಭಕ್ತರನ್ನು ಸಂಪಾದಿಸಿದ ಉಡುಪಿಯ ಪೇಜಾವರ ಮಠದ ವಿಶ್ವೇಶ ತೀರ್ಥ ಸ್ವಾಮೀಜಿ ಅವರು ಲಕ್ಷಾಂತರ ಭಕ್ತರ ಕಂಬನಿಯ ಅಭಿಷೇಕದೊಂದಿಗೆ ವಿದ್ಯಾಪೀಠದಲ್ಲಿ ಬೃಂದಾವನಸ್ಥರಾದರು.

ಮಠದ ಭಕ್ತರಷ್ಟೆ ಅಲ್ಲ, ಹಲವು ಜಾತಿ ಧರ್ಮಗಳ ಜನರೂ ಸ್ವಾಮೀಜಿಯನ್ನು ಕೊನೆ ಬಾರಿ ಕಾಣಲು ಬಂದಿದ್ದಕ್ಕೆ ವಿದ್ಯಾಪೀಠದ ಆವರಣ ಸಾಕ್ಷಿಯಾಯಿತು. ತಮ್ಮ ಬೃಂದಾವನವನ್ನು ಬೆಂಗಳೂರಿನ ವಿದ್ಯಾಪೀಠದ ಆವರಣದಲ್ಲಿಯೇ ನಿರ್ಮಿಸಬೇಕು ಎಂಬುದು ಸ್ವಾಮೀಜಿಯ ಕೊನೆಯ ಆಸೆಯಾಗಿತ್ತು. ಅದರಂತೆ ಬೃಂದಾವನಸ್ಥರಾದರು.

ಆಧಾರ–ಪ್ರಜಾವಾಣಿ 30.12.2019

* * * * *

ಭಾಗ-11

ಪತ್ರಿಕಾ ಪ್ರಮುಖ ಲೇಖನಗಳು

1. ಪ್ಲಾಸ್ಟಿಕ್ ನಿಷೇಧದಿಂದ ಸಾಂಪ್ರದಾಯಿಕ ಕೈಕಸುಬಿನ ಪುನರುಜ್ಜೀವನ

ಪ್ರಧಾನಿ ನರೇಂದ್ರ ಮೋದಿಯವರು ಪ್ಲಾಸ್ಟಿಕ್ ವಿರುದ್ಧದ ಹೋರಾಟದಲ್ಲಿ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿದ್ದಾರೆ. ದಶಕಗಳಿಂದ ಪ್ಲಾಸ್ಟಿಕ್, ಕೃಷಿಭೂಮಿ, ಆಹಾರ ಪದಾರ್ಥಗಳು, ನದಿಗಳು, ಕೆರೆಗಳು, ಪ್ರವಾಸಿ ತಾಣಗಳು, ಯಾತ್ರಾಸ್ಥಳ ಮತ್ತು ಸಾಗರಗಳನ್ನು ಹಾನಿಗೊಳಿಸುವುದರ ಮೂಲಕ ಅಪಾರ ಆರ್ಥಿಕ ನಷ್ಟವನ್ನುಂಟು ಮಾಡುತ್ತಿದೆ.

ಭಾರತವು ದಿನವೊಂದಕ್ಕೆ ಸುಮಾರು 26 ಸಾವಿರ ಟನ್ನು ಪ್ಲಾಸ್ಟಿಕನ್ನು ಉತ್ಪಾದಿಸುತ್ತದೆ. ಅದರಲ್ಲಿ ಹತ್ತು ಸಾವಿರ ಟನ್ನು ಪ್ಲಾಸ್ಟಿಕ್ ತ್ಯಾಜ್ಯ ಖಾಲಿ ಜಾಗ, ರಸ್ತೆ ಬದಿಯಲ್ಲಿ ಶೇಖರಣೆಯಾಗುತ್ತದೆ ಮತ್ತು ನೀರಿಗೆಸೆಯಲ್ಪಡುತ್ತದೆ. ಭಾರತದ ತಲಾ ಪ್ಲಾಸ್ಟಿಕ್ ಬಳಕೆ 11 ಕಿ.ಲೋ ವರ್ಷದಿಂದ ವರ್ಷಕ್ಕೆ ಇದು ವೃದ್ಧಿಯಾಗುತ್ತದೆ. ಫೆಡರೇಶನ್ ಆಫ್ ಕಾಮರ್ಸ್ ಆಂಡ್ ಇಂಡಸ್ಟ್ರೀಸ್ ಅಧ್ಯಯನದಂತೆ ಪ್ಲಾಸ್ಟಿಕ್ ಪರಿಷ್ಕರಣ ಉದ್ಯಮವು 2020ರೊಳಗೆ ವರ್ಷಕ್ಕೆ 22 ಮಿಲಿಯನ್ ಟನ್ ಗಾತ್ರದಷ್ಟು ಬೆಳೆಯುತ್ತದೆ (2015ರಲ್ಲಿ 13.4 ಮಿಲಿಯನ್ ಟನ್ನು) ಇದರಲ್ಲಿ ಅರ್ಧದಷ್ಟು ಸಿ.ಯೂ. (ಸಿಂಗಲ್ ಯೂಸ್) ಪ್ಲಾಸ್ಟಿಕ್, ಸಣ್ಣ ಕಿರಾಣಿ ಅಂಗಡಿಯಿಂದ ಬೃಹತ್ ಮಾಲುಗಳ ತನಕ ಎಲ್ಲೆಡೆಯೂ ವಿವಿಧ ಗಾತ್ರ ದಪ್ಪನೆಯ ಪ್ಲಾಸ್ಟಿಕ್ ಚೀಲಗಳನ್ನು ಮಾರಲಾಗುತ್ತದೆ. 2023ರ ಅಂತ್ಯದೊಳಗೆ ದೇಶದಲ್ಲಿ ಪ್ಲಾಸ್ಟಿಕ್ ನೀರಿನ ಬಾಟಲಿ ಮಾರುಕಟ್ಟೆ 403 ಮಿಲಿಯನ್ ರೂ. ದಾಟಲಿದೆ. ಇದು ಆರೋಗ್ಯ, ಮಣ್ಣು, ನೀರು ಮತ್ತು ಗಾಳಿಯ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತದೆ.

–ಮಾರಣಾಂತಿಕ ಬಿಸ್ಫೆನಾಲ್–

ಬ್ರಿಟಿಷ್ ಮತ್ತು ಅಮೆರಿಕ ಸಂಶೋಧಕರು ಪ್ಲಾಸ್ಟಿಕ್‌ನಲ್ಲಿ ಬಿಸ್ಫೆನಾಲ್ (ಬಿಪಿಎ) ಎಂಬ ರಾಸಾಯನಿಕವನ್ನು ಬಳಸುವುದರಿಂದ ಅದನ್ನು ಬಳಸುವವರಿಗೆ ಹೃದಯ ಸಂಬಂಧಿ ಕಾಯಿಲೆ ಕಾಣಿಸಿಕೊಳ್ಳುತ್ತದೆ ಎಂದಿದ್ದಾರೆ. ಸಕ್ಕರೆ ಕಾಯಿಲೆ ಮತ್ತು ಲಿವರ್ ಕಾಯಿಲೆಯು ಬರುವ ಸಾಧ್ಯತೆಗಳಿವೆ. ಪ್ಲಾಸ್ಟಿಕ್‌ನ್ನು ಸುಟ್ಟಾಗ ಅದರಿಂದ ಸುಮಾರು 55–60 ವಿವಿಧ ರಾಸಾಯನಿಕಗಳು ಬಿಡುಗಡೆಗೊಳ್ಳುತ್ತವೆ. ಪ್ಲಾಸ್ಟಿಕ್ ಕಂಟೈನರಿನಲ್ಲಿ ಬಿಸಿ ಮಾಡಿದಾಗ ಅಥವಾ ಪ್ಲಾಸ್ಟಿಕ್ ತಟ್ಟೆಯಲ್ಲಿ ಬಿಸಿ ಪದಾರ್ಥಗಳನ್ನು ಬಡಿಸುವಾಗ ವಿವಿಧ ರಾಸಾಯನಿಕಗಳು ನಮ್ಮ ಆಹಾರದಲ್ಲಿ ಸೇರುತ್ತವೆ. ಪರಿಣಾಮ ಸೇವಿಸುವವರಲ್ಲಿ ಹಾರ್ಮೋನುಗಳ ಅಸಮತೋಲನವುಂಟಾಗಿ ಅನೇಕ ಕಾಯಿಲೆಗಳಿಗೆ ನಾಂದಿಯಾಗುತ್ತದೆ. ಭ್ರೂಣ ಸಮಸ್ಯೆ, ಸ್ತನ ಕ್ಯಾನ್ಸರ್, ಕೊಲೊನ ಕ್ಯಾನ್ಸರ್, ಪ್ರೊಸ್ಟೇಟ್ ಕ್ಯಾನ್ಸರ್ ಇತ್ಯಾದಿ.

ಪ್ಲಾಸ್ಟಿಕ್ ಬಾಟಲುಗಳು ಡಿಕಂಪೋಸ್ ಆಗಬೇಕಾದರೆ ಕನಿಷ್ಟ 400 ವರ್ಷಗಳು ಬೇಕೆಂದು ಸಂಶೋಧನೆ ತಿಳಿಸುತ್ತದೆ. ಪ್ಲಾಸ್ಟಿಕ್ ಸಾಮಗ್ರಿಗಳನ್ನು ಕನಿಷ್ಟ ಬಳಸುವ ಅನೇಕ ದಾರಿಗಳಿವೆ. ಕೇಂದ್ರ ಸರ್ಕಾರವು ಸಾರ್ವಜನಿಕ ರಂಗದ ಕಛೇರಿಗಳಲ್ಲಿ ಬಯೊಡಿಗ್ರೇಡಬಲ್ ವಸ್ತುಗಳನ್ನು ಉಪಯೋಗಿಸಬೇಕೆಂದು ಆದೇಶಿಸಿದೆ. ಪ್ಲಾಸ್ಟಿಕ್ ಬಳಕೆ ನಿಷೇಧ, ಪರಿಸರ ಸ್ನೇಹಿ ಪರಿಕರಗಳನ್ನು ತಯಾರಿಸುವ ಸ್ವಸಹಾಯ ಗುಂಪುಗಳ ಮಿಲಿಯನ್‌ಗಟ್ಟಳೆ ಮಹಿಳೆಯರಿಗೆ ಸಹಾಯವಾಗುತ್ತದೆ.

ಭಾರತವು ಬಯೊಡಿಗ್ರೇಡಬಲ್ ಕೈಕಸುಬು ಪದಾರ್ಥಗಳ ಭಂಡಾರವೆ ಆಗಿದೆ. ಬಯೊಡಿಗ್ರೇಡಬಲ್ ವಸ್ತುಗಳು ನಮ್ಮ ಮನೆಯ ಪ್ಲಾಸ್ಟಿಕ್ ಪರಿಕರಗಳಿಗೆ ಸೂಕ್ತ ಬದಲಿಯಾಗಬಹುದು. ಗುಜರಾತಿನ ಅವೆಮಣ್ಣಿನ ಮಡಿಕೆ ಹೈದರಾಬಾದಿನಲ್ಲಿ ಬಹಳ ಜನಪ್ರಿಯವಾಗಿವೆ. ಮಣ್ಣಿನ ಮಡಿಕೆಯಲ್ಲಿ ಬೆಂದ ಪದಾರ್ಥ ರುಚಿಯಾಗಿರುತ್ತದೆ. ಜನರು ಮಣ್ಣಿನ ಮತ್ತು ಮರದ ಪಾತ್ರೆಯನ್ನು ಬಳಸಿದರೆ ಲಕ್ಷಗಟ್ಟಲೆ ಕಸುಬುಗಾರರು, ಕುಂಬಾರರಿಗೆ ಉದ್ಯೋಗವನ್ನು ಒದಗಿಸಬಹುದು.

ಅಸ್ಸಾಮಿನ ಉದ್ಯಮಿಯೋರ್ವರು ಬಿದಿರಿನ ಬಾಟಲಿಗಳನ್ನು ಯಶಸ್ವಿಯಾಗಿ ಮಾರುತ್ತಿದ್ದಾರೆ. ಅದಕ್ಕೆ ಉತ್ತಮ ಸ್ಥಳೀಯ ಬೇಡಿಕೆ ಮತ್ತು ರಫ್ತು ಬೇಡಿಕೆಯೂ ಇದೆ. ತೆಂಗಿನ ನಾರು, ಗೋಣಿ ನಾರಿನ ಬಟ್ಟೆ ಮತ್ತು ಕಾಗದದ ಚೀಲಗಳು ಪ್ಲಾಸ್ಟಿಕ್ ಚೀಲಕ್ಕೆ ಉತ್ತಮ ಬದಲಿಯಾಗಬಹುದು. ತೆಂಗಿನ ನಾರು ಮತ್ತು ಗೋಣಿ ನಾರು ಉತ್ಪನ್ನಗಳ ಬಳಕೆಯು ದೇಶದಲ್ಲಿ ತೆಂಗಿನ ನಾರು ಮತ್ತು ಗೋಣಿ ನಾರಿನ ತೋಟಗಳನ್ನು ಕ್ರಿಯಾಶೀಲಗೊಳಿಸುತ್ತದೆ. ಕೇರಳದಲ್ಲಿ ಸಾವಿರಾರು ತೆಂಗಿನ ಮರ ಕೃಷಿಯ ಸಮರ್ಥ ನಿರ್ವಹಣೆಯಿಲ್ಲದೆ ಮತ್ತು ಮಾರಾಟ ವ್ಯವಸ್ಥೆಯಿಲ್ಲದೆ ಸೊರಗುತ್ತಿದೆ. ಒರಿಸ್ಸಾದಲ್ಲಿ ಬೇಡಿಕೆ ಕುಸಿದಿದ್ದರಿಂದ ರೈತರು ಸೆಣಬು ಕೃಷಿಯನ್ನು

ತೊರೆದಿದ್ದಾರೆ. ಅಂಗಡಿಗಳು ಮಾಲ್‌ಗಳು, ಹೋಟೆಲುಗಳಲ್ಲಿ ಪ್ಲಾಸ್ಟಿಕ್ ಚೀಲದ ಬದಲಿಗೆ ಬಯೊಡಿಗ್ರೇಡಬಲ್ ತೆಂಗು ಮತ್ತು ಗೋಣಿ ನಾರಿನ ಚೀಲಗಳನ್ನು ಮಾರಬಹುದು.

ಅಸ್ಸಾಂ ಪ್ರತಿವರ್ಷ ಸಾವಿರಕ್ಕೂ ಹೆಚ್ಚು ಟನ್ ಕಚ್ಚಾ ಬಿದಿರನ್ನು ಆಸ್ಟ್ರೇಲಿಯಾಕ್ಕೆ ಸರಬರಾಜು ಮಾಡುತ್ತದೆ. ಆಸ್ಟ್ರೇಲಿಯಾದಲ್ಲಿ ಬಿದಿರಿನಿಂದ ಅನೇಕ ಬಳಕೆಯೋಗ್ಯ ವಸ್ತುಗಳನ್ನು ತಯಾರಿಸಲಾಗುತ್ತದೆ. ಭಾರತವು ತನ್ನ ಬಯೊಡಿಗ್ರೇಡಬಲ್ ಕೈಕಸುಬಿನ ಉತ್ಪನ್ನಗಳೊಂದಿಗೆ ಗುರಿ ಅಂತರರಾಷ್ಟ್ರೀಯ ಮಾರುಕಟ್ಟೆಯ ಕದ ತಟ್ಟಬಹುದು. ಕೈಕುಶಲ ಮತ್ತು ಅಲಂಕಾರಿಕ ಉತ್ಪನ್ನಗಳ ಉಪಯೋಗ ಮತ್ತು ಜಾಗೃತಿಯಿಂದಾಗಿ ಲಕ್ಷಾಂತರ ಮಂದಿಗೆ ಉದ್ಯೋಗ ದೊರಕಿ, ಅಪಾರ ಪ್ರಮಾಣದ ವಿದೇಶಿ ಹಣ ದೇಶಕ್ಕೆ ಹರಿದು ಬರುತ್ತದೆ. ಉದ್ಯೋಗ ಸೃಷ್ಟಿಯಿಂದಾಗಿ ಜನರಲ್ಲಿ ಆತ್ಮಗೌರವ ಹೆಚ್ಚಿ ಸರ್ಕಾರಿ ಸಬ್ಸಿಡಿಯಿಲ್ಲದೆ ತಮ್ಮ ಬದುಕನ್ನು ಕಟ್ಟಿಕೊಳ್ಳುವ ಆತ್ಮವಿಶ್ವಾಸ ಬೆಳೆಯುತ್ತದೆ. ಸರ್ಕಾರವು ಸಿನಿಮಾ ನಟರು, ಕ್ರೀಡಾಪಟುಗಳ ಮೂಲಕ ಕೈಕಸುಬು ಮತ್ತು ಕೈಮಗ್ಗದ ಉತ್ಪನ್ನಗಳ ಜನಪ್ರಿಯತೆಯನ್ನು ಹೆಚ್ಚಿಸಬಹುದು. ಪ್ರಧಾನಿಯವರ ಸ್ಕಿಲ್ ಇಂಡಿಯಾ ಯೋಜನೆಯಡಿ ಇಂತಹ ಹ್ಯಾಂಡಿಕ್ರಾಫ್ಟ್ ಮತ್ತು ಹ್ಯಾಂಡ್ಲೂಮ್ ಉದ್ಯಮವನ್ನು ಬೆಳೆಸಬಹುದು.

ಜಲಂಚಾರು ರಘುಪತಿ ತಂತ್ರಿ

ಆಧಾರ–17.10.2019 ಉದಯವಾಣಿ

2. ದುಡಿಯುವ ಕೈಗಳಿಗೆ ಕೆಲಸ ಕೊಟ್ಟರೆ ನೆಮ್ಮದಿಯ ಹಾದಿ ಸುಗಮ

ಕಲೆ, ಕಾವ್ಯ ಮನುಷ್ಯತ್ವವನ್ನು ಉನ್ನತೀಕರಿಸಿದರೆ ಉದ್ಯೋಗ ಆರ್ಥಿಕ ಭದ್ರತೆ ಮತ್ತು ನೆಮ್ಮದಿ ನೀಡುತ್ತದೆ. ಆಸಕ್ತಿಯ ಕೆಲಸ ಕೂಡ ಆತ್ಮೋನ್ನತಿಯ ಧ್ಯಾನ. ಆದ್ದರಿಂದಲೇ ಕೆಲಸವೇ ಪೂಜೆ ಕಾಯಕವೇ ಕೈಲಾಸ ಎಂದು ಶರಣರು ಹೇಳಿದ್ದಾರೆ. ಇದನ್ನು ಮನಸಾ ನಂಬಿರುವ ನಾನು 'ಉದ್ಯಮಿಯಾಗು ಉದ್ಯೋಗ ನೀಡು' ಎಂಬ ಧ್ಯೇಯವಾಕ್ಯ ರೂಪಿಸಿರುವೆ. 2008–2013ರ ಅವಧಿಯ ಐದು ವರ್ಷ ಕರ್ನಾಟಕದ ಮಧ್ಯಮ ಮತ್ತು ಬೃಹತ್ ಕೈಗಾರಿಕೆ ಮಂತ್ರಿಯಾಗಿದ್ದೆ. ನನ್ನ ಸೂಚನೆಯ ಮೇರೆಗೆ 'ಉದ್ಯಮಿಯಾಗು ಉದ್ಯೋಗ ನೀಡು'ಪರಿಕಲ್ಪನೆಯನ್ನು ಕೈಗಾರಿಕಾ ಇಲಾಖೆ ಘೋಷವಾಕ್ಯವಾಗಿ ಪ್ರಕಟಿಸಿತು. ಯುವಕರಿಗಾಗಿ ಕೆಲಸದ ಕುಶಲತೆಯ ಅಭಿವೃದ್ಧಿ ಮಹತ್ವದ ಯೋಜನೆ ಇದೇ ಅವಧಿಯಲ್ಲಿ ಆರಂಭಿಸಿದೆ. ಇದರಿಂದಾಗಿ ಅನೇಕ ಯುವಕರು ಕೈಗಾರಿಕೆಗಳಲ್ಲಿ ಸುಲಭವಾಗಿ ಉದ್ಯೋಗ ಪಡೆಯುವಂತಾಗಿದೆ.

ಕೈಗಾರಿಕೆಗಳನ್ನು ಕಟ್ಟುವುದು ಹಾಗೂ ದುಡಿಯುವ ಕೈಗಳಿಗೆ ಕೆಲಸಕೊಡುವುದು ನನಗೆ ಪರಮ ಸಂತೋಷದ ಸಂಗತಿ. ಬಿ.ಇ.(ಸಿವಿಲ್ ಎಂಜಿನಿಯರಿಂಗ್)ಪದವಿ ಪಡೆದ ಮೇಲೆ ನೌಕರಿಗಾಗಿ ಅಲೆಯದೆ ನಾನೇ ಬಾಗಲಕೋಟೆ ಜಿಲ್ಲೆಯ ಮುಧೋಳ ನಗರದ ಹೊರವಲಯದಲ್ಲಿ ಒಂದು ಮಿನಿ ಸಕ್ಕರೆ ಕಾರ್ಖಾನೆ ಕಟ್ಟಿದೆ. ಹೆಚ್ಚು ಸಿಬ್ಬಂದಿ ಇರಲಿಲ್ಲ. ನಾನು ಹಗಲೂ ರಾತ್ರಿ ಅಲ್ಲಿಯೇ ವಾಸ್ತವ್ಯ ಮಾಡಿ ಕೆಲಸ ಮಾಡುವುದನ್ನು ನೋಡಿ ನನ್ನ ಗೆಳೆಯರು ಹಗಲು ಚೇರ್ಮನ್ ರಾತ್ರಿ ವಾಚ್‌ಮನ್ ಎಂದು ಗೇಲಿ ಮಾಡುತ್ತಿದ್ದರು.

ನನ್ನ ಉತ್ಸಾಹವೇ ನನ್ನ ಬಂಡವಾಳವಾಗಿತ್ತು. ಉದ್ದಿಮೆ ವ್ಯಾಪಾರ ಆರಂಭಿಸಲು ಹಣ ಬೇಕು ಎಂದು ಅನೇಕ ಯುವಕರು ಹೇಳುತ್ತಾರೆ. ಉತ್ಸಾಹವಿದ್ದರೆ ಎಲ್ಲವೂ ಹರಿದು ಬರುತ್ತದೆ ಎಂಬುದು ನಾನು ಕಂಡುಕೊಂಡ ದರ್ಶನ. ಇಂದು ದೊಡ್ಡ ದೊಡ್ಡ ಕಾರ್ಪೋರೇಟ್ ಕಂಪನಿ ಕಟ್ಟಿದವರಲ್ಲಿ ಬಹಳಷ್ಟು ಜನ ಬಡ ಕುಟುಂಬದಿಂದ ಬಂದವರಾಗಿದ್ದಾರೆ. ಅವರು 'ಛಲದಿಂದ ಮತ್ತು ಕಠಿಣ ಶ್ರಮದಿಂದ ಎದ್ದು ನಿಂತಿದ್ದಾರೆ'. ನಮ್ಮ ಯುವಕರಲ್ಲಿಯೂ ಈ ಮನಸ್ಥಿತಿ ಗಟ್ಟಿಯಾಗಿ ಮೂಡಬೇಕು. ಸುಮಾರು 18 ವರ್ಷಗಳ ಅವಧಿಯಲ್ಲಿ ಮೂರು ಬೃಹತ್ ಸಕ್ಕರೆ ಕಾರ್ಖಾನೆ ಹಾಗೂ ಒಂದು ಸಿಮೆಂಟ್ ಕಾರ್ಖಾನೆ ಕಟ್ಟಿದ್ದೇನೆ. ಸುಮಾರು ಆರು ಸಾವಿರ ಯುವಕರಿಗೆ ಉದ್ಯೋಗ ದೊರಕಿದೆ. ಕಬ್ಬು ಕಟಾವು ಸಾಗಾಣೆ ಮುಂತಾದ ಹಂಗಾಮಿ ಕೆಲಸಗಳಲ್ಲಿ 75 ಸಾವಿರ ಕಾರ್ಮಿಕರು ದುಡಿಯುತ್ತಾರೆ. ನನ್ನ ಹಂಬಲ ಇಲ್ಲಿಗೇ ನಿಂತಿಲ್ಲ. ಎಲ್ಲರಿಗೂ ಉದ್ಯೋಗ ಸಿಕ್ಕರೆ ಜಾತಿ ವೈಷಮ್ಯ, ಮೇಲು ಕೀಳು ಯಾವುದೂ ಇರುವುದಿಲ್ಲ. 'ಉದ್ಯೋಗದಿಂದಲೇ ಸಮಾಜದಲ್ಲಿ ನೆಮ್ಮದಿ ಮತ್ತು ಶಾಂತಿ' ನೆಲೆಸುತ್ತದೆ.

ಹೀಗಾಗಿ ಬದುಕಿನುದ್ದಕ್ಕೂ ಹೊಸದನ್ನು ಕಟ್ಟುವ ಆಸೆ ಉಳಿಸಿಕೊಂಡಿದ್ದೇನೆ. ಉದ್ದಿಮೆಗಳ ಮೂಲಕ ಸಾಕಷ್ಟು ಸಾಮಾಜಿಕ ಕೆಲಸಗಳನ್ನು ಮಾಡಬಹುದು. ನಮ್ಮ ಉದ್ದಿಮೆಗಳ ಸಂಯುಕ್ತ ಆಶ್ರಯದಲ್ಲಿ 'ಎಂಆರ್‌ಎನ್ ಸಮಾಜ ಕಾರ್ಯ ಫೌಂಡೇಶನ್'ಆರಂಭಿಸಿದ್ದೇನೆ. ಸುಮಾರು 1 ಲಕ್ಷ ಬಡ ಜನರ ಉಚಿತ ಚಿಕಿತ್ಸೆ ಮಾಡಿಸಿದ್ದು

ಒಂದು ದಾಖಲೆಯಾಗಿದೆ. ಉದ್ದಿಮೆ ರಂಗದಲ್ಲಿ ಹಣದ ಝೇಂಕಾರ ದೊಡ್ಡ ಪ್ರಮಾಣದಲ್ಲಿ ಇದೆ. ಆದರೆ ಇದರ ವೈಭವ ಲೋಲುಪ್ತಿಯಲ್ಲಿ ಕಳೆದು ಹೋಗದೆ ಜನಪರ ಕೆಲಸಗಳನ್ನು ನಮ್ಮ ಕುಟುಂಬದವರೆಲ್ಲ ಮಾಡುತ್ತಿದ್ದಾರೆ.

ಮಾರ್ಗ ಯಾವುದಾದರೂ ಸರಿಯೇ ಹಣ ಮಾಡಲು ಹೊರಟವರು ದುಡ್ಡು ಬರುವ ಹೊತ್ತಿಗೆ ನೆಮ್ಮದಿ, ಆರೋಗ್ಯ ಬಾಂಧವ್ಯಗಳಿಂದ ಹಿಂದಿರುಗಲಾರದ ಸ್ಥಿತಿ ತಲುಪಿರುತ್ತಾರೆ. ಪ್ರತಿನಿತ್ಯ ದುರಾಸೆಯ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿರುವವನ 'ಮಾನಸಿಕ ಕ್ಷೋಭೆಗಳಿಗೆ ಆಸೆಯೇ ದು:ಖದ ಮೂಲವೆಂದ ಬುದ್ಧನ ಪ್ರೇರಣೆ ಚಿಕಿತ್ಸೆ'ಯಾಗಿ ಪೊರೆಯಬೇಕಿದೆ. ಗಾಂಧಿ ತತ್ವವಾದ ಸರಳ ಜೀವನದತ್ತ ಮನುಷ್ಯ ಸಂತತಿಯು ಮುಖಮಾಡಿ ಅರಿವಿನ ದಾರಿಯನ್ನು ಹುಡುಕಬೇಕಿದೆ. ಶರಣರು ಪ್ರತಿಪಾದಿಸಿದ ಅಸಂಗ್ರಹ ಮಾದರಿಯನ್ನು ಮರು ಶೋಧಿಸಿಕೊಳ್ಳಬೇಕಾದ ಅಗತ್ಯವೀಗ ಮೊದಲಿಗಿಂತ ಹೆಚ್ಚಾಗಿದೆ. ಅಂತಹ ಬೆಳಕಿಗೆ ಎದೆಯೊಳಗೆ ಇರುವ ಸಾವಧಾನದ ಕದ ತೆರೆಯುವಂತಾಗಲಿ ಎಂಬುದು ನನ್ನ ಬಯಕೆ. ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕು ಕಲ್ಲಳಪೂರ ಗ್ರಾಮದ ಬಳಿ ಎಂಆರ್‌ಎನ್ ಸಕ್ಕರೆ ಕಾರ್ಖಾನೆ ನಮ್ಮ ಸಂಸ್ಥೆಯ ಪರವಾಗಿ ನಿರ್ಮಿಸಲಾಗಿದೆ. ರಾಜ್ಯೋತ್ಸವ ದಿನದಂದು ಅಂದರೆ (ನವೆಂಬರ್ 01 ರ 2019ರಂದು ಲೋಕಾರ್ಪಣೆಗೊಳ್ಳಲಿದೆ. ಸಕ್ಕರೆ ಕಾರ್ಖಾನೆ ಇಲ್ಲದ್ದಕ್ಕೆ ಇಲ್ಲಿಯ ರೈತರು ಗೋಳಾಡುತ್ತಿದ್ದರು. ಈ ಕಾರ್ಖಾನೆ ಖಂಡಿತವಾಗಿಯೂ ಅವರಿಗೆ ವರದಾನವಾಗಿದೆ. ನಿಜ ಹೇಳಬೇಕೆಂದರೆ, ಲಾಭ, ನಷ್ಟದ ಲೆಕ್ಕಾಚಾರದಿಂದ ದೂರ ನಿಂತು ರೈತರ ಹಿತ ಹಾಗೂ ಈ ಭಾಗದ ಅಭಿವೃದ್ಧಿಯ ಸಂಕಲ್ಪದಿಂದ ಇದನ್ನು ಕಟ್ಟಲಾಗಿದೆ. ಹೀಗೆ ಲಾಭ ನಷ್ಟದಿಂದ ದೂರ ನಿಂತು ಜನಹಿತವನ್ನೇ ಮುಖ್ಯವಾಗಿಟ್ಟುಕೊಂಡು ಮಾಡಿದ ಈ ಕೆಲಸ ನನಗೆ ಅತ್ಯಂತ ನೆಮ್ಮದಿಯನ್ನು ತಂದಿದೆ. ಈ ಭಾಗದಲ್ಲಿ ಸಂಪೂರ್ಣ ನೀರಾವರಿ ಯೋಜನೆ ಆರಂಭಿಸಿದ್ದು ಮಹತ್ವದ ಸಂಗತಿಯಾಗಿದೆ. ಕಳಸಕೊಪ್ಪ ಕೆರೆ ತುಂಬುವುದು, ಹೆರಕಲ್‌ದ ಏತ ನೀರಾವರಿ ಯೋಜನೆ ರೈತರಿಗೆ ನೆಮ್ಮದಿಯನ್ನು ನೀಡಲಿವೆ. ಬಾದಾಮಿ ತಾಲ್ಲೂಕಿನ ಕೃಷಿ ಕೂಲಿಕಾರರು ಕೆಲಸ ಹುಡುಕಿಕೊಂಡು ಗೋವಾ ಮುಂಬೈಗಳಿಗೆ ಗುಳೆ ಹೋಗುತ್ತಾರೆ. ಇವರಿಗೆ ಇಲ್ಲಿಯೇ ಉದ್ಯೋಗ ಒದಗಿಸಿದರೆ ಗುಳೇ ಹೋಗುವುದನ್ನು ಸುಲಭವಾಗಿ ತಡೆಯಬಹುದು. ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ' ಅಭಿಜಿತ್ ಬ್ಯಾನರ್ಜಿ ಮತ್ತು ಎಸ್ತರ್ ಡುಫ್ಲೊ ದಂಪತಿ' ಕೂಡ ಗ್ರಾಮೀಣ ಕೂಲಿಕಾರರಿಗೆ ಉದ್ಯೋಗ ನೀಡುವ ಬಗ್ಗೆ ಮತ್ತು ಹೆಚ್ಚಿಗೆ ಸಂಬಳ ಕೊಡುವ ಬಗ್ಗೆ ಮಹತ್ವದ ಸಲಹೆಗಳನ್ನು ನೀಡಿದ್ದಾರೆ. ಗ್ರಾಮೀಣ ಜನರಿಗೆ ಉದ್ಯೋಗ ಕೊಡುವುದರಿಂದ ಗುಳೆ ಹೋಗುವುದನ್ನು ತಪ್ಪಿಸಬಹುದು. ಆರ್ಥಿಕವಾಗಿ ಸಬಲೀಕರಣಗೊಳಿಸಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಬಡತನ ನಿವಾರಿಸಬಹುದು ಮತ್ತು ಆತ್ಮಹತ್ಯೆಯನ್ನು ತಡೆಯಬಹುದು. ಈ ಹಿನ್ನೆಲೆಯಲ್ಲಿ ಉದ್ಯಮಿಗಳನ್ನು ಕಟ್ಟುವ ಉದ್ಯೋಗ ಒದಗಿಸುವ ಮನಸಾಕ್ಷಿಯಾಗಿ ಅಭಿಯಾನ ಆರಂಭಿಸಿದ್ದೇನೆ. ಬಿಡುವಿನ ಸಮಯದಲ್ಲಿ ಪುಸ್ತಕಗಳನ್ನು ಓದುವ ಸಂಗೀತ ಕೇಳುವ ಹಾಗೂ ಆಯ್ಕೆ ಮಾಡಿದ ಚಲನ ಚಿತ್ರಗಳನ್ನು ನೋಡುವ ಹವ್ಯಾಸವನ್ನು ಬೆಳೆಸಿಕೊಂಡಿದ್ದೇನೆ. ಕನ್ನಡ ಭಾವಗೀತೆಗಳಿಗೆ ಮನಸ್ಸನ್ನು ಅರಳಿಸುವ ಬಹುದೊಡ್ಡ ಶಕ್ತಿಯಿದೆ ಎಂಬುದನ್ನು ನಾನು ಸ್ವ ಅನುಭವದಿಂದ ಅರಿತಿದ್ದೇನೆ.

ದುಡಿಯುವ ಕೈಗಳು ಜಗದ್ಗುರುವಿನ ಪಾದಕ್ಕಿಂತ ಶ್ರೇಷ್ಠ ಎನ್ನುವ ಮಾತೊಂದು ಇದೆ. ಇದು ಕಾಯಕದ ಮಹತ್ವವನ್ನು ಸಾರುತ್ತಿದೆ. ಎಲ್ಲರಿಗೂ ಉದ್ಯೋಗ ಸಿಗುವಂತಾದರೆ, ನೆಮ್ಮದಿಯ ಗೀತೆ ನಾಡಿನ ತುಂಬ ರಿಂಗಣಿಸುವುದು ಅಂತಲೇ ನಾನು ನನ್ನ ಶಕ್ತಿ ಸಾಮರ್ಥ್ಯ, ಸಮಯ, ಸಂಪತ್ತು ಎಲ್ಲವನ್ನು ಉದ್ಯೋಗ ಸೃಷ್ಟಿಗೆ ಬಳಸಲು ಹಂಬಲಿಸುತ್ತೇನೆ.

ಲೋಕಾರ್ಪಣೆ ಮುರುಗೇಶ್ ಆರ್.ನಿರಾಣಿ, ಶಾಸಕರು ಮತ್ತು ಕೈಗಾರಿಕೋದ್ಯಮಿ

ಆಧಾರ–ವಿಶ್ವವಾಣಿ 31.10.2019

3. ರೆವರೆಂಡ್ ಕಿಟ್ಟೆಲ್ ಅಪ್ರತಿಮ ಶಬ್ದಸಂತ

ಎರಡೂವರೆ ಸಾವಿರ ವರ್ಷಗಳ ಇತಿಹಾಸವುಳ್ಳ ಕನ್ನಡವು ಸಂಸ್ಕೃತ, ಗ್ರೀಕ್ ಹೊರತುಪಡಿಸಿದರೆ ಅತಿ ಪ್ರಾಚೀನ ಭಾಷೆ. ತಾರ್ಕಿಕವಾಗಿಯೂ ವೈಜ್ಞಾನಿಕವಾಗಿಯೂ ಪರಿಪೂರ್ಣವಾಗಿರುವ ಕನ್ನಡದ ಲಿಪಿ ಮುತ್ತು ಜೋಡಿಸಿದಂತಿದೆ. ಇದನ್ನು ಕಂಡ ಆಚಾರ್ಯ ವಿನೋಬಾ ಭಾವೆ ಕನ್ನಡವನ್ನು 'ವಿಶ್ವ ಲಿಪಿಗಳ ರಾಣಿ' ಎಂದು ಪ್ರಶಂಸಿಸಿದ್ದಾರೆ. ಅಂತರರಾಷ್ಟ್ರೀಯ ಭಾಷೆಯಾದ ಇಂಗ್ಲಿಷಿಗೂ ಸ್ವಂತ ಲಿಪಿಯಿಲ್ಲ. ಅದು ಬಳಸುವುದು ರೋಮನ್ ಲಿಪಿಯೆಂದು ಬಹಳ ಜನರಿಗೆ ತಿಳಿದಿಲ್ಲ ಅಂತೆಯೇ ಹಿಂದಿ ದೇವನಾಗರಿ ಬಳಸುತ್ತದೆ.

ಎಷ್ಟಾದರೂ ಭಾಷೆ ಮಾನವ ತನ್ನ ಸಂವಹನಕ್ಕಾಗಿ ರೂಪಿಸಿಕೊಂಡ ನಿರ್ಮಿತಿ. ವಿಶ್ವಮಾನವರನ್ನೆಲ್ಲ ಒಗ್ಗೂಡಿಸುವ ಉದ್ದೇಶ ಭಾಷೆಯೆಂಬ ಸೃಜನಶೀಲತೆಗೆ ಭವ್ಯ ದಿವ್ಯ ಚೇತನಕ್ಕೆ ಕನ್ನಡವನ್ನು ಮಾತನಾಡುವಂತೆಯೆ ಬರೆಯಬಹುದು. ಬರೆಯುವಂತೆಯೇ ಮಾತನಾಡಬಹುದು. ವಿದೇಶಿಯರೊಬ್ಬರು ಶಬ್ದಕೋಶವನ್ನು ರಚಿಸಿಕೊಟ್ಟ ಏಕೈಕ ಭಾಷೆಯೆಂದರೆ ಅದು ಕನ್ನಡ ಆ ಸಾಹಸಿ ಶಿಲ್ಪಿ ಕಿಟ್ಟಲ್. ಕನ್ನಡ ವಾಙ್ಮಯವನ್ನು ಸಿರಿವಂತಗೊಳಿಸುವುದರಲ್ಲಿ ಪಾಶ್ಚಾತ್ಯ ವಿದ್ವಾಂಸರ ಕೊಡುಗೆ ಗಣನೀಯವಾಗಿದೆ. ಜಾಕೋಬಿ, ಮ್ಯಾಕ್ಸ್‌ಮಲ್ಲರ್‌ರಂಥ ಮೇಧಾವಿಗಳು ಸಂಸ್ಕೃತವನ್ನು ಆಳವಾಗಿ ಅಭ್ಯಾಸಿಸಿ ಮೌಲಿಕ ಭಾಷ್ಯ ವಿಮರ್ಶೆಗಳನ್ನು ರಚಿಸಿಕೊಟ್ಟರು.

ರೆವರೆಂಡ್ ಫರ್ಡಿನಾಂಡ್ ಕಿಟ್ಟಲ್ (1832-1903) ವಾಯುವ್ಯ ಜರ್ಮನಿಯ ರೆಸೆಟರ್‌ಹಫೆ ಎಂಬಲ್ಲಿ 1832ರ ಏಪ್ರಿಲ್ 7 ರಂದು ಜನಿಸಿದರು. ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುವಾಗಲೇ ಕಿಟ್ಟಲ್‌ಗೆ ಭಾಷಾಶಾಸ್ತ್ರದ ಬಗ್ಗೆ ವಿಶೇಷ ಆಸಕ್ತಿ ಲ್ಯಾಟಿನ್, ಫ್ರೆಂಚ್, ಇಟಾಲಿಯನ್ ಭಾಷೆಗಳನ್ನು ಬಾಲ್ಯದಲ್ಲೇ ಕಲಿತರು. ಬಾಸಲ್ ನಗರದ ಮಿಶನ್ ಕಾಲೇಜಿನಲ್ಲಿ ಮೂರು ವರ್ಷ ಥಿಯೋಲಜಿ (ಪರಮಾರ್ಥ ವಿದ್ಯೆ) ಅಧ್ಯಯನ ಕೈಗೊಂಡರು ನಂತರ ಬಾಸಲ್ ಮಿಶನರಿಯಲ್ಲಿ ಪಾದ್ರಿಯಾಗಿ ಸೇರಿದರು. 1853 ರಲ್ಲಿ ಪ್ರೋಟೆಸ್ಟೆಂಟ್ ಧರ್ಮ ಪ್ರಸಾರಕ್ಕಾಗಿ ಭಾರತಕ್ಕೆ ಬಂದರು. ಅವರು ಆಗಮಿಸಿದ್ದು, ನೇರ ಮಂಗಳೂರಿಗೆ- ಮಂಗಳೂರೇ ಅವರ ಪ್ರಧಾನ ಕಾರ್ಯಕ್ಷೇತ್ರವಾಯ್ತು. ಮಡಿಕೇರಿ, ಆನಂದಪುರ, ಹುಬ್ಬಳ್ಳಿ, ಧಾರವಾಡದಲ್ಲಿ ಅವರು ಪಾದ್ರಿಯಾಗಿ ಆ ಹೊಣೆಗಾರಿಕೆ ನಡುವೆಯೇ ಪ್ರಾಗೈತಿಹಾಸ ತಜ್ಞರಾಗಿಯೂ ಮೆರೆದರು. ಜನರೊಂದಿಗೆ ಬೆರೆಯುವ ವಿರಳ ಪಾದ್ರಿಯೆನಿಸಿದರು. ಕನ್ನಡದ ಜನಮನ ಗೆದ್ದರು. ಕನ್ನಡಿಗರು ಅವರಿಗೆ ಇವ ನಮ್ಮವ ಇವ ನಮ್ಮವ ಎಂದು ಗೌರವಾದರ ತೋರಿದರು. ಭಾರತೀಯ ಭಾಷೆಗಳ ಉಗಮ ಮತ್ತು ವಿಕಾಸ ಅವರನ್ನು ವಿಶೇಷವಾಗಿ ಆಕರ್ಷಿಸಿತ್ತು. ಹಳಗನ್ನಡದ ವೈಭವ, ಆಡು ಕನ್ನಡದ ವೈವಿಧ್ಯತೆ, ಆ ಕುರಿತ ಇತಿಹಾಸ ಅವರನ್ನು ಬಹುವಾಗಿ ಪ್ರಭಾವಿಸಿದವು.

ಕನ್ನಡವನ್ನಂತೂ ಒಂದು ನಿಘಂಟು ರಚಿಸುವಷ್ಟರಮಟ್ಟಿಗೆ ಅವರು ಒಲಿಸಿಕೊಂಡರೆ ಇನ್ನು ಹೇಳುವುದೇನಿದೆ? 1894ರಲ್ಲಿ ಕಿಟ್ಟಲ್‌ರ 'ಕನ್ನಡ-ಇಂಗ್ಲಿಷ್ ನಿಘಂಟು' ಮಂಗಳೂರಿನಲ್ಲಿ ಪ್ರಕಟಗೊಂಡಿತು. ಅದೋ 1758 ಪುಟಗಳ 70,000 ಪದಗಳುಳ್ಳ ಶಬ್ದ ಕನ್ನಡಿ, ಗಾದೆಗಳು, ನುಡಿಗಟ್ಟುಗಳನ್ನು ಸೊಗಸಾಗಿ ಉದಾಹರಿಸಲಾಗಿದೆ. ಕಿಟ್ಟಲ್ ಎಂದರೆ ಕನ್ನಡ ನಿಘಂಟು, ಕನ್ನಡ ನಿಘಂಟೆಂದರೆ ಕಿಟ್ಟಲ್ ಎಂಬಂತೆ ಇಂದಿಗೂ ಎಂದಿಗೂ ಮನೆಮಾತು.

ಅವರದು ಅಧಿಕಾರಯುತ ಶಬ್ದಕೋಶವೆಂದು ಖ್ಯಾತ ಕನ್ನಡ ವಿದ್ವಾಂಸರಾದ ಮಂಜೇಶ್ವರ ಗೋವಿಂದ ಪೈ., ಆರ್. ನರಸಿಂಹಾಚಾರ್, ಡಿ.ಎಲ್. ನರಸಿಂಹಾಚಾರ್ ಮುಂತಾದವರು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ನಿಘಂಟಿನ ಶಾಸನಗಾಥೆ ಕುರಿತು ಹೇಳಲೇಬೇಕು. ನಿಘಂಟಿನ ಕಾರ್ಯವು ಆರಂಭವಾಗಿದ್ದು 1872ರಲ್ಲಿ ಕೊನೆಯಾಗಿದ್ದು, 1894, ಅಂದರೆ 22 ವರ್ಷಗಳ ಸುದೀರ್ಘ ನಿರ್ಮಾಣ ಪಯಣ. ಸ್ಥಳೀಯ ವಿದ್ವಾಂಸರು ನಿಘಂಟಿನ ಕಾರ್ಯಕ್ಕೆ ನೆರವಾದರು. ವಸ್ತ್ರದ ಶಿವಲಿಂಗಯ್ಯ, ಎಂ.ಸಿ. ಶ್ರೀನಿವಾಸಾಚಾರ್ಯ, ಶಿವರಾಮ್ ಭಾರದ್ವಾಜ್ ಪ್ರಮುಖರು. ಏತನ್ಮಧ್ಯೆ ಕಿಟ್ಟಲ್ ಒಮ್ಮೆ ತಮ್ಮ ತಾಯ್ನಾಡಿಗೆ ಅವಸರ ಅವಸರವಾಗಿ ಹೋಗಿಬಂದರು. ನಿಘಂಟಿನ ಕೆಲಸ ಪೂರ್ಣವಾಗಿಸಲೇಬೇಕೆಂಬ ಹಠ. ಅವರಿಗೆ ಕಣ್ಣಿನ ದೃಷ್ಟಿ ದೋಷವೂ ಕಾಡಿತ್ತು. ಆ ಐಬು ನೋವು ಲೆಕ್ಕಿಸದೇ ಶಬ್ದಗಳಲ್ಲಿ ಮಗ್ನರಾದರು. ಕಿಟ್ಟಲ್‌ರನ್ನು ಹೆತ್ತ ತಾಯಿ ಹ್ಯೂಬರ್ಟ್ ಧನ್ಯ ಕನ್ನಡತಿ, ಸರಸ್ವತಿಯ ವರಪುತ್ರಿ ಮುಂತಾಗಿ ಕನ್ನಡದ ಜನಮಾನಸ ಹೃದಯ ಪೂರ್ವಕವಾಗಿ ಹೊಗಳುವುದರಲ್ಲಿ ಅತಿಶಯವೇನಲ್ಲ. ಕಿಟ್ಟಲ್ ಇಷ್ಟೊಂದು ಸಂಖ್ಯೆಯಲ್ಲಿ ಪದಗಳನ್ನು ಹೇಗೆ ಕಲೆಹಾಕಿದರೆನ್ನುವುದು ಒಗಟು.

ನಿಘಂಟು ರಚನೆಯೆಂದರೆ ಸಾಮಾನ್ಯವೇ? ಅದೊಂದು ತಪಸ್ಸು, ಒಂದು ಶಬ್ದಕ್ಕೆ ಎರಡೇನು ಐದಾರೂ ಬಗೆ ಅರ್ಥಗಳಿರುತ್ತದೆ. ಉಚ್ಚಾರಣೆಯಿಂದ ಹಿಡಿದು ಎಲ್ಲ ಪರ್ಯಾಯ ಅರ್ಥ, ಅಭಿಪ್ರಾಯವಲ್ಲದ ಕಿರುತಾತ್ಪರ್ಯ ಒದಗಿಸಬೇಕು. ಕಿಟ್ಟಲ್ ಕುದುರೆಯ ಅರ್ಥಾತ್ ಪದಗಳ ಬೆನ್ನೇರಿ ಸಂತೆ, ಜಾತ್ರೆಗಳಲ್ಲಿ ಅಡ್ಡಾಡಿದರು. ಎತ್ತಿನ ಲಾಳ, ಕೀಲಿ, ಒರಳ ಕಲ್ಲು, ಪಾತಳ ಗರಡಿ, ಮಸಿ ಕುಡಿಕೆ, ಅಡಕತ್ತರಿ, ಧೋತ್ರ ಹೀಗೆ ಶಬ್ದಗಳ ಬೇಟೆಯೆಂದರೆ ಸಾಮಾನ್ಯದ ಮಾತೆ? 'ಕಥಾಮಾಲ' ರಚಿಸಿದ್ದು, ನಾಗವರ್ಮನ ಕನ್ನಡ ವ್ಯಾಕರಣವನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿದ್ದು, ಕಿಟ್ಟಲ್‌ರಲ್ಲಿದ್ದ ಕನ್ನಡ ಸಾಹಿತ್ಯ ಸಂಕಲ್ಪ ಶಕ್ತಿಗೆ ಸಾಕ್ಷಿ. ಮ್ಲುಧುರಿಕೆ-ಒಂದು ಜಾತಿಯ ಸುಗಂಧ ಸಸ್ಯ. ರಾಜಶೇಖರ ವಿಲಾಸ-ಷಡಕ್ಷರಿಯ ಕಾವ್ಯ, ರಾಜಸದನ-ಅರಮನೆ, ಲಭ-ಬಾಯಿಯ ಬಳಿ ಹಸ್ತ ತಂದು ಮಾಡುವ ಸದ್ದು, ಲಡ್ಡು-ಲಾಡು ಬಹುಬಗೆಯ ಸಿಹಿ ಉಂಡೆ ಹೀಗೆ ಸಾಗುತ್ತವೆ ಅವರ

ನಿಘಂಟಿನ ಪುಟಗಳು. ಕಿಟ್ಟಲ್ 'ವಜ್ರಪಾಣಿ' ಎಂಬ ಪದವನ್ನು ಕೈಯಲ್ಲಿ ಸಿಡಿಲಿನಂಥ ಆಯುಧ ಹಿಡಿದ ಇಂದ್ರ ಎಂದು ವಿವರಿಸುತ್ತಾರೆ.

ಪ್ರಾಥಮಿಕ ಶಾಲಾ ಮಕ್ಕಳಿಗಾಗಿ ಕಿಟ್ಟಲ್ 'ಕಾವ್ಯಮಂಜರಿ' ಕೃತಿ ರಚಿಸಿದರು. ಮಕ್ಕಳಿಗೆಂದೇ ಅವರು ಹಲವು ಪಠ್ಯಪುಸ್ತಕಗಳನ್ನು ರಚಿಸಿದರು. 'ಪರಮಾತ್ಮ ಜ್ಞಾನ', 'ಪಂಚತಂತ್ರ' ಅವರು ಭಾಷಾಂತರಿಸಿದ ಗ್ರಂಥಗಳಲ್ಲಿ ಮುಖ್ಯವಾದವು ಶಬ್ದಮಣಿದರ್ಪಣ, ಛಂದೋಂಬುಧಿ ಇವು ಅವರ ಸಂಪಾದಿಸಿದ ಕೃತಿಗಳು.

ಧಾರವಾಡದ ಬಾಸಲ್ ಮಿಶನ್ ಪ್ರೌಢಶಾಲೆಯಲ್ಲಿ ಕಿಟ್ಟಲ್ ಅಲ್ಪಾವಧಿಗೆ ಮುಖ್ಯೋಪಾಧ್ಯಾಯರೂ ಆಗಿದ್ದರು. ಉನ್ನತ ಆಡಳಿತದ ನಾನಾ ಹುದ್ದೆಗಳಿಗೆ ಆಹ್ವಾನ ಬರುತ್ತಿತ್ತಾದರೂ ಅವರು ಅವನ್ನೆಲ್ಲ ನಯವಾಗಿ ಒಲ್ಲೆನೆಂದರು. ಕನ್ನಡದ ಉಪಾಸನೆ, ಪರಿಚಾರಿಕೆಗೆ ತಮ್ಮ ವ್ಯವಧಾನ ಮೀಸಲಿರಿಸಿದರು. ಕನ್ನಡ ಇತಿಹಾಸವನ್ನು ಇಂಗ್ಲಿಷ್ ಜರ್ಮನ್ ಭಾಷೆಯಲ್ಲಿ ಬಿಂಬಿಸಿದ್ದು ಕಿಟ್ಟೆಲ್‌ರ ಅಸದೃಶ ಹೆಗ್ಗಳಿಕೆ, 1903 ಡಿಸೆಂಬರ್ 18 ರಂದು, ಟ್ಯೂಬೆನ್‌ಜನ್‌ನಲ್ಲಿ ಕಿಟ್ಟಲ್ ಕಾಲವಶರಾದರು. ಅವರು ಜೀವಿಸಿದ್ದಾಗಲೇ ದಂತಕಥೆಯಾಗಿದ್ದರು. 'ಕನ್ನಡದ ಕಿಟ್ಟ' ಎಂದೇ ಅಚ್ಚುಮೆಚ್ಚಾಗಿರುವ ಕಿಟ್ಟಲ್ ಅವರ ಪ್ರತಿಮೆಯನ್ನು ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿ ಸ್ಥಾಪಿಸಲಾಗಿದೆ. ಬಳಸಿದರೆ ಭಾಷೆ ಬಳಸದಿದ್ದರೆ ಜಡ. ಹೆಚ್ಚೆಚ್ಚು ಕನ್ನಡ ಪದಗಳನ್ನು ಪರಿಚಯಿಸಿಕೊಳ್ಳುತ್ತಾ ಕನ್ನಡವನ್ನು ಮತ್ತಷ್ಟು ಹತ್ತಿರ ಇನ್ನಷ್ಟು ಆಪ್ತವಾಗಿಸಿಕೊಳ್ಳುವುದೇ ಈ ಶಬ್ದಸಂತನಿಗೆ ನಾವು ಸಲ್ಲಿಸುವ ಕೃತಜ್ಞತೆ ಅಲ್ಲವೇ?

ಬಿಂಡಿಗನವಿಲೆ ಭಗವಾನ್

ಆಧಾರ–ಉದಯವಾಣಿ 03.11.2019

4. ರಾಜ್ಯಸಭೆಗೆ 250ನೇ ಅಧಿವೇಶನ ಸಂಭ್ರಮ

ರಾಜ್ಯಸಭೆಗೆ ದೇಶದ ರಾಜಕಾರಣ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಅತ್ಯುನ್ನತ ಸ್ಥಾನವಿದೆ. ಲೋಕಸಭೆಯಲ್ಲಿ ಆಗುವ ಲೋಪಗಳನ್ನು ತಿದ್ದಿತೀಡುವ ಮಹೋನ್ನತ ಹೊಣೆಯಿರುವ ಈ ಮೇಲ್ಮನೆಗೆ ಪ್ರಸಕ್ತ ನಡೆಯುತ್ತಿರುವುದು 250ನೇ ಅಧಿವೇಶನ ಎಂಬ ಸಂಭ್ರಮ. ವಿವಿಧ ಕ್ಷೇತ್ರಗಳ ಪರಿಣಿತರು ತಮ್ಮ ಚಿಂತನೆಗಳನ್ನು ಹಂಚಿಕೊಳ್ಳುವ ಮುಖೇನ ಚಿಂತಕರ ಚಾವಡಿಯೂ ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಪುನರ್ವಸತಿ ಕೇಂದ್ರವಾಗುತ್ತಿರುವುದು ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆಯ ವಿಪರ್ಯಾಸ.

ದೇಶದ ರಾಜ್ಯಸಭೆಯಲ್ಲಿ ಮಹತ್ವದ ಮಸೂದೆ ಅಂಗೀಕಾರ ವೇಳೆ ಚುನಾವಣಾ ಅಧಿಕಾರಿಯಾಗಿದ್ದ (ಸಭಾಪತಿ)ಯೊಬ್ಬರು ವಿಪಕ್ಷದ ಪರವಾಗಿ ಮತ ಚಲಾಯಿಸಿದ ಅಪರೂಪದ ವಿದ್ಯಮಾನಕ್ಕೂ ರಾಜ್ಯಸಭೆ ಸಾಕ್ಷಿಯಾಗಿದೆ. 1952ರಲ್ಲಿ ಅಸ್ತಿತ್ವಕ್ಕೆ ಬಂದು ಇದೀಗ 250ನೇ ಅಧಿವೇಶನ ಕಾಣುತ್ತಿರುವ ರಾಜ್ಯಸಭೆಯಲ್ಲಿ ಹಲವು ಮಹತ್ವದ ನಿರ್ಧಾರಗಳು ಹೊರಬಿದ್ದಿವೆ.

ಅದು 1991 ಮೇ, 08, ರಾಜ್ಯಸಭೆಯಲ್ಲಿ ಸರ್ಕಾರ ಅಪರಾಧ ದಂಡ ಸಂಹಿತೆ ತಿದ್ದುಪಡಿ ಕುರಿತು ಹೊರಡಿಸಿದ್ದ ಸುಗ್ರೀವಾಜ್ಞೆ ವಿರುದ್ಧ ವಿಪಕ್ಷಗಳು ಮಸೂದೆ ವಿರುದ್ಧ ಗೊತ್ತುವಳಿ ಮಂಡಿಸಿದ್ದವು. ಇದನ್ನು ಮತಕ್ಕೆ ಹಾಕಿದ ವೇಳೆ ಆಡಳಿತ–ವಿಪಕ್ಷ ಬಲಾಬಲ 39–39 ಮತಗಳಿಂದ ಸಮಬಲವಾಗಿತ್ತು.

ಇಂತಹ ಸಂದರ್ಭದಲ್ಲಿ ಸಂವಿಧಾನಾತ್ಮಕ ಅವಕಾಶ ಬಳಸಿ ಅಂದು ಸಭಾಪತಿ ಪೀಠದಲ್ಲಿದ್ದ ಎಂ.ಎ.ಬೇಬಿ ಸಿಪಿಐ(ಎಂ) ವಿಪಕ್ಷಗಳ ಪರ ಮತ ಚಲಾಯಿಸಿ ಮಸೂದೆ ಅಂಗೀಕಾರವಾಗದಂತೆ ನೋಡಿಕೊಂಡಿದ್ದರು. ಇದು ಆಡಳಿತ ಪಕ್ಷಕ್ಕೆ ಅತಿದೊಡ್ಡ ಹಿನ್ನಡೆಯಾಗಿತ್ತು. ಜೊತೆಗೆ ರಾಜ್ಯಸಭೆಯ ಪ್ರತಿಷ್ಠೆ ಮತ್ತು ಚಲಾಯಿಸಬಹುದಾದ ಅಧಿಕಾರವನ್ನು ಎತ್ತಿಹಿಡಿದಿತ್ತು.

ಇಂತಹ ಅಪರೂಪದ ಮತ್ತು ಮಹತ್ವದ ವಿದ್ಯಮಾನಕ್ಕೆ ಕಾರಣರಾದ ಬೇಬಿ ಅವರು 1986 ರಿಂದ 1992 ಮತ್ತು 1992 ರಿಂದ 1998 ಅವಧಿಯಲ್ಲಿ ಕೇರಳದಿಂದ ರಾಜ್ಯಸಭೆಗೆ ಆರಿಸಿ ಬಂದಿದ್ದರು.

ರಾಜ್ಯಸಭೆ ಕಳೆದ 67 ವರ್ಷಗಳಲ್ಲಿ 3817 ಮಸೂದೆಗಳನ್ನು ಪಾಸ್ ಮಾಡಿದೆ. 5466 ದಿನಗಳ ಕಲಾಪ ನಡೆದಿದೆ. 120 ಮಸೂದೆಗಳು ಕಲಾಪದಲ್ಲಿ ತಿದ್ದುಪಡಿಯಾಗಿದ್ದರೆ, ಐದು ಸರ್ವಾನುಮತದಿಂದ ತಿರಸ್ಕರಿಸಲ್ಪಟ್ಟಿವೆ.

ರಾಜ್ಯಸಭೆಗೆ ಈವರೆಗೆ 208 ಮಹಿಳಾ ಸದಸ್ಯರು ಸೇರಿದಂತೆ 2282 ಸದಸ್ಯರನ್ನು ಕಂಡಿದೆ. ಇದರಲ್ಲಿ 137 ಮಂದಿ ನಾಮನಿರ್ದೇಶನ ಮೂಲಕ ಬಂದವರು. ವಿಶೇಷವಾಗಿ ಮಹಿಳಾ ಸದಸ್ಯರ ಸಂಖ್ಯೆ 1952ರಲ್ಲಿ 15 ಇದ್ದಿದ್ದು 2014ರಲ್ಲಿ 31ಕ್ಕೇರಿದೆ. ಶೇ.33 ಮೀಸಲಾತಿ ಜಾರಿಯಾದರೆ ರಾಜ್ಯ ಸಭೆ ಮತ್ತಷ್ಟು ಮಹಿಳಾ ಸದಸ್ಯರನ್ನು ಹೊಂದಲಿದೆ.

ರಾಜ್ಯಸಭೆ ಇದುವರೆಗೆ 2 ಬಾರಿ ಮಾತ್ರ ರಾಷ್ಟ್ರಪತಿ ಆಡಳಿತಕ್ಕೆ ಒಪ್ಪಿಗೆಕೊಟ್ಟಿದೆ. ಅದು 1977ರಲ್ಲಿ ತಮಿಳುನಾಡು ಮತ್ತು ನಾಗಾಲ್ಯಾಂಡ್‌ನಲ್ಲಿ ರಾಷ್ಟ್ರಪತಿ ಆಳ್ವಿಕೆ ವಿಸ್ತರಣೆ ಹಾಗೂ 1999ರಲ್ಲಿ ಹರಿಯಾಣ ವಿಧಾನಸಭೆ ವಿಸರ್ಜನೆಗೆ ಸಂಬಂಧಿಸಿದ್ದಾಗಿದೆ. ಕೊಲ್ಕತ್ತಾ ಹೈಕೋರ್ಟ್ ನ್ಯಾಯಾಧೀಶರಾಗಿದ್ದ ಸೌಮಿತ್ರಾಸೇನ್ ಅವರನ್ನು ಪದಚ್ಯುತಿಗೊಳಿಸಿದ ಗೊತ್ತುವಳಿಯನ್ನು ಮಾತ್ರ ಒಮ್ಮೆ ರಾಜ್ಯಸಭೆ ಅಂಗೀಕರಿಸಿದೆ.

ಕೆ.ವಿ.ಪರಮೇಶ್

ಆಧಾರ– ಸಂಯುಕ್ತ ಕರ್ನಾಟಕ 19.11.2019

5. ಮೂಲಭೂತ ಕರ್ತವ್ಯ: ಬೇಕು ಜಾಗೃತಿ

ದೇಶವು ನವೆಂಬರ್ 26ರಂದು 'ಸಂವಿಧಾನ ದಿನ' ಆಚರಿಸಿತು. ಸಂವಿಧಾನದಲ್ಲಿರುವ 'ಮೂಲಭೂತ ಕರ್ತವ್ಯ'ಗಳಿಗೆ ಸಂಬಂಧಿಸಿದ ಅಧ್ಯಾಯದತ್ತ ರಾಷ್ಟ್ರಪತಿ ರಾಮನಾಥ ಕೋವಿಂದ್, ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು, ಪ್ರಧಾನಿ ನರೇಂದ್ರ ಮೋದಿ ಅವರು ಜನರ ಗಮನ ಸೆಳೆದರು.

ಮಹಾತ್ಮ ಗಾಂಧಿ ಅವರನ್ನು ಉಲ್ಲೇಖಿಸಿ ಕೋವಿಂದ್, 'ಹಕ್ಕುಗಳ ನಿಜವಾದ ಮೂಲ ಇರುವುದು ಕರ್ತವ್ಯಗಳಲ್ಲಿ. ನಾವೆಲ್ಲರೂ ಕರ್ತವ್ಯಗಳನ್ನು ನಿಭಾಯಿಸಿದರೆ ಹಕ್ಕುಗಳು ದೂರವಾಗುವುದಿಲ್ಲ. ಕರ್ತವ್ಯಗಳನ್ನು ನಿಭಾಯಿಸದೆ ಹಕ್ಕುಗಳ ಹಿಂದೆ ಓಡಿದರೆ ಅವು ಕೈಗೆ ಸಿಗುವುದಿಲ್ಲ' ಎಂದರು. ಮೂಲಭೂತ ಕರ್ತವ್ಯಗಳು ಜನರಿಗೆ ಅವರ ನೈತಿಕ ಹೊಣೆಗಾರಿಕೆಗಳನ್ನು ನೆನಪಿಸಿಕೊಡುತ್ತವೆ. 'ಸಂವಿಧಾನದ ಅತ್ಮವು ಅದರ ಪೀಠಿಕೆ, ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು ಹಾಗೂ ನಿರ್ದೇಶನಾ ತತ್ವಗಳಲ್ಲಿದೆ ಎನ್ನಬಹುದು' ಎಂದೂ ಕೋವಿಂದ್ ಹೇಳಿದರು.

ಮೂಲಭೂತ ಹಕ್ಕುಗಳ ಉಲ್ಲೇಖ ಇರುವ ಸಂವಿಧಾನದ ಮೂರನೆಯ ಭಾಗದ ಬಗ್ಗೆ ಕಳೆದ ಏಳು ದಶಕಗಳಲ್ಲಿ ಬಹಳಷ್ಟು ಗಮನ ನೀಡಲಾಗಿದೆ. ಅದು ಸರಿ ಕೂಡ. ನಮ್ಮ ಪ್ರಜಾತಂತ್ರ ನಿಂತಿರುವ ನೆಲೆಗಟ್ಟನ್ನು ಈ ಭಾಗವು ರೂಪಿಸಿಕೊಟ್ಟಿದೆ. ಜೀವಿಸುವ ಹಕ್ಕು, ಸಮಾನತೆಯ ಹಕ್ಕು, ಮುಕ್ತ ಅಭಿವ್ಯಕ್ತಿಯಂತಹ ಅಮೂಲ್ಯ ಹಕ್ಕು, ದೇಶದೆಲ್ಲೆಡೆ ಮುಕ್ತವಾಗಿ ಸಂಚರಿಸುವ ಹಕ್ಕು, ಹೀಗೆ ಈ ಭಾಗದಲ್ಲಿ ಬರುವ ಹಲವು ವಿಧಿಗಳು ನಮ್ಮ ಪ್ರಜಾತಂತ್ರದ ಆತ್ಮ ಮತ್ತು ತಿರುಳಿನಂತೆ. ಪ್ರಜಾತಂತ್ರ ರಾಷ್ಟ್ರ ನಿಂತುಕೊಂಡಿರುವ ಆಧಾರ ಶಿಲೆ ಇವು. ಈ ಎಲ್ಲ ಹಕ್ಕುಗಳ ರಕ್ಷಕನಂತೆ ನಿಂತಿರುವುದು ಸುಪ್ರೀಂ ಕೋರ್ಟ್.

ಇವೆಲ್ಲವೂ ಚೆನ್ನ. ಆದರೆ ಸಂವಿಧಾನಸ 51(ಎ) ವಿಧಿಯಲ್ಲಿ ಇರುವ ಮೂಲಭೂತ ಕರ್ತವ್ಯಗಳ ಬಗ್ಗೆ ಗಮನ ನೀಡಬೇಕಾದ ಕಾಲ ಬಂದಿದೆ. ಈ ವಿಧಿಯನ್ನು ಸಂವಿಧಾನಕ್ಕೆ ಸೇರಿಸಿದ್ದು 1976ರಲ್ಲಿ 42ನೆಯ ತಿದ್ದುಪಡಿಯ ಮೂಲಕ ಅಂದರೆ ಕರಾಳ ತುರ್ತು ಪರಿಸ್ಥಿಯಿದ್ದ ಅವಧಿಯಲ್ಲಿ ಇದೊಂದು ಒಳ್ಳೆಯ ತಿದ್ದುಪಡಿ ಆಗಿತ್ತು. ಹಾಗಾಗಿ ಇದನ್ನು ಉಳಿಸಿಕೊಳ್ಳಲಾಯಿತು.

ಪ್ರಜೆಗಳು ಸಂವಿಧಾನಕ್ಕೆ ಬದ್ಧರಾಗಿರಬೇಕು. ಅದರ ಮೌಲ್ಯಗಳನ್ನು ಮತ್ತು ಸಂಸ್ಥೆಗಳನ್ನು ಗೌರವಿಸಬೇಕು; ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗೆ ಗೌರವ ಸೂಚಿಸಬೇಕು; ಸ್ವಾತಂತ್ರ್ಯ ಹೋರಾಟದ ಉದಾತ್ತ ಆದರ್ಶಗಳನ್ನು ಅನುಸರಿಸಬೇಕು; ಧರ್ಮ, ಪ್ರದೇಶದಂತಹ ಗಡಿಗಳನ್ನು ಮೀರಿ ದೇಶವಾಸಿಗಳ ನಡುವೆ ಸೋದರತ್ವ ಹಾಗೂ ಸೌಹಾರ್ದ ಭಾವವನ್ನು ಬೆಳಸಬೇಕು; ಮಹಿಳೆಯರ ಘನತೆಗೆ ಕುಂದು ತರುವಂತಹ ಆಚರಣೆಗಳನ್ನು ತಿರಸ್ಕರಿಸಬೇಕು; ನಮ್ಮ ಬಹುಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ಕಾಪಾಡಬೇಕು; ಅರಣ್ಯ, ನದಿ, ವನ್ಯ ಜೀವಿಗಳನ್ನು ರಕ್ಷಿಸಬೇಕು; ವೈಜ್ಞಾನಿಕ ಮನೋಭಾವ ಮಾನವೀಯತೆ, ಸುಧಾರಣೆಯ ಧೋರಣೆ ಹಾಗೂ ಪ್ರಶ್ನಿಸುವ ಧೋರಣೆ ಬೆಳಸಿಕೊಳ್ಳಬೇಕು; ಹಿಂಸೆಯನ್ನು ತ್ಯಜಿಸಬೇಕು ಹಾಗೂ ಸಾರ್ವಜನಿಕ ಆಸ್ತಿಯನ್ನು ರಕ್ಷಿಸಬೇಕು, ಎಂಬೆಲ್ಲ ಮಾತುಗಳು ಇದರಲ್ಲಿವೆ.

ಮೂಲಭೂತ ಹಕ್ಕುಗಳು ನಮ್ಮ ಪ್ರಜಾತಂತ್ರವನ್ನು ಬಲಗೊಳಿಸುತ್ತವೆ. ಮೂಲಭೂತ ಕರ್ತವ್ಯಗಳು ನಮ್ಮ ಸಮಾಜವನ್ನು ಬಲಿಷ್ಠವಾಗಿಸುತ್ತವೆ ಎಂದು ಈ ಪಟ್ಟಿಯನ್ನು ನೋಡಿ ಹೇಳಬಹುದು. ಈ ಕರ್ತವ್ಯಗಳಿಗೆ ಬದ್ಧರಾಗಿ ನಡೆದುಕೊಂಡರೆ ನಮ್ಮಲ್ಲಿ ಸೋದರತ್ವ ಬೆಳೆಯುತ್ತದೆ. ದೇಶದ ಏಕತೆ ಗಟ್ಟಿಯಾಗುತ್ತದೆ, ಜನರ ಜೀವನ ಮಟ್ಟ ಸುಧಾರಿಸುತ್ತದೆ. ನಮ್ಮದು ವಿಶ್ವದ ಬಹುದೊಡ್ಡ ಪ್ರಜಾತಂತ್ರ ಮಾತ್ರವೇ ಅಲ್ಲ; ವಿಶ್ವದ ಅತ್ಯಂತ ವೈವಿಧ್ಯಮಯ ಪ್ರಜಾತಂತ್ರವೂ ಹೌದು. ಹಾಗಾಗಿ ಮೂಲಭೂತ ಹಕ್ಕುಗಳನ್ನು ನಾವು ಕಡ್ಡಾಯವಾಗಿ ತಿಳಿದುಕೊಂಡಿರಬೇಕು.

ಮೂಲಭೂತ ಹಕ್ಕುಗಳ ಬಗ್ಗೆಗಿನ ಪಾಠವನ್ನು ಪಠ್ಯದಲ್ಲಿ ಸೂಕ್ತ ಹಂತದಲ್ಲಿ ಸೇರಿಸಬೇಕು. ಈ ಕರ್ತವ್ಯಗಳ ಪಟ್ಟಿಯನ್ನು ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ, ಕಛೇರಿಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಬೇಕು ಎಂದು ವೆಂಕಯ್ಯ ನಾಯ್ಡು ಅವರು ನೀಡಿರುವ ಸಲಹೆ ಈ ಕಾರಣದಿಂದ ಗಮನಾರ್ಹವಾಗುತ್ತದೆ.

ನವೆಂಬರ್ 26ನ್ನು 'ಸಂವಿಧಾನ ದಿನ' ಎಂದು ಘೋಷಿಸುವ ತೀರ್ಮಾನವನ್ನು ನಾಲ್ಕು ವರ್ಷಗಳ ಹಿಂದೆ ತೆಗೆದುಕೊಂಡ ಪ್ರಧಾನ ಮೋದಿಯವರು, ಸಂವಿಧಾನದ ಬಗ್ಗೆ ಸಾರ್ವಜನಿಕರನ್ನು ಹೆಚ್ಚಿನ ಜಾಗೃತಿ ಮೂಡಿಸುವಂತೆ ಮಾಡಿದ್ದಾರೆ. ಮೂಲಭೂತ ಕರ್ತವ್ಯಗಳ ಬಗ್ಗೆ ಎಲ್ಲರ ಗಮನ ಹರಿಯುವಂತೆ ಮಾಡಿ ಅವರು ಈ ಅಭಿಯಾನಕ್ಕೆ ಹೆಚ್ಚಿನ ಶಕ್ತಿ ನೀಡಿದ್ದಾರೆ. ಏಳು ದಶಕಗಳ ಅವಧಿಯಲ್ಲಿ ಮೂಲಭೂತ ಹಕ್ಕುಗಳ ಬಗ್ಗೆ ದೊಡ್ಡಮಟ್ಟದ ಆದ್ಯತೆ ನೀಡಲಾಗಿದೆ. ಈಗ ಮೂಲಭೂತ ಕರ್ತವ್ಯಗಳ ಬಗ್ಗೆಯೂ ಗಮನ ನೀಡುವ ಸಂದರ್ಭ ಬಂದಿದೆ ಎಂದು ಮೋದಿಯ ಅವರು ತಮ್ಮ ಭಾಷಣದಲ್ಲಿ ಹೇಳಿದರು. ' ನಾವು ನಮ್ಮ ಜವಾಬ್ದಾರಿಯನ್ನು ನಿರ್ವಹಿಸದೆಯೇ ನಮ್ಮ ಹಕ್ಕುಗಳನ್ನು ಉಳಿಸಿಕೊಳ್ಳಲು ಆಗುವುದಿಲ್ಲ' ಎನ್ನುವುದು ಅವರ ಅಭಿಪ್ರಾಯ.

ಮೂಲಭೂತ ಕರ್ತವ್ಯಗಳ ಬಗ್ಗೆ ತಮ್ಮ ಸಂವಿಧಾನದಲ್ಲಿ ವಿಸ್ತೃತ ಉಲ್ಲೇಖವನ್ನು ಹೊಂದಿರುವ ದೇಶಗಳು ಕೆಲವು ಮಾತ್ರ ಆದರೆ, ದೇಶದ ರಕ್ಷಣೆ ಒಂದು ರಾಷ್ಟ್ರೀಯ ಕರ್ತವ್ಯ ಎಂದು ಹಲವು ದೇಶಗಳು ಹೇಳುತ್ತವೆ. ಉದಾಹರಣೆಗೆ, ದೇಶದ ಪ್ರತೀ ಪ್ರಜೆಯೂ ದೇಶದ ರಕ್ಷಣೆಯ ಕರ್ತವ್ಯದಲ್ಲಿ ಸಮಾನ ಹೊಣೆ ಹೊಂದಿದ್ದಾನೆ ಎನ್ನುತ್ತದೆ. ನಾರ್ವೆ ದೇಶದ ಸಂವಿಧಾನದ 109ನೇ ವಿಧಿ. ಈ ತತ್ವದ ಅನುಷ್ಠಾನ ಹಾಗೂ ಇದರ ಮೇಲಿನ ಮಿತಿಗಳನ್ನು ಕಾನೂನಿನ ಮೂಲಕ ನಿಗದಿ ಮಾಡಿಕೊಳ್ಳಬಹುದು ಎಂದು ಹೇಳಲಾಗಿದೆ.

ಡೆನ್ಮಾರ್ಕ್ ದೇಶದ ಸಂವಿಧಾನದ 81ನೇ ವಿಧಿಯ ಅನ್ವಯ, 'ಶಸ್ತ್ರಾಸ್ತ್ರಗಳನ್ನು ಹಿಡಿಯಬಲ್ಲ ಪ್ರತೀ ಪುರಷನೂ, ಕಾನೂನು ಹೇಳುವ ನಿಯಮಗಳಿಗೆ ಅನುಸಾರವಾಗಿ ದೇಶದ ರಕ್ಷಣೆಗೆ ಕೊಡುಗೆ ನೀಡಬೇಕು'. ಫ್ರೆಂಚ್ ಗಣರಾಜ್ಯದ ನೆಲೆಗಟ್ಟು ಇರುವುದು ಮನುಷ್ಯನ ಹಕ್ಕುಗಳು ಹಾಗೂ ಕರ್ತವ್ಯಗಳ ಮೇಲೆ, ಸಮಾಜದ ಎಲ್ಲರೂ ತಮ್ಮ ಕರ್ತವ್ಯಗಳು ಏನು ಎಂಬುದನ್ನು ತಿಳಿದುಕೊಳ್ಳಬೇಕು, ಅವುಗಳನ್ನು ನಿರ್ವಹಿಸಬೇಕು ಎಂಬುದು ಅಲ್ಲಿನ ತತ್ವ.

ನಮ್ಮ ಸಂವಿಧಾನದ 51(ಎ) ವಿಧಿಯ ಆಶಯಗಳನ್ನು ಸೃಜನಾತ್ಮಕವಾಗಿ ಬಳಸಿಕೊಳ್ಳುವ ಕೆಲಸವನ್ನು ಸುಪ್ರೀಂಕೋರ್ಟ್ ಮಾಡಿದೆ. ಉದಾಹರಣೆಗೆ; ನಾಗರಿಕರಿಗೆ ಅನ್ವಯವಾಗುವ ಮೂಲಭೂ ಕರ್ತವ್ಯಗಳು ಪ್ರಭುತ್ವಕ್ಕೂ ಅನ್ವಯ ಆಗುತ್ತವೆ ಎಂದು ಸುಪ್ರೀಂಕೋರ್ಟ್ ಹೇಳಿದೆ. 51(ಎ)(ಜಿ) ಅನ್ವಯ, ಪರಿಸರ ಸಂರಕ್ಷಣೆ ಬಗ್ಗೆ ದೇಶದ ಎಲ್ಲಾ ಶಿಕ್ಷಣ ಸಂಸ್ಥೆಗಳು ವಾರಕ್ಕೆ ಕನಿಷ್ಠ ಒಂದು ಗಂಟೆ ಅವಧಿ ಪಾಠ ಮಾಡುವ ವ್ಯವಸ್ಥೆ ಕಲ್ಪಿಸುವುದು ಕೇಂದ್ರ ಸರ್ಕಾರದ ಕರ್ತವ್ಯ ಎಂದು ಕೋರ್ಟ್ ಹೇಳಿದೆ.

'ಅತ್ಯತ್ಕೃಷ್ಟ ಮಟ್ಟ ತಲುಪಲು ಯತ್ನಿಸುವುದು' ಎಂದು ಮೂಲಭೂತ ಕರ್ತವ್ಯಗಳಲ್ಲಿ ಹೇಳಿರುವುದನ್ನು ಇನ್ನೊಂದು ಪ್ರಕರಣದಲ್ಲಿ ಉಲ್ಲೇಖಿಸಿರುವ ಕೋರ್ಟ್ 'ಅತ್ಯತ್ಕೃಷ್ಟವಾಗುವುದು ಅಂದರೆ ಪ್ರತಿಭೆ, ಪ್ರಾಮಾಣಿಕ ಕಾರ್ಯ... ಇವೆಲ್ಲವನ್ನೂ ಮೀರುವುದು' ಎಂದು ಅರ್ಥ ಎಂದಿದೆ. 'ಈ ಮಹಾನ್ ರಾಷ್ಟ್ರದ ನಾಗರಿಕರು ತಮ್ಮ ಕರ್ತವ್ಯಗಳನ್ನು ಅರೆಮನಸ್ಸಿನಿಂದ ಮಾಡುವ ಬದಲು, ಅವುಗಳನ್ನು ಅತ್ಯತ್ಕೃಷ್ಟ ಎಂಬ ರೀತಿಯಲ್ಲಿ ಮಾಡಲಿ ಎಂದು ಸಂವಿಧಾನದ ನಿರ್ಮಾತೃಗಳು ಬಯಸಿದ್ದರು' ಎಂದು ಕೋರ್ಟ್ ಹೇಳಿದೆ. ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸುವುದು ಕೂಡ ಸಾಂವಿಧಾನಿಕ ಕಾನೂನಿಕ ಅಡಿಯಲ್ಲೇ ಬರುತ್ತದೆ.

ಬಹುಕಾಲದಿಂದ ಅಧ್ಯತೆ ಪಡೆದಿರದ ವಿಧಿಯೊಂದರ ಮೇಲೆ ಬೆಳಕು ಹರಿಸುವ ಸಮಯ ಈಗ ಬಂದಿದೆ. ಆ ಮೂಲಕ ನಾಗರಿಕರು ಕರ್ತವ್ಯ ಹಾಗೂ ಹಕ್ಕುಗಳ ನಡುವೆ ಸಮತೋಲನೆ ಸಾಧಿಸಲು ಆಗುತ್ತದೆ.

ಲೇಖಕ: ಪ್ರಸಾಸ ಭಾರತಿ ಅಧ್ಯಕ್ಷ

ಆಧಾರ–ಪ್ರಜಾವಾಣಿ 04.12.2019

6. ದೇಶಕ್ಕೆ ಏಕರೂಪ ಶಿಕ್ಷಣ ಪದ್ಧತಿ ಜಾರಿಯಾಗಲಿ!

ಒಂದು ದೇಶದ ಆರ್ಥಿಕ ಬೆಳವಣಿಗೆ ಪ್ರಮುಖವಾಗಿ ಆ ದೇಶದ ಜನಸಂಖ್ಯೆ ಮತ್ತು ಮಾನವಶಕ್ತಿಯ ಗುಣಮಟ್ಟವನ್ನು ಅವಲಂಬಿಸಿದೆ. ಕಾರ್ಮಿಕ ಬಲದ ದಕ್ಷತೆ, ಉತ್ಪಾದಕತೆ ಮಾನವ ಶಕ್ತಿಯ ಗುಣಮಟ್ಟವನ್ನು ನಿರ್ಧರಿಸಬಹುದಾದ ಪ್ರಮುಖ ಅಂಶಗಳೆಂದು ಹೇಳಬಹುದು. ಜನರ ಆರೋಗ್ಯ, ಪೋಷಣೆ, ಶಿಕ್ಷಣ, ತರಬೇತಿ, ವಸತಿ ಸೌಲಭ್ಯ, ಸುರಕ್ಷಿತ ಕುಡಿಯುವ ನೀರಿನ ಸೌಲಭ್ಯ, ನೈರ್ಮಲ್ಯ ಇತ್ಯಾದಿ ಅಂಶಗಳು ಮಾನವ ಶಕ್ತಿಯ ಕಾರ್ಯಕ್ಷಮತೆಯನ್ನು ಅವಲಂಬಿಸಿದೆ. ಸಾಮಾಜಿಕ ಮೂಲ ಸೌಕರ್ಯದ ನಾನಾ ಘಟಕಗಳಿಗೆ ಹೋಲಿಸಿದರೆ ಶಿಕ್ಷಣ ತುಂಬಾ ಮುಖ್ಯವಾದ ಅಂಗವಾಗಿದೆ. ಸುಶಿಕ್ಷಿತ ಹಾಗೂ ಸರಿಯಾಗಿ ತರಬೇತಿ ಪಡೆದ ಮಾನವ ಶಕ್ತಿ ದೇಶದ ಆರ್ಥಿಕ ಬೆಳವಣಿಗೆಯ ವೇಗವನ್ನು ವರ್ಧಿಸುತ್ತದೆಯೆನ್ನುವುದು ಸುಲಭವಾಗಿ ಒಪ್ಪಿಕೊಳ್ಳುವ ವಿಷಯ.

ಭಾರತದಲ್ಲಿ ಶಿಕ್ಷಣ ಕ್ಷೇತ್ರ ಸರ್ಕಾರಿ ಹಾಗೂ ಖಾಸಗಿ ಒಡೆತನಕ್ಕೆ ಹಾಗೂ ನಿಯಂತ್ರಣಕ್ಕೆ ಒಳಪಟ್ಟಿವೆ. ಸರ್ಕಾರಿ ಒಡೆತನದ ಶಿಕ್ಷಣ ಸಂಸ್ಥೆಗಳು ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸಂಸ್ಥೆಗಳ ನಿಯಂತ್ರಣಕ್ಕೆ ಒಳಪಟ್ಟಿವೆ. ಭಾರತದ ಸಂವಿಧಾನದ ಪ್ರಕಾರ ಶಿಕ್ಷಣ ಕ್ಷೇತ್ರಕ್ಕೆ ಹಣ ಒದಗಿಸುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಂಟಿ ಹೊಣೆಗಾರಿಕೆಯಾಗಿದೆ. ಇದರ ಜೊತೆಗೆ ಖಾಸಗಿ ಸಂಸ್ಥೆಗಳು ಈ ಕ್ಷೇತ್ರಕ್ಕೆ ಹಣ ಹೂಡುವುದರ ಮೂಲಕ ತನ್ನ ನಿಯಂತ್ರಣಕ್ಕೆ ಒಳಪಡಿಸಿಕೊಂಡಿದೆ. ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವಲ್ಲಿ ಶಿಕ್ಷಣ ಮಹತ್ವದ ಪಾತ್ರ ವಹಿಸುತ್ತದೆ. ಮಧ್ಯಮ, ಕೆಳ ಮಧ್ಯಮ ಹಾಗೂ ಬಡ ವರ್ಗದ ಜನರ ಸಂಪಾದನೆಯ ಅಧಿಕ ಪಾಲು ಶಿಕ್ಷಣಕ್ಕೆ ಮೀಸಲಾಗಿರಿಸುವ ಅನಿವಾರ್ಯತೆ ಈಗಿನದು. ಶಿಕ್ಷಣ ಸಂಬಂಧಿ ವೆಚ್ಚ ಹೊರೆ ಎನಿಸಲಾರಂಭಿಸಿದೆ.

ಕೇಂದ್ರ ಬಜೆಟ್‌ನಲ್ಲಿ ಶಿಕ್ಷಣ ಸಂಬಂಧಿ ವೆಚ್ಚಗಳಿಗೆ ಸಾಕಷ್ಟು ಹಣವನ್ನು ಮೀಸಲಾಗಿರಿಸಲಾಗಿದೆ. ಹೊಸದಾಗಿ ' ಸರ್ವ ಶಿಕ್ಷಣ ಅಭಿಯಾನ ' ವೆಂಬ ಹೊಸ ಯೋಜನೆಯನ್ನು ಜಾರಿಗೆ ತರಲಾಗಿದೆ. Education for all, quality Education ಯೋಜನೆಯಡಿಯಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಹಣ ಮೀಸಲಾಗಿಡಲಾಗಿದೆ. ಮೂಲ ಸೌಕರ್ಯಗಳ ಜೊತೆಗೆ ಅರ್ಹ ಬೋಧಕ ವರ್ಗವನ್ನು ಸರಕಾರಿ ಶಾಲೆಗಳು ಹೊಂದಿವೆ. ಆದರೂ ಸಹ ಸರಕಾರಿ ಶಾಲೆಗಳ ಬಗ್ಗೆ ಜನಸಾಮಾನ್ಯರು ಅಸಡ್ಡೆಯ ಭಾವನೆಯನ್ನು ಹೊಂದುತ್ತಿರುವುದು ಎದ್ದು ಕಾಣುತ್ತಿದೆ.

ಇನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಸಹ ಹಲವಾರು ನ್ಯೂನತೆಗಳಿಂದ ಹೊರತಾಗಿಲ್ಲ. ಶೈಕ್ಷಣಿಕ ಶುಲ್ಕಗಳ ಹೊರತಾಗಿಯೂ ಡೋನೇಷನ್ ರೂಪದಲ್ಲಿ ಹೆಚ್ಚು ಶುಲ್ಕ ವಸೂಲಿ ಮಾಡುವುದು ಸಾಮಾನ್ಯ. ಶಿಕ್ಷಕರ ಆಯ್ಕೆಯ ವಿಷಯದಲ್ಲಿಯೂ ಕೂಡ ಚೌಕಾಶಿ ಮಾಡಲಾಗುತ್ತಿದೆ. ಅರ್ಹತೆ, ಅನುಭವ, ಮೆರಿಟ್ ಬಗ್ಗೆ ವಿಚಾರಿಸದೆ ಕಡಿಮೆ ಸಂಬಳಕ್ಕೆ ಒಪ್ಪುವವರನ್ನು ನೇಮಿಸಿಕೊಳ್ಳಲಾಗುತ್ತಿದೆ. ಒಂದೊಂದು ಶಾಲೆಗಳು ಒಂದೊಂದು ರೀತಿಯ ಶುಲ್ಕ ವಸೂಲು ಮಾಡುತ್ತಲಿವೆ. ಹೆಚ್ಚು ಡೊನೇಷನ್ ಪಡೆಯುವ ಶಾಲೆಗಳು ಉತ್ತಮ ಗುಣಮಟ್ಟವನ್ನು ಹೊಂದಿರುತ್ತವೆ ಎಂಬ ಭಾವನೆ ಕಡಿಮೆ ಆದಾಯ ಗಳಿಸುವ ಜನ ಸಾಮಾನ್ಯರೂ ಕೂಡ ಅಂತಹ ಶಾಲೆಗಳತ್ತ ಮುಖ ಮಾಡುವಂತಾಗಿದೆ.

ಗ್ರಾಮೀಣ ಭಾಗದಲ್ಲಿ ಸಾಕಷ್ಟು ಸುಸಜ್ಜಿತ ಸರ್ಕಾರಿ ಶಾಲೆಗಳಿದ್ದರೂ ಹೆಚ್ಚಿನ ಪಾಲಕರು ಖಾಸಗಿ ಇಂಗ್ಲೀಷ್ ಮಾಧ್ಯಮ ಶಾಲೆಗಳತ್ತ ಆಸಕ್ತರಾಗಿರುವುದು ಕಂಡುಬರುತ್ತಿದೆ. ಇದಕ್ಕೆ ಇಂಬು ಕೊಡುವಂತೆ ಖಾಸಗಿ ಶಾಲೆಗಳು ನಾಯಿಕೊಡೆಗಳಂತೆ ಸ್ಥಾಪನೆಗೊಳ್ಳುತ್ತಿವೆ. ಗ್ರಾಮೀಣ ಬಡ ಕೂಲಿ ಕಾರ್ಮಿಕರು, ರೈತರು ಇಂತಹ ಶಾಲೆಗಳತ್ತ ಆಸಕ್ತರಾಗುತ್ತಿದ್ದಾರೆ. ಸಾಲ ಮಾಡಿಯಾದರೂ ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಬೇಕೆಂಬ

ಬಯಕೆ ಅವರದು. ತಮ್ಮ ಮಕ್ಕಳ ಶಿಕ್ಷಣ ಸಂಬಂಧಿ ವೆಚ್ಚಗಳನ್ನು ಸರಿದೂಗಿಸುವ ಭರದಲ್ಲಿ ಗ್ರಾಮೀಣ ರೈತರು ತಮ್ಮ ರೈತಾಪಿ ಕೆಲಸಗಳಿಗೆ ಹಣ ಹೊಂದಿಸಲು ಸಾಲಕ್ಕೆ ಮೊರೆಹೋಗಬೇಕಾದ ಪರಿಸ್ಥಿತಿ ಎದುರಾಗಿದೆ.

ಸರ್ಕಾರಿ ಶಾಲೆಗಳಲ್ಲಿ ಉತ್ತಮ ಸೌಲಭ್ಯವಿದ್ದು, ನುರಿತ ಬೋಧನಾ ಸಿಬ್ಬಂದಿಗಳನ್ನೊಳಗೊಂಡು ಸುಸಜ್ಜಿತವಾಗಿದ್ದರೂ ಕೂಡ ಜನರಿಗೆ ಸರಕಾರಿ ಶಾಲೆಯ ಬಗ್ಗೆ ಅಸಡ್ಡೆಯ ಮನೋಭಾವನೆ ಮುಂದುವರೆದಿದೆ. ಖಾಸಗಿ ಶಾಲೆಗಳು ಅಧಿಕ ಶುಲ್ಕ ವಸೂಲು ಮಾಡಿದರೂ ಕೂಡ ಜನಸಾಮಾನ್ಯರು ತಮ್ಮ ಮಗು ವಿದ್ಯಾವಂತರಾಗಲೆಂಬ ಆಶಯದಿಂದ ಖಾಸಗಿ ಶಾಲೆಗಳತ್ತ ಆಸಕ್ತರಾಗುತ್ತಿದ್ದಾರೆ. ಹಾಗಾಗಿ ಶಿಕ್ಷಣ ಸಂಬಂಧಿ ವೆಚ್ಚಗಳು ಜನಸಾಮಾನ್ಯರ ಪರಿಧಿಗೆ ಮೀರಿ ಅಧಿಕವಾಗುತ್ತಿದೆ. ಬಡ ಮಧ್ಯಮ ವರ್ಗದವರಿಗೆ ಇದು ನುಂಗಲಾರದ ತುಪ್ಪದಂತಾಗಿದೆ. ಇದು ಹೀಗೆ ಮುಂದುವರಿದರೆ ಮಕ್ಕಳ ವಿದ್ಯಾಭ್ಯಾಸ ಬಡ ಪಾಲಕರ ಪಾಲಿಗೆ ಗಗನ ಕುಸುಮವಾಗುವುದಂತೂ ಸತ್ಯ.

ದೇಶದ ಬಡ, ಮಧ್ಯಮ ವರ್ಗಗಳನ್ನೊಳಗೊಂಡು ಎಲ್ಲಾ ವರ್ಗದವರಿಗೆ ಮೌಲ್ಯಯುತ ಶಿಕ್ಷಣ ದೊರಕಬೇಕು. ಇದಕ್ಕೆಲ್ಲ ಒಂದು ಮುಖ್ಯ ಪರಿಹಾರವೆಂದರೆ ಇಡೀ ದೇಶಕ್ಕೆ ಒಂದೇ ಸಿಲೆಬಸ್ ಒಳಗೊಂಡ ಕೇಂದ್ರೀಯ ಶಿಕ್ಷಣ ಪದ್ಧತಿ ಬೇಕು. ಮಧ್ಯಮ ವರ್ಗಕ್ಕೆ ಸೇರಿದ ಹೆಚ್ಚಿನ ಸರ್ಕಾರಿ ನೌಕರರು ಆಗಾಗ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ತಮ್ಮ ಸೇವಾವಧಿಯಲ್ಲಿ ವರ್ಗವಾಗಿ ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡುವ ಸಂದರ್ಭ ಅನಿವಾರ್ಯವಾಗಿ ಬಂದೊದಗಿರುತ್ತದೆ. ಒಂದೇ ರಾಜ್ಯದಲ್ಲಿ ಒಂದೇ ಶಿಕ್ಷಣ ಪದ್ಧತಿಯಿರುವ ಬೇರೆ ಬೇರೆ ಶಾಲೆಗಳಾದರೆ ತೊಂದರೆಯಿಲ್ಲದೆ ತಮ್ಮ ಮಕ್ಕಳ ಶಿಕ್ಷಣ ಮುಂದುವರೆಸಬಹುದು. ಆದರೆ, ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವರ್ಗವಾದಾಗ ಅಂತಹ ಪಾಲಕರಿಗೆ ಆತಂಕವಾಗುವುದು ಸಹಜ. ಪಾಲಕರ ಈ ತರದ ಆತಂಕವನ್ನು ಇಲ್ಲದಂತೆ ಮಾಡುವ ಒಂದು ಉತ್ತಮ ಪರಿಹಾರವೆಂದರೆ ದೇಶಕ್ಕೆ ಒಂದೇ ಸಿಲೇಬಸ್ ಇರುವ ಶಿಕ್ಷಣ ಪದ್ಧತಿಯನ್ನೊಳಗೊಂಡ ಕೇಂದ್ರೀಯ ವಿದ್ಯಾಲಯಗಳನ್ನು ಹೆಚ್ಚು ಹೆಚ್ಚು ಸ್ಥಾಪಿಸುವುದು.

ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವರ್ಗಾವಣೆಗೆ ಒಳಪಡುವ ಕೇಂದ್ರ ಸರ್ಕಾರದ ನೌಕರರ ಮಕ್ಕಳಿಗೆ ಅಡೆತಡೆಯಿಲ್ಲದೆ ಶಿಕ್ಷಣ ಪೂರೈಸುವ ನಿಟ್ಟಿನಲ್ಲಿ 1962ರಲ್ಲಿ ಕೇಂದ್ರೀಯ ವಿದ್ಯಾಲಯ ಸ್ಥಾಪನೆಗೊಂಡಿತು. 1863ರಲ್ಲಿ ಸೆಂಟ್ರಲ್ ಸ್ಕೂಲ್ ಹೆಸರಿನಲ್ಲಿ ಸ್ಥಾಪನೆಗೊಂಡು ಕೇಂದ್ರೀಯ ವಿದ್ಯಾಲಯವೆಂದು ಹೆಸರು ಪಡೆದುಕೊಂಡಿತು. ಜುಲೈ 2019ರ ಹೊತ್ತಿಗೆ ಭಾರತದಲ್ಲಿ ಕೇವಲ 1225 ಕೇಂದ್ರೀಯ ವಿದ್ಯಾಲಯಗಳಿವೆ. ನಗರ ಪ್ರದೇಶಗಳಲ್ಲಿ ಮಾತ್ರ ಬೆರಳೆಣಿಕೆಯಷ್ಟು ಕೇಂದ್ರೀಯ ವಿದ್ಯಾಲಯಗಳು ಸ್ಥಾಪನೆಗೊಂಡಿದೆ. ಬಡಜನರ ಕೈಗೆಟುಕುವಂತೆ ಗ್ರಾಮೀಣ ಪ್ರದೇಶಗಳಲ್ಲಿಯೂ ಕೂಡ ಸಾಕಷ್ಟು ಕೇಂದ್ರೀಯ ವಿದ್ಯಾಲಯಗಳ ಸ್ಥಾಪನೆಯಾಗಬೇಕು. ಈಗಾಗಲೇ ಇದ್ದದ್ದು ಅತೀ ಕಡಿಮೆ ಸಂಖ್ಯೆಯದ್ದು, ವರ್ಗಾವಣೆಗೊಳಪಡುವ ಸರ್ಕಾರಿ ನೌಕರರಿಗೆ ಮಾತ್ರವಲ್ಲದೆ ಎಲ್ಲಾ ಜನಸಾಮಾನ್ಯರಿಗೂ ಕೈಗೆಟುಕುವ ದರದಲ್ಲಿ ಮೌಲ್ಯಯುತ. ಸತ್ವಯುತ ಶಿಕ್ಷಣ ಬೇಕು. ಮೂಲ ಸೌಕರ್ಯಗಳ ಜೊತೆಗೆ ನುರಿತ ಶಿಕ್ಷಕ ವೃಂದವು ಬೇಕೆ ಬೇಕು.

ಖಾಸಗಿ, ಪಬ್ಲಿಕ್ ಅಥವಾ ಸರ್ಕಾರಿ ಸೇವೆಯಲ್ಲಿರುವವರು ನ್ಯಾಯಯುತ ತೆರಿಗೆ ಪಾವತಿಸುವವರು. ದುಡಿದ ಹಣದ ಒಂದು ಭಾಗವನ್ನು ಪ್ರಾಮಾಣಿಕವಾಗಿ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಹಣ ಪಾವತಿಸುವವರು. ಸರ್ಕಾರಕ್ಕೆ ತೆರಿಗೆಯ ರೂಪದಲ್ಲಿ ಸಲ್ಲಿಸಿದ ಹಣ ಸದುಪಯೋಗವಾಗಲೆಂಬುದು ಭಾರತದ ಮಧ್ಯಮ ವರ್ಗದ ಜನರ ಆಶಯ. ನ್ಯಾಯವಾಗಿ ಸರ್ಕಾರಕ್ಕೆ ಪಾವತಿಸಿದ ಹಣದ ಹೆಚ್ಚಿನ ಭಾಗ ಶಿಕ್ಷಣಕ್ಕೆ ಒತ್ತು ಕೊಡುವಲ್ಲಿ ವ್ಯಯಿಸಲಿ. ಕೇಂದ್ರೀಯ ವಿದ್ಯಾಲಯದ ಮಾದರಿಯಲ್ಲಿ ಇಡೀ ದೇಶಕ್ಕೆ ಏಕ ರೂಪ ಶಿಕ್ಷಣ ಜಾರಿಯಾಗಲಿ. ಜನಸಾಮಾನ್ಯರಿಗೆ ಕೈಗೆಟುಕುವ ದರದಲ್ಲಿ ಉತ್ತಮ, ಮೌಲ್ಯಯುತ ಶಿಕ್ಷಣ ನಮ್ಮ ವಿದ್ಯಾರ್ಥಿಗಳಿಗೆ ಸಿಗುವಂತಾಗಲಿ. ' ಶಿಕ್ಷಣವೆಂದರೆ ವ್ಯಕ್ತಿತ್ವ ನಿರ್ಮಾಣ, ವ್ಯಕ್ತಿತ್ವ ನಿರ್ಮಾಣದ ಮೂಲಕ ಚಾರಿತ್ರ್ಯ ನಿರ್ಮಾಣ, ಚಾರಿತ್ರ್ಯ ನಿರ್ಮಾಣದಿಂದ ಮಾತ್ರವೇ ರಾಷ್ಟ್ರ ನಿರ್ಮಾಣ' ಎಂಬ ಸ್ವಾಮಿ ವಿವೇಕಾನಂದರ ಅಭಿಪ್ರಾಯ ನಿಜವಾಗಲಿ.

ನಮ್ಮ ಮಕ್ಕಳಿಗೆ ಮಾತೃಭಾಷೆಯ ಜೊತೆಗೆ ಇಂಗ್ಲಿಷ್ ಮಾಧ್ಯಮದಲ್ಲಿಯೂ ಶಿಕ್ಷಣ ದೊರೆಯಲಿ. ಬುದ್ಧಿ ವಿಕಸನಕ್ಕೆ ಅಗತ್ಯವಾದ ಮಾತೃ ಭಾಷೆ ಶಿಕ್ಷಣದ ಜೊತೆಗೆ ಜ್ಞಾನ ಅಭಿವೃದ್ಧಿಗೆ ಅವಶ್ಯಕವಾದ ಇಂಗ್ಲಿಷ್ ಭಾಷಾ ಶಿಕ್ಷಣ ನಮ್ಮ ಮಕ್ಕಳಿಗೆ ಸಿಗುವಂತಾಗಲಿ. ವಿಜ್ಞಾನ, ತಂತ್ರಜ್ಞಾನದ ಬಗ್ಗೆ ಸ್ಥಳೀಯ ಭಾಷೆಯಲ್ಲಿ ಹೆಚ್ಚು ಹೆಚ್ಚು ಪುಸ್ತಕಗಳು ಪ್ರಕಟವಾಗಲಿ. ನೈತಿಕತೆ, ಉತ್ತಮ ಸಂಸ್ಕಾರವನ್ನೊಳಗೊಂಡ ಶಿಕ್ಷಣದ ಜೊತೆಗೆ ರಾಷ್ಟ್ರೀಯ ಹಾಗೂ

ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಿ ಸಮರ್ಥರೆನಿಸಿಕೊಳ್ಳುವ ಉತ್ತಮ ಶಿಕ್ಷಣ ನಮ್ಮ ಮಕ್ಕಳಿಗೆ ಸಿಗುವಂತಾಗಲಿ. ಬಡ ಹಾಗೂ ಕೆಳ ಮಧ್ಯಮ ವರ್ಗದವರಿಗೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕೆಂಬ ಕನಸು ಮರೀಚಿಕೆಯಾಗದಿರಲಿ.

ಗೀತಾ ಅವಧಾನಿ, ಉತ್ತರ ಕನ್ನಡ

ಆಧಾರ–ವಿಶ್ವವಾಣಿ 11.12.2019

7. ಡಿಜಿಟಲ್ ಯುಗದಲ್ಲಿ ಕನ್ನಡದ ಅಸ್ಮಿತೆ

'ಡಿಜಿಟಲ್ ಯುಗದಲ್ಲಿ ಕನ್ನಡದ ಅಸ್ಮಿತೆ'ಯನ್ನು ಕಾಯ್ದುಕೊಳ್ಳುವಲ್ಲಿ ಇಂದು ಹಲವಾರು ಸವಾಲುಗಳಿವೆ. ಏಕೆಂದರೆ ಇದು, ಕನ್ನಡ ಭಾಷೆ ಮತ್ತು ಸಂಸ್ಕೃತಿಗಳ ಮಟ್ಟಿಗೆ ಸಂಕ್ರಮಣ ಕಾಲ. ಇದು ವಿಶ್ವದ ಎಲ್ಲ ಭಾಷೆಗಳ ಎಲ್ಲ ಮಾಹಿತಿಯೂ ಮರು ಜೋಡಣೆಯಾಗುತ್ತಿರುವ ಮಹತ್ವದ ಕಾಲ. ಈವರೆಗೂ ಬಾಯಿಂದ ಬಾಯಿಗೆ ಮತ್ತು ಸ್ವಲ್ಪ ಮಟ್ಟಿಗೆ ಲಿಖಿತ ರೂಪದಲ್ಲಿ ಪ್ರಕಟಗೊಂಡು ಹರಿದ ಮಾಹಿತಿಯೆಲ್ಲ ಇಂದು, ಎಲ್ಲರಿಗೂ ಲಭ್ಯವಿರುವ ಹಾಗೆ, ಸಂಕೀರ್ಣ ಸಂವಹನ ಜಾಲದಲ್ಲಿ ಸೇರುತ್ತಿದೆ! ಈ ವ್ಯವಸ್ಥೆಯಲ್ಲಿ ನಾವಿಂದು ಬರೆದದ್ದೇ ಇತಿಹಾಸ, ಇಂದು ಪೇರಿಸುತ್ತಿರುವುದೇ ನಿಖರ, ನಿಷ್ಠುರ ಮಾಹಿತಿ! ಸ್ವಲ್ಪ ಎಚ್ಚರ ತಪ್ಪಿದರೂ ನಮ್ಮ ಭಾಷೆ, ಸಂಸ್ಕೃತಿ, ವಿಚಾರಗಳು ಗೌಣವಾಗಿ ಬಿಡುವ ಸಾಧ್ಯತೆ ಇರುವುದರಿಂದ.. ಜವಾಬ್ದಾರಿಯಿಂದಿರಬೇಕಾದ ಕಾಲವಿದು. ಹೀಗಾಗಿ, ಇದು ಸಂಕ್ರಮಣ ಕಾಲ!

ಅಸ್ಮಿತೆಯ ಕುರಿತಾದ ಸವಾಲುಗಳಲ್ಲಿ ನನಗೆ ಪ್ರಮುಖವಾಗಿ ಕಂಡದ್ದು ಭಾಷೆಯ ಪರಿಶುದ್ಧತೆ, ಪ್ರಾಯೋಗಿಕತೆ ಮತ್ತು ಪರಿಪಕ್ವತೆಯ ಕುರಿತಾದ ಗೊಂದಲಗಳು, ನಮ್ಮ ಭಾಷೆ ಪ್ರಾಯೋಗಿಕ ರೂಪ ಪಡೆದಾಗ, ಅಂದರೆ, ಆಂಗ್ಲ, ಹಿಂದಿ ಮತ್ತಿತರ ಭಾಷೆಗಳೊಡನೆ ಬೆರೆತುಹೋಗಿರುವ ನಮ್ಮ ಸಂಸ್ಕೃತಿಯಲ್ಲಿ, ದೃಶ್ಯವೇ (ಚಿತ್ರ, ವಿಡಿಯೋ) ಪ್ರಮುಖವಾಗುತ್ತಿರುವ ಸಾಮಾಜಿಕ ಮಾಧ್ಯಮಗಳಲ್ಲಿ ಭಾಷೆಯ ಪರಿಶುದ್ಧತೆಗೆ ಧಕ್ಕೆಯಾಗುತ್ತಿದೆಯೇ? ಹಾಗೆಯೇ ಡಿಜಿಟಲ್ ಪ್ರಪಂಚದ ಹೊಸ ಪದಗಳನ್ನು ನಮ್ಮ ಭಾಷೆಗೆ ತರ್ಜುಮೆ ಮಾಡಲಾಗದೆ, ಮಾಹಿತಿ ಯುಗದ ನವೀನ ಪರಿಕಲ್ಪನೆಗಳನ್ನು ಕನ್ನಡದಲ್ಲಿ ಹಿಡಿದಿಡಲಾಗದೆ, ಜನಮಾನಸದಲ್ಲಿ ಈವರೆಗಿದ್ದ ಭಾಷೆಯ ಪರಿಪಕ್ವತೆಯ ಭಾವನೆ ಸಡಿಲಾಗುತ್ತಿದೆಯೇ? ಕನ್ನಡವನ್ನು ಯುವಜನರಿಗೆ ನಿಲುಕುವಂತೆ ಮಾಡುವ ದೃಷ್ಟಿಯಿಂದ, ಡಿಜಿಟಲ್ ಪ್ರಪಂಚದ ಹೊಸ ಮಾಧ್ಯಮಗಳಿಗೆ ಮತ್ತು ವೇದಿಕೆಗಳಿಗೆ ಹೊಂದಿಸುವ, ಕನ್ನಡವನ್ನು ಆನ್‌ಲೈನ್ ಪ್ರಪಂಚದಲ್ಲಿ ಪ್ರಾಯೋಗಿಕವಾಗಿಸುವ ಪ್ರಯತ್ನಗಳು, ಭಾಷೆಯ ಪರಿಶುದ್ಧತೆ ಮತ್ತು ಪರಿಪಕ್ವತೆಯ ದೃಷ್ಟಿಯಿಂದ ಮಾರಕವೋ? ಪೂರಕವೋ? ಇದು ರಾಜಿಯೋ? ಹೊಂದಾಣಿಕೆಯೋ?

ಈ ಹೊತ್ತು ಕನ್ನಡದ ಬಗ್ಗೆ ಅನೇಕ ಆತಂಕಗಳಿವೆ. ಸಾಮಾನ್ಯವಾಗಿ ಕೇಳಿಬರುವ ಮೂರು–ಭಾಷೆ ಪಾಳಾಗುತ್ತಿದೆ, ಜಾಳಾಗುತ್ತಿದೆ ಮತ್ತು ಹಾಳಾಗುತ್ತಿದೆ ಎಂಬುದು! ಪಾಳಾಗುತ್ತಿದೆ ಎಂದರೆ ಹಳತಾಗುತ್ತಿದೆ, ಶಿಥಿಲವಾಗುತ್ತಿದೆ ಮತ್ತು ಪ್ರಸ್ತುತತೆ ಕಳೆದುಕೊಳ್ಳುತ್ತಿದೆ ಎಂಬರ್ಥ. ಜಾಳಾಗುತ್ತಿದೆ ಎಂದರೆ, ಮೂಲಕ್ಕೆ ಅಪಚಾರವಾಗುವಂತೆ ಕಲುಷಿತಗೊಂಡು, ಬೇರೆ ಭಾಷೆಗಳ ಕಲಬೆರಕೆಯಾಗಿ ಬಳಕೆಯಾಗುತ್ತಿದೆ ಎಂಬರ್ಥ. ಹಾಳಾಗುತ್ತಿದೆ ಎಂದರೆ, ಬಳಕೆ ಕಡಿಮೆಯಾಗುತ್ತಿದೆ, ಕುಸಿಯುತ್ತಿದೆ ಮತ್ತು ಸವಕಲಾಗುತ್ತಿದೆ ಎಂಬರ್ಥ ಆತಂಕಗಳು.

ಈ ಆತಂಕಗಳು ಸಮಂಜಸವೇ? ಸಕಾರಣವಾಗಿವೆಯೆ? ಇವಕ್ಕೆಲ್ಲ ನಮ್ಮಲ್ಲಿ ಪರಿಹಾರಗಳಿವೆಯೇ? ಡಿಜಿಟಲ್ ಪ್ರಪಂಚದಲ್ಲಿ ಕನ್ನಡ ತನ್ನ ಸುಂದರ ಮತ್ತು ಸಮೃದ್ಧ ಸ್ವರೂಪದಲ್ಲಿ ದೃಢವಾಗಿ ನಿಲ್ಲಬಲ್ಲುದೇ? ಅದನ್ನು ಚರ್ಚೆಗಿಡುವುದು ಈ ಮಾತುಗಳ ಉದ್ದೇಶ.

ನನ್ನ ಅಭಿಪ್ರಾಯದಲ್ಲಿ ಇದು ಆತಂಕದ ಕಾಲವಲ್ಲ. ನಿರೀಕ್ಷೆಯ ಕಾಲ, ಜಾಗ್ರತೆಯ ಅಗತ್ಯವಿದೆ. ಆದರೆ ನಿರಾಶಾವಾದ ಬೇಕಿಲ್ಲ. ನಮ್ಮ ಕನ್ನಡದ ಕಟ್ಟಾಳುಗಳು ಇಂದು ಪಾಳಿಯಲ್ಲಿದ್ದಾರೆ. ಕನ್ನಡದ ಕೋಟೆಗೆ ಡಿಜಿಟಲ್ ತಂತ್ರಜ್ಞಾನ ತಂದೊಡ್ಡಿರುವ ಸವಾಲುಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಈ ಗೋಷ್ಠಿಯ ಶೀರ್ಷಿಕೆಯಾದ 'ಡಿಜಿಟಲ್ ಯುಗದಲ್ಲಿ ಕನ್ನಡದ ಅಸ್ಮಿತೆ' ಎನ್ನುವುದಕ್ಕೆ ಸವಾಲಿನ ರೂಪವಿದ್ದರೆ, ಉಪಶೀರ್ಷಿಕೆಯಾದ 'ಆನ್ಲೈನ್ ಕಾಲಘಟ್ಟದಲ್ಲಿ ಕನ್ನಡಾಭಿಮಾನದ ಬಹುರೂಪ' ಎನ್ನುವುದು ಪರಿಹಾರ ಸ್ವರೂಪಿಯಾಗಿದೆ.

ದೃಷ್ಟಾಂತವೆಂಬಂತೆ, ಮೇಲೆ ಹೇಳಿದ ಮೂರು ಸವಾಲುಗಳನ್ನೇ ನೋಡೋಣ. ಮೊದಲಿಗೆ ಭಾಷೆ ಹಾಳಾಗುತ್ತಿದೆ ಅಥವಾ ಶಿಥಿಲವಾಗುತ್ತಿದೆ ಎನ್ನುವ ಸವಾಲು. ಇದಕ್ಕೆ ಇಂದಿನ ಡಿಜಿಟಲ್ ಯುಗದಲ್ಲಿ ಸುಲಭದ ಪರಿಹಾರ ಮಾರ್ಗಗಳಿವೆ. ತಂತ್ರಜ್ಞಾನ ಮತ್ತು ಉದ್ಯಮ ಕೇಂದ್ರಿತವಾಗುತ್ತಿರುವ ಜಗತ್ತು ನಮ್ಮ ಮೇಲೆ ಹೊಸ ಪದಗಳನ್ನೂ ಪದಪುಂಜಗಳನ್ನೂ ಸೃಷ್ಟಿಸಬೇಕಾದ, ಅವುಗಳನ್ನು ನಮ್ಮದಾಗಿಸಿಕೊಳ್ಳಬೇಕಾದ ಒತ್ತಡವನ್ನು ಹೇರಿದೆ. ಇದನ್ನು ಸಕಾರಾತ್ಮಕವಾದ ಒತ್ತಡ ಎಂದು ಪರಿಗಣಿಸಿದ್ದೇ ಆದರೆ, ಇದು ಹೊಸ ರೂಪಕಗಳ ಸೃಷ್ಟಿಗೆ ಸಕಾಲ. ಏಕೆಂದರೆ, ಈವರೆಗೆ ಭಾಷೆ ತಾನಾಗಿಯೇ ಒಳಗೊಂಡ ಶಬ್ದಗಳನ್ನು ಪುನರ್ ಪರಾಮರ್ಶಿಸುವ ಮತ್ತು ಹೊಸದಾಗಿ ಕನ್ನಡಕ್ಕೆ ಹರಿದು ಬರುತ್ತಿರುವ ಪದಗಳನ್ನು ಒಮ್ಮೆ ಸರಿಯಾಗಿ 'ಫ್ರಿಸ್ಕ್' ಮಾಡಿ/ಮೈದಡವಿ, ಶೋಧಿಸಿ, ಸಂಶೋಧಿಸಿ ಒಳಗೆ ಬಿಟ್ಟುಕೊಳ್ಳುವ ಸದಾವಕಾಶ ಈಗ, ಅಂದರೆ ಜಗತ್ತಿನ ಮಾಹಿತಿಯೆಲ್ಲವೂ ಮರು ಜೋಡಣೆಯಾಗುತ್ತಿರುವ ಹೊತ್ತಿನಲ್ಲಿ ಬಂದೊದಗಿದೆ. ಇಂದಿನ ತಂತ್ರಜ್ಞಾನ ತಂದೆಸೆದಿರುವ ಪದಗಳನ್ನು ಆಂಗ್ಲ ಭಾಷೆಯ ಪದಗಳು ಎಂದು ನಾವು ಪರಿಗಣಿಸಿದರೆ ಅದು ಸಂಕುಚಿತ ದೃಷ್ಟಿಯಾದೀತು. ಆ ಪದಗಳನ್ನು ಹೊಸ ಪ್ರಪಂಚಕ್ಕೆ ಒಗ್ಗಿಕೊಳ್ಳಲು ನಮಗೆ ಬೇಕಾದ ಸಲಕರಣೆಗಳೆಂದು ಬಗೆದರೆ, ಕೆಲವನ್ನು ಮೂಲರೂಪದಲ್ಲೇ ಉಳಿಸಿಕೊಂಡು, ಕೆಲವನ್ನು ಸ್ವಲ್ಪ ಬದಲಾಯಿಸಿಕೊಂಡು, ಅನೇಕ ಪದಗಳನ್ನು ನಮ್ಮ ಭಾಷೆಗೆ ತರ್ಜುಮೆ ಮಾಡಿಕೊಂಡು ಅಥವಾ ಹೊಸ ಪದಗಳನ್ನು ಸೃಷ್ಟಿಸಿಕೊಂಡು ನಮ್ಮ ಭಾಷೆ ಮತ್ತು ಸಂಸ್ಕೃತಿಗಳಿಗೆ ಒಗ್ಗಿಸಿಕೊಳ್ಳುವ ಅಪೂರ್ವ ಅವಕಾಶ ನಮ್ಮದಾಗಿದೆ. ಭಾಷೆ ಶಿಥಿಲವಾಗುತ್ತಿದೆ ಎಂಬ ನಕಾರಾತ್ಮಕತೆಯನ್ನು ಬಿಟ್ಟು, ಇದು ಹೊಸ ಭಾಷಾಸೃಷ್ಟಿಯ ಅವಕಾಶ ಎಂದು ನೋಡುವ ಸಕಾರಾತ್ಮಕ ದೃಷ್ಟಿಕೋನವೊಂದಿದ್ದರೆ ಇದು ಭಾಷೆಯ ಮಟ್ಟಿಗೆ ಮಹತ್ವಾಕಾಂಕ್ಷೆಯ ಘಟ್ಟ.

ಇನ್ನು ಭಾಷೆ ಜಾಳಾಗುತ್ತಿರುವ ಸಮಸ್ಯೆ. ನನ್ನ ಅಭಿಪ್ರಾಯದಲ್ಲಿ ಕಳೆದೆರಡು ದಶಕಗಳಲ್ಲಿ ಭಾಷೆ ಜಾಳಾಗಲು ಕಾರಣ ಸಮೂಹ ಮಾಧ್ಯಮಗಳು. ಅದರಲ್ಲೂ ಪ್ರಮುಖವಾಗಿ ದೃಶ್ಯ ಶ್ರವಣ ಮಾಧ್ಯಮಗಳು, ಏಕೆಂದರೆ ದೃಶ್ಯ ಶ್ರವಣ ಮಾಧ್ಯಮಗಳಿಗೆ ಇದ್ದದ್ದು ಕಟ್ಟಕಡೆಯ ವ್ಯಕ್ತಿಯನ್ನೂ ತಲಪಬೇಕು ಎನ್ನುವ ಹಂಬಲ. ಎಲ್ಲರಿಗೂ ಅರ್ಥವಾಗುವ ಕೆಲವೇ ಪದಗಳುಳ್ಳ, ಅತೀ ಸರಳವಾದ ಭಾಷೆಯಲ್ಲಿ ಅವರ ವಿಚಾರಗಳನ್ನು ಹೇಳಬೇಕಿತ್ತು. ಈ ಅನಿವಾರ್ಯತೆಯಿಂದಾಗಿ ಮಾಧ್ಯಮಗಳು ಸ್ಪರ್ಧೆಗೆ ಬಿದ್ದು ಭಾಷೆಯಲ್ಲಿನ ಪದಗಳನ್ನೂ ಶ್ರೀಮಂತಿಕೆಯನ್ನೂ ಸಂಕೀರ್ಣತೆಯನ್ನೂ ಕಡಿಮೆ ಮಾಡಿದವು. ಕಳೆದ ಒಂದೆರಡು ದಶಕಗಳಿಂದ ನಾವೆಲ್ಲರೂ ಕಂಡಿರುವಂತೆ 400–500 ಪದಗಳ ವೊಕ್ಯಾಬುಲರಿಯಲ್ಲೇ ಹೇಗೋ ಸಮೂಹ ಮಾಧ್ಯಮಗಳು ತಮ್ಮ ಕೆಲಸಮಾಡಿ ಮುಗಿಸುತ್ತಿವೆ! ಸಾಮಾಜಿಕ ಮಾಧ್ಯಮಗಳಲ್ಲಿ ಮತ್ತು ಡಿಜಿಟಲೀಕರಣಗೊಂಡ ಪ್ರಪಂಚದಲ್ಲಿ ಇಂಥ ಅನಿವಾರ್ಯತೆ ಇಲ್ಲ. ಏಕೆಂದರೆ ಒಂದೇ ವಾಹಿನಿಯ ಮೂಲಕ ಸಮೂಹ ಮಾಧ್ಯಮಗಳಷ್ಟು ದೊಡ್ಡ ಜನಸಂಖ್ಯೆಯನ್ನು ತಲುಪಬೇಕಾದ ಅನಿವಾರ್ಯತೆ ಇಲ್ಲ. ಇಲ್ಲಿ ಸಣ್ಣ ಗುಂಪುಗಳು, ಅತಿಸಣ್ಣ ಗುಂಪುಗಳು ಮತ್ತು ಸ್ವಲ್ಪ ವಿಸ್ತೃತವಾದ ಗುಂಪುಗಳು ಎಲ್ಲವೂ ಇವೆ. 'ನೀಷ್'ಗಳಿಗೆ ಇಲ್ಲಿ ಅವಕಾಶವಿದೆ. ಹಾಗಾಗಿ ಅವಶ್ಯಕತೆಗೆ ತಕ್ಕಂತೆ ಪದಬಳಕೆ ಮಾಡಲು ಅವಕಾಶವಿದೆ. ಹಾಗಾಗಿಯೇ ಡಿಜಿಟಲ್ ಪ್ರಪಂಚಕ್ಕೆ ಭಾಷೆಯನ್ನು ತನ್ನಂತಾನೆ ಸಂಸ್ಕರಿಸುವ ಸಾಮರ್ಥ್ಯವು ಇದೆ. ಅದಕ್ಕೊಂದು ಸರಳ ಉದಾಹರಣೆ ಮುಂದೊಮ್ಮೆ ನಾವು ಕನ್ನಡ ಕೀಲಿಮಣೆ ಉಪಯೋಗಿಸಿ ಟೈಪ್ ಮಾಡುತ್ತಿದ್ದರೆ, ಸ್ಮಾರ್ಟ್ ಫೋನ್‌ಗಳಲ್ಲಿರುವಂತೆ ನಾವು ಪದ ಟೈಪ್ ಮಾಡಲು ಆರಂಭಿಸುತ್ತಿದ್ದಂತೆ ಆ ಕೀಲಿಮಣೆಯೇ ನಮಗೆ ಪರ್ಯಾಯ ಪದಗಳ ಆಯ್ಕೆ ಕೊಡಲಿದೆ. ದಿನಕ್ಕೆ ಹತ್ತಾರು ಗಂಟೆಗಳ ಕಾಲ ಇಂಥ ಕೀಲಿಮಣೆಯನ್ನು ಬಳಸಿ ವ್ಯವಹರಿಸುವ ಜನರು ನೂರಾರು ಹೊಸ ಪದಗಳನ್ನು ನೋಡುತ್ತಾರೆ. ಅವು ತಮ್ಮ ಸಂಭಾಷಣೆಯ ಸಂದರ್ಭಕ್ಕೆ ಅನುಕೂಲಕರವೆನ್ನಿಸಿದರೆ ಬಳಸುತ್ತಾರೆ. ಒಂದೆರಡು ಬಾರಿ ಬಳಕೆಯಾಗುತ್ತಿದ್ದಂತೆ, ಆ ಪದ ಅಂತರ್ಗತವಾಗುತ್ತದೆ. ಹೀಗೆ ಅನೇಕ ಜನರು ಹೊಸ ಪದಗಳನ್ನು ಬಳಸುತ್ತಾ ಹೋದಂತೆ, ಕೆಳಗೆ ಲಭ್ಯವಾಗುವ ಪದಗಳ ಪ್ರಾಂಪ್ಟ್‌ಗಳು/ ಸೂಚನೆಗಳು ನಿತ್ಯ ನೂತನವಾಗುತ್ತದೆ. ಉತ್ತಮವಾಗುತ್ತಾ ಹೋಗುತ್ತವೆ. ಇದರಿಂದಾಗಿ ಭಾಷೆ ಸಮೃದ್ಧವಾಗುವ ಸಾಧ್ಯತೆಯಿದೆ. ಆದರೆ, ಇಲ್ಲಿ ನಾವು ಎಚ್ಚರಿಕೆಯಿಂದ ಇರಬೇಕಾದ್ದು, ಎಐ ಮತ್ತು ಎಮ್‌ಎಲ್‌ಗಳ ಬಗ್ಗೆ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮತ್ತು ಮಶೀನ್ ಲರ್ನಿಂಗ್–ಇವುಗಳು ನಮ್ಮನ್ನು ಒಂದು ದಿಕ್ಕಿಗೆ ದೂಡುವ ಶಕ್ತಿ ಹೊಂದಿವೆ. ಹೇಗೆ ಸಮೃದ್ಧವಾದ ಭಾಷೆಯ ಬಳಕೆ ತನ್ನಂತಾನು ಇನ್ನಷ್ಟು ಶ್ರೀಮಂತಗೊಳಿಸಬಹುದೋ, ಹಾಗೆಯೇ ಅತ್ಯಂತ ಜಾಳು ಜಾಳದ ಭಾಷೆಯಲ್ಲಿ ಹೆಚ್ಚು ಹೆಚ್ಚು ಜನ ವ್ಯವಹರಿಸಿದರೆ, ಅದೇ ಭಾಷೆಗೆ ಮುಳುವಾಗಿಬಿಡುವ ಸಾಧ್ಯತೆಗಳು ಇವೆ! ಇದೊಂದು ರೀತಿಯಲ್ಲಿ 'ಸೆಲ್ಫ್–ಫುಲ್‌ಫುಲಿಂಗ್, ಸೆಲ್ಫ್–ಡಿಫೀಟಿಂಗ್ ಪ್ರೋಫೆಸಿ'. ಹಾಗಾಗಿ ಮುಂಚಿನ ಕೆಲವು

ವರ್ಷಗಳಲ್ಲಿ ಪ್ರಯತ್ನ ಪೂರ್ವಕವಾಗಿ ಒಳ್ಳೆಯ ಭಾಷೆಯನ್ನು ನಾವು ತಂತ್ರಜ್ಞಾನ ಕೇಂದ್ರಿತ ಜಗತ್ತಿಗೆ ಊಡಿಸಿದರೆ ಅದು ಇನ್ನಷ್ಟು ಶ್ರೀಮಂತ ಸ್ವರೂಪ ಪಡೆದುಕೊಳ್ಳುವ ಸಾಧ್ಯತೆ ಹೆಚ್ಚು ಹಾಗೆಯೇ ನಮ್ಮ ಭಾಷಾ ವ್ಯವಹಾರ ಮೊದಲ ಕೆಲವು ವರ್ಷಗಳಲ್ಲಿ ಜಾಳಾಗಿದ್ದರೆ, ಅದೇ ಮುಂದೆ ಚಿರಸ್ಥಾಯಿಯಾಗಿ ಬಿಡುವ ಸಾಧ್ಯತೆಗಳೂ ಇವೆ. ಹಾಗಾಗಿ ಎಐ ಮತ್ತು ಎಮ್‌ಎಲ್ ಎಂಬ ಪೆಡಂಭೂತಗಳ ಬಗ್ಗೆ ನಾವು ಜಾಗೃತರಾಗಿದ್ದು, ಸಾಮಾನ್ಯ ಜನರಾಗಿ ಮತ್ತು ಸಂಘಟಿತ ಗುಂಪುಗಳಾಗಿ ಅಂತರ್ಜಾಲಕ್ಕೆ ಮತ್ತು ಡಿಜಿಟಲ್ ಪ್ರಪಂಚಕ್ಕೆ ಸಮೃದ್ಧವಾದ ಭಾಷೆಯನ್ನು ಕಲಿಸಬೇಕಿದೆ.

ಮೂರನೆಯ ಸವಾಲು ಭಾಷೆ ಹಾಳಾಗುತ್ತಿದೆ ಎನ್ನುವುದು. ಇಂದು ಅತ್ಯಂತ ಸಂಕೀರ್ಣವಾದ ಮತ್ತು ಅತ್ಯಂತ ನವೀನವಾದ ವಿಷಯಗಳು ಕನ್ನಡ ಭಾಷೆಯಲ್ಲಿ ಲಭ್ಯ. ಪ್ರಾಜ್ಞರು ಮತ್ತು ಸಮುದಾಯಗಳನ್ನು ಬಳಸಿಕೊಂಡು ಕೆಲಸ ಮಾಡುತ್ತಿರುವ ಸಂಘಟಕರು ತಮ್ಮದೇ ಖರ್ಚಿನಲ್ಲಿ ಅತ್ಯಂತ ಕ್ಲಿಷ್ಟವಾದ, ಸಂಕೀರ್ಣವಾದ ವಿಷಯಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿಕೊಡುತ್ತಿದ್ದಾರೆ. ಹಾಗೆಯೇ ಈವರೆಗೆ ಡಿಜಿಟಲ್ ರೂಪದಲ್ಲಿ ಲಭ್ಯವಿರದ, ಕನ್ನಡದಲ್ಲಿ ಸೃಷ್ಟಿಯಾದ ಬರವಣಿಗೆಗಳೂ ಇಂದು ಕ್ಷಿಪ್ರಗತಿಯಲ್ಲಿ ಡಿಜಿಟಲ್ ರೂಪ ಪಡೆಯುತ್ತಿವೆ. ಕೇವಲ ಲಭ್ಯತೆಯ ದೃಷ್ಟಿಯಿಂದ ಮಾತ್ರ ನೋಡಿದಾಗಲೂ ಇಂದು ಶಿಕ್ಷಣಕ್ಕೆ ಬೇಕಾದ ಪುಸ್ತಕಗಳು, ಸಾಮಾನ್ಯ ಕಲಿಕೆಗೆ ಬೇಕಾದ ವಿಷಯಗಳು, ಅನ್ನ ಹುಟ್ಟಿಸಿಕೊಳ್ಳಲು ಬೇಕಾಗಿರುವ ಕಲಿಕೆ, ಹಾಗೆಯೇ ಇವೆಲ್ಲಕ್ಕೂ ಮೀರಿದ ಆತ್ಮಸಂತೋಷದ ಜ್ಞಾನಾರ್ಜನೆಗೆ ಬೇಕಾದ ಪುಸ್ತಕಗಳು ಮತ್ತು ವಿಚಾರಗಳು ಇವೆಲ್ಲವೂ ಅಂತರ್ಜಾಲದಲ್ಲಿ ಸುಲಭವಾಗಿ ಮತ್ತು ಹೆಚ್ಚು ಕಡಿಮೆ ಉಚಿತವಾಗಿ ಲಭ್ಯ. ಭಾಷೆ ಬಳಕೆಯಲ್ಲಿದ್ದರೆ ಮತ್ತು ವಿವಿಧ ರೂಪ ಪ್ರಕಾರಗಳಲ್ಲಿ ಭಾಷೆಯನ್ನು ಬಳಸುವುದು ಸುಲಭವಾಗಿದ್ದರೆ, ಇತರ ಭಾಷೆಗಳ ಪ್ರಭಾವ ಹೆಚ್ಚಾದಷ್ಟೂ ಸ್ವಂತ ಭಾಷೆ. ಬಲಿಷ್ಠಗೊಳ್ಳಲಿದೆ ಎನ್ನುವುದಕ್ಕೆ ಯೂರೋಪಿಯನ್ ಭಾಷೆಗಳು ಉತ್ತಮ ಉದಾಹರಣೆಗಳಾಗಿವೆ, ಕನ್ನಡ ಸುಲಭವಾಗಿ ಡಿಜಿಟಲ್ ಮಾಧ್ಯಮಗಳಿಗೆ ವಿಸ್ತಾರಗೊಂಡು,ಹೊಂದಿಕೊಳ್ಳಲು ಪ್ರಯತ್ನಿಸುತ್ತಿದೆ. ಸ್ಪೀಚ್–ಟು–ಟೆಕ್ಸ್ಟ್ ಮತ್ತು ಟೆಕ್ಸ್ಟ್–ಟು–ಸ್ಪೀಚ್‌ನಂತಹ ಸಲಕರಣೆಗಳು ಭಾಷೆಯನ್ನು ಎಲ್ಲ ಸ್ತರಗಳ ಜನರಿಗೆ ಸುಲಭವಾಗಿ ದಕ್ಕುವಂತೆ ಮಾಡಿವೆ.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಭಾಷೆ ಜಾಳಾಗುತ್ತಿದೆ, ಹಾಳಾಗುತ್ತಿದೆ ಎಂಬ ಸವಾಲುಗಳಿಗೆ ಪರಿಹಾರ ಮಾರ್ಗಗಳು ಸಾಧ್ಯತೆ, ಲಭ್ಯತೆ ಮತ್ತು ಆದ್ಯತೆ! ಸಾಧ್ಯತೆ ಎಂದರೆ ಭಾಷೆಯ ಸ್ವರೂಪ–ವ್ಯಾಪ್ತಿಗಳನ್ನು ವಿಸ್ತರಿಸಲು ಈಗ ನಮಗಿರುವ ಸದಾವಕಾಶ, ಲಭ್ಯತೆ ಎಂದರೆ, ಹೆಚ್ಚು ಜನರ ಕೈಯಲ್ಲಿ ಭಾಷೆ ಬಳಸಿ, ಸಂಸ್ಕರಿಸಿ, ಸಮೃದ್ಧಗೊಳಿಸುವ ಶಕ್ತಿ ಬಂದೊದಗಿರುವುದು. ಆದ್ಯತೆ ಎಂದರೆ ಇಂದು ನಾವು ಸರಿಯಾದ ಭಾಷೆ ಬಳಸಿದಲ್ಲಿ ಮುಂದೆ ಅದೇ ಹೆಮ್ಮರವಾಗಿ ಬೆಳೆದು ಭಾಷೆಯನ್ನು ಸಮೃದ್ಧವಾಗಿಸುವುದು. ಇಂದು ನಾವು ಆದ್ಯತೆ ಕೊಟ್ಟರೆ ಎಐಎಮ್‌ಎಲ್‌ನಂಥ ತಂತ್ರಜ್ಞಾನ ಸಲಕರಣೆಗಳು ಭಾಷೆಯನ್ನು ಸಲಹುವವು.

ಖ್ಯಾತ ವಿಮರ್ಶಕ ಎಸ್.ಆರ್.ವಿಜಯಶಂಕರ್ ಅವರು ಇದೇ ಪತ್ರಿಕೆಯಲ್ಲಿನ ತಮ್ಮ ಅಂಕಣದಲ್ಲಿ 'ಕನ್ನಡವೇ ಕನ್ನಡವ ಕನ್ನಡಿಸುತ್ತಿರಬೇಕು' ಎಂದು ಬೇಂದ್ರೆಯವರ ಮಾತನ್ನು ಉಲ್ಲೇಖಿಸುತ್ತಾ ಹಿಂದೊಮ್ಮೆ ಬರೆದಿದ್ದರು. ಅದರಿಂದ ಸ್ಫೂರ್ತಿ ಪಡೆದು ಹೇಳುವುದಾದರೆ, ಈ ಸಂಕ್ರಮಣ ಕಾಲದಲ್ಲಿ ನಾವು ಕನ್ನಡವನ್ನು ಎಷ್ಟರ ಮಟ್ಟಿಗೆ ಕಾಯುತ್ತೇವೆಯೋ, ಅದನ್ನು ಆಧರಿಸಿ, ಮುಂದೆ ಡಿಜಿಟಲ್ ಸಲಕರಣೆಗಳ ಲಾಭ ಪಡೆದ ನಮ್ಮ ಭಾಷೆ, ಅದಕ್ಕಿಂತಲೂ ಶ್ರೀಮಂತ, ಸಮೃದ್ಧ ಸ್ವರೂಪ ಪಡೆದು ನಮ್ಮನ್ನು ಕಲಿಕೆಯ ಭಾಷೆಯಾಗಿ, ಅನ್ನದ ಭಾಷೆಯಾಗಿ, ಜ್ಞಾನದ ಭಾಷೆಯಾಗಿ ಕಾಯಲಿದೆ.

(ವಿಜಯ ಕರ್ನಾಟಕ ಏರ್ಪಡಿಸಿದ್ದ 'ವಿಕ ಕನ್ನಡ ಹಬ್ಬ'ದಲ್ಲಿ 'ಡಿಜಿಟಲ್ ಯುಗದಲ್ಲಿ ಕನ್ನಡ' ಅಸ್ಮಿತೆ'ಗೋಷ್ಠಿಯ ನಿರ್ವಾಹಕನಾಗಿ ಆಡಿದ ಮಾತುಗಳ ವಿಸ್ತ್ರತ ರೂಪ)

ಲೇಖಕರು: ಎನ್. ರವಿಶಂಕರ್

ಆಧಾರ–ವಿಜಯ ಕರ್ನಾಟಕ 15.12.19

8. ಪೌರತ್ವ ತಿದ್ದುಪಡಿಗೆ ಇಷ್ಟೊಂದು ವಿರೋಧ ಏಕಾಗುತ್ತದೆ

ಕಳೆದೊಂದು ವಾರದಿಂದ ಎಲ್ಲೆಡೆ ಗಲಭೆ, ದಾಂಧಲೆ, ವಿನಾಶದ ಚಿತ್ರಗಳು ಕಣ್ಣಿಗೆ ರಾಚುತ್ತಿವೆ. ಕಾಶ್ಮೀರದಲ್ಲಿ ಇದುವರೆಗೆ ಸರ್ವೇ ಸಾಮಾನ್ಯವೆಂಬಂತಿದ್ದ ಕಲ್ಲೆಸೆತ ಈಗ ಭಾರತದ ಹಲವೆಡೆ ನಡೆಯುತ್ತದೆ.

ಆರಕ್ಷಕರನ್ನೇ ಗುರಿಯಾಗಿಸಿ ಅವರನ್ನೇ ಹೊಡೆದುರುಳಿಸಬೇಕೆಂಬ ಪ್ರವೃತ್ತಿ ಪ್ರಕಟವಾಗುತ್ತಿದೆ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ ಎಂದು ಒತ್ತಿ ಹೇಳಬೇಕಾಗಿಲ್ಲ. ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಸುಟ್ಟು ಭಸ್ಮ ಮಾಡಲಾಗುತ್ತಿದೆ. ವಿದ್ಯಾರ್ಥಿಗಳನ್ನು ಬಡಿದೆಬ್ಬಿಸಿ ದೇಶನಾಶದ ಕೆಲಸಕ್ಕೆ ಪ್ರಚೋದನೆ ನೀಡಲಾಗುತ್ತಿದೆ. ಸಾರ್ವಜನಿಕ ಸೇವೆಗಳಿಗೆ ಕುತ್ತೊದಗಿದೆ. ಪರೀಕ್ಷೆಗಳು ಮುಂದೆ ಹೋಗಿವೆ. ಎಲ್ಲವೂ ಸ್ಪಷ್ಟವಾಗಿ ಎಲ್ಲರಿಗೂ ಕಾಣುತ್ತಿದೆ. ಇದೆಲ್ಲದರ ಹಿಂದೆ ಯಾರ ಕೈವಾಡ ಎಂಬ ಪ್ರಶ್ನೆ ಅಸಂಗತ, ಅಸಂಬದ್ಧ, ಏಕೆಂದರೆ ಹಿಂದೆ ಅಲ್ಲ, ಮುಂದೆ ನಿಂತು ಇದೆಲ್ಲವನ್ನೂ ಪ್ರಾಯೋಜಿಸುತ್ತಿರುವುದು ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು ಇತರ ರಾಜಕೀಯ ಪಕ್ಷಗಳು. ಇವುಗಳು ದುರ್ವಿಚಾರಗಳನ್ನೇ ನಮ್ಮ ದೇಶವನ್ನು ವಿನಾಶ ಮಾಡಿಯೇ ತೀರುತ್ತೇವೆ ಎಂದು ಪಣ ತೊಟ್ಟಂತಿವೆ!

ನಮ್ಮ ದೇಶಕ್ಕೆ ಉಗ್ರರು ಬಂದು, ನೂರಾರು ಜನರನ್ನು ಕೊಂದು ಸಂಸತ್ತಿಗೆ ದಾಳಿಯಿಟ್ಟಾಗ ಇದೇ ಜನ ಶಾಂತಿ, ಶಾಂತಿ ಎಂದು ಜಪ ಮಾಡಿದರು. ಕಾಂಗ್ರೆಸ್ ಇತಿಹಾಸ ತುಂಬ ದೊಡ್ಡದು. ಎಷ್ಟಾದರೂ 125 ವರ್ಷಗಳ ಪ್ರಾಚೀನ ಪಕ್ಷ ಅಲ್ಲವೇ? ಈ ಪಕ್ಷ ತಾನೇ ಖುದ್ದಾಗಿ ನಿಂತು ಪ್ರಾಯೋಜಿಸಿರುವ ವಿನಾಶದ ಮೈಲಿಗಲ್ಲುಗಳ ಮೇಲೆ ಒಂದು ನೋಟ ಹರಿಸೋಣ.

1. 1975– ತುರ್ತು ಪರಿಸ್ಥಿತಿ, ಸಾವಿರಾರು ಜನರ ಬಂಧನ, ಮಾಧ್ಯಮಗಳ ಸ್ಥಗಿತ, ಕೋಟ್ಯಾಂತರ ಜನರ ಸ್ವಾತಂತ್ರ್ಯಾಪಹರಣ, ಕೋರ್ಟ್ ಕಛೇರಿಗಳ ವಶೀಕರಣ... ಇನ್ನೂ ದೊಡ್ಡದಿದೆ ಪಟ್ಟಿ!
2. 1984ರಲ್ಲಿ ರಾಜಧಾನಿ ದಿಲ್ಲಿಯಲ್ಲಿ ಸಿಖ್ಖರ ಮಾರಣಹೋಮ. ಇದನ್ನು ಸಿಖ್ ನರಮೇಧ ಎನ್ನುತ್ತಾರೆ. ನವೆಂಬರ್ 1 ರಿಂದ 4 ರವರೆಗೆ ಸುಮಾರು 4,000 ಸಿಖ್ಖರ ಕೊಲೆ, ಸುಡುವುದು, ಅತ್ಯಾಚಾರ, ಸುಲಿಗೆ, ಆಸಿಡ್ ಹಾಕುವುದು ಇವೆಲ್ಲ ಸಾಮೂಹಿಕ ಕೊಲೆಯ ಅಂಗಗಳು. ಎಷ್ಟು ಜನರಿಗೆ ಶಿಕ್ಷೆ ಆಯಿತು ? ಆರೋಪಿಯೊಬ್ಬ ಪ್ರಸಕ್ತ ಮುಖ್ಯಮಂತ್ರಿ !
3. 1984ರ ಡಿಸೆಂಬರ್‌ನಲ್ಲಿ ಭೋಪಾಲ್ ದುರಂತ ಜಗತ್ತಿನ ಅತ್ಯಂತ ಅಪಾಯಕಾರಿ ಔದ್ಯೋಗಿಕ ಅನಾಹುತ! ಸಹಸ್ರಾರು ಜನರ ಆಹುತಿ, ವಿಕೃತಿ. ಒಟ್ಟಾರೆ ಜನರ ಪರಿಸ್ಥಿತಿ ಅಧೋಗತಿ. ಆಗ ಕೇಂದ್ರದಲ್ಲಿ ರಾಜೀವ್ ಗಾಂಧಿ ಪ್ರಧಾನಿ, ಮಧ್ಯಪ್ರದೇಶದಲ್ಲಿ ಅರ್ಜುನ್ ಸಿಂಗ್ ಮುಖ್ಯಮಂತ್ರಿ. ಈ ಅನಾಹುತಕ್ಕೆ ಕಾರಣರಾದ ಯೂನಿಯನ್ ಕಾರ್ಬೈಡ್ ಸಂಸ್ಥೆಯ ಮುಖ್ಯಸ್ಥನಾದ ಆಂಡರ್‌ಸನ್‌ನ್ನು ಇಬ್ಬರೂ ಸೇರಿ ಅರ್ಧ ಗಂಟೆಯಲ್ಲಿ ಸುರಕ್ಷಿತವಾಗಿ ಸರ್ಕಾರಿ ವಾಹನದಲ್ಲಿ ಏರ್‌ಪೋರ್ಟ್‌ಗೆ ಸಾಗಿಸಿ ದೇಶದಿಂದ ಪಲಾಯನ ಮಾಡಿಸಿದರು. ಅವರು ತಮ್ಮ ದೇಶ ಸೇರಿಕೊಂಡರು. ದುರಂತಕ್ಕೊಳಗಾದವರು ಇನ್ನೂ ಪೀಡೆಯನ್ನನುಭವಿಸುತ್ತಿದ್ದಾರೆ.
4. 1999ರಲ್ಲಿ ಕಾಶ್ಮೀರದಲ್ಲಿ ಹಿಂದೂಗಳು ರಾತ್ರೋರಾತ್ರಿ ಮನೆಮಠ ಬಿಟ್ಟು ಜೀವ ಉಳಿಸಿಕೊಳ್ಳಲು ಓಡಬೇಕಾಯಿತು. ಉಗ್ರರು ಕಾರ್ಯಾಚರಣೆಗಿಳಿದರು. ಆಗ ಭಾರತ ಗೃಹ ಮಂತ್ರಿಗಳಾಗಿದ್ದವರು ಸನ್ಮಾನ್ಯ ಮುಫ್ತಿ ಮಹಮ್ಮದ್ ಸಯೀದ್ ಇವರ ನೇತೃತ್ವದಲ್ಲಿ ಹಿಂದೂಗಳ ಮಾರಣಹೋಮ, ಮಾನಾಪಹರಣ, ಪ್ರಾಣಾಪಹರಣಗಳು ಎಗ್ಗಿಲ್ಲದೆ ನಡೆದುವು. ಬಿಜೆಪಿಯನ್ನು ಬಿಟ್ಟರೆ, ಈ ನತದೃಷ್ಟರಿಗಾಗಿ ಒಂದು ರಾಜಕೀಯ ಪಕ್ಷವೂ ಅಯ್ಯೋ ಎನ್ನಲಿಲ್ಲ, ಕಾಂಗ್ರೆಸ್, ಆಗ ಗಲಭೆ ಎಬ್ಬಿಸಲಿಲ್ಲ, ಎಲ್ಲಾ ಸೇರಿ ಪರಸ್ಪರ ಕೈಕುಲುಕಿಕೊಂಡರು.

ಇದುವರೆಗೆ ಯಾರಿಗೆ ಶಿಕ್ಷೆಯಾಯಿತು? ಯಾರನ್ನಾದರೂ ಈ ದುರಂತಗಳಿಗೆ ಹೊಣೆ ಮಾಡಿದ್ದಾರಾ? 30 ವರ್ಷಗಳ ಬಳಿಕವೂ, ರಾಜ್ಯದಿಂದಾಗಲಿ, ಕೇಂದ್ರ ಸರ್ಕಾರಗಳಿಂದಾಗಲಿ ಒಂದೇ ಒಂದು ವಿಚಾರಣೆ ನಡೆದಿಲ್ಲ. ಎಲ್ಲದಕ್ಕೂ ಎಸ್‌ಐಟಿ ಎಂದು ಕೇಕೆ ಹಾಕುವ ಮಂದಿ ಈ ವಿಚಾರಕ್ಕೆ ತೆಪ್ಪಗಿತ್ತು. ಈ ದೇಶದಲ್ಲಿ ಹಿಂದೂಗಳನ್ನು ಸಾಯಿಸುವುದು, ಅವಹೇಳನ ಮಾಡುವುದು, ಮತಾಂತರಗೊಳಿಸುವುದು **ಲಾ ಆಫ್ ಲ್ಯಾಂಡ್** ಆಗಿರುವಂತಿದೆ. ಅದೇ ಒಬ್ಬ ಮುಸಲ್ಮಾನನಿಗೆ ಅವನ ಅಪರಾಧಕ್ಕಾಗಿ ಶಿಕ್ಷೆ ವಿಧಿಸಿದ್ದರೂ ತಾರತಮ್ಯ, ಮತದ್ವೇಷ ಇತ್ಯಾದಿ ಶಬ್ದಾವಳಿಗಳು ಕಾಂಗ್ರೆಸಿಗರ ಮತ್ತು ಕಮ್ಯೂನಿಸ್ಟರ ಬಾಯಲ್ಲಿ ಮೆರವಣಿಗೆ ಹೊರಡುತ್ತವೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಅಬ್ಬರ ಮಾಡಿಸುತ್ತಾರೆ.

ಈಗ ಸಿಎಎಗೆ ಬರೋಣ, ಪೌರತ್ವ ತಿದ್ದುಪಡಿ ಕಾಯ್ದೆ ಹೆಸರಿನಲ್ಲೇ, ಇದೇ ಮೊದಲು ಮಾಡುತ್ತಿರುವುದಲ್ಲ! ಈಗಾಗಲೇ ಇರುವುದಕ್ಕೆ ತಿದ್ದುಪಡಿ ಎಂಬ ಅರ್ಥ ಸ್ಪಷ್ಟವಾಗಿದೆ. ಹಾಗಾದರೆ ಇರುವುದು ಏನು? ಭಾರತದಿಂದ ಬೇರ್ಪಟ್ಟು ಮುಸಲ್ಮಾನ ದೇಶಗಳೆಂದೆ ಘೋಷಿಸಿಕೊಂಡ ನಾಡುಗಳಲ್ಲಿನ ಅಲ್ಪಸಂಖ್ಯಾತರಾದ ಸಿಖ್ಖ, ಕ್ರೈಸ್ತ, ಪಾರ್ಸಿ, ಬೌದ್ಧ, ಜೈನ್ ಮತ್ತು ಹಿಂದೂಗಳಿಗೆ ಭಾರತ ಪೌರತ್ವ ನೀಡುವುದು, ಇದೇ ತಿದ್ದುಪಡಿ.

1950ರಲ್ಲಿ ಭಾರತ ಮತ್ತು ಪಾಕಿಸ್ತಾನದ ನಾಯಕರಿಬ್ಬರೂ ಸೇರಿ ರೂಪಿಸಿದ ಕಾಯ್ದೆ ಇದು. ಇದಕ್ಕೆ ನೆಹರು–ಲಿಯಾಕತ್ ಆಲಿ ಒಪ್ಪಂದ ಅಂತ ಹೆಸರು. ಮತೀಯ ಆಧಾರದ ಮೇಲೆ ದೇಶ 1947ರಲ್ಲಿ ಇಬ್ಭಾಗವಾಯಿತು. ನಂತರ 1971ರಲ್ಲಿ ಪಾಕಿಸ್ತಾನವೇ ತುಂಡಾಗಿ ಬಾಂಗ್ಲಾದೇಶ ಉದಯವಾಯಿತು. ಆಫ್ಘಾನಿಸ್ತಾನವು ಹಿಂದಿನಿಂದ ಭೌಗೋಳಿಕವಾಗಿ ಭಾರತದ ಅಂಗವೇ ಆಗಿದ್ದು, ಈಗ ಬೇರೆಯಾಗಿದೆ. ಮುಸಲ್ಮಾನರಿಗೆ ಹಿಂದೂಗಳೊಡನೆ ಬಾಳಲು ಸಾಧ್ಯವಿಲ್ಲವೆಂದು, ಅವರು ಸ್ವತಂತ್ರರಾಗಿ ಸಾರ್ವಭೌಮ ಬದುಕು ಕಟ್ಟಿಕೊಳ್ಳಲು ಬೇರೆ ನಾಡೇ ಬೇಕೆಂದು ಚಂಡಿಹಿಡಿದು, ದಾಂಧಲೆ ಎಬ್ಬಿಸಿ, ಇಷ್ಟವಿಲ್ಲದಿದ್ದರೂ ಭಾರತದ ನಾಯಕರನ್ನು ಬಲವಂತಕ್ಕೊಳಪಡಿಸಿ ಪಾಕಿಸ್ತಾನ ಪಡೆದುಕೊಂಡರು. ಆಗಲೇ ಸುಮಾರು 10 ಲಕ್ಷ ಹಿಂದೂಗಳ ಕಗ್ಗೊಲೆಯಾಯಿತು. ಕೋಟಿ ಜನರು ನಿರ್ವಸಿತರಾದರು. ಬಹುಶಃ ಭಾರತ ದೇಶ ವಿಭಾಗವಾದ ದುರಂತ ಪ್ರಕರಣ ಮನುಷ್ಯ ಇತಿಹಾಸದ ಕರಾಳ ಅಧ್ಯಾಯಗಳಲ್ಲೊಂದು. ಇದನ್ನು ಮನಗಂಡ ನಾಯಕರು ಹೀಗೆಯೇ ಮುಂದುವರೆದರೆ ಮಾನವೀಯತೆ ಉಳಿಯಲಾರದು. ಜನರಿಗೆ ರಕ್ಷಣೆ ನೀಡಬೇಕಾದ್ದು ನಮ್ಮ ಕರ್ತವ್ಯ ಎಂದು, ಈ ದೇಶಗಳಿಂದ ಜೀವಭಯದಿಂದ ಓಡಿಬರುವವರಿಗೆ ಭಾರತ ರಕ್ಷಣೆ ನೀಡಬೇಕು. ಹಾಗೆ ಭಾರತದಿಂದ ಹೊರಹೋಗಲು ಇಚ್ಚಿಸುವ ಮುಸಲ್ಮಾನರಿಗೆ ಆ ದೇಶಗಳು ರಕ್ಷಣೆ ನೀಡಬೇಕು ಎಂಬ ಮಾತಿಗೆ ದೇಶ ಇಬ್ಭಾಗವಾದಾಗಿನಿಂದಲೂ ಸಮರ್ಥನೆ ನೀಡಿದವರು ಪ್ರಧಾನಿ ನೆಹರು, ರಾಷ್ಟ್ರಪತಿ ರಾಜೇಂದ್ರ ಪ್ರಸಾದರು. ಮಹಾತ್ಮಗಾಂಧಿಯೂ ಇದನ್ನು ಒಪ್ಪಿದರು. 10 ವರ್ಷ ಭಾರತದ ಪ್ರಧಾನಿಯಾಗಿದ್ದ ಮನಮೋಹನ್ ಸಿಂಗರೂ ಕೂಡ 2009ರಲ್ಲಿ ಇದೇ ಅಭಿಪ್ರಾಯವನ್ನು ಉಚ್ಚರಿಸಿದ್ದರು. ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಆಫ್ಘಾನಿಸ್ತಾನ ಈ ಮೂರು ಇಸ್ಲಾಮಿಕ್ ದೇಶಗಳೆಂದೇ ಘೋಷಿಸಿಕೊಂಡ ಮುಸ್ಲಿಂ ಬಹುಸಂಖ್ಯಾತ ದೇಶಗಳು. ಅವರು ಅಲ್ಪಸಂಖ್ಯಾತರನ್ನು ಸಮಾನರೆಂದು ಭಾವಿಸುವುದಿಲ್ಲ. ನಿತ್ಯ ಅವರನ್ನು ಹಂಗಿಸಿ, ಭಂಗಿಸಿ, ಮತಾಂತರಕ್ಕೆ ಅತ್ಯಾಚಾರಕ್ಕೆ ಬಲಿಯಾಗಬೇಕಾದ ಪಶುಗಳಂತೆ ನಡೆಸಿಕೊಳ್ಳುತ್ತಾರೆ. ಇದಕ್ಕೆ ಪ್ರಮಾಣ 1947ರಲ್ಲಿ ಪಾಕಿಸ್ತಾನದಲ್ಲಿದ್ದ ಅಲ್ಪಸಂಖ್ಯಾತರ ಸಂಖ್ಯೆ 23% ಈಗ 3% ಕ್ಕಿಂತ ಕಡಿಮೆ. 1971ರಲ್ಲಿ ಭಾರತದ ಸಹಾಯದಿಂದಲೇ ಪಾಕಿಸ್ತಾನದಿಂದ ಬೇರ್ಪಟ್ಟ ಬಾಂಗ್ಲಾದಲ್ಲೂ ಇದೇ ಗತಿ. ಆಫ್ಘಾನಿಸ್ತಾನವಂತೂ ಇಸ್ಲಾಂನ ಅತ್ಯಂತ ಭಯಂಕರ ರೂಪದ ಆಚರಣೆಯಲ್ಲಿ ತೊಡಗಿರುವ ತಾಲಿಬಾನಿಗಳ ತಾಣ.

ಸಿಎಎ ಅನ್ವಯಿಸಲು ಒಂದು ಸೀಮಾರೇಖೆ ಇದೆ. 2014ರ ವರೆಗೆ ಯಾರು ಬಂದಿದ್ದಾರೋ ಅವರಿಗೆ ಮಾತ್ರ ಪೌರತ್ವ ನೀಡಲು ಈಗ ಸಧ್ಯಕ್ಕೆ ನಿರ್ಧರಿಸಲಾಗಿದೆ. ಈ ಕಾಯ್ದೆಯಿಂದ ಭಾರತದ ಮುಸಲ್ಮಾನರಿಗೇನು ಅನ್ಯಾಯವಾಗಿದೆ? ಅವರ ಸಂಖ್ಯೆ 1947 ರಿಂದ ದಿನೇ ದಿನೇ ಬೆಳೆಯುತ್ತಲೆ ಇದೆ. ಇಲ್ಲಿಂದ ಆ ಮೂರು ಮುಸಲ್ಮಾನ ದೇಶಗಳಿಗೆ ಹೋಗಲು ಯಾರೂ ತುದಿಗಾಲಲ್ಲಿ ನಿಂತಿದ್ದಾರೆ ? ಯಾರು ಇಲ್ಲ. ಅಂದಮೇಲೆ ಮುಸಲ್ಮಾನರನ್ನು ಕೈಬಿಟ್ಟಿರುವುದು ಕಾಯ್ದೆಯಲ್ಲಿನ ದೋಷವೆಂದು ದೂರುತ್ತಿರುವುದಕ್ಕೆ ಆಧಾರವೆಲ್ಲಿದೆ? ಸಿಎಎ ಪ್ರಕಾರ ಮುಸಲ್ಮಾನ್ ದೇಶಗಳ ಶೋಷಿತ ಅಲ್ಪಸಂಖ್ಯಾತರು ಇಲ್ಲಿಗೆ ಬರಬಹುದೇ ಹೊರತು, ಇಲ್ಲಿರುವ ಮುಸಲ್ಮಾನರಾಗಲಿ, ಇತರರಾಗಲಿ ಹೊರಹೋಗುವುದಲ್ಲ. ವಿಷಯ ಇಷ್ಟು ಸ್ಪಷ್ಟವಿರುವಾಗ ಮುಸಲ್ಮಾನರನ್ನು ಹೊರದಬ್ಬಲು ಕೇಂದ್ರ ಸರ್ಕಾರ ಹುನ್ನಾರ ಮಾಡುತ್ತಿದೆ ಎಂದು ಹೇಳುವವರಿಗೆ ಸಾಮಾನ್ಯ ಜ್ಞಾನ ಇದೆಯೇ? ಕಾಂಗ್ರೆಸ್ ಮತ್ತು ಇತರ ರಾಜಕೀಯ ಪಕ್ಷಗಳು ಚುನಾವಣೆಗಳಲ್ಲಿ ಸೋತು ಇದೀಗ ಕೇಂದ್ರದ ಮೇಲೆ ಗೂಬೆ ಕೂರಿಸುತ್ತಿವೆ. ಗೆದ್ದಿರುವವರು ಕೂಡ ಯಾವುದೋ ತಿಳಿಯದ ಕಾರಣಕ್ಕೆ ಸಿಎಎ ವಿರೋಧವನ್ನೇ ಬೆಂಬಲಿಸುತ್ತಿದ್ದಾರೆ . ಇದು ದೇಶದ ದುರಂತ.

ಡಾ.ಎಸ್.ಆರ್. ಲೀಲಾ, ಮಾಜಿ ವಿಧಾನಪರಿಷತ್ತಿನ ಸದಸ್ಯರು.

ಆಧಾರ–ವಿಜಯವಾಣಿ 21.12.2019

9. Rapid, large-scale migration is the problem

At the time the Rohingya crisis erupted in neighbouring Myanmar mid-2017, when Bengali speaking Muslim Rohingya population who the Myanmar government as well as most other ordinary people of the country say are illegal Bangladeshi immigrants, faced brutal aggression at the hands of the Myanmar government, aimed at forcing them to leave the country, there were many observers in the Northeast who expressed their uneasy premonition that the energy driving this ethnic crisis was very much a part of the Northeast as well.

Reams have been written on the Rohingya crisis already. While there can be no doubt the Rohingyas are a traditional community of Myanmar , many of them having settled in the Rakhine State(once known as Arakan) adjoining the Chittagong Hills Tracts of Bangladesh for at least 600 years, it is also an established fact that there continued to be waves of Bengali Muslim immigrants pouring into the region and merging with the original Rohingyas, much to the resentment of the local Buddhist Rakhines, a Chakma-aligned community of about two million, who were left insecure by this influx that they may come to be marginalised in their homeland.

Ethinic tension, therefore, was only to be expected, and indeed, there had been several clashes between the Rohingyas and Rakhines before the current crisis. In all these, the Myanmar government unabashedly sided with the Buddhist Rakhines, not even giving citizenship to the Rohingyas and treating them as illegal Bangladeshi immigrants, expect those who were able to prove their Myanmar ancestry. This being so, it is just needed a coordinated attack on 30 Myanmar police camps on August 25, 2017, by a hitherto little heard militant group Arakan Rohingya Salvation Army, to tigger the current spate of eithnic cleansing campaign againt the Rohingyas.

All these had then seemed very reminiscent of the situation in the North east and now the premonition is proving true by the violent protests in the region against the CAB Northeast, too, has been a reluctant host to large scale immigrants from Bangladesh ever since the partition of India in 1947. It is well known how partition and politics that preceded it un settled a composite population and split them vertically along what became impervious religious lines, eventually causing an ethnic cleaning unprecedented in scale in human history. Trouble is, long after these partition displacements, a steady stream of economic migrants continued flowing into the Northeast from the eastwhile East Pakistan, now Bangladesh causing new anxieties of demographic overturns amongst local communities.

Assam is a case in point. It has seen some of the bloodiest ethnic clashes of the nature Myanmar is witnessing now. The Assam Agitation of the 1980s, culminating, among others, in the catacysmic Nellie Massacre of February 1983, had roots in a similarly complex ethnic conflict dynamics. The nightmare hardly seems over and demonstrated before everybody how sensitive and fragile ethnic relations are in the region.

Long before CAB issue came to the fore, there were growing demands for the introduction of immigration regulation laws in Manipur and Meghalaya, two Northeast states where British era Inner Line Permit System was not in vogue. These demands remained unmet, but on the eve of the Rajasabha voting on the CAB, when its passage was hanging on a thin balance, this permit system was overnight extended to Manipur to ensure or its four Rajyasabha MP's voted for the CAB. A week earlier ahead of the introduction of the Bill in the LokSabha, a clause had been incerted into the CAB that states covered ILP and of by the 6th Schedule of the Constitution would be exempted from CAB, again with the oscensible aim of mopping up the MPs from most of the Nort east states to support the Bill. The strategy has we have seen worked and all non Congress MPs from the region, except Sikkim's Lone representative supported the Bill.

Compulsion of economic migration are nothing trivial and deserves sympathy and compassion. However, this cannot be allowed to cancel out the real anxieties of small host communities of being outnumbered in their homelands by migrants. After all, insuch situations, the line dividing migration and colonisation can become extremely thin. The outburst over CAB is the hard lesson and alibi how pretending this as a non-issue can lead to major catastrophes.

These anxieties may seem unreasonable to observe from outside the region, but they are real and unless they are taken cognizance and factored into complex resolution efforts, the nightmares of deadly ethnic frictions are unlikely to be exercised from the region anytime soon. Migration when it happens at a pace the host communities can absorb without detirment to their own social organisms is unlikely to cause any problem, as Nari Rushtomji noted. Indeed, the ethnic and cultural diversity of the Northeast is testimony that migrants and their integration have been part of a single historical reality of the region. Large scale and rapid influx therefore is where the problem is.

These thoughts bring to mind and interesting exchange between some friends in James Joyce's " Ulysses", a novel that spans just single day in the life of a young school teacher, Stephen Dedalus, (in 933 pages) and one which has been voted by critics as the greatest Novel of the 20th Century. In this particular episode, Dedalus the Dubliner as just collected his salary of two crowns and two shillings from Mr. Deasy, a conservative good-hearted middle-aged English man. Deasy gives the young school teacher a lecture on money. He asks Dedalus what he thinks the greatest pride of the English man is. Stephen guesses it to be that the sun never sets on his empire. Deasy dismisses the suggestion in good humoured contempt, saying that was coined by a French celt. The proudest word from a English man's mouth is Deasy tells Dedalus, "I paid my way" or "I owe no one".

The conversation money and its power invariably drifts very pronounced anti, anti Semitism on part of the English man. "Old England is dying". Deasy declares, "the Jews have bought its vitals, strengths and now controls its finances, the press and all its high places. Where ever they are, Jew merchants eat up the nations's vitals and work up its destruction". Deasy continues. Uncomfortable as he was Stephen tries a weak defence of the

Jews asking rhetorically if whatever Deasy said of the Jews was not the way of all merchants-buy cheap and sell dear. Deasy disagrees saying there is darkness in the Jews eyes and that is why they are wanderers of the earth to this day. At some point, a scandalised Stephen excuses himself and leaves. Deasy in a light-hearted piece of dark humour calls out after him. "Do you know Ireland land is the only nation which did not persecute the Jews, and you know why"? Stephen looks at him askance. "Because she never allowed them in" Deasy provides the answer, bursting into a fit of phlegmatic laughter.

The cruel irony is, it is the seemingly politically incorrect act of preventing or strictly regulating immigration which saved Ireland from descending into overtracism. Authorities in Northeast did not hark this warning and therefore, ugly backlashes against CAB now.

Author-Pradip Phanjoubam

Indian Express-22.12.2019

10. ಸಿಎಎ ಮಾನವೀಯ ನೆಲೆಯ ಕಾಯಿದೆ, ದಾರಿ ತಪ್ಪಬೇಡಿ!

ಭಾರತದಲ್ಲಿರುವ ಮುಸ್ಲಿಮರು ಈ ಕಾಯಿದೆಯ ಬಗ್ಗೆ ಯಾವ ರೀತಿಯಲ್ಲೂ ಆತಂಕಪಡುವ ಅಗತ್ಯವಿಲ್ಲ. ಏಕೆಂದರೆ ಈ ಕಾಯಿದೆಯು ವಲಸಿಗರಿಗೆ ಸಂಬಂಧಿಸಿದ್ದೇ ಹೊರತು ದೇಶದ ಪ್ರಜೆಗಳಿಗೆ ಸಂಬಂಧಿಸಿದ್ದಲ್ಲ.

ಖ್ಯಾತ ಲೇಖಕ ಸಾದತ್ ಹಸನ್ ಮಾಂಟೋ ಬರೆದ ಪ್ರಸಿದ್ಧ ಕತೆ 'ತೋಬಾ ತೇಕ್ ಸಿಂಗ್'ನಲ್ಲಿ ಅರ್ಥಹೀನ ದೇಶ ವಿಭಜನೆ ಹಾಗೂ ನಂತರ ಜನರಿಗೆ ಉಂಟಾದ ಸಂಕಷ್ಟಗಳ ಬಗ್ಗೆ ಕಣ್ಣಿಗೆ ಕಟ್ಟುವ ವಿವರಣೆಗಳಿವೆ. ಮಾಂಟೋ ಇಂದು ಬದುಕಿದ್ದರೆ, ಬಹುಶ: ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಅಂದು ಆದ ಐತಿಹಾಸಿಕ ತಪ್ಪುಗಳನ್ನು ಸರಿಪಡಿಸುವ ಒಂದು ಪ್ರಯತ್ನವೆಂದು ಪರಿಗಣಿಸುತ್ತಿದ್ದರು. ಅಂದು ಹೇಗಾದರೂ ಇರಲಿ ಈಗಂತೂ ಸ್ಥಾಪಿತ ಹಿತಾಸಕ್ತಿಗಳು ಈ ಕಾಯ್ದೆಯ ಬಗ್ಗೆ ತಪ್ಪು ಮಾಹಿತಿಯನ್ನು ವ್ಯವಸ್ಥಿತವಾಗಿ ಹರಡುತ್ತಿವೆ. ಆದ್ದರಿಂದಾಗಿ ದೇಶದ ಹಲವೆಡೆ ಪ್ರತಿಭಟನೆಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಪ್ರತಿಯೊಬ್ಬರೂ ತಿಳಿದುಕೊಳ್ಳಲೇ ಬೇಕಾದ ಸಂಗತಿಯೊಂದಿದೆ. ಅದು ಈ ಕಾಯ್ದೆಯು ಪೌರತ್ವವನ್ನು ಕೊಡುತ್ತದೆಯೇ ಹೊರತು ಯಾರಿಂದಲೂ ಪೌರತ್ವವನ್ನು ಕಿತ್ತುಕೊಳ್ಳುವುದಿಲ್ಲ. ಪೌರತ್ವ ತಿದ್ದುಪಡಿ ಕಾಯ್ದೆಯು ಪಾಕಿಸ್ತಾನ, ಬಾಂಗ್ಲಾದೇಶ ಹಾಗೂ ಆಫ್ಘಾನಿಸ್ತಾನ, ಹಿಂದೂ, ಸಿಖ್, ಬೌದ್ಧ, ಜೈನ, ಕ್ರಿಶ್ಚಿಯನ್ ಹಾಗೂ ಪಾರ್ಸಿ ವಲಸಿಗರಿಗೆ ಪೌರತ್ವ ನೀಡುತ್ತದೆ. ಷರತ್ತು ಏನೆಂದರೆ, ಇವರು 2014ರ ಡಿಸೆಂಬರ್ 31ರೊಳಗೆ ಭಾರತಕ್ಕೆ ಬಂದಿರಬೇಕು.

ಈ ಕಾಯ್ದೆಗೆ ಬರುತ್ತಿರುವ ವಿರೋಧಕ್ಕೆ ಎರಡು ಕಾರಣಗಳಿವೆ, ಒಂದು ಈಶಾನ್ಯದ ರಾಜ್ಯಗಳು ಈ ಕಾಯ್ದೆಯಿಂದಾಗಿ ತಮ್ಮ ಜನಲಕ್ಷಣ ಹಾಗೂ ಸಾಂಸ್ಕೃತಿಕ ಅನನ್ಯತೆ ನಾಶವಾಗುತ್ತದೆ ಎಂದು ಆತಂಕಗೊಂಡಿವೆ. ಎರಡು ಮುಸ್ಲಿಮರನ್ನು ಹೊರಗಿಟ್ಟು ಬೇರೆ ಧರ್ಮದವರಿಗೆ ಮಾತ್ರ ಪೌರತ್ವ ನೀಡಲಾಗುತ್ತಿದೆ ಎಂಬುದು ಕೆಲವರ ವಿರೋಧಕ್ಕೆ ಕಾರಣವಾಗಿದೆ. ಇಂತಹದೊಂದು ಕಾಯ್ದೆ ಏಕೆ ನಮ್ಮ ದೇಶಕ್ಕೆ ಬೇಕಾಯಿತು ಎಂಬುದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು, ನಮ್ಮ ದೇಶ ಇರುವ ಸ್ಥಳ, ಇಲ್ಲಿನ ಉದಾರ ಮೌಲ್ಯಗಳು, ಆರ್ಥಿಕ ಪ್ರಗತಿ ಹಾಗೂ ಧಾರ್ಮಿಕ ಸಾಮರಸ್ಯಗಳು ಅಕ್ರಮ ವಲಸಿಗರು ಹಾಗೂ ನಿರಾಶ್ರಿತರನ್ನು ಇಲ್ಲಿಗೆ ಆಕರ್ಷಿಸುತ್ತಲೇ ಬಂದಿವೆ.

ನಿರಾಶ್ರಿತರಿಗೆ ಪೌರತ್ವ ನೀಡುವ 1951ರ ಹಾಗೂ 1967ರ ವಿಶ್ವಸಂಸ್ಥೆಯ ಒಪ್ಪಂದಕ್ಕೆ ಭಾರತ ಸಹಿ ಹಾಕಿಲ್ಲ. ಹಾಗೆಯೇ ನಮ್ಮ ದೇಶದಲ್ಲಿ ನಿರಾಶ್ರಿತರಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ರಾಷ್ಟ್ರೀಯ ನೀತಿ ಕೂಡ ಇಲ್ಲ. 1946ರ ವಿದೇಶೀ ಪ್ರಜೆಗಳ ಕಾಯ್ದೆಯಡಿಯಲ್ಲಿಯೇ ನಾವು ವಲಸಿಗರ ಜೊತೆಗೂ ವ್ಯವಹರಿಸುತ್ತಾ ಬಂದಿದ್ದೇವೆ. ಸಮಸ್ಯೆ ಏನೆಂದರೆ, ಈ ಕಾಯ್ದೆಯು ಅಕ್ರಮ ವಲಸಿಗರು ಮತ್ತು ನಿರಾಶ್ರಿತರನ್ನು ಪ್ರತ್ಯೇಕವಾಗಿ ನೋಡುವುದಿಲ್ಲ. ಜೊತೆಗೆ ಮಾನವೀಯ ನೆಲೆಯಲ್ಲಿ ನಿರಾಶ್ರಿತರನ್ನು ಒಂದು ನಿರ್ದಿಷ್ಟ ಗುಂಪಾಗಿ ಪರಿಗಣಿಸಬೇಕು ಎಂದು ಈ ಕಾಯ್ದೆ ಹೇಳುವುದಿಲ್ಲ. ಇದೇ ಸಮಸ್ಯೆಯಾಗಿರುವುದು. ತಮ್ಮ ದೇಶದಲ್ಲಿ ಧಾರ್ಮಿಕ ಹಿಂಸಾಚಾರಕ್ಕೆ ನಲುಗಿ ಭಾರತಕ್ಕೆ ಓಡಿ ಬಂದು ಆಶ್ರಯ ಕೇಳುತ್ತಿರುವ ಅಮಾಯಕರನ್ನು ಈ ಕಾಯ್ದೆಯು ಅಕ್ರಮ ವಲಸಿಗರೆಂದೇ ಪರಿಗಣಿಸುತ್ತದೆ. ಏಕೆಂದರೆ ಕಾಯ್ದೆಯಲ್ಲಿ ನಿರಾಶ್ರಿತರ ಬಗ್ಗೆ ಸ್ಪಷ್ಟತೆ ಇಲ್ಲ.

ವಾಸ್ತವ ಏನೆಂದರೆ, ನಮ್ಮ ದೇಶದಲ್ಲಿರುವ ನಿರಾಶ್ರಿತರಿಗೆ ಇಂದಿಗೂ ಅಗತ್ಯ ಸೇವೆಗಳು ಸಿಗುತ್ತಿಲ್ಲ. ಮೇಲಾಗಿ ಅವರೊಂದಿಗೂ ಅಸ್ತಿತ್ವವೇ ಇಲ್ಲ. ಆದರೂ ಅವರು ತಮ್ಮ ದೇಶಕ್ಕೆ ಮರಳಿ ಹೋಗಲು ಒಪ್ಪುವುದಿಲ್ಲ. ಏಕೆಂದರೆ ಅಲ್ಲಿಗೆ ಹೋದರೆ, ಜೀವ ಉಳಿಯುತ್ತದೆ ಎಂಬ ಬಗ್ಗೆ ಅವರಿಗೆ ಖಾತ್ರಿ ಇಲ್ಲ. ಭಾರತೀಯ ಅಂಕಿ–ಅಂಶ ಸಂಸ್ಥೆ 2004ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಶೇ.56ರಷ್ಟು ಅಕ್ರಮ ವಲಸಿಗರು. ತಾವು ಭಾರತಕ್ಕೆ ವಲಸೆ ಬಂದಿರುವುದಕ್ಕೆ ಉದ್ಯೋಗ ಹಾಗೂ ಆರ್ಥಿಕ ಭದ್ರತೆಯೇ ಕಾರಣ ಎಂದು ಹೇಳಿದ್ದಾರೆ. ಹೀಗಾಗಿ ಈ ಅಕ್ರಮ ವಲಸಿಗರು ಭಾರತಕ್ಕೆ ಭಾರವಾಗಿದ್ದಾರೆ. ಏಕೆಂದರೆ ಇವರು ನಮ್ಮ ದೇಶದ ಪ್ರಜೆಗಳ ಉದ್ಯೋಗಾವಕಾಶಗಳನ್ನು ಕಿತ್ತುಕೊಳ್ಳುತ್ತಿದ್ದಾರೆ. ಹೀಗಾಗಿ ಕಾಯ್ದೆಯನ್ನು ವಿರೋಧಿಸುತ್ತಿರುವವರು ಒಂದು ಸಂಗತಿಯನ್ನು ಅರ್ಥಮಾಡಿಕೊಳ್ಳಬೇಕು. ವಲಸಿಗರಲ್ಲಿ ಒಂದು ಗುಂಪು ತಮ್ಮ ಜೀವ ಉಳಿಸಿಕೊಳ್ಳಲು ಭಾರತಕ್ಕೆ ಬಂದು ಆಶ್ರಯ ಕೇಳುತ್ತದೆ. ಇನ್ನೊಂದು ಗುಂಪು ಭಾರತದ ಆರ್ಥಿಕ ಅಭಿವೃದ್ಧಿಯನ್ನು ಕುಂಠಿತಗೊಳಿಸಲು ಇಲ್ಲಿಗೆ ಬಂದಿದೆ.

ಸಂಸತ್ತಿನಲ್ಲಿ ಮಂಡಿಸಿದ ಉತ್ತರಗಳ ಪ್ರಕಾರ 1997ರಲ್ಲಿ ಭಾರತದಲ್ಲಿ 1 ಕೋಟಿ ಬಾಂಗ್ಲಾದೇಶಿ ಅಕ್ರಮ ವಲಸಿಗರಿದ್ದರು. 2004ರಲ್ಲಿ ಇವರ ಸಂಖ್ಯೆ 1.2 ಕೋಟಿಗೂ, 2016ರಲ್ಲಿ 2 ಕೋಟಿಗೂ ಏರಿದೆ. ಕಾಂಗ್ರೆಸ್ ಪಕ್ಷವು ಈ ಅಕ್ರಮ ವಲಸಿಗರನ್ನು ವೋಟ್ ಬ್ಯಾಂಕ್ ಆಗಿ ಪರಿಗಣಿಸಿದೆ. ಈಗ ಕಾಂಗ್ರೆಸಿಗರು ಈ ಕಾಯ್ದೆಯನ್ನು ವಿರೋಧಿಸುತ್ತಿರುವುದಕ್ಕೆ ಇದೇ ಕಾರಣ. ಇದೇ ರೀತಿ ಅಖಿಲ ಭಾರತ ತೃಣಮೂಲ ಕಾಂಗ್ರೆಸ್ (ಟಿ.ಎಂ.ಸಿ) ಕೂಡ ಅಕ್ರಮ ವಲಸಿಗರನ್ನು ತನ್ನ ಮತ ಬ್ಯಾಂಕ್ ಮಾಡಿಕೊಂಡಿದೆ. ಪಶ್ಚಿಮ ಬಂಗಾಳದ ಅಂತರ ರಾಷ್ಟ್ರೀಯ ಗಡಿ ಸಮೀಪವಿರುವ ಬೊಂಗಾನ ಬಳಿ ಇತ್ತೀಚೆಗಷ್ಟೆ ದೊಡ್ಡ ಪ್ರಮಾಣದ ನಕಲಿ ವೋಟರ್ ಐಡಿ ಹಗರಣ ಬೆಳಕಿಗೆ ಬಂದಿದೆ. ಹಿಂದೆ ಈ ಅಕ್ರಮ ವಲಸಿಗರ ಸಮಸ್ಯೆಯನ್ನು ಅಕ್ರಮ ವಲಸಿಗರ (ನ್ಯಾಯಾಧಿಕರಣದ ಮೂಲಕ ನಿರ್ಧಾರ) ಕಾಯ್ದೆ –1983ರ ಪ್ರಕಾರ ಬಗೆಹರಿಸಲು ಪ್ರಯತ್ನ ನಡೆದಿತ್ತು. ಅಂದರೆ, 2005ರಲ್ಲಿ ಸುಪ್ರೀಂಕೋರ್ಟ್ ಅಕ್ರಮ ವಲಸಿಗರನ್ನು ಗುರುತಿಸಿ ಗಡಿಪಾರು ಮಾಡುವುದಕ್ಕೆ ಈ ಕಾಯ್ದೆಯೇ ದೊಡ್ಡ ಅಡ್ಡಿ ಎಂದು ಹೇಳುವುದರೊಂದಿಗೆ ಈ ಪ್ರಯತ್ನ ನಿಂತಿತ್ತು.

ಭಾರತವು ಸದ್ಯ ಪ್ರತಿ ಪ್ರಕರಣವನ್ನು ಪ್ರತ್ಯೇಕವಾಗಿ ಪರಿಗಣಿಸಿ ವಿದೇಶಿಯರಿಗೆ ಪೌರತ್ವ ನೀಡುತ್ತದೆ. ಹೀಗೆ ನಿರಾಶ್ರಿತರಿಗೆ ಪೌರತ್ವ ನೀಡುವ ಯಾವುದೇ ಕಾಯ್ದೆಯನ್ನು ಅಕ್ರಮ ವಲಸಿಗರು ದುರ್ಬಳಕೆ ಮಾಡಿಕೊಳ್ಳಲು ಸಾಧ್ಯವಿದೆಯೆ. ಅಂದು ಹೇಗೆಂದರೆ ಮೊದಲಿಗೆ ಅವರು ಕೂಡ ತಾವು ನಿರಾಶ್ರಿತರೆಂದು ಹೇಳಿಕೊಂಡು ಆಶ್ರಯ ಕೇಳುತ್ತಾರೆ. ಅದನ್ನು ತಿರಸ್ಕರಿಸಿದರೆ, ಆ ಕುರಿತು ಮೇಲ್ಮನವಿಗಳು ಇತ್ಯರ್ಥವಾಗುವವರೆಗೆ ಇಲ್ಲಿಯೇ ಉಳಿದುಕೊಳ್ಳುತ್ತಾರೆ. ಈ ಪ್ರಕ್ರಿಯೆ ಎಷ್ಟು ಬೇಕಾದರೂ ವಿಳಂಬವಾಗಬಹುದು. ಹೀಗಾಗಿ ಧಾರ್ಮಿಕ ಆಕ್ರಮಣಕ್ಕೆ ಹೆದರಿ ಓಡುವ ನಿರಾಶ್ರಿತರನ್ನು ಪ್ರತ್ಯೇಕಿಸಿ ನೋಡುವ ಸಂವಿಧಾನ ಬದ್ಧವಾದ ಒಂದು ಸ್ಪಷ್ಟ ಕಾಯ್ದೆಯ ಅಗತ್ಯವಿತ್ತು. ಹಾಗೆ ಹುಟ್ಟಿಕೊಂಡಿದೆ 2019 ಪೌರತ್ವ ತಿದ್ದುಪಡಿ ಕಾಯ್ದೆ.

ಈಶಾನ್ಯ ರಾಜ್ಯಗಳ ಜನರು ಈ ಕಾಯ್ದೆಯ ಬಗ್ಗೆ ಯಾವ ರೀತಿಯಲ್ಲೂ ಆತಂಕ ಪಡಬೇಕಾದ ಅಗತ್ಯವಿಲ್ಲ. ಮೊದಲನೆಯದಾಗಿ, ತ್ರಿಪುರ, ಮಿಜೊರಾಂ, ಮೇಘಾಲಯ ಹಾಗೂ ಅಸ್ಸಾಂನ ಗುಡ್ಡಗಾಡು ಪ್ರದೇಶಗಳಿಗೆ ಈ ಕಾಯ್ದೆ ಅನ್ವಯಿಸುವುದಿಲ್ಲ. ಏಕೆಂದರೆ ಈ ಪ್ರದೇಶಗಳು ಸಂವಿಧಾನದ 6ನೇ ಪರಿಚ್ಛೇದದಲ್ಲಿ ಸೇರಿವೆ. ಎರಡನೆಯದಾಗಿ 1873ರ ಬೆಂಗಾಲ್ ಈಸ್ಟರ್ನ್ ಫ್ರಂಟಿಯರ್ ರೆಗ್ಯುಲೇಶನ್ ಕಾಯಿದೆಯಡಿ ಬರುವ ಅರುಣಾಚಲ ಪ್ರದೇಶ, ಮಿಜೋರಂ, ನಾಗಾಲ್ಯಾಂಡ್ ಹಾಗೂ ಈಗ ಮಣಿಪುರ ಕೂಡ ಈ ಕಾಯಿದೆಯ ಪರಿಧಿಯಿಂದ ಹೊರಗಿವೆ. ಈ ರಾಜ್ಯಗಳಿಗೆ ತೆರಳಲು ಭಾರತೀಯರಿಗೆ ಇನ್ನರ್ ಲೈನ್ ಪರ್ಮಿಟ್ ಬೇಕು. ಹೀಗಾಗಿ ವಲಸಿಯರಿಗೆ ಇಲ್ಲಿ ಪೌರತ್ವ ನೀಡುವುದಿಲ್ಲ. ಇನ್ನು, ಪೌರತ್ವ ತಿದ್ದುಪಡಿ ಕಾಯ್ದೆಯಡಿ ಮುಸ್ಲಿಮ್ಸ್ ವಲಸಿಗರಿಗೆ ಪೌರತ್ವ ಸಿಗುವುದಿಲ್ಲ. ಹೀಗಾಗಿ ಇದು ಸಂವಿಧಾನದ 14ನೇ ಪರಿಚ್ಛೇದವನ್ನು ಉಲ್ಲಂಘಿಸುತ್ತದೆ ಎಂದು ಹೇಳುವವರು ಮತ್ತೊಮ್ಮೆ ತಮ್ಮ ವಾದವನ್ನು ಪರಿಶೀಲಿಸಿಕೊಳ್ಳುವುದು ಒಳ್ಳೆಯದು. ಏಕೆಂದರೆ, ಅದರ 14ನೇ ಪರಿಚ್ಛೇದವು ಧರ್ಮಾಧಾರಿತ ಶಾಸನವನ್ನು ನಿಬಂಧಿಸುತ್ತದೆಂಬುದು ನಿಜವೆ, ಆದರೆ, ಕಾಯ್ದೆ ಬದ್ಧವಾಗಿ ಪ್ರತ್ಯೇಕ ಜನವರ್ಗವೊಂದನ್ನು ಸೃಷ್ಟಿಸುವುದಕ್ಕೆ ಅನುಮತಿ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ ಏನು ಹೇಳುತ್ತದೆ? ಪಾಕಿಸ್ತಾನ, ಆಫ್ಘಾನಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿ ರಾಷ್ಟ್ರೀಯ ಧರ್ಮ ಇಸ್ಲಾಂ ಅನ್ನು ಅನುಸರಿಸದೇ ಇರುವವರು ಈ ಕಾರಣಕ್ಕಾಗಿಯೇ ಹಲ್ಲೆಗೊಳಗಾಗಬಹುದೆಂಬ ಆತಂಕವನ್ನು ಹೊಂದಿದ್ದಾರೆ. ಈ ಆತಂಕವೇ ಇವರನ್ನು ಭಾರತೀಯ ನಾಗರೀಕರೆಂದು ಗುರುತಿಸಲು ಮಾನದಂಡವಾಗುತ್ತದೆ. ಇನ್ನು ಭಾರತದಲ್ಲಿರುವ ಮುಸ್ಲಿಂರು ಈ ಕಾಯ್ದೆ ಬಗ್ಗೆ ಯಾವ ರೀತಿಯಲ್ಲಿಯೂ ಆತಂಕಪಡುವ ಅಗತ್ಯವಿಲ್ಲ. ಏಕೆಂದರೆ

ಈ ಕಾಯ್ದೆಯು ವಲಸಿಗರಿಗೆ ಸಂಬಂಧಿಸಿದೆಯೆ ಹೊರತು ದೇಶದ ಪ್ರಜೆಗಳಿಗೆ ಸಂಬಂಧಿಸಿದ್ದಲ್ಲ. ಅರಬ್ ರಾಷ್ಟ್ರಗಳು ಹಾಗೂ ಉತ್ತರ ಆಫ್ರಿಕನ್ ದೇಶಗಳಲ್ಲಿ ಉಂಟಾಗಿರುವ ಅಸ್ಥಿರತೆಯ ಕಾರಣದಿಂದ ದೊಡ್ಡ ಸಂಖ್ಯೆಯಲ್ಲಿ ವಲಸೆ ಬರುತ್ತಿರುವ ನಿರಾಶ್ರಿತರ ಬಗ್ಗೆ ಇದು ಯುರೋಪಿಯನ್ ದೇಶಗಳಲ್ಲಿ ಕಂಗಾಲಾಗಿ ಕುಳಿತಿವೆ. ಹೀಗಾಗಿ ಮಾನವೀಯ ನೆಲೆಯಲ್ಲಿ ನಿರಾಶ್ರಿತರಿಗೆ ಆಶ್ರಯ ನೀಡಬೇಕು ಎನ್ನುತ್ತಿದ್ದ ರಾಷ್ಟ್ರಗಳೆಲ್ಲ ಈಗ ಈ ಸಮಸ್ಯೆಯನ್ನು ದೇಶದ ಆಂತರಿಕ ಭದ್ರತೆಯ ದೃಷ್ಟಿಯಿಂದ ನೋಡತೊಡಗಿವೆ. ಹೀಗಿದ್ದರೂ ಭಾರತವು ಧಾರ್ಮಿಕ ಹಲ್ಲೆಯಿಂದ ತಪ್ಪಿಸಿಕೊಂಡು ಬಂದವರಿಗೆ ಮಾನವೀಯ ನೆಲೆಯಲ್ಲಿ ಆಶ್ರಯ ನೀಡಲು ಮುಂದಾಗಿದೆ. ಇದು ದೊಡ್ಡ ಗುಣವಲ್ಲವೆ?

ಕೆಲ ರಾಜಕೀಯ ಪಕ್ಷಗಳು ಕರಗುತ್ತಿರುವ ವೋಟ್ ಬ್ಯಾಂಕನ್ನು ಹೇಗಾದರೂ ಮಾಡಿ ಗಳಿಸಿಕೊಳ್ಳಬೇಕೆಂದು ಶತಾಯಗತಾಯ ಪ್ರಯತ್ನಿಸುತ್ತಿವೆ. ದೇಶದ ಜನರು ಅಂತಹವರ ರಾಜಕೀಯ ಹಿತಾಸಕ್ತಿಗೆ ಬಲಿಯಾಗಬಾರದು.

ಗಜೇಂದ್ರ ಸಿಂಗ್ ಶೆಖಾವತ್ ಜಲ ಶಕ್ತಿ ಸಚಿವರು, ಭಾರತ ಸರ್ಕಾರ

ಆಧಾರ–ವಿಶ್ವವಾಣಿ 26.12.2019

* * * * *

ಭಾಗ–12

ಪ್ರಶಸ್ತಿಗಳು

1. ಡಾ: ಕಮಲಾ ಹಂಪನ ಸೇರಿ ಮೂವರಿಗೆ ವಾಲ್ಮೀಕಿ ಪ್ರಶಸ್ತಿ

ಹಿರಿಯ ಸಾಹಿತಿ ಕಮಲಾ ಹಂಪನ ಸೇರಿದಂತೆ ಮೂವರನ್ನು ಪ್ರಸಕ್ತ ಸಾಲಿನ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ರಾಜ್ಯ ಸರ್ಕಾರ ಆಯ್ಕೆ ಮಾಡಿದೆ.

ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಡಾ. ಕಮಲಾ ಹಂಪನ, ಸಾಮಾಜಿಕ ಕ್ಷೇತ್ರದಲ್ಲಿ ಗುರುತರ ಸೇವೆ ಸಲ್ಲಿಸುತ್ತಿರುವ ಓಬಳಪ್ಪ ಹಾಗೂ ಶೈಕ್ಷಣಿಕ ಕ್ಷೇತ್ರದಿಂದ ಡಾ. ಜಿ. ರಂಗಯ್ಯ ಅವರನ್ನು ವಾಲ್ಮೀಕಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ನಗದು 5 ಲಕ್ಷ ರೂ ಹಾಗೂ 20 ಗ್ರಾಂ ಚಿನ್ನದ ಪದಕ ಒಳಗೊಂಡಿದೆ. ರಾಜ್ಯಮಟ್ಟದ ವಾಲ್ಮೀಕಿ ಜಯಂತಿ ಕಾರ್ಯಕ್ರಮವು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಯಲಿದ್ದು, ಅಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಮಾಜ ಕಲ್ಯಾಣ ಹಾಗೂ ಲೋಕೋಪಯೋಗಿ ಖಾತೆ ಹೊಂದಿರುವ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ತಿಳಿಸಿದ್ದಾರೆ.

ಡಾ. ಕಮಲಾ ಹಂಪನ – ರಾಜ್ಯ ಸಾಹಿತ್ಯ ಅಕಾಡೆಮಿ, ಕಿತ್ತೂರು ರಾಣಿ ಚೆನ್ನಮ್ಮ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಓಬಳಪ್ಪ– ನಿವೃತ್ತ ಕೃಷಿ ಅಧಿಕಾರಿ, ಮಹರ್ಷಿ ವಾಲ್ಮೀಕಿ ಗುರುಪೀಠದ ಆಡಳಿತಾಧಿಕಾರಿಯಾಗಿ, ಹರಿಹರದ ವಾಲ್ಮೀಕಿ ಹಾಸ್ಟೆಲ್ ಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಡಾ. ಜಿ. ರಂಗಯ್ಯ– ನರರೋಗ ತಜ್ಞ, ನ್ಯೂಯಾರ್ಕ್ ಸಿಟಿ ಮೆಡಿಕಲ್ ಸೊಸೈಟಿ ಅಧ್ಯಕ್ಷರಾಗಿ ಅಮೆರಿಕದಲ್ಲಿರುವ ಇಂಡಿಯನ್ ನ್ಯೂರಾಲಜಿಸ್ಟ್ ಸಂಸ್ಥೆಯ ಕಾರ್ಯದರ್ಶಿ, ಇಂಡಿಯನ್ ನ್ಯೂರಾಜಲಿಸ್ಟ್ ನ್ಯಾಷನಲ್ ಅಸೋಸಿಯೇಷನ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಆಧಾರ–ವಿಜಯಕರ್ನಾಟಕ, 12.10.2019

2. ಅಭಿಜಿತ್‌ಗೆ ನೊಬೆಲ್

ಭಾರತೀಯ ಮೂಲದ ಅಭಿಜಿತ್ ಬ್ಯಾನರ್ಜಿ ದಂಪತಿ ಸೇರಿ ಮೂವರು ಅರ್ಥಶಾಸ್ತ್ರಜ್ಞರಿಗೆ ಈ ಸಾಲಿನ ಪ್ರತಿಷ್ಠಿತ ನೊಬೆಲ್ ಗೌರವ ಮುಡಿಗೇರಿದೆ. ಜಾಗತಿಕ ಬಡತನದ ನಿರ್ಮೂಲನೆಗಾಗಿ ಪ್ರಾಯೋಗಿಕ ವಿಧಾನ ಮಂಡಿಸಿದ್ದಕ್ಕಾಗಿ ಅಭಿಜಿತ್‌ಗೆ ಪ್ರಶಸ್ತಿ ದೊರೆತಿದೆ. ಅವರ ಪತ್ನಿ ಎಸ್ತರ್ ಡಫ್ಲೋ ಮತ್ತು ಮಿಶೆಲ್ ಕ್ರೇಮರ್ ಕೂಡ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಭಾರತದಲ್ಲಿ ಜನಿಸಿರುವ ಅಭಿಜಿತ್ ಹಾರ್ವರ್ಡ್ ವಿವಿಯಲ್ಲಿ ಪಿಎಚ್‌ಡಿ ಪಡೆದಿದ್ದಾರೆ. ಸದ್ಯ ಅಮೆರಿಕದ ಎಂಐಟಿಯಲ್ಲಿ ಅರ್ಥಶಾಸ್ತ್ರ ಪ್ರೊಫೆಸರ್ ಆಗಿದ್ದಾರೆ. ಅರ್ಥಶಾಸ್ತ್ರದಲ್ಲಿ ನೊಬೆಲ್ ಪಡೆದ ಭಾರತೀಯರ ಪೈಕಿ ಅಮರ್ತ್ಯಸೇನ್ ಮೊದಲಿಗರಾದರೆ ಅಭಿಜಿತ್ ಎರಡನೆಯವರು.

ಆಧಾರ–ವಿಜಯವಾಣಿ 15.10.2019

3. ವಿಜ್ಞಾನಿ, ಎಂಜಿನಿಯರಿಂಗ್ ಪ್ರಶಸ್ತಿ ಪ್ರಕಟ

ಮಾಹಿತಿ ತಂತ್ರಜ್ಞಾನ, ಜೈವಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಹಾಗೂ ತಂತ್ರಜ್ಞಾನ ಮಂಡಳಿ ನೀಡುವ 2018ನೇ ಸಾಲಿನ ವಿಜ್ಞಾನಿ ಹಾಗೂ ಎಂಜಿನಿಯರ್ ಪ್ರಶಸ್ತಿ ಪ್ರಕಟಿಸಲಾಗಿದೆ.

ಪ್ರಶಸ್ತಿಗೆ ಆಯ್ಕೆ ಮಾಡಲು ಭಾರತ ರತ್ನ ಪ್ರೊ. ಸಿ.ಎನ್.ಆರ್. ರಾವ್ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗಿತ್ತು. ಸರ್. ಸಿ.ವಿ. ರಾಮನ್, ಪ್ರೊ. ಸತೀಶ್ ಧವನ್ ಮತ್ತು ಡಾ.ಕಲ್ಪನಾ ಚಾವ್ಲಾ ಪ್ರಶಸ್ತಿಗಳು ಒಂದು ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ.

ಡಾ.ಸಿ.ಎನ್. ಮಂಜುನಾಥ್, ಅನ್ನಪೂರ್ಣ, ಪ್ರತಿಮಾ ಮೂರ್ತಿ, ವಿ. ಶಿವಪ್ರಸಾದ್, ಎಂ.ಎಂ. ಶ್ರೀನಿವಾಸ್, ರಜನಿ ವಿಶ್ವನಾಥ್, ಗಾಯತ್ರಿ ದೇವರಾಜ್, ಅಮಿತಾಬ್ ಸರಾಫ್, ಮಧುಸೂದನ್, ಜಿ.ಯು. ಕುಲಕರ್ಣಿ, ಶಯನ್ ಶ್ರೀನಿವಾಸ ಹಾಗೂ ಇತರರು ಪ್ರಶಸ್ತಿಗೆ ಭಾಜನರಾಗಿರುತ್ತಾರೆ.

ಆಧಾರ–ವಿಜಯಕರ್ನಾಟಕ 19.10.2019

4. 64 ಸಾಧಕರಿಗೆ ರಾಜ್ಯೋತ್ಸವ ಪುರಸ್ಕಾರ

ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ವಿವಿಧ ಕ್ಷೇತ್ರಗಳಲ್ಲಿ ಅನನ್ಯ ಸೇವೆ ಸಲ್ಲಿಸಿದ 64 ಮಂದಿಯನ್ನು ಆಯ್ಕೆ ಮಾಡಿದ್ದು, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನವೆಂಬರ್ 01 ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸಿ.ಟಿ. ರವಿ ತಿಳಿಸಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಒಟ್ಟು 1512 ಅರ್ಜಿಗಳು ಬಂದಿದ್ದು, ಸಾಮಾಜಿಕ ನ್ಯಾಯಕ್ಕೆ ಆದ್ಯತೆ ಕೊಟ್ಟು ನಿಯಮ ಮೀರದಂತೆ 64 ಮಂದಿಯನ್ನು ಆಯ್ಕೆ ಮಾಡಲಾಗಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಗೆ ಜಸ್ಟೀಸ್ ನಾಗಮೋಹನ್‌ದಾಸ್ ಸಮಿತಿ ನೇತೃತ್ವದಲ್ಲಿ ಮಾನದಂಡ ನಿಗದಿಪಡಿಸಲಾಗಿದೆ ಎಂದರು.

ಸಾಹಿತ್ಯ, ರಂಗಭೂಮಿ, ಜಾನಪದ, ಸಂಗೀತ, ಶಿಲ್ಪಕಲೆ, ಚಿತ್ರಕಲೆ, ಶಿಕ್ಷಣ, ಸಂಕೀರ್ಣ, ವೈದ್ಯಕೀಯ, ಕ್ರೀಡೆ, ಹೊರನಾಡು ಕನ್ನಡಿಗರು, ಸಮಾಜಸೇವೆ, ಕೃಷಿ, ಯೋಗ, ಪರಿಸರ, ಯಕ್ಷಗಾನ, ಬಯಲಾಟ, ಚಲನಚಿತ್ರ, ಕಿರುತೆರೆ, ಪತ್ರಿಕೋದ್ಯಮ, ಸಹಕಾರ, ನ್ಯಾಯಾಂಗ, ಸಂಘಸಂಸ್ಥೆ, ಗುಡಿ ಕೈಗಾರಿಕೆ ಹಾಗೂ ವಿಮರ್ಶಾ ಕ್ಷೇತ್ರದಿಂದ ಆಯ್ಕೆಯಾದ ಸಾಧಕರುಗಳಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗುವುದು.

ಆಧಾರ–ವಿಜಯ ಕರ್ನಾಟಕ/ವಿಜಯವಾಣಿ 29.10.2019

5. ಸುಧಾಮೂರ್ತಿಗೆ ' ಕನ್ನಡ ರತ್ನ' ಪ್ರಶಸ್ತಿ

ದುಬೈ ಕನ್ನಡ ಸಂಘದ ವತಿಯಿಂದ ನಡೆದ 64ನೇ ಕರ್ನಾಟಕ ರಾಜ್ಯೋತ್ಸವದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಅವರಿಗೆ 'ಕನ್ನಡ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ದುಬೈನ ನಾದಲ್ ಶೀಬಾದಲ್ಲಿರುವ ಹಾರ್ಟ್‌ಲ್ಯಾಂಡ್ ಅಂತರರಾಷ್ಟ್ರೀಯ ಶಾಲಾ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮಕ್ಕೆ ಸಂಯುಕ್ತ ಅರಬ್ ಸಂಸ್ಥಾನದ ವಿವಿಧ ಭಾಗಗಳಿಂದ ಸಾವಿರಾರು ಕನ್ನಡಿಗರು ಆಗಮಿಸಿದ್ದರು. ಕಾರ್ಯಕ್ರಮದ ಕೇಂದ್ರ ಬಿಂದುವಾಗಿದ್ದ ಪದ್ಮಶ್ರೀ ಪುರಸ್ಕೃತೆ ಇನ್ಫೋಸಿಸ್ ಫೌಂಡೇಶನ್ ಮುಖ್ಯಸ್ಥೆ ಡಾ. ಸುಧಾಮೂರ್ತಿ ಅವರು ಮುಖ್ಯ ಭಾಷಣ ಮಾಡಿದ್ದಲ್ಲದೆ ಅವರು ಕಾರ್ಯಕ್ರಮದ ಕೊನೆವರೆಗೆ ಪಾಲ್ಗೊಂಡು ಸಾರ್ಥಕತೆ ಮೆರೆದದ್ದು ದುಬೈ ಕನ್ನಡಿಗರಿಗೆ ಸಂತಸ ನೀಡಿತ್ತು.

ಆಧಾರ–ಉದಯವಾಣಿ 13.11.2019

6. ಬರಗೂರು ಪ್ರಶಸ್ತಿಗೆ ಹಂಪನಾ, ಚಿತ್ರನಟ ದೊಡ್ಡಣ್ಣ ಆಯ್ಕೆ

ಬೆಂಗಳೂರಿನ ನಾಡೋಜ ಡಾ. ಬರಗೂರು ಪ್ರತಿಷ್ಠಾನವು ಜೀವಮಾನ ಸಾಧನೆಗಾಗಿ ಇಬ್ಬರಿಗೆ ಕೊಡಮಾಡುವ 'ಬರಗೂರು ಪ್ರಶಸ್ತಿ'ಗೆ ಸಾಹಿತ್ಯ ಕ್ಷೇತ್ರದಲ್ಲಿ ವಿದ್ವಾಂಸ ಡಾ. ಹಂಪ ನಾಗರಾಜಯ್ಯ ಹಾಗೂ ಸಿನಿಮಾ ಕ್ಷೇತ್ರದಲ್ಲಿ ನಟ ದೊಡ್ಡಣ್ಣ ಆಯ್ಕೆಯಾಗಿದ್ದಾರೆ. ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ ಅವರ ಹುಟ್ಟೂರಾದ ತುಮಕೂರಿನ ಶಿರಾ ತಾಲ್ಲೂಕಿನ ಬರಗೂರು ಗ್ರಾಮದಲ್ಲಿ ಡಿ.7ರಂದು ನಡೆಯುವ ಕಾರ್ಯಕ್ರಮದಲ್ಲಿ ಪುರಸ್ಕೃತರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಸಮಾರಂಭಕ್ಕೆ ಅತಿಥಿಯಾಗಿ ಸಾಹಿತಿ ಡಾ. ಕಮಲಾ ಹಂಪನಾ ಪಾಲ್ಗೊಳ್ಳಲಿದ್ದಾರೆ. ಪ್ರಶಸ್ತಿಯು 25 ಸಾವಿರ ರೂ. ನಗದು ಹಾಗೂ ಪ್ರಶಸ್ತಿ ಫಲಕ ಹೊಂದಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಆಧಾರ–ಕನ್ನಡ ಪ್ರಭ 05.12.2019

7. ತಿಮ್ಮಕ್ಕನಿಗೆ ಅಬ್ಬೆ, ಮಹಾದೇವಪ್ಪಗೆ ಕೃಷಿ ಪ್ರಶಸ್ತಿ

ಬೀಳಗಿ ತಾಲ್ಲೂಕು ಬಾಡಗಂಡಿಯ ಎಸ್.ಆರ್. ಪಾಟೀಲ ಶಿಕ್ಷಣ ಪ್ರತಿಷ್ಠಾನದಿಂದ ನೀಡಲಾಗುವ 'ಅಬ್ಬೆ' ಪ್ರಶಸ್ತಿಗೆ ಸಾಲು ಮರದ ತಿಮ್ಮಕ್ಕ ಹಾಗೂ 'ಕೃಷಿ ಪ್ರಶಸ್ತಿಗೆ' ಸಮೀಪದ ರೊಳ್ಳಿ ಗ್ರಾಮದ ಮಹಾದೇವಪ್ಪ ಚಲವಾದಿ ಆಯ್ಕೆಯಾಗಿದ್ದಾರೆ. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಅವರ ತಂದೆ ರುದ್ರಗೌಡ ಪಾಟೀಲ ಸ್ಮರಣಾರ್ಥವಾಗಿ ಕೃಷಿ ಪ್ರಶಸ್ತಿ ಹಾಗೂ ತಾಯಿ ಈರಮ್ಮ ಸ್ಮರಣಾರ್ಥ ಅಬ್ಬೆ ಪ್ರಶಸ್ತಿಯನ್ನು

ಶಿಕ್ಷಣ ಪ್ರತಿಷ್ಠಾನದಿಂದ ಪ್ರತಿ ವರ್ಷ ನೀಡಲಾಗುತ್ತಿದೆ. ಪ್ರಶಸ್ತಿಯು ತಲಾ ರೂ.1 ಲಕ್ಷ ನಗದು ಹಾಗೂ ಫಲಕ ಒಳಗೊಂಡಿದೆ.

ಆಧಾರ–ಪ್ರಜಾವಾಣಿ 07.12.2019

8. ಪುಸ್ತಕ ಪ್ರಾಧಿಕಾರ ಪ್ರಶಸ್ತಿ

ಕನ್ನಡ ಪುಸ್ತಕ ಪ್ರಾಧಿಕಾರ ನೀಡುವ 2018ನೇ ಸಾಲಿನ ಅತ್ಯುತ್ತಮ ಪ್ರಕಾಶನ ಪ್ರಶಸ್ತಿಗೆ ಅಭಿನವ ಪ್ರಕಾಶನ ಸಂಸ್ಥೆ ಆಯ್ಕೆಯಾಗಿದೆ. ಡಾ. ಎಂ.ಎಂ. ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿಗೆ ಹಿರಿಯ ಸಂಶೋಧಕ ಡಾ. ಎಂ. ಚಿದಾನಂದ ಮೂರ್ತಿ, ಡಾ. ಜಿ.ಪಿ. ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿಗೆ ಪ್ರೊ. ಎಂ. ರಾಮಚಂದ್ರ ಕಾರ್ಕಳ ಹಾಗೂ ಡಾ. ಅನುಪಮಾ ನಿರಂಜನ ವೈದ್ಯಕೀಯ ಹಾಗೂ ವಿಜ್ಞಾನ ಸಾಹಿತ್ಯ ಪ್ರಶಸ್ತಿಗೆ ಡಾ. ವಿಜಯಲಕ್ಷ್ಮೀ ಬಾಳೇಕುಂದ್ರಿ ಆಯ್ಕೆಯಾಗಿದ್ದಾರೆ.

ಜನವರಿ 8ರಂದು ನಯನ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಾರ್ಷಿಕ ಪ್ರಶಸ್ತಿ ಪ್ರಧಾನ ಮಾಡಲಾಗುವುದು ಎಂದು ಪ್ರಾಧಿಕಾರ ಅಧ್ಯಕ್ಷ ಡಾ.ಎಂ.ಎಸ್. ನಂದೀಶ್ ಹಂಚೆ ತಿಳಿಸಿದ್ದಾರೆ.

ಆಧಾರ– ವಿಜಯವಾಣಿ 19.12.2019

9. ಡಾ. ವಿಜಯಮ್ಮಗೆ ಅಕಾಡೆಮಿ ಪ್ರಶಸ್ತಿ

2019ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದ್ದು, ಕನ್ನಡದಲ್ಲಿ ಡಾ. ವಿಜಯಾ ಅವರಿಗೆ ಪ್ರಶಸ್ತಿ ಸಂದಿದೆ. ವಿಜಯಾ ಅವರ ಆತ್ಮ ಚರಿತ್ರೆ 'ಕುದಿ ಎಸರು' ಕೃತಿಗೆ ಪುರಸ್ಕಾರ ಪ್ರಕಟಿಸಲಾಗಿದೆ.

ಕನ್ನಡ ರಂಗಭೂಮಿ, ಪತ್ರಿಕೋದ್ಯಮ, ಪ್ರಕಾಶನ, ಚಲನಚಿತ್ರ ಹೀಗೆ ನಾನಾ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕನ್ನಡ ಸಾಂಸ್ಕೃತಿಕ ಲೋಕವನ್ನು ಶ್ರೀಮಂತಗೊಳಿಸುತ್ತಿರುವ ವ್ಯಕ್ತಿ ಡಾ. ವಿಜಯಾ ಎಲ್ಲರ ಪಾಲಿಗೆ ಪ್ರೀತಿಯ ವಿಜಯಮ್ಮ ಎಂದೇ ಪರಿಚಿತರು. ಅವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿ ಅನೇಕ ಪ್ರಶಸ್ತಿಗಳು ಸಂದಿವೆ.

ಆಧಾರ–ಕನ್ನಡ ಪ್ರಭ 19.12.2019

10. ಸಿಎನ್‌ಆರ್‌ಗೆ ಜಾಧವ್‌ಪುರ ವಿವಿಯಿಂದ ಗೌರವ ಡಾಕ್ಟರೇಟ್

'ಭಾರತ ರತ್ನ' ಪುರಸ್ಕೃತ ಖ್ಯಾತ ವಿಜ್ಞಾನಿ ಪ್ರೊ.ಸಿ.ಎನ್.ಆರ್. ರಾವ್ ಹಾಗೂ ಭಾರತೀಯ ಸಂಖ್ಯಾಶಾಸ್ತ್ರೀಯ ಸಂಸ್ಥೆ ನಿರ್ದೇಶಕರಾಗಿರುವ ಕಂಪ್ಯೂಟರ್ ತಜ್ಞ ಸಂಘಮಿತ್ರಾ ಬಂಡೋಪಾಧ್ಯಾಯ ಅವರಿಗೆ ಜಾಧವ್‌ಪುರ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರಕಟಿಸಿದೆ. ಡಿಸೆಂಬರ್ 24ರಂದು ನಡೆಯುವ ವಿಶೇಷ ಘಟಿಕೋತ್ಸವದಲ್ಲಿ ಡಾಕ್ಟರೇಟ್ ಮಾಡುವುದಾಗಿ ವಿವಿ ತಿಳಿಸಿದೆ. ಘಟಿಕೋತ್ಸವದಲ್ಲಿ ಪಶ್ಚಿಮ ಬಂಗಾಳ ರಾಜ್ಯಪಾಲ ಹಾಗೂ ಜಾಧವ್‌ಪುರ ವಿವಿ ಕುಲಪತಿ ಜಗದೀಪ್ ಧನ್‌ಕರ್ ಕೂಡ ಭಾಗಿಯಾಗಲಿದ್ದಾರೆ.

ಆಧಾರ–ವಿಜಯ ಕರ್ನಾಟಕ 20.12.2019

11. 18 ಮಂದಿಗೆ ಕರ್ನಾಟಕ ಕಲಾಶ್ರೀ ಪ್ರಶಸ್ತಿ

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ಪ್ರಸಕ್ತ ಸಾಲಿನ 'ಕರ್ನಾಟಕ ಕಲಾಶ್ರೀ' ಗೌರವ ಹಾಗೂ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಶಿವಮೊಗ್ಗದ ದೃಷ್ಟಿ ವಿಶೇಷಚೇತನ ಕಲಾವಿದ ಮತ್ತೂರು ಗೋಪಾಲ್ (ಹಾಡುಗಾರಿಕೆ) ಹಾಗೂ ಮೈಸೂರಿನ ಬಿ. ನಾಗರಾಜ (ಕಥಕ್) ಅವರನ್ನು ಗೌರವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

"ಎರಡು ಗೌರವ ಪ್ರಶಸ್ತಿಗಳು, ಕರ್ನಾಟಕ ಸಂಗೀತದಲ್ಲಿ ಮೂರು, ಹಿಂದೂಸ್ತಾನಿ ಸಂಗೀತದಲ್ಲಿ ನಾಲ್ಕು, ನೃತ್ಯ ಕ್ಷೇತ್ರದಲ್ಲಿ ಮೂರು, ಸುಗಮ ಸಂಗೀತದಲ್ಲಿ ಎರಡು, ಕಥಾಕೀರ್ತನದಲ್ಲಿ ಎರಡು, ಗಮಕದಲ್ಲಿ ಒಬ್ಬರು, ಹೊರನಾಡ ಕಲಾವಿದರ ವಿಭಾಗದಲ್ಲಿ ಒಬ್ಬರನ್ನು ವಾರ್ಷಿಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಗೌರವ ಪ್ರಶಸ್ತಿಯು ತಲಾ 50 ಸಾವಿರ ರೂ. ನಗದು ಹಾಗೂ ವಾರ್ಷಿಕ ಪ್ರಶಸ್ತಿಯು ತಲಾ 25 ಸಾವಿರ ರೂ. ನಗದು ಹಾಗೂ

ಸ್ಮರಣಿಕೆ ಒಳಗೊಂಡಿದೆ. ಪ್ರಶಸ್ತಿಗಳನ್ನು 2020ರ ಫೆಬ್ರವರಿ 27ರಂದು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದಾನ ಮಾಡಲಾಗುವುದು," ಎಂದು ಅಕಾಡೆಮಿ ಅಧ್ಯಕ್ಷ ಆನೂರು ಅನಂತಕೃಷ್ಣ ಶರ್ಮ ತಿಳಿಸಿದ್ದಾರೆ.

ಆಧಾರ–ವಿಜಯ ಕರ್ನಾಟಕ 21.12.2019

12. ಮನು ಬಳಿಗಾರ್‌ಗೆ ರಾಷ್ಟ್ರಕವಿ ಪ್ರಶಸ್ತಿ

ಕುವೆಂಪು ಕಲಾನಿಕೇತನ ನೀಡುವ ಈ ಸಾಲಿನ ರಾಷ್ಟ್ರಕವಿ ಕುವೆಂಪು ಪ್ರಶಸ್ತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಆಯ್ಕೆಯಾಗಿದ್ದಾರೆ. ಪ್ರಶಸ್ತಿ 25 ಸಾವಿರ ರೂ. ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ. ಜನವರಿ 20ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಆಧಾರ–ಉದಯವಾಣಿ 31.12.2019

* * * * *

ನಿರ್ದೇಶಕರು, ಸರ್ಕಾರಿ ಮುದ್ರಣಾಲಯ ವಿಕಾಸಸೌಧ ಘಟಕ, ಬೆಂಗಳೂರು ಕಾಸೂ. – ಪ್ರತಿಗಳು